ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟಿ-20ಗೆ ಟೀಮ್ ರೆಡಿ

ಮಹಿಳೆಯರ ಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದೆ. 15 ಸದಸ್ಯ ಬಲದ ಭಾರತ ತಂಡವನ್ನು ಹರ್ಮನ್‌ಪ್ರೀತ್ ಕೌರ್ ಮುನ್ನಡೆಸಲಿದ್ದು, ಸ್ಮೃತಿ ಮಂದಾನ ಉಪನಾಯಕಿ ಆಗಿದ್ದಾರೆ. ಕನ್ನಡತಿ ಶ್ರೇಯಾಂಕ ಪಾಟೀಲ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ವಿಶ್ವವಾಣಿ ಮುದ್ದು ಕೃಷ್ಣರ ಸಂಭ್ರಮ

ಇನ್ನಷ್ಟು ಫೋಟೋಗಳಿಗೆ epaper.vishwavani.news ಪುಟ-13,14 ನೋಡಿ

ಪುಟ ತೆರೆದಂತೆ...

ಪ್ರಾಚೀನ ಭಾರತದಲ್ಲಿ ಆರೋಗ್ಯ ವಿಜ್ಞಾನ

ಡಾ. ನಾ.ಸೋಮೇಶ್ವರ

ಹಿಂದಿರುಗಿ ನೋಡಿದಾಗ

ಸಂ.ಪುಟ | 6

ಅಂದು ನಿರ್ಭಯಾ, ಇಂದು ಅಭಯಾ..

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್

ಸಂ.ಗಮ | 7

ಮಾತಂದ್ರೆ ಮಾತು

ನಾನು ಪಕ್ಷಪಾತಿಯೇ. ಅದರ ಬಗ್ಗೆ ಪ್ರತಿಪಕ್ಷಗಳು ಏನು ಮಾಡಬಹುದು..? ಕೆಳ ಅಸ್ಸಾಂ ಜನರು ಮೇಲಿನ ಅಸ್ಸಾಂಗೆ ಏಕೆ ಹೋಗುತ್ತಾರೆ. ಅದರಿಂದ ಮಿಯಾ ಮುಸ್ಲಿಮರು (ಬಂಗಾಳಿ ಭಾಷಿಕ ಮುಸ್ಲಿಮರು) ಅಸ್ಸಾಂ ವಶಪಡಿಸಿಕೊಳ್ಳಬಹುದೇ..? ಅದಕ್ಕೆ ನಾನು ಅವಕಾಶ ಮಾಡಿಕೊಡುವುದಿಲ್ಲ.

ಹಿಮಂತ ಬಿಸ್ವ ಶರ್ಮಾ

ಅಸ್ಸಾಂ ಸಿಎಂ

ದಾರಿದೀಪೋಕ್ತಿ

ನಾವು ಏನು ಹೇಳುತ್ತೇವೆ ಎಂಬುದಕ್ಕಿಂತ ಯಾವ ದನಿಯಲ್ಲಿ ಹೇಳುತ್ತೇವೆ ಎಂಬುದು ಮುಖ್ಯ. ಏರಿದ ದನಿಯಲ್ಲಿ ಹೇಳುವ ಬದಲು ನಿಧಾನವಾಗಿ, ಮೃದು ನುಡಿಯಲ್ಲಿ ಹೇಳಿದರೆ, ಎಂಥ ಕ್ಲಿಷ್ಟ ವಿಚಾರಗಳನ್ನಾದರೂ ಕೇಳುತ್ತಾರೆ. ನಿಮ್ಮ ದನಿಯ ಮೇಲೆ ಹಿಡಿತವಿರಲಿ.

ವಕ್ರತುಂಡೋಕ್ತಿ

ಯಾವ ಸಮಸ್ಯೆ ಇಲ್ಲದೇ ಐದು ಮಂದಿ ಸೋಫಾದ ಮೇಲೆ ಆರಾಮಾಗಿ ಕುಳಿತುಕೊಳ್ಳಬಹುದು ಎಂದು ಯಾರಾದರೂ ಹೇಳಿದರೆ, ಸಮಸ್ಯೆ ಇಲ್ಲದ ಐದು ಮಂದಿ ಎಲ್ಲಿದ್ದಾರೆ ಎಂದು ಕೇಳಬಹುದು.

ವಿದ್ಯುತ್ ತಂತಿ ಸ್ಪರ್ಶಿಸಿ ಕಾಡಾನೆ ಸಾವು

ಚಿಕ್ಕಮಗಳೂರು: ಆಹಾರ ಅರಸಿ ನಾಡಿಗೆ ಬಂದ ಕಾಡಾನೆಯೊಂದು ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟ ಘಟನೆ ಚಿಕ್ಕಮಗಳೂರು ಜಿಲ್ಲೆಯ ಕೊಳಗಾಮೆಯ ಆಶ್ರಯ ಎಸ್ಟೇಟ್ ಬಳಿ ನಡೆದಿದೆ. ಇಲ್ಲಿನ ಭದ್ರಾ ಅಭಯಾರಣ್ಯದಿಂದ ಆಹಾರಕ್ಕಾಗಿ ಬಂದಿದ್ದ ಕಾಡಾನೆ ಬೇಲಿದಾಟುವ ವೇಳೆ ತೋಟಕ್ಕೆ ಅಳವಡಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಸ್ಥಳದಲ್ಲೇ ಮೃತಪಟ್ಟಿದೆ ಎನ್ನಲಾಗಿದೆ. ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಭೇಟಿ ಪರಿಶೀಲನೆ ನಡೆಸಿದ್ದು ತೋಟದ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ..

ಫನ್‌ತರಂಗ

- ರಘುಪತಿ ಶೃಂಗೇರಿ -

ಎಲ್ರೂ ವಾಲ್ಮೀಕಿ ಅಂತಿರೋದು ನೋಡಿದ್ರೆ ಇದೇನು ನಾನು ತ್ರೇತಾಯುಗಕ್ಕೆ ಬಂದಿದೀನಾ ಅಥ್ವಾ ಕಲಿಯುಗಕ್ಕಾ?

ರಾಜಾತಿಥ್ಯದ ಬಗ್ಗೆ ತನಿಖೆಗೆ ವಿಶೇಷ ತಂಡ, ದರ್ಶನ್ ಎ1 ಆರೋಪಿ | ಘಟನೆ ಬಗ್ಗೆ ಸಿಎಂಗೆ ಗೃಹ ಸಚಿವ ಪರಮೇಶ್ವರ್ ಮಾಹಿತಿ | ಪರಪ್ಪನ ಅಗ್ರಹಾರ ಜೈಲಿನ ನೂತನ ಅಧೀಕ್ಷಕಿಯಾಗಿ ದಿವ್ಯಾಶ್ರೀ ನೇಮಕ | ಜೈಲು ಸುಧಾರಣೆಗೆ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚನೆ

ದರ್ಶನ್ ಬಳ್ಳಾರಿ ಜೈಲಿಗೆ

ಬೆಂಗಳೂರು: ಜೈಲಲ್ಲಿ ಸಿಗರೇಟ್ ಸೇದಿ ಸಿಕ್ಕಿಬಿದ್ದಿರುವ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲು ನ್ಯಾಯಾಲಯ ಅನುಮತಿ ನೀಡಿದೆ. ಇದೇ ವೇಳೆ ಜೈಲಿನಲ್ಲಿ ವಿಶೇಷ ಆತಿಥ್ಯ ಪಡೆದ ಪ್ರಕರಣ ಸಂಬಂಧ ದರ್ಶನ್ ವಿರುದ್ಧ ಮೂರು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದ್ದು ಎರಡು ಎಫ್ ಐಆರ್‌ಗಳಲ್ಲಿ ದರ್ಶನ್ ಪ್ರಮುಖ ಆರೋಪಿಯಾಗಿದ್ದಾರೆ. ಕೊಲೆ ಪ್ರಕರಣದ ಜೊತೆ ಈ ಪ್ರಕರಣಗಳ ಸಂಬಂಧವೂ ದರ್ಶನ್ ವಿಚಾರಣೆ ಎದುರಿಸಬೇಕಾಗಿದೆ.

> ಸಾಮಾನ್ಯ ಜ್ಞಾನ ಇಟ್ಟುಕೊಂಡು ಮಾತನಾಡೋಣ. ಜೈಲಿನಲ್ಲಿ ಇರೋದೇ ಕ್ರಿಮಿನಲ್‌ಗಳಲ್ಲವೇ..? ದರ್ಶನ್‌ಗೆ ಮಾತನಾಡೋಕೆ ಇನ್ಯಾರು ಸಿಗುತ್ತಾರೆ. ಆತ ಇನ್ಯಾರ ಜೊತೆ ಮಾತನಾಡಬೇಕಿತ್ತು. ಆದರೆ ರೌಡಿಶೀಟರ್‌ಗಳ ಜತೆ ದರ್ಶನ್ ಕುಳಿತು ಮಾತನಾಡಿದ್ದು ತಪ್ಪು. ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ.
>
> **- ಸುಮಲತಾ,** ಮಾಜಿ ಸಂಸದೆ

ಜೈಲಿನಲ್ಲಿ ವಿಶೇಷ ಸೌಲಭ್ಯ ಪಡೆದಿರುವ ಫೋಟೋ ಬಿಡುಗಡೆಯಾಗುತ್ತಿದ್ದಂತೆ, ಪರಪ್ಪನ ಅಗ್ರಹಾರದಿಂದ ಬೆಳಗಾವಿಯ ಹಿಂಡಲಗಾ ಅಥವಾ ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲು ಪೊಲೀಸರು ಮುಂದಾಗಿ, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಮಂಗಳವಾರ ವಿಚಾರಣೆ ನಡೆಸಿದ 24ನೇ ಎಸಿಎಂಎಂ ನ್ಯಾಯಾಲಯ ದರ್ಶನ್‌ನನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲು ಅನುಮತಿ ನೀಡಿದೆ. ಇನ್ನುಳಿದಂತೆ ಪ್ರಕರಣದ ಪ್ರಮುಖ ಆರೋಪಿಗಳನ್ನು ಮೈಸೂರು, ಧಾರವಾಡ, ಶಿವಮೊಗ್ಗ ಜೈಲಿಗೆ ಸ್ಥಳಾಂತರಿಸಲು ಒಪ್ಪಿಗೆ ನೀಡಿದೆ. ಈ ಮೂಲಕ ಇಷ್ಟು ದಿನ ಕೊಲೆ ಆರೋಪಿಗಳಾದ ಆಪ್ತರೊಂದಿಗೆ ಪರಪ್ಪನ ಅಗ್ರಹಾರದಲ್ಲಿ ಕಳೆದಿದ್ದ ದರ್ಶನ್ ಇದೀಗ ಬಳ್ಳಾರಿ ಜೈಲಿನಲ್ಲಿ ಆಪ್ತರಿಲ್ಲದೇ ದಿನದೂಡಬೇಕಾಗಿದೆ.

ಪರಪ್ಪನ ಅಗ್ರಹಾರದಲ್ಲೇ ಪವಿತ್ರಾ ಗೌಡ: ರೇಣುಕಾಸ್ವಾಮಿ ಕೊಲೆ ಪ್ರಕರಣದ ಇನ್ನುಳಿದ ಆರೋಪಿಗಳಾದ ರಾಘವೇಂದ್ರ, ನಂದೀಶ್‌ನನ್ನು ಮೈಸೂರು ಜೈಲಿಗೆ, ಜಗದೀಶ್‌ನನ್ನು ಶಿವಮೊಗ್ಗಕ್ಕೆ ಹಾಗೂ ಧನರಾಜ್‌ನನ್ನು ಧಾರವಾಡ ಜೈಲಿಗೆ ಸ್ಥಳಾಂತರ ಮಾಡಲು ನ್ಯಾಯಾಲಯ ಒಪ್ಪಿಗೆ ನೀಡಿದೆ. ಆದರೆ ಕೊಲೆ ಪ್ರಕರಣದ ಎ1 ಆರೋಪಿ ಪವಿತ್ರಾ ಗೌಡ ಪರಪ್ಪನ ಅಗ್ರಹಾರದಲ್ಲಿಯೇ ಮುಂದುವರಿಯಲಿದ್ದಾರೆ. ಬುಧವಾರ ಅಥವಾ ಗುರುವಾರದಂದು ದರ್ಶನ್ ಹಾಗೂ ಗ್ಯಾಂಗ್‌ನನ್ನು ರಾಜ್ಯದ ವಿವಿಧ ಜೈಲುಗಳಿಗೆ ರವಾನಿಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

→ 4

- ಬೆಳಗಾವಿ ಜೈಲಿನ ಬದಲಿಗೆ ಬಳ್ಳಾರಿ ಜೈಲಿಗೆ ವರ್ಗಾಯಿಸಲು ನ್ಯಾಯಾಲಯ ಅನುಮತಿ
- ಜೈಲಿನಲ್ಲಿನ ಅಕ್ರಮಗಳಿಗೆ ಬ್ರೇಕ್ ಹಾಕಲು ಸಚಿವ ಪರಂಗೆ ಸಿಎಂ ಸೂಚನೆ
- ವಿಶೇಷ ಆತಿಥ್ಯ ನೀಡಿದ ಪ್ರಕರಣದ ತನಿಖೆಗೆ 3 ವಿಶೇಷ ತಂಡ ರಚನೆ
- ಮದ್ಯ, ಮಾದಕವಸ್ತುಗಳು, ಮೊಬೈಲ್ ಜೈಲಿನಲ್ಲಿ ಲಭ್ಯವಾದ ಬಗ್ಗೆ ತನಿಖೆ
- ಫೋಟೋ ಹಾಗೂ ವಿಡಿಯೋ ಚಿತ್ರೀಕರಣದ ಬಗ್ಗೆಯೂ ತನಿಖೆ
- ಸಿಸಿಬಿ ದಾಳಿಯ ಮಾಹಿತಿ ಸೋರಿಕೆ ಬಗ್ಗೆಯೂ ತನಿಖೆ

ಸಿಎಂಗೆ ಪರಂ ಮಾಹಿತಿ

ಡಾ.ಜಿ. ಪರಮೇಶ್ವರ್ ಅವರು, ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಇಡೀ ಪ್ರಕರಣದ ಮಾಹಿತಿಯನ್ನು ಹಂಚಿಕೊಂಡರು. ಈ ರೀತಿಯ ಸೂಕ್ಷ್ಮ ಪ್ರಕರಣದಲ್ಲಿ ಮೈಮರೆತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು, ರಾಜ್ಯದ ಎಲ್ಲ ಜೈಲುಗಳಲ್ಲಿ ಇನ್ನಷ್ಟು ಕಠಿಣ ನೀತಿಗಳನ್ನು ಜಾರಿಗೊಳಿಸಿ ಎಂದು ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ. ಸೋಮವಾರ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿದ್ದ ಪರಮೇಶ್ವರ್ ಒಂಬತ್ತು ಮಂದಿ ಜೈಲು ಅಧಿಕಾರಿಗಳ ಅಮಾನತಿಗೆ ಆದೇಶ ನೀಡಿದ್ದರು.

> ನಟ ದರ್ಶನ್‌ನನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸುವ ಬಗ್ಗೆ ಪೊಲೀಸ್ ಇಲಾಖೆ, ನ್ಯಾಯಾಲಯ ತೀರ್ಮಾನ ಕೈಗೊಳ್ಳಲಿದೆ. ಆದರೆ ವಿಶೇಷ ಸೌಲಭ್ಯ ನೀಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಒಂಬತ್ತು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಪ್ರಕರಣದ ತನಿಖೆ ಕೈಗೊಂಡಿದ್ದು, ವರದಿ ಆಧಾರದ ಮೇಲೆ ತಪ್ಪೆಸಗಿರುವ ಇನ್ನಷ್ಟು ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು.
>
> **- ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಕಾರಾಗೃಹದಲ್ಲಿ ದರ್ಶನ್‌ಗೆ ಯಾರೆಲ್ಲ ಸಹಕಾರ ಕೊಟ್ಟಿದ್ದಾರೋ ಅವರನ್ನು ಅಮಾನತು ಮಾಡಲಾಗಿದೆ. ತನಿಖೆ ಇನ್ನೂ ಮುಂದುವರೆದಿದೆ. ಹೆಚ್ಚಿನ ತನಿಖೆಗಾಗಿ ಒಬ್ಬ ಹಿರಿಯ ಐಪಿಎಸ್ ಅಧಿಕಾರಿ ನೇಮಕ ಮಾಡುತ್ತೇವೆ. ಅವರು ಕೊಡುವ ವರದಿ ಆಧರಿಸಿ ಶಾಶ್ವತ ಕ್ರಮಗಳನ್ನು ಕೈಗೊಳ್ಳಲಾಗುವುದು.
>
> **- ಡಾ.ಜಿ.ಪರಮೇಶ್ವರ್,** ಗೃಹ ಸಚಿವ

ರಾಜ್ಯಪಾಲರ ವಿರುದ್ಧ ಮತ್ತೊಂದು ಕೈ ಸಮರ, ದೋಸ್ತಿ ನಾಯಕರ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿಗೆ ಆಗ್ರಹ

ಕಾಂಗ್ರೆಸ್‌ನಿಂದ 31ಕ್ಕೆ ರಾಜಭವನ ಚಲೋ

ಬೆಂಗಳೂರು: ಮುಡಾ ಪ್ರಕರಣದಿಂದ ಶುರುವಾಗಿರುವ ರಾಜಭವನ-ರಾಜ್ಯ ಸರಕಾರದ ನಡುವಿನ ಗುದ್ದಾಟ ಇದೀಗ ಮತ್ತೊಂದು ಹಂತಕ್ಕೆ ತಲುಪಿದೆ. ಆಡಳಿತಾರೂಢ ಕಾಂಗ್ರೆಸ್ ವತಿಯಿಂದಲೇ ರಾಜಭವನ ಚಲೋಗೆ ಕರೆ ನೀಡಲಾಗಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯ ಪಾಲರು, ಈ ಪ್ರಕರಣಕ್ಕೂ ವರ್ಷದ ಮೊದಲೇ ಅಭಿಯೋಜನೆಗೆ ಕೋರಿರುವ ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿದ್ದಾರೆ. ಆದ್ದರಿಂದ ಬಿಜೆಪಿ, ಜೆಡಿಎಸ್ ನಾಯಕರ ವಿರುದ್ಧ ಪ್ರಕರಣಗಳಿಗೆ ಅಭಿಯೋಜನೆಗೆ ಅನುಮತಿ ನೀಡುವಂತೆ ಆಗ್ರಹಿಸಿ ರಾಜಭವನ ಚಲೋ ನಡೆಸಲು ರಾಜ್ಯ ಕಾಂಗ್ರೆಸ್ ತೀರ್ಮಾನಿಸಿದೆ.

ರಾಜ್ಯಪಾಲರ ನಿಲುವಿಗೆ ಕೈ ಆಕ್ರೋಶ

ಬಿಜೆಪಿಯ ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ, ಜನಾರ್ದನ ರೆಡ್ಡಿ ಹಾಗೂ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ವಿವಿಧ ತನಿಖಾ ಸಂಸ್ಥೆಗಳಿಂದಲೇ ಮನವಿ ಸಲ್ಲಿಕೆಯಾಗಿದೆ. ಆದರೆ ಈ ಎಲ್ಲವನ್ನು ಬಿಟ್ಟು, ಖಾಸಗಿ ದೂರಿನ ಅನ್ವಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಅನುಮತಿ ನೀಡಿರುವುದು ಕಾಂಗ್ರೆಸ್ ಆಕ್ರೋಶಕ್ಕೆ ಕಾರಣವಾಗಿದೆ. ಈ ನಾಲ್ವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಸಚಿವ ಸಂಪುಟದಿಂದ ಸಲಹೆ ರೂಪದ 'ಆಗ್ರಹ' ಸಲ್ಲಿಕೆಯಾಗಿ ವಾರ ಕಳೆದರೂ ಅನುಮತಿ ನೀಡದಿರುವುದರಿಂದ 'ರಾಜಕೀಯ' ತಂತ್ರದ ಭಾಗವಾಗಿ ರಾಜಭವನ ಚಲೋ ನಡೆಸಲು ತೀರ್ಮಾನಿಸಲಾಗಿದೆ.

→ 4

> ಗೌರವಾನ್ವಿತ ಕುಮಾರಸ್ವಾಮಿ ಅವರು ತಾವು ಸಹಿಯನ್ನೇ ಹಾಕಿಲ್ಲ ಎನ್ನುತ್ತಾರೆ. ಪ್ರಕರಣದ ತನಿಖೆಯಾಗಿ 10 ವರ್ಷ ಆಗಿದೆ. ಬೇಲ್ ತೆಗೆದುಕೊಂಡಿದ್ದೇನೆ ಅಂತಾನೂ ಹೇಳಿದ್ದಾರೆ. ಅವರಂತೆ ನಾನು ಹುಡುಕೋಕೆ ಹೋಗಿಲ್ಲ. ನಿಮ್ಮ ಸಹಿಯನ್ನು ಯಾರು ಫೋರ್ಜರಿ ಮಾಡಿದ್ದಾರೆ. ಏಕೆ ಫೋರ್ಜರಿ ಮಾಡಿದ್ದಾರೆಂದು ಈವರೆಗೆ ಏಕೆ ಕೇಸ್ ಹಾಕಿಲ್ಲ? ಮುಖ್ಯಮಂತ್ರಿ ಸಹಿಯನ್ನೇ ಫೋರ್ಜರಿ ಮಾಡಿದ್ದರೆ ಅಂತವರ ಮೇಲೆ ಕ್ರಮ ಆಗಬೇಕಲ್ಲವೇ?
>
> **- ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

31ಕ್ಕೆ ಪ್ರತಿಭಟನೆ

ರಾಜಭವನಕ್ಕೆ ತೆರಳುವ ಮೊದಲು ಬಿಜೆಪಿ, ಜೆಡಿಎಸ್ ನಾಯಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಮನವಿ ಮಾಡಿ ವರ್ಷ ಕಳೆದರೂ ಕ್ರಮ ಕೈಗೊಳ್ಳದ ರಾಜ್ಯಪಾಲರ ವಿರುದ್ಧ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಆಗಸ್ಟ್ 31ರ ಬೆಳಗ್ಗೆ 10 ಗಂಟೆಗೆ ವಿಧಾನಸೌಧದ ಗಾಂಧಿ ಪ್ರತಿಮೆಯಿಂದ ರಾಜಭವನಕ್ಕೆ ತೆರಳಿ ಮನವಿ ಸಲ್ಲಿಸಲಾಗುವುದು. ಮುಖ್ಯಮಂತ್ರಿಗಳು, ಎಲ್ಲಾ ಸಚಿವರು, ಕಾಂಗ್ರೆಸ್ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಸಂಸದರು ಮೆರವಣಿಗೆಯಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಬೆಳಗಾವಿಯಲ್ಲಿ ಓಎಂಆರ್ ಶೀಟ್ ಅದಲು ಬದಲು, ಪರೀಕ್ಷೆ ವಿಳಂಬ

ಕೆಎಎಸ್ ಪರೀಕ್ಷೆ ಸುಸೂತ್ರ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ 384 ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳ ನೇಮಕಾತಿಗೆ ಮಂಗಳವಾರ ರಾಜ್ಯಾದ್ಯಂತ ಏಕಕಾಲಕ್ಕೆ ಸುಸೂತ್ರವಾಗಿ ಪರೀಕ್ಷೆ ನಡೆದಿದೆ. ಬೆಳಗಾವಿ ಸೇರಿದಂತೆ ಕೆಲವೊಂದಷ್ಟು ಭಾಗದಲ್ಲಿ ಗೊಂದಲ, ಪ್ರತಿಭಟನೆಯ ಹೊರಾತಾಗಿ ರಾಜ್ಯದ ಬಹುತೇಕ ಕೇಂದ್ರದಲ್ಲಿ ಪರೀಕ್ಷೆ ಸುಸೂತ್ರವಾಗಿ ನಡೆದಿದೆ.

ಪರೀಕ್ಷಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ವ್ಯಾಪಕ ತಪಾಸಣಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಅದರಲ್ಲೂ ಈ ಮೊದಲು ಪಿಎಸ್‌ಐ ಹುದ್ದೆಗಳ ನೇಮಕಾತಿ ಸೇರಿದಂತೆ ಹಲವು ಪರೀಕ್ಷೆಗಳಲ್ಲಿ ಅಕ್ರಮಗಳಿಗೆ ಕುಖ್ಯಾತ ವಾಗಿರುವ ಕಲಬುರಗಿ ಹಾಗೂ ಇತರ ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಪರೀಕ್ಷಾ ಕೇಂದ್ರದಲ್ಲಿ ಬಯೋಮೆಟ್ರಿಕ್ ಅಳವಡಿಸಲಾಗಿತ್ತು. ನೋಂದಾಯಿತ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಕಲ್ಪಿಸಲಾಗಿತ್ತು. ಲೋಹ ಪರಿಶೋಧಕ ಅಳವಡಿಸುವ ಮೂಲಕ ಸಂಬಂಧಪಟ್ಟ ಸಲಕರಣೆಗಳಿಂದ ತೀವ್ರ ತಪಾಸಣೆ ನಡೆಯಿತು. ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಗೆ ಸಂಪೂರ್ಣ ನಿಷೇಧ ಹೇರಲಾಗಿತ್ತು. ಸೂಕ್ಷ್ಮ ಬ್ಲೂಟೂತ್‌ನಂತಹ ಡಿವೈಸ್‌ಗಳನ್ನು ಬಳಸಿ ಅಕ್ರಮ ನಡೆಸಬಹುದೆಂಬ ಕಾರಣಕ್ಕೆ ಪ್ರತಿಯೊಬ್ಬ ಅಭ್ಯರ್ಥಿಯ ಕಿವಿಗಳನ್ನು ಬ್ಯಾಟರಿ ಬೆಳಕಿನಲ್ಲಿ ತಪಾಸಣೆ ನಡೆಸಲಾಯಿತು. ಹೆಣ್ಣು ಮಕ್ಕಳಿಗೆ ಕಿವಿಯೋಲೆ, ಮೂಗುತಿ ಹಾಗೂ ಚಿನ್ನದ ಸರ ಧರಿಸದಂತೆ ಪರೀಕ್ಷಾ ಕೇಂದ್ರದ ಬಳಿ ಇದ್ದ ಧ್ವನಿವರ್ಧಕಗಳ ಮೂಲಕ ಸೂಚನೆ ನೀಡಲಾಗಿತ್ತು. ಕೆಲವರು ಧರಿಸಿದ್ದ ಮೂಗುತಿ ಹಾಗೂ ಕಿವಿಯೋಲೆಗಳನ್ನು ತಕ್ಷಣಕ್ಕೆ ಬಿಚ್ಚಲಾಗದೆ ಪರದಾಡಿದರು. ಬಳಿಕ ಅವುಗಳನ್ನು ಕತ್ತರಿಸಿ ತೆಗೆಯಲಾಯಿತು.

ಓಎಂಆರ್ ಗೊಂದಲ

ಬೆಳಗಾವಿಯ ಅಂಜುಮನ್ ಕಾಲೇಜಿನಲ್ಲಿ ಓಎಂಆರ್ ಶೀಟ್ ಅದಲು ಬದಲು ಗೊಂಡಿದ್ದರಿಂದ ಗೊಂದಲ ಉಂಟಾಗಿತ್ತು. ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಅನುಮಾನ ವ್ಯಕ್ತಪಡಿಸಿದ ಕೆಲವರು ಪ್ರತಿಭಟನೆ ನಡೆಸಿದರು. ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಮೊಹಮ್ಮದ್ ಮೊಹಿಸಿನ್, ಓಎಂಆರ್ ಶೀಟ್‌ನಲ್ಲಿ ಅದಲು ಬದಲು ಆಗಿರುವ ಗೊಂದಲವನ್ನು ಬಗೆಹರಿಸಿದರು. ಒಂದು ಗಂಟೆ ತಡವಾಗಿ ಪರೀಕ್ಷೆ ಆರಂಭವಾಯಿತು. ತಮಗೆ ಪರೀಕ್ಷೆ ಬರೆಯಲು ಹೆಚ್ಚುವರಿ ಸಮಯ ನೀಡಬೇಕೆಂದು ಅಭ್ಯರ್ಥಿಗಳು ಆಗ್ರಹಿಸಿದರು. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 214 ಸರಕಾರಿ, 189 ಅನುದಾನಿತ ಹಾಗೂ 161 ಖಾಸಗಿ ಶಾಲಾ ಕಾಲೇಜುಗಳು ಸೇರಿ ಒಟ್ಟು 564 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಒಟ್ಟು ಹುದ್ದೆಗಳ ಪೈಕಿ 159 ಗ್ರೂಪ್ ಎ ವೃಂದದ ಮತ್ತು 225 ಗ್ರೂಪ್ ಬಿ ವೃಂದದ ಹುದ್ದೆಗಳಾಗಿವೆ. ಈ ಹುದ್ದೆಗಳಿಗೆ 2,10,910 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು.

ಇಂದು ಪ.ಬಂಗಾಳ ಬಂದ್‌ಗೆ ಬಿಜೆಪಿ ಕರೆ

ಕೋಲ್ಕತ್ತ: ಇಲ್ಲಿನ ಆರ್‌ಜಿ ಕರ್ ಆಸ್ಪತ್ರೆ ಕಿರಿಯ ವೈದ್ಯೆ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಸಂಬಂಧ ಸಿಎಂ ಮಮತಾ ಬ್ಯಾನರ್ಜಿ ರಾಜೀನಾಮೆಗೆ ಆಗ್ರಹಿಸಿ ಪಶ್ಚಿಮ ಬಂಗಾಳದ ವಿದ್ಯಾರ್ಥಿ ಸಂಘಟನೆಗಳು ಮಂಗಳವಾರ ಕೋಲ್ಕತ್ತದಲ್ಲಿ ನಡೆಸಿದ 'ವಿಧಾನಸೌಧ ಚಲೋ' ರ‍್ಯಾಲಿಯ ವೇಳೆ ಪೊಲೀಸರು ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ ನಡೆಸಿದ್ದಾರೆ. ಘಟನೆ ಖಂಡಿಸಿ ಬಿಜೆಪಿ ಬುಧವಾರ ಪಶ್ಚಿಮ ಬಂಗಾಳ ಬಂದ್‌ಗೆ ಕರೆ ನೀಡಿದೆ.

ಆದರೆ, ಈ ರ‍್ಯಾಲಿಗೆ (ನಬನ್ನಾ ಅಭಿಜಾನ್) ಅನುಮತಿಯನ್ನೂ ನೀಡಿರಲಿಲ್ಲ. ರಾಜಕೀಯ ಪ್ರೇರಿತ ರ‍್ಯಾಲಿಯನ್ನು ಬಲಪ್ರಯೋಗಿಸಿ ತಡೆಯಲಾಗಿದೆ ಎಂದು ಕೋಲ್ಕತ್ತ ಪೊಲೀಸರು ಹೇಳಿದ್ದಾರೆ. ಇನ್ನೊಂದೆಡೆ, ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆ ವಿರುದ್ಧ ಜಾರಿ ನಿರ್ದೇಶನಾಲಯ(ಇ.ಡಿ) ಮಂಗಳವಾರ 'ಅಕ್ರಮ ಹಣ ವರ್ಗಾವಣೆ' ಪ್ರಕರಣ ದಾಖಲಿಸಿದೆ.

ಇದರಿಂದ ಮಾಜಿ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ವಿರುದ್ಧದ ಕಾನೂನಿನ ಕುಣಿಕೆ ಬಿಗಿಗೊಂಡಿದೆ.

ಮಹಾಮಳೆ: ಕೃಷ್ಣಾ ನದಿ ಪಾತ್ರದ ಜನರಿಗೆ ಪ್ರವಾಹ ಭೀತಿ

ಚಿಕ್ಕೋಡಿಯ ಆರು ಸೇತುವೆ ಜಲಾವೃತ

ಚಿಕ್ಕೋಡಿ: ಮಹಾರಾಷ್ಟ್ರದ ಘಟ್ಟ ಪ್ರದೇಶಗಳಲ್ಲಿ ಮಳೆ ಆರ್ಭಟ ಜೋರಾಗಿದ್ದು ಕೇವಲ ಒಂದೇ ತಿಂಗಳ ಅಂತರದಲ್ಲಿ ಎರಡನೇ ಅವಧಿಗೆ ಕೃಷ್ಣಾ ನದಿ ಪಾತ್ರದ ಜನರಿಗೆ ಪ್ರವಾಹದ ಭೀತಿ ಎದುರಾಗಿದೆ. ಕೃಷ್ಣಾ, ವೇದಗಂಗಾ, ದೂಧಗಂಗಾ ನದಿಗಳ ಒಳಹರಿವು ಹೆಚ್ಚಾಗಿದ್ದು ಚಿಕ್ಕೋಡಿ ಉಪ ವಿಭಾಗದ ಕೃಷ್ಣಾ ನದಿಯ ಕೆಳಹಂತದ ಆರು ಸೇತುವೆಗಳು ಜಲಾವೃತಗೊಂಡಿವೆ. ಕಳೆದ 20 ದಿನಗಳ ಹಿಂದೆಯಷ್ಟೇ ನಿರಂತರ ಮಳೆಯಿಂದ ಉಂಟಾಗಿದ್ದ ನದಿಭಾಗದಲ್ಲಿ ಅಪಾರ ಪ್ರಮಾಣದ ಬೆಳೆಹಾನಿ ಸಂಭವಿಸಿತ್ತು. ಸಾವಿರಾರು ಜನರು ನಿರಾಶ್ರಿತರ ಶಿಬಿರ ಸೇರಿದ್ದರು.

ದತ್ತ ಮಂದಿರ ಸಹ ಜಲಾವೃತ: ಮಳೆ ಆರ್ಭಟ ಜೋರಾದ ಹಿನ್ನೆಲೆಯಲ್ಲಿ ವೇದಗಂಗಾ ನದಿಯ ಅಕ್ಕೋಳ-ಸಿದ್ನಾಳ, ಜತ್ರಾಟ-ಭೀಮಶಿ ಸೇತುವೆ ಜಲಾವೃತಗೊಂಡಿವೆ. ದೂಧಗಂಗಾ ನದಿಯ ಕಾರದಗಾ-ಭೋಜ್, ಭೋಜವಾಡಿ-ಕುನ್ನೂರ, ಭೋಜ್-ಕುನ್ನೂರ, ಮಲ್ಲಿಕವಾಡ-ದತ್ತವಾಡ ಸೇತುವೆ ಮುಳುಗಡೆಯಾಗಿವೆ. ಇನ್ನೂ ನರಸಿಂಹವಾಡಿಯ ದತ್ತ ಮಂದಿರ ಜಲಾವೃತಗೊಂಡಿದೆ.

ಇದೇ ವೇಳೆ ದಾಂಡೇಲಿಯ ಸುಪಾ ಜಲಾಶಯವೂ ಭರ್ತಿಯಾಗಿದ್ದು ವಿದ್ಯುತ್ ಉತ್ಪಾದನೆಗೆ ನೆರವಾಗಲಿದೆ. ಕ್ರಸ್ಟ್ ಗೇಟ್ ಸಮಸ್ಯೆಯಿಂದ ಬರಿದಾದ ತುಂಗಭದ್ರಾ ಜಲಾಶಯಕ್ಕೆ 21 ಸಾವಿರ ಕ್ಯೂಸೆಕ್ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. 105.97 ಟಿಎಂಸಿ ಸಾಮರ್ಥ್ಯದ ಜಲಾಶಯದಲ್ಲಿ ಇದೀಗ 79.70 ಟಿಎಂಸಿ ನೀರು ತುಂಬಿದೆ.

ಅಮ್ಮ ಅಧ್ಯಕ್ಷ ಮೋಹನಲಾಲ್ ರಾಜೀನಾಮೆ

ಕೊಚ್ಚಿ: ಹಿರಿಯ ನಟ- ನಿರ್ಮಾಪಕ ಮೋಹನ್ ಲಾಲ್ 'ಅಮ್ಮಾ' (ಅಸೋಸಿಯೇಷನ್ ಆಫ್ ಮಲಯಾಳಂ ಮೂವಿ ಆರ್ಟಿಸ್ಟ್ಸ್) ಅಧ್ಯಕ್ಷ ಸ್ಥಾನಕ್ಕೆ ಮಂಗಳ ವಾರ ರಾಜೀನಾಮೆ ನೀಡಿದ್ದಾರೆ. ಅದರ ಬೆನ್ನಲ್ಲೇ 'ಅಮ್ಮಾ' ಕಾರ್ಯಕಾರಿ ಸಮಿತಿ ಎಲ್ಲಾ 17 ಸದಸ್ಯರೂ ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಿದ್ದಾರೆ. ಕೇರಳದ ಮಲಯಾಳಂ ಸಿನಿಮಾ ನಟಿಯರ ಶೋಷಣೆ, ಲೈಂಗಿಕ ದೌರ್ಜನ್ಯಗಳ ಸರಣಿ ಆರೋಪ- ದೂರುಗಳು ಚರ್ಚೆಗೊಳಗಾಗಿವೆ.

ಪ್ರಿಯಾಂಕ್ ಖರ್ಗೆ ವಿರುದ್ಧ ರಾಜ್ಯಪಾಲ ಗೆಹ್ಲೋಟ್‌ಗೆ ದೂರು

ಬೆಂಗಳೂರು: ಅಧಿಕಾರ ದುರುಪಯೋಗ ಆರೋಪದಲ್ಲಿ ಪ್ರಿಯಾಂಕ್ ಖರ್ಗೆ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ರಾಜ್ಯಪಾಲರಿಗೆ ಮಂಗಳವಾರ ದೂರು ನೀಡಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬದವರು ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಕೆಐಎಡಿಬಿಯಿಂದ 5 ಎಕರೆ ಜಾಗ ಪಡೆದುಕೊಂಡಿದ್ದಾರೆ.

ತುಳು ಚಿತ್ರ ನಿರ್ಮಾಪಕರಿಂದ ಹಣ ಪಡೆದು ಮರಳಿಸದ ಆರೋಪ

3 ತಿಂಗಳು ಸಜೆ, 40 ಲಕ್ಷ ರು. ದಂಡ ವಿಧಿಸಿದ ಮಂಗಳೂರು ಕೋರ್ಟ್

ಚೆಕ್ ಬೌನ್ಸ್: ನಟಿ ಪದ್ಮಜಾ ರಾವ್‌ಗೆ ಜೈಲು

ಮಂಗಳೂರು: ಚೆಕ್ ಬೌನ್ಸ್ ಪ್ರಕರಣವೊಂದರಲ್ಲಿ ಚಲನಚಿತ್ರ ನಟಿ ಪದ್ಮಜಾ ರಾವ್‌ಗೆ ಮಂಗಳೂರು 8ನೇ ಜೆಎಂಎಫ್ ಸಿ ನ್ಯಾಯಾಲಯವು ಮೂರು ತಿಂಗಳು ಸಾದಾ ಜೈಲು ಶಿಕ್ಷೆ ಹಾಗೂ 40.20 ಲಕ್ಷ ರು. ದಂಡ ವಿಧಿಸಿದೆ.

ಏನಿದು ಪ್ರಕರಣ?: ಮಂಗಳೂರಿನ ವೀರೂ ಟಾಕೀಸ್ ಸಂಸ್ಥೆಯ ಮಾಲೀಕ, ತುಳು ಚಿತ್ರ ನಿರ್ಮಾಪಕ ವೀರೇಂದ್ರ ಶೆಟ್ಟಿಯಿಂದ ಪದ್ಮಜಾ ರಾವ್ 40 ಲಕ್ಷ ರು. ಸಾಲ ಪಡೆದಿದ್ದು, ಇದನ್ನು ಪಾವತಿ ಮಾಡದ ಹಿನ್ನೆಲೆಯಲ್ಲಿ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು.

ಪದ್ಮಜಾ ರಾವ್ ತಮ್ಮಿಂದ 40 ಲಕ್ಷ ರು. ಸಾಲ ಪಡೆದಿದ್ದಕ್ಕೆ ಭದ್ರತೆಯಾಗಿ 2020ರ ಜೂ. 17ರಂದು ಚೆಕ್ ನೀಡಿದ್ದರು. ಅದನ್ನು ನಗದೀಕರಿಸಲು ಹಾಕಿದಾಗ, ಅವರ ಬ್ಯಾಂಕ್ ಖಾತೆಯಲ್ಲಿ ಅಷ್ಟೊಂದು ಮೊತ್ತ ಇರಲಿಲ್ಲ. ಈ ಹಿನ್ನೆಲೆಯಲ್ಲಿ 15 ದಿನಗಳ ಒಳಗೆ ಸಾಲದ ಹಣ ಪಾವತಿಸುವಂತೆ ಜೂ. 30ರಂದು ಪದ್ಮಜಾ ರಾವ್‌ರಿಗೆ ನೋಟಿಸ್ ನೀಡಲಾಗಿತ್ತು. ಆದರೆ ಅವರು ಹಣ ಪಾವತಿಸಿಲ್ಲ ಎಂದು ವೀರೇಂದ್ರ ಶೆಟ್ಟಿ ನ್ಯಾಯಾಲಯಕ್ಕೆ ದೂರು

ಸಾಲ ಪಡೆದಿಲ್ಲ; ಪದ್ಮಜಾ ವಾದ

ಸಮನ್ಸ್ ಜಾರಿಯಾದ ಬಳಿಕ ವಿಚಾರಣೆಗೆ ನ್ಯಾಯಾಲಯಕ್ಕೆ ಹಾಜರಾಗಿದ್ದ ಪದ್ಮಜಾರಾವ್, ತಾವು ದೂರುದಾರರಿಂದ ಸಾಲ ಪಡೆದಿಲ್ಲ ಹಾಗೂ ಅವರಿಗೆ ಯಾವುದೇ ಚೆಕ್ ನೀಡಿಲ್ಲ ಎಂದು ಹೇಳಿಕೆ ನೀಡಿದ್ದರು. ಜತೆಗೆ ವೀರೇಂದ್ರ ಶೆಟ್ಟಿ ತನ್ನ ಬ್ಯಾಂಕ್ ಚೆಕ್ ಕದ್ದು ಸಹಿ ಫೋರ್ಜರಿ ಮಾಡಿದ್ದಾರೆ ಎಂದು ಪದ್ಮಜಾ ಆರೋಪಿಸಿದ್ದರು. ಆದರೆ, ಈ ಆರೋಪಕ್ಕೆ ಪುರಾವೆ ಒದಗಿಸುವಲ್ಲಿ ಅವರು ವಿಫಲರಾಗಿದ್ದರು. 8ನೇ ಜೆಎಂಎಫ್ ಸಿ ನ್ಯಾಯಾಲಯದ ನ್ಯಾಯಾಧೀಶ ಫವಾಝ್ ಪಿ.ಎ., ಪದ್ಮಜಾ ರಾವ್ 40.20 ಲಕ್ಷ ರು. ದಂಡ ಪಾವತಿಸಬೇಕು. ಅದರಲ್ಲಿ 40.17 ಲಕ್ಷ ರು. ದೂರುದಾರರಿಗೆ ನೀಡಬೇಕು. ಹಾಗೂ ಸರಕಾರಕ್ಕೆ 3 ಸಾವಿರ ರು.ಪಾವತಿಸಬೇಕು. 3 ತಿಂಗಳು ಸಾದಾ ಕಾರಾಗೃಹ ಶಿಕ್ಷೆ ಅನುಭವಿಸಬೇಕು ಎಂದು ತೀರ್ಪು ನೀಡಿದ್ದಾರೆ.

ಗೃಹಲಕ್ಷ್ಮೀ ಹಣ ಕೂಡಿಟ್ಟು ಸೊಸೆಯ ಬಾಳು ಬೆಳಗಿದ ಅತ್ತೆ

ಹಾವೇರಿ: ಮನೆಯ ಯಜಮಾನಿಗೆ ಮಾಸಿಕ 2 ಸಾವಿರ ರು. ನೀಡುವ ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಿಂದ ಅನೇಕ ಬಾಳು ಹಸನಾಗುತ್ತಿದೆ. ಬೆಳಗಾವಿಯಲ್ಲಿ ಅಜ್ಜಿಯೊಬ್ಬರು ತಾವು ಉಳಿತಾಯ ಮಾಡಿದ ಗೃಹಲಕ್ಷ್ಮೀ ಯೋಜನೆ ಹಣದಲ್ಲಿ ಊರಿಗೆ ಹೋಳಿಗೆ ಊಟ ಹಾಕಿಸಿ ಜನರ ಮನ ಗೆದ್ದಿದ್ದರು. ಮುಖ್ಯಮಂತ್ರಿಗಳ ಮೆಚ್ಚುಗೆಗೂ ಪಾತ್ರರಾಗಿದ್ದರು. ಇದೀಗ ಗೃಹಲಕ್ಷ್ಮೀ ಯೋಜನೆ ಹಣ ಕೂಡಿಟ್ಟು ಸೊಸೆಗೆ ಅತ್ತೆಯೊಬ್ಬರು ಫ್ಯಾನ್ಸಿ ಸ್ಟೋರ್ ಹಾಕಿಕೊಡುವ ಮೂಲಕ ಹೊಸಜೀವನಕ್ಕೆ ನಾಂದಿ ಹಾಡಿರುವ ಪ್ರಸಂಗ ಹಾವೇರಿ ಜಿಲ್ಲೆಯಿಂದ ವರದಿಯಾಗಿದೆ.

ಅತ್ತೆಯ ಕಾರ್ಯಕ್ಕೆ ಜನರ ಮೆಚ್ಚುಗೆ: ಹೌದು, ಶಿಗ್ಗಾವಿ ತಾಲ್ಲೂಕಿನ ನೀರಲಗಿ ಗ್ರಾಮದಲ್ಲಿ ಗೃಹಲಕ್ಷ್ಮೀ ಯೋಜನೆಯ ಉಳಿತಾಯದ ಹಣದಿಂದ ಫ್ಯಾನ್ಸಿ ಸ್ಟೋರ್ ಪ್ರಾರಂಭವಾಗಿದೆ. ಸೊಸೆ ಹೊರಗೆ ಕೆಲಸಕ್ಕೆ ಹೋಗಬಾರದು ಎಂದು ಮನೆಯಲ್ಲೇ ಫ್ಯಾನ್ಸಿ ಸ್ಟೋರ್ ಇಟ್ಟುಕೊಟ್ಟ ಅತ್ತೆ ಕಾರ್ಯಕ್ಕೆ ಈಗ ಜನ ಶಹಬ್ಬಾಸ್ ಅಂತಿದ್ದಾರೆ. ನೀರಲಗಿ ಗ್ರಾಮದ ಅತ್ತೆ ದಾಕ್ಷಾಯಿಣಿ ತಮ್ಮ 10 ಕಂತಿನ ಗೃಹಲಕ್ಷ್ಮಿ ಹಣ ಕೂಡಿಟ್ಟಿದ್ದರು.

10 ಕಂತಿನ 20,000 ರು. ಖರ್ಚುಮಾಡಿ ಸೊಸೆ ಕುಮಾರಿ ಶಿವನಗೌಡ ಪಾಟೀಲ್‌ಗೆ ಫ್ಯಾನ್ಸಿ ಸ್ಟೋರ್ ಇಟ್ಟುಕೊಟ್ಟಿದ್ದಾರೆ. ಶ್ರಾವಣ ಮಂಗಳವಾರದ ಶುಭದಿನದಂದೇ ಫ್ಯಾನ್ಸಿ ಸ್ಟೋರ್‌ಗೆ ಪೂಜೆಮಾಡಿ ಚಾಲನೆ ನೀಡಿದರು. ಸಂಭ್ರಮದಿಂದ ಸ್ವಂತ ವ್ಯಾಪಾರ ಶುರುಮಾಡಿದ ಅತ್ತೆ-ಸೊಸೆ ಪರಸ್ಪರ ಭಾವುಕರಾದರು. ಸೊಸೆ ಮಗಳಿದ್ದ ಹಾಗೆ, ಅವಳು ಹೊರಗೆ ದುಡಿಯೋಕೆ ಹೋಗೋದು ಬೇಡ ಎಂದು ಫ್ಯಾನ್ಸಿ ಸ್ಟೋರ್ ಹಾಕಿಸಿಕೊಡುವ ಮೂಲಕ ಅತ್ತೆ ಇಡೀ ಮಹಿಳಾ ಸಮುದಾಯಕ್ಕೆ ಮಾದರಿಯಾಗಿದ್ದಾರೆ.

ಮನೆಯಲ್ಲೇ ಫ್ಯಾನ್ಸಿ ಸ್ಟೋರ್

> ಗೃಹಲಕ್ಷ್ಮೀ ಯೋಜನೆಯಲ್ಲಿ ಜುಲೈ ಮತ್ತು ಆಗಸ್ಟ್ ತಿಂಗಳ ಬಾಕಿ ಮೊತ್ತವನ್ನು ಬಿಡುಗಡೆ ಮಾಡಬೇಕಿದ್ದು, ಅರ್ಜಿ ಸಲ್ಲಿಸದವರು ಈಗಲೂ ಸಲ್ಲಿಸಲು ಅವಕಾಶವಿದೆ. ವೆಬ್‌ಸೈಟ್ ಮುಕ್ತವಾಗಿದ್ದು, ಆದಾಯ ತೆರಿಗೆ, ಜಿಎಸ್‌ಟಿ ಪಾವತಿ ಮಾಡದಿರುವವರು ಗೃಹಲಕ್ಷ್ಮಿ ಯೋಜನೆಗಾಗಿ ಅರ್ಜಿ ಸಲ್ಲಿಸಬಹುದು.
>
> **-ಲಕ್ಷ್ಮೀ ಹೆಬ್ಬಾಳ್ಕರ್,** ಮಹಿಳಾ - ಮಕ್ಕಳ ಕಲ್ಯಾಣ ಸಚಿವೆ

ಸಮಾಚಾರ ಸಣ್ಣದಲ್ಲ

ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: 66/11ಕೆವಿ ಸೌತ್ ಸಿಟಿ ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯವನ್ನು ಆಯೋಜಿಸಲಾಗಿರುವ ಹಿನ್ನೆಲೆ ಆ.28ರಂದು ಬೆಳಗ್ಗೆ 10.00 ಗಂಟೆಯಿಂದ 3.00 ಗಂಟೆಯವರೆಗೆ ಲಕ್ಷ್ಮೀ ಲೇಔಟ್, ಸೌತ್ ಸಿಟಿ ಅಪಾರ್ಟ್‌ಮೆಂಟ್, ಕಮ್ಮನಹಳ್ಳಿ, ಶಾಂತಿನಿಕೇತನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ತಮ್ಮ ದೂರುಗಳನ್ನು ದಾಖಲಿಸಲು 1912ಗೆ ಕರೆ ಮಾಡುವಂತೆ ಪ್ರಕಟಣೆ ತಿಳಿಸಿದೆ.

ಸೆ.10: ಬೆಂಗಳೂರು ವಿವಿ 59ನೇ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ವಿವಿಯ 59ನೇ ವಾರ್ಷಿಕ ಘಟಿಕೋತ್ಸವವು ಸೆ.10ರಂದು ಬೆಳಗ್ಗೆ 11.00ಕ್ಕೆ ಜ್ಞಾನಜ್ಯೋತಿ ಸಭಾಂಗಣ ಸೆಂಟ್ರಲ್ ಕಾಲೇಜಿನಲ್ಲಿ ಆಯೋಜಿಸಲಾಗಿದೆ. ಎಲ್ಲಾ ಚಿನ್ನದ ಪದಕ ವಿಜೇತ/ರ್‍ಯಾಂಕ್/ ಬಹುಮಾನ ವಿಜೇತ ವಿದ್ಯಾರ್ಥಿಗಳು ಹಾಗೂ ಪಿಎಚ್.ಡಿ ಪದವಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಭಾಗಗಳಿಗೆ ಆಮಂತ್ರಣ ಪತ್ರಿಕೆ ಮತ್ತು ಬ್ಯಾಡ್ಜ್‌ಗಳನ್ನು ಪಡೆಯಲು ಆಹ್ವಾನಿಸಲಾಗಿದ್ದು, ಸಂಬಂಧಿಸಿದ ಚಿನ್ನದ ಪದಕ ವಿಜೇತ/ರ್‍ಯಾಂಕ್/ ಬಹುಮಾನ ವಿಜೇತ ಹಾಗೂ ಪಿಎಚ್.ಡಿ ಪದವಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳು (ಪ್ರಾಚಾರ್ಯರು ನೀಡಿರುವ ಗುರುತಿನ ಪತ್ರದೊಂದಿಗೆ) ಖುದ್ದಾಗಿ ಬೆಂಗಳೂರು ವಿವಿ ಮೌಲ್ಯಮಾಪನ ವಿಭಾಗದ ಕುಲಸಚಿವರಲ್ಲಿ ಸೆ.3ರಿಂದ 8ರೊಳಗಾಗಿ ಬಂದು ಪಡೆದುಕೊಳ್ಳಲು ಕೋರಲಾಗಿದೆ.

ವಿರಾಮ
ಪ್ರತಿ ಭಾನುವಾರ

ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿಯಿಂದ ದೂರು | ರಾಜ್ಯಪಾಲರಿಗೆ ದೂರು ಸಲ್ಲಿಸಿದ ಬಿಜೆಪಿ

ಖರ್ಗೆ ಕುಟುಂಬದ ವಿರುದ್ಧ ದೂರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಧಿಕಾರ ದುರುಪಯೋಗ ಆರೋಪದಲ್ಲಿ ಪ್ರಿಯಾಂಕ್ ಖರ್ಗೆ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ರಾಜ್ಯಪಾಲ ಥಾವರಚಂದ್ ಗೆಹ್ಲೋಥ್‌ಗೆ ಮಂಗಳವಾರ ದೂರು ನೀಡಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದವರು ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಕೆಐಎಡಿಬಿಯಿಂದ ಐದು ಎಕರೆ ಜಾಗ ಪಡೆದುಕೊಂಡಿದ್ದಾರೆ. ಸಚಿವರಾಗಿ ಪ್ರಿಯಾಂಕ್ ಖರ್ಗೆ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ. ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿ ಜಮೀನು ವಾಪಸ್ ಪಡೆಯಬೇಕು ಎಂದು ದೂರು ಸಲ್ಲಿಸಿದ್ದಾರೆ.

ಏರೋಸ್ಪೇಸ್ ಸಂಬಂಧ ನಿವೇಶನ ಮಂಜೂರು ಸಲ್ಲ ದೂರು ಸಲ್ಲಿಸುವ ಮೊದಲು ಮಾತನಾಡಿದ ಛಲವಾದಿ ನಾರಾಯಣಸ್ವಾಮಿ, ಕೈಗಾರಿಕಾ ನಿವೇಶನ ಪಡೆಯುವ ಹಕ್ಕು ಎಲ್ಲರಿಗೂ ಇದೆ. ಆದರೆ, ಸಿಎ ಸೈಟ್ ಪಡೆಯಲು ಕೆಲವು ಕಾನೂನುಗಳಿವೆ. ಸಾಮಾಜಿಕ ಚಟುವಟಿಕೆ, ರಂಗಮಂದಿರ, ಆಸ್ಪತ್ರೆ– ಹೀಗೆ ನಿಗದಿತ ಉದ್ದೇಶಕ್ಕೆ ನಮೂದಾಗಿರುತ್ತದೆ. ಇದನ್ನು ಇತರ ಅರ್ಜಿಗಳನ್ನು ತಿರಸ್ಕರಿಸಿ ಪ್ರಬಲರಿಗೆ ಕೊಡಲಾಗಿದೆ. ಇದರಿಂದ ಅನುಮಾನ ಶುರುವಾಗಿದೆ. ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯಸಭಾ ವಿಪಕ್ಷ ನಾಯಕ–ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದ ರಾಧಾಕೃಷ್ಣ ಅವರ ಖಾಸಗಿ, ಒಂದೇ ಮನೆಗೆ ಸೀಮಿತ ಟ್ರಸ್ಟಿಗೆ ನಿವೇಶನ ಕೊಡಲಾಗಿದೆ. ಬುದ್ಧ ವಿಹಾರ ಕಟ್ಟಲು ಸಿದ್ಧಾರ್ಥ ವಿಹಾರ ಟ್ರಸ್ಟ್ ಕಲಬುರಗಿಯಲ್ಲಿ ನೋಂದಣಿ ಮಾಡಿದ್ದಾರೆ. ಇದೊಂದು ಧಾರ್ಮಿಕ ಉದ್ದೇಶದ ಟ್ರಸ್ಟ್. ಆದರೆ, ಏರೋಸ್ಪೇಸ್ ಸಂಬಂಧಿಸಿ ನಿವೇಶನ ಪಡೆದಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರಕಾರ ದಲಿತರ ಸಂಹಾರ, ದಲಿತರಿಗೆ ಮೋಸ, ದಲಿತರ ಸಮಾಧಿ ಕಟ್ಟುತ್ತಿದೆ. ಮಠಾಧೀಶರು ಈ ಬಗ್ಗೆ ಪ್ರಶ್ನೆ ಮಾಡಬೇಕಿತ್ತು. ಸ್ವಾಮೀಜಿಗಳು ದಲಿತ ವರ್ಗದ ಪರವಾಗಿ ನಿಲ್ಲಿ, ಅನ್ಯಾಯ ಮಾಡಿದವರ ಪರ ನಿಲ್ಲಬೇಡಿ. ದಲಿತ ಸಂಘಟನೆಗಳು ಒಡೆದು ಹೋಗಿವೆ. ಮೋಸ ಮಾಡಿದವರ ಪರವಾಗಿ ಕೆಲವು ದಲಿತ ಸಂಘಟನೆಗಳು ನಿಂತಿವೆ ಎಂದು ಹೇಳಿದರು.

ಸಿಎ ನಿವೇಶನಕ್ಕೆ ಅನೇಕ ಅರ್ಜಿ ಸಹಜ: 'ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರನಿಗೆ ಕೆಐಎಡಿಬಿ ಜಮೀನು ಮಂಜೂರಾತಿ ಬಗ್ಗೆ ಕೇಳಿದಾಗ, ಸರಕಾರದಲ್ಲಿ ನಾವು ಏನೇ ತೀರ್ಮಾನ ಮಾಡಿದರೂ ಸಾರ್ವಜನಿಕವಾಗಿ ಅವು ವಿಮರ್ಶೆಗೆ ಒಳಗಾಗಬೇಕು. ಅದು ಸಂತೋಷ. ಈ ವಿಚಾರವಾಗಿ ಮುಂದೆ ನಾವು ಉತ್ತರ ನೀಡುತ್ತೇವೆ. ಯಡಿಯೂರಪ್ಪ ಹಾಗೂ ಬೊಮ್ಮಾಯಿ ಅವರ ಕಾಲದಲ್ಲಿ ಎಷ್ಟು ಜಮೀನನ್ನು ಯಾವ ರೀತಿ ಎಷ್ಟು ಸಂಸ್ಥೆಗಳಿಗೆ ನೀಡಿದ್ದಾರೆ ಎಂದರು. ಮಾಧ್ಯಮದವರು ಕೂಡ ಸಿಎ ನಿವೇಶನ ಬೇಕು, ಮಾಧ್ಯಮ ಸಂಸ್ಥೆಗಳಿಗೆ ಕಟ್ಟಡ ಬೇಕು ಎಂದು ಅನೇಕ ಅರ್ಜಿಗಳು ಬಂದಿವೆ. ಟ್ರಸ್ಟ್ ಎಂದರೆ ಸ್ವಂತಕ್ಕಾಗಿ ಅಲ್ಲ. ಅದು ಸಾರ್ವಜನಿಕ ಉದ್ದೇಶಕ್ಕಾಗಿ. ಈ ವಿಚಾರವಾಗಿ ನಮ್ಮ ಬೃಹತ್ ಕೈಗಾರಿಕಾ ಸಚಿವರು ಸ್ಪಷ್ಟ ಉತ್ತರ ನೀಡಿದ್ದಾರೆ. ನಿಮಗೆ ಅವರ ಉತ್ತರ ಸಾಲದು ಎಂದರೆ ಆ ಬಗ್ಗೆ ಅಧ್ಯಯನ ಮಾಡಿ ನಂತರ ನಾನು ಉತ್ತರ ನೀಡುತ್ತೇನೆ. ನಾನು ಬಿಡಿಎ ಸಚಿವನಾಗಿದ್ದು, ನನಗೂ ಅನೇಕ ಅರ್ಜಿಗಳು ಬಂದಿವೆ. ಈ ಸಂಬಂಧ ಸಮಿತಿ ರಚಿಸಿ ಯಾರಿಗೆ ನೀಡಬೇಕು ಎಂದು ತೀರ್ಮಾನಿಸಲಾಗುವುದು ಎಂದು ತಿಳಿಸಿದರು.

ಕಾನೂನು ಉಲ್ಲಂಘನೆಯಾಗಿಲ್ಲ: ಪ್ರಿಯಾಂಕ್ ಖರ್ಗೆ

ಛಲವಾದಿ ನಾರಾಯಣಸ್ವಾಮಿ ಹಾಗೂ ಬಿಜೆಪಿಗರ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಚಿವ ಪ್ರಿಯಾಂಕ್ ಖರ್ಗೆ, ಸಿ.ಎ ನಿವೇಶನ ಮಂಜೂರು ಮಾಡಿರುವುದರಲ್ಲಿ ಕಾನೂನು ಉಲ್ಲಂಘನೆ ಎಲ್ಲಿ ಆಗಿದೆ. ಬಿಜೆಪಿ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿದರು. ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕೆ ಪಡೆದಿಲ್ಲ. ಇದು ಸಿ.ಎ ಜಮೀನು. ಸಚಿವ ಎಂ.ಬಿ. ಪಾಟೀಲ್ ಅವರು ಇದರ ಬಗ್ಗೆ ಸ್ಪಷ್ಟ ಉತ್ತರ ಕೊಟ್ಟಿದ್ದಾರೆ. ಒಟ್ಟು 193 ಸಂಸ್ಥೆಗಳು ಅರ್ಜಿ ಹಾಕಿದ್ದು, 43 ಸಂಸ್ಥೆಗಳು ಮಾತ್ರ ಆಯ್ಕೆ ಆಗಿವೆ. ಇದರಲ್ಲಿ ಯಾವುದೇ ಪ್ರಭಾವ ಬೀರಿಲ್ಲ. ಬಿಜೆಪಿಯವರಿಗೆ ಕನಿಷ್ಠ ಜ್ಞಾನ ಇಲ್ಲ. ಸಿ.ಎ ನಿವೇಶನ ಹರಾಜು ಹಾಕಲಾಗಲ್ಲ. ಅದನ್ನು ಖರೀದಿಯೇ ಮಾಡಬೇಕು. ಬಿಜೆಪಿಯವರು ಎಷ್ಟು ಜನ ಸಿ.ಎ ನಿವೇಶನ ಪಡೆದಿಲ್ಲ ಕೇಳಿ. ಈ ಟ್ರಸ್ಟ್ ಮೂರು ದಶಕದಿಂದ ಚಾಲ್ತಿಯಲ್ಲಿದೆ ಎಂದರು. ಯುವಸಮೂಹಕ್ಕೆ ಕೌಶಲ್ಯಾಭಿವೃದ್ಧಿ ಕೇಂದ್ರ ತೆರೆಯೋದು ತಪ್ಪಾ?. ಇದಕ್ಕೆ ಜಮೀನು ಖಾಸಗಿಯವರು ಕೊಡಬೇಕು ಅಥವಾ ಸರಕಾರದಿಂದ ಖರೀದಿ ಮಾಡಬೇಕು. ನಾವು ಸರಕಾರದಿಂದ ಖರೀದಿ ಮಾಡಿದ್ದೇವೆ.

ಬಿಜೆಪಿಯವರು ಪ್ರೇರಣಾ ಟ್ರಸ್ಟ್ ಅಕ್ರಮದ ಬಗ್ಗೆ ಮಾತಾಡಲಿ, ರಾಷ್ಟ್ರೋತ್ಥಾನ ಸಂಸ್ಥೆಗೆ ಭೂಮಿ ಕೊಟ್ಟಿದ್ದಾರಲ್ಲ, ಅದನ್ನು ಮಾತಾಡಲಿ. ಈ ವಿಚಾರದಲ್ಲಿ ಕಾನೂನು ಉಲ್ಲಂಘನೆ ಆಗಿಲ್ಲ. ಬಿಜೆಪಿಯವರು ರಾಜ್ಯಪಾಲರಿಗೆ ದೂರು ಕೊಟ್ಟು ರಾಜಕೀಯ ಮಾಡ್ತಿದ್ದಾರೆ. ನಮ್ಮಣ್ಣ ರಾಹುಲ್ ಖರ್ಗೆಯವರ ಬಗ್ಗೆ ಛಲವಾದಿಯವರಿಗೆ ಏನು ಗೊತ್ತಿದೆ? ಎಂದು ಪ್ರಶ್ನಿಸಿದರು.

> ಬಿಜೆಪಿಯವರ ಸಮಸ್ಯೆ ಪ್ರಿಯಾಂಕ್ ಖರ್ಗೆ ಅಷ್ಟೇ. ಆಯಕಟ್ಟಿನ ಜಾಗದಲ್ಲಿ ನಾನಿದ್ದೇನೆ. ಅದಕ್ಕೆ ತಗೊಂಡಿದ್ದಾರೆ ಅಂತ ಆರೋಪಿಸಿದ್ದಾರೆ. ನಾವು ಕಾನೂನು ಪ್ರಕಾರ ಜಮೀನು ತಗೋಬಾರದಾ?. ನಮಗೆ ಅರ್ಹತೆ ಇಲ್ಲ, ರಿಯಾಯತಿ ಕೇಳಿದ್ದೇವೆ, ಕುರ್ಚಿ ದುರ್ಬಳಕೆ ಮಾಡಿದ್ದರೆ ಹೇಳಲಿ. ಛಲವಾದಿಗೆ ಇಂಗ್ಲಿಷೂ ಬರಲ್ಲ, ಕಾನೂನು ಗೊತ್ತಿಲ್ಲ, ಸಿ.ಎ ನಿವೇಶನಗಳ ಬಗ್ಗೆ ತಿಳಿದುಕೊಳ್ಳಲಿ.
>
> –ಪ್ರಿಯಾಂಕ್ ಖರ್ಗೆ ಸಚಿವ

ಹಳೆಯ ಬಸ್‌ಗಳ ಪರಿವರ್ತನೆ: ಸಿಬ್ಬಂದಿ ಕಾರ್ಯಕ್ಷಮತೆಗೆ ಸಾಕ್ಷಿ

ಬಿಎಂಟಿಸಿಯ ಸ್ಕ್ರ್ಯಾಪ್ ಬಸ್ ಇನ್ನು ಭೋಜನಬಂಡಿ

ಬೆಂಗಳೂರು: ಬಿಎಂಟಿಸಿಯ 10.64 ಲಕ್ಷ ಕಿ.ಮೀ ಕ್ರಮಿಸಿದ ಉತ್ತರ ವಿಭಾಗಕ್ಕೆ ಸೇರಿದ ಸ್ಟೋರ್ ಬಸ್‌ನ್ನು ಕೆಲ ತಾಂತ್ರಿಕ ಸಿಬ್ಬಂದಿ ಮೊಬೈಲ್ ಕ್ಯಾಂಟೀನ್ ಆಗಿ ಪರಿವರ್ತಿಸಿದ್ದಾರೆ.

ಬಿಎಂಟಿಸಿ ಡಿಪೋಗಳಲ್ಲಿ ಕ್ಯಾಂಟೀನ್‌ಗಳಿಲ್ಲದ ಹಿನ್ನೆಲೆ ಈ ಮೊಬೈಲ್ ಕ್ಯಾಂಟೀನ್ ಸಿದ್ಧಪಡಿಸಲಾಗಿದ್ದು, ದಾಸನಪುರದ ಸೆಂಟ್ರಲ್ ವರ್ಕ್ ಶಾಪ್–4ರ ತಾಂತ್ರಿಕ ಮತ್ತು ಇತರೆ ಸಿಬ್ಬಂದಿ ಭೋಜನ ಬಂಡಿ ಯನ್ನು ನಿರ್ಮಾಣ ಮಾಡಿದ್ದು, ಸಿಬ್ಬಂದಿ ಶ್ರಮಕ್ಕೆ ಸಚಿವ ರಾಮಲಿಂಗಾರೆಡ್ಡಿಯವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಳೆಯ ಬಸ್‌ಗಳನ್ನೇ ಕ್ಯಾಂಟೀನ್‌ಗಳನ್ನಾಗಿ ಪರಿವರ್ತಿಸಲಾಗಿದ್ದು, ಈ ಮೊಬೈಲ್ ಕ್ಯಾಂಟೀನ್‌ನಲ್ಲಿ ಆಸನ, ಟೇಬಲ್, ಫ್ಯಾನ್ ಮತ್ತು ವಾಷ್ ಬೇಸಿನ್ ಕೂಡಾ ಅಳವಡಿಸಲಾಗಿದೆ. ಜತೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಹೊಂದಿದ್ದು, ಕ್ಯಾಂಟೀನ್‌ನ ಮೇಲ್ಭಾಗದಲ್ಲಿ ಗಾಜಿನ ಕಿಟಕಿಯು ಗಾಳಿ ಮತ್ತು ಬೆಳಕಿ ಗೋಸ್ಕರ ವಿನ್ಯಾಸ ಮಾಡಲಾಗಿದೆ. ಸಿಬ್ಬಂದಿ ಯ ಕಾರ್ಯಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದ್ದು, ಮೊಬೈಲ್ ಕ್ಯಾಂಟೀನ್‌ಗೆ ಬನ್ನಿ, ಕುಳಿತು ಕೊಳ್ಳಿ, ಒಟ್ಟಿಗೆ ಆಹಾರ ಸೇವಿಸೋಣ... ಇದು ತಾಂತ್ರಿಕ ಸಿಬ್ಬಂದಿಯ ಸೃಜನಶೀಲತೆ ಮತ್ತು ಶ್ರಮಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದೆ.

ರೌಡಿಶೀಟರ್ಸ್ ನಿವಾಸಗಳ ಮೇಲೆ ಪೊಲೀಸರ ದಾಳಿ, ಪರಿಶೀಲನೆ

ಬೆಂಗಳೂರು: ಈಶಾನ್ಯ ವಿಭಾಗದ ರೌಡಿಶೀಟರ್‌ಗಳ ಮನೆಗಳ ಮೇಲೆ ಪೊಲೀಸರು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಸೋಮವಾರ ಬೆಳಗ್ಗೆ 5ರ ಸುಮಾರಿಗೆ ಏಕಕಾಲಕ್ಕೆ ಯಲಹಂಕ, ಕೊಡಿಗೇಹಳ್ಳಿ, ಅಮೃತಹಳ್ಳಿ, ವಿದ್ಯಾರಣ್ಯಪುರ ಸೇರಿದಂತೆ ಹಲವು ಠಾಣಾ ವ್ಯಾಪ್ತಿಯಲ್ಲಿ ದಾಳಿ ನಡೆಸಿರುವ ಪೊಲೀಸರು ತಪಾಸಣೆ ನಡೆಸುತ್ತಿದ್ದಾರೆ. ಅಪರಾಧ ಹಿನ್ನೆಲೆ ಹೊಂದಿರುವವರ ಪ್ರಸ್ತುತ ವಾಸಸ್ಥಳ, ವಿಳಾಸ, ಆದಾಯದ ಮೂಲ ಮತ್ತಿತರ ಮಾಹಿತಿಗಳನ್ನ ಕಲೆ ಹಾಕಲಾಗಿದೆ. ಇದೇ ವೇಳೆ, ಸಕ್ರಿಯರಾಗಿರುವ ಕೆಲ ರೌಡಿಶೀಟರ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ದಾಳಿ ವೇಳೆ, ಕೆಲವು ರೌಡಿಶೀಟರ್‌ಗಳ ಮನೆಯಲ್ಲಿ ಮಾರಕಾಸ್ತ್ರಗಳು ಸಹ ಪತ್ತೆಯಾಗಿವೆ. ಸದ್ಯ ತಪಾಸಣೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಣಮರ ತೆರವಿಗೆ ಮುಂದಾಗದ ಪಾಲಿಕೆ

ಬೆಂಗಳೂರು: ನಗರದಲ್ಲಿ ಗಾಳಿ ಮಳೆಯಿಲ್ಲದಿದ್ದರೂ ಒಣ ಮರಗಳು ಧರೆಗುರುಳುತ್ತಿದ್ದು, ಒಣ ಮರಗಳ ತೆರವಿಗೆ ಮುಂದಾಗದ ಪಾಲಿಕೆಯ ನಿರ್ಲಕ್ಷ್ಯಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಧರೆಗುರುಳುತ್ತಿರುವ ಮರಗಳ ಸಮಸ್ಯೆ ಹೆಚ್ಚಾಗುತ್ತಿದ್ದು, ಗಾಳಿ ಮಳೆ ಇರದಿದ್ದರೂ ಕೊಂಬೆ ಅಥವಾ ಮರ ಉರುಳಿ ಬೀಳುತ್ತಿವೆ. ಜಯನಗರದ ಮಹಾಕವಿ ಕುವೆಂಪು ಪಾರ್ಕ್ ಸೇರಿದಂತೆ ಪ್ರಮುಖ ರಸ್ತೆ ಹಾಗೂ ಉದ್ಯಾನವನದಲ್ಲಿಯೂ ಒಣ ಮರಗಳ ಸಂಖ್ಯೆ ಹೆಚ್ಚಿದ್ದು, ಯಾವಾಗ ಬೀಳುವುದೋ ಎನ್ನುವ ಭಯ ಸಾರ್ವಜನಿಕರದ್ದಾಗಿದೆ.

ಶ್ರೀ ಅಕ್ಷಯ ಲಕ್ಷ್ಮಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನಂ. 2091/ಸಿ ನೆಲಮಹಡಿ 1ನೇ ಮುಖ್ಯರಸ್ತೆ, ಬೆಳಕು ಕಣ್ಣು ಆಸ್ಪತ್ರೆ ಎದುರು ಔಟರ್ ರಿಂಗ್ ರಸ್ತೆ, (ಹೊರವರ್ತುಲ ರಸ್ತೆ), ಕೆಂಗೇರಿ ಉಪನಗರ, ಬೆಂಗಳೂರು –560060
8ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ
ಮಾನ್ಯ ಸದಸ್ಯರೇ,
ನಮ್ಮ ಸಹಕಾರಿ 2023–2024 ನೇ ಸಾಲಿನ 8ನೇ ವಾರ್ಷಿಕ ಸದಸ್ಯರ ಸಭೆಯು ನಮ್ಮ ಸಹಕಾರಿ ಕಛೇರಿಯ ಆವರಣದಲ್ಲಿ ದಿನಾಂಕ **08–09–2024**ನೇ ಭಾನುವಾರ ಬೆಳಿಗ್ಗೆ 10:00 ಘಂಟೆಗೆ ನಮ್ಮ ಸಹಕಾರಿಯ ಅಧ್ಯಕ್ಷರಾದ **ಶ್ರೀ ಕೆ.ಜಿ. ಶಾಂತಯ್ಯ** ಇವರ ಅಧ್ಯಕ್ಷತೆಯಲ್ಲಿ ನೆಡೆಯಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.
ದಿನಾಂಕ : 17.08.2024 ಸಹಿ/–
ಸ್ಥಳ: ಬೆಂಗಳೂರು ಕಾರ್ಯದರ್ಶಿ

ಶ್ರೀ ಅಕ್ಷಯ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನಂ. 2091/ಬಿ ನೆಲಮಹಡಿ 1ನೇ ಮುಖ್ಯರಸ್ತೆ, ಬೆಳಕು ಕಣ್ಣು ಆಸ್ಪತ್ರೆ ಎದುರು, ಔಟರ್ ರಿಂಗ್ ರಸ್ತೆ, (ಹೊರವರ್ತುಲ ರಸ್ತೆ), ಕೆಂಗೇರಿ ಉಪನಗರ, ಬೆಂಗಳೂರು –560060
9ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ
ಮಾನ್ಯ ಸದಸ್ಯರೇ,
ನಮ್ಮ ಸಹಕಾರಿ 2023–2024 ನೇ ಸಾಲಿನ 9ನೇ ವಾರ್ಷಿಕ ಸದಸ್ಯರ ಸಭೆಯು ನಮ್ಮ ಸಹಕಾರಿ ಕಛೇರಿಯ ಆವರಣದಲ್ಲಿ ದಿನಾಂಕ **08–09–2024**ನೇ ಭಾನುವಾರ ಮಧ್ಯಾಹ್ನ 1:00 ಘಂಟೆಗೆ ನಮ್ಮ ಸಹಕಾರಿಯ ಅಧ್ಯಕ್ಷರಾದ **ಶ್ರೀ ಕೆ.ಜಿ. ಶಾಂತಯ್ಯ** ಇವರ ಅಧ್ಯಕ್ಷತೆಯಲ್ಲಿ ನೆಡೆಯಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.
ದಿನಾಂಕ : 17.08.2024 ಸಹಿ/–
ಸ್ಥಳ: ಬೆಂಗಳೂರು ಕಾರ್ಯದರ್ಶಿ

ದಿ ಸೌತ್ ಇಂಡಿಯಾ ಪೇಪರ್ ಮಿಲ್ಸ್ ಲಿಮಿಟೆಡ್
CIN(Corporate Identity No): L85110KA1959PLC001352
ನೋಂದಾಯಿತ ಕಛೇರಿ : ಚಿಕ್ಕಯ್ಯನ ಛತ್ರ , ನಂಜನಗೂಡು – 571302
ಕರ್ನಾಟಕ ರಾಜ್ಯ
ಸೂಚನೆ
ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪೆನಿಯು ಎಲ್ಲಾ ಸದಸ್ಯರಿಗೆ 65ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ ಹಾಗೂ ವಾರ್ಷಿಕ ವರದಿಗಳನ್ನು ಇ–ಮೇಲ್ ಮೂಲಕ 24–08–2024 ರಂದು ಕಳುಹಿಸಿದೆ.
ಕಂಪೆನಿಗಳ ಕಾಯಿದೆ 2013ರ ಕಲಮು 108 ಹಾಗೂ SEBI (Listing Obligations and Disclosure Requirements) 2015ರ ರೆಗ್ಯುಲೇಷನ್ 44ರ ಅನ್ವಯ ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ತಿಳಿಸಿರುವ ಎಲ್ಲಾ ವಿಷಯಗಳಿಗೆ ಕಂಪೆನಿಯು, ಎಲ್ಲಾ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ (ರಿಮೋಟ್ ಇಲೆಕ್ಟ್ರಾನಿಕ್ ವೋಟಿಂಗ್) ಮೂಲಕ ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸುತ್ತಿದೆ. ಈ ವಿಷಯಗಳ ಬಗ್ಗೆ ಮಾಹಿತಿ ಈ ಕೆಳಕಂಡಂತಿವೆ : (a) ರಿಮೋಟ್ ಇ–ವೋಟಿಂಗ್ (ರಿಮೋಟ್ ಇಲೆಕ್ಟ್ರಾನಿಕ್ ವೋಟಿಂಗ್) ಪ್ರಕ್ರಿಯೆ ದಿನಾಂಕ 16 ಸೆಪ್ಟೆಂಬರ್ 2024 ರಂದು ಬೆಳಿಗ್ಗೆ 9.00 ಘಂಟೆಗೆ ಪ್ರಾರಂಭವಾಗಿ ದಿನಾಂಕ 18 ಸೆಪ್ಟೆಂಬರ್ 2024 ರಂದು ಸಾಯಂಕಾಲ 5.00 ಘಂಟೆಗೆ ಮುಕ್ತಾಯವಾಗುತ್ತದೆ. ರಿಮೋಟ್ ಇ–ವೋಟಿಂಗ್‌ನಲ್ಲಿ ದಿನಾಂಕ 18 ಸೆಪ್ಟೆಂಬರ್ 2024 ರಂದು 5.00 ಘಂಟೆಯ ನಂತರ ಮತದಾನಕ್ಕೆ ಅವಕಾಶವಿರುವುದಿಲ್ಲ. ರಿಮೋಟ್ ಇ–ವೋಟಿಂಗ್‌ನ (Remote e-voting) ಘಟಕವನ್ನು 18 ಸೆಪ್ಟೆಂಬರ್ 2024 ರಂದು 5.00 ಘಂಟೆಯ ನಂತರ ನಿಷ್ಕ್ರಿಯಗೊಳಿಸಲಾಗುವುದು. (b) ರಿಮೋಟ್ ಇ–ವೋಟಿಂಗ್‌ಗಾಗಿ (Remote e-voting) ನಿರ್ಧರಣಾ ದಿನಾಂಕ (Cut off date) 12 ಸೆಪ್ಟೆಂಬರ್ 2024. (c) ಯಾವುದೇ ವ್ಯಕ್ತಿಯು ಕಂಪೆನಿಯ ಸಾಮಾನ್ಯ ವಾರ್ಷಿಕ ಸಭೆಯ ಸೂಚನೆಯನ್ನು ಕಳುಹಿಸಿದ ನಂತರ, ಕಂಪೆನಿಯ ಷೇರುಗಳನ್ನು ಖರೀದಿಸಿ ಕಂಪೆನಿಯ ಸದಸ್ಯಗಾಗಿ, ನಿರ್ಧರಣಾ ದಿನಾಂಕ (Cut off date) ಅಂದರೆ 12ನೇ ಸೆಪ್ಟೆಂಬರ್ 2024 ರಂದು ಕಂಪೆನಿಯ ಷೇರುಗಳನ್ನು ಹೊಂದಿದ್ದರೆ, ಅಂತಹ ಸದಸ್ಯರು ಕೆಫಿನ್ ಟೆಕ್ನಾಲಜೀಸ್ ಪ್ರೈ.ಲಿ.ನ ಶ್ರೀಮತಿ ಶೋಭಾ ಆನಂದ್‌ರವರನ್ನು ಸಂಪರ್ಕಿಸಿ ಲಾಗಿನ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಇವರ ದೂರವಾಣಿ ಸಂಖ್ಯೆ 18003454001. ಹಾಗೂ ಇಮೇಲ್ (Email ID) evoting@kfintech.com. ಸದಸ್ಯರು ಈಗಾಗಲೇ ಕೆಫಿನ್‌ಟೆಕ್‌ನ ಇ–ವೋಟಿಂಗ್ (e-voting) ವೇದಿಕೆಯಲ್ಲಿ ನೋಂದಾಯಿತರಾಗಿದ್ದಲ್ಲಿ ಅವರ ಹಾಲಿ User ID ಹಾಗೂ Password ಅನ್ನು ಇ–ವೋಟಿಂಗ್ (e-voting) ಮೂಲಕ ಮತ ಹಾಕಲು ಉಪಯೋಗಿಸಬಹುದು. (d) ಕಂಪೆನಿಯು ಸಾಮಾನ್ಯ ವಾರ್ಷಿಕ ಸಭೆಯ ದಿನದಂದು ಸದಸ್ಯರಿಗೆ e-voting ನ ಮೂಲಕ ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸುತ್ತಿದೆ. ರಿಮೋಟ್ ಇ–ವೋಟಿಂಗ್‌ನ ಮೂಲಕ ಮತ ಹಾಕದ ಸದಸ್ಯರು ಕಂಪೆನಿಯ ಸಾಮಾನ್ಯ ವಾರ್ಷಿಕ ಸಭೆಯ ದಿನ 19 ಸೆಪ್ಟೆಂಬರ್ 2024 ರಂದು e-voting ಮೂಲಕ ಮತ ಹಾಕಬಹುದು. (e) ರಿಮೋಟ್ ಇ–ವೋಟಿಂಗ್ (Remote e-voting) ಮಾಡಿದ ಸದಸ್ಯರು ಸಭೆಗೆ ಹಾಜರಾಗಬಹುದು ಆದರೆ ಅವರು ಮತ್ತೊಮ್ಮೆ ಮತದಾನ ಮಾಡುವಂತಿಲ್ಲ. (f) ಯಾವ ವ್ಯಕ್ತಿಯ ಹೆಸರು ಕಂಪೆನಿಯ ಸದಸ್ಯರುಗಳ ರಿಜಿಸ್ಟರ್ ಅಥವಾ ಡಿಪಾಜಿಟರೀಸ್‌ರವರು ನಿರ್ವಹಿಸುತ್ತಿರುವ ಫಲಾನುಭವಿ ಮಾಲೀಕರ (Beneficial Owners) ರಿಜಿಸ್ಟರ್‌ನಲ್ಲಿ ನಿರ್ಧರಣಾ ದಿನಾಂಕ (Cut off date) 12 ಸೆಪ್ಟೆಂಬರ್ 2024 ರಂದು ದಾಖಲಾತಿಯಲ್ಲಿದೆಯೋ ಅಂತಹ ಸದಸ್ಯರು ಮಾತ್ರ ಇ–ವೊಟಿಂಗ್ ಮಾಡಬಹುದು ಅಥವಾ ವಾರ್ಷಿಕ ಮಹಾಸಭೆಯಲ್ಲಿ ಮತದಾನ ಮಾಡಬಹುದು. (g) 65ನೇ ವಾರ್ಷಿಕ ಮಹಾಸಭೆಯ ಸೂಚನೆ ಹಾಗೂ ವಾರ್ಷಿಕ ವರದಿ (Annual Report) ಕಂಪೆನಿಯ ವೆಬ್‌ಸೈಟ್ www.sipaper.com ಹಾಗೂ ಕೆಫಿನ್ ಟೆಕ್ನಾಲಜೀಸ್ ಪ್ರೈ.ಲಿ. ನ ವೆಬ್‌ಸೈಟ್ https://evoting.kfintech.com ನಲ್ಲಿ ಲಭ್ಯವಿದೆ. (h) ಇ–ವೋಟಿಂಗ್ (e-voting) ಬಗ್ಗೆ ಏನಾದರೂ ದೂರುಗಳಿದ್ದರೆ, ಸದಸ್ಯರು ಶ್ರೀಮತಿ ಶೋಭಾ ಆನಂದ್ ಇವರನ್ನು ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು. ಕೆಫಿನ್ ಟೆಕ್ನಾಲಜೀಸ್ ಪ್ರೈ.ಲಿ. ಸೆಲೆನಿಯಮ್ ಟವರ್–ಬಿ, ಪ್ಲಾಟ್ ನಂ.31 – 32, ಗಾಚಿಬವ್ಲಿ ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ಹೈದರಾಬಾದ್ – 500032. ಇವರ ದೂರವಾಣಿ ಸಂಖ್ಯೆ : 18003454001 ಹಾಗೂ ಇಮೇಲ್ ಐಡಿ (email ID): **evoting@kfintech.com**
ಮಂಡಳಿಯ ಆದೇಶದ ಮೇರೆಗೆ
ಸಹಿ / –
ಮನೀಷ್ ಎಂ.ಪಟೇಲ್
ಸ್ಥಳ : ನಂಜನಗೂಡು ಛೇರ್‌ಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕರು
ದಿನಾಂಕ : 27 ಆಗಸ್ಟ್, 2024 DIN: 00128179

ಎಸಿಪಿ ಮಂಜುನಾಥ್, ಇನ್‌ಸ್ಪೆಕ್ಟರ್‌ಗಳಾದ ಕೃಷ್ಣಕುಮಾರ್, ಕುಮಾರಸ್ವಾಮಿ ತನಿಖೆ

ದರ್ಶನ್‌ಗೆ ರಾಜಾತಿಥ್ಯ ಪ್ರಕರಣ: ಮೂರು ಪ್ರತ್ಯೇಕ ತನಿಖಾ ತಂಡ ರಚನೆ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ ದರ್ಶನ್‌ಗೆ ಜೈಲಿನಲ್ಲಿ ವಿಶೇಷ ಆತಿಥ್ಯ ನೀಡಿದ ಪ್ರಕರಣದ ತನಿಖೆಗೆ 3 ವಿಶೇಷ ತಂಡಗಳನ್ನು ರಚಿಸಲಾಗಿದೆ.

ಕಾರಾಗೃಹದ ನಿಯಮಗಳನ್ನು ಉಲ್ಲಂಘಿಸಿರುವ ಆರೋಪದಡಿ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ 3 ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಆ ಪೈಕಿ 2 ಪ್ರಕರಣಗಳಲ್ಲಿ ದರ್ಶನ್ ಅವರೇ ಪ್ರಮುಖ ಆರೋಪಿಯಾಗಿದ್ದಾರೆ. ಮೂರೂ ಪ್ರಕರಣಗಳ ತನಿಖೆಗಾಗಿ ಪ್ರತ್ಯೇಕ ತಂಡಗಳನ್ನು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ರಚಿಸಿದ್ದಾರೆ.

ಮೊದಲನೇ ಪ್ರಕರಣದ ತನಿಖೆಯನ್ನು ಬೇಗೂರು ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಕೃಷ್ಣಕುಮಾರ್ ನಡೆಸಲಿದ್ದಾರೆ. ದರ್ಶನ್ ಅವರು ಜೈಲಿನ ಲಾನ್‌ನಲ್ಲಿ ರೌಡಿಶೀಟರ್ಸ್ ಜತೆ ಕುಳಿತು ಕಾಫಿ ಕುಡಿಯುತ್ತ ಸಿಗರೇಟ್ ಸೇದುತ್ತಿರುವುದರ ಕುರಿತು ತನಿಖೆ ನಡೆಯಲಿದೆ. ಎಲ್ಲರೂ ಒಟ್ಟಿಗೆ ಕೂರಲು ಕುರ್ಚಿಗಳ ವ್ಯವಸ್ಥೆ ಮಾಡಿದವರು ಯಾರು? ಕಾಫಿ ಮಗ್ ಕೊಟ್ಟವರು ಯಾರು? ಸಿಗರೇಟ್, ಮದ್ಯ, ಮಾದಕವಸ್ತುಗಳು ಜೈಲಿನಲ್ಲಿ ನಿಷೇಧವಿದ್ದರೂ ಸಿಕ್ಕಿದ್ದು ಹೇಗೆ ಎಂದು ತನಿಖೆ ನಡೆಯಲಿದೆ.

ಎರಡನೇ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ಹುಳಿಮಾವು ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಕುಮಾರಸ್ವಾಮಿ ಅವರಿಗೆ ವಹಿಸಲಾಗಿದೆ. ಮೊಬೈಲ್ ಫೋನ್‌ನಲ್ಲಿ ಫೋಟೊ ಹಾಗೂ ವಿಡಿಯೊ ಚಿತ್ರೀಕರಣದ ಬಗ್ಗೆ ತನಿಖೆ ನಡೆಯಲಿದ್ದು, ಫೋಟೊ ತೆಗೆದಿದ್ದು ಯಾರು? ಆರೋಪಿಗಳು ವಿಡಿಯೊ ಕರೆ ಮಾಡಿದ್ದು ಯಾರಿಗೆ? ಜೈಲಿನಲ್ಲಿ ಮೊಬೈಲ್ ಬಳಕೆ ನಿಷೇಧವಿದ್ದರೂ ಸಹ ಮೊಬೈಲ್ ಸಿಕ್ಕಿದ್ದು ಹೇಗೆ.? ಒದಗಿಸಿದವರು ಯಾರು? ಜಾಮರ್ ವ್ಯವಸ್ಥೆ ಇದ್ದರೂ ಸಹ ಸಂಪರ್ಕ ಸಾಧ್ಯವಾಗಿದ್ದು ಹೇಗೆ ಎಂಬುದರ ಕುರಿತು ತನಿಖೆ ನಡೆಯಲಿದೆ.

ಮೂರನೇ ಪ್ರಕರಣದ ತನಿಖೆ ಯನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯ ಎಸಿಪಿ ಮಂಜುನಾಥ್ ನೇತೃತ್ವದ ತಂಡ ನಡೆಸಲಿದೆ. ಜೈಲು ಅಧಿಕಾರಿಗಳ ಕರ್ತವ್ಯ ಲೋಪದ ವಿರುದ್ಧ ದಾಖಲಾಗಿರುವ ಪ್ರಕರಣದ ಕುರಿತು ತನಿಖೆ ನಡೆಯಲಿದೆ. ಆರೋಪಿಗಳಿಗೆ ಅನುಕೂಲಕರ ವಾತಾವರಣ ಕಲ್ಪಿಸಿದರು ಯಾರು? ಜೈಲಧಿಕಾರಿಗಳ ಗಮನಕ್ಕೆ ಬಾರದೆ ಇಷ್ಟೆಲ್ಲವೂ ಸಾಧ್ಯವಾಯಿತಾ ಎಂಬುದರ ಕುರಿತು ಸಮಗ್ರ ತನಿಖೆ ನಡೆಯಲಿದೆ.

> ಆರೋಪಿಗಳಿಗೆ ಜೈಲಿನಲ್ಲಿ ವಿಶೇಷ ಆತಿಥ್ಯ ನೀಡಿರುವುದರ ಕುರಿತು ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಓರ್ವ ಎಸಿಪಿ ಹಾಗೂ ಇಬ್ಬರು ಇನ್‌ಸ್ಪೆಕ್ಟರ್ಸ್ ನೇತೃತ್ವದಲ್ಲಿ ತನಿಖೆ ಆರಂಭವಾಗಲಿದೆ. ಕಾರಾಗೃಹದ ವಿಷಯಗಳ ಕುರಿತು ತನಿಖೆಗೆ ನ್ಯಾಯಾಲಯದ ಅನುಮತಿ ಅಗತ್ಯವಿರುವುದರಿಂದ, ಅನುಮತಿ ಪಡೆದುಕೊಂಡು ತನಿಖೆ ಆರಂಭಿಸಲಾಗುತ್ತದೆ. ನಂತರದಲ್ಲಿ ತನಿಖೆಯ ಭಾಗವಾಗಿ ಆರೋಪಿಗಳನ್ನ ಕಸ್ಟಡಿಗೆ ಪಡೆಯುವುದು ಅಗತ್ಯವಿದ್ದರೆ ಪಡೆದುಕೊಳ್ಳಲಾಗುವುದು.
>
> –ಬಿ.ದಯಾನಂದ್ ಬೆಂಗಳೂರು ನಗರ ಪೊಲೀಸ್ ಆಯುಕ್ತ

ಅಪರಾಧ ಸುದ್ದಿಗಳು

ಸಿಸಿಬಿ ಅಧಿಕಾರಿಗಳ ದಾಳಿಯ ಮಾಹಿತಿ ಸೋರಿಕೆ: ತನಿಖೆ ನಡೆಸಿ ವರದಿ ನೀಡಲು ಸೂಚನೆ: ಪರಪ್ಪನ ಅಗ್ರಹಾರ ಜೈಲಿನ ಮೇಲೆ ಸಿಸಿಬಿ ಅಧಿಕಾರಿಗಳ ದಾಳಿಯ ಮಾಹಿತಿ ಸೋರಿಕೆಯಾಗಿದೆ ಎಂಬ ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಆಂತರಿಕ ತನಿಖೆ ನಡೆಸುವಂತೆ ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್ ಅವರು ಸೂಚನೆ ನೀಡಿದ್ದಾರೆ. ತನಿಖೆ ನಡೆಸಿ ವರದಿ ನೀಡಲು ಸಿಸಿಬಿ ಹೆಚ್ಚುವರಿ ಆಯುಕ್ತ ಡಾ.ಚಂದ್ರಗುಪ್ತಗೆ ಸೂಚಿಸಿದ್ದಾರೆ. ದಾಳಿ ವೇಳೆ ಏನು ಸಿಗದೆ ಖಾಲಿ ಕೈಯಲ್ಲಿ ಅಧಿಕಾರಿಗಳು ಬರಿಗೈಯಲ್ಲಿ ಮರಳಿದ್ದರು. ದಾಳಿ ಮಾಡಿದ ಮರು ದಿನವೇ (ಆ.25) ರಂದು ಕೊಲೆ ಆರೋಪಿ ದರ್ಶನ್ ಜೈಲಿನಲ್ಲಿ ಬಲಗೈಯಲ್ಲಿ ಚಹಾ ಮಗ್ ಮತ್ತು ಎಡಗೈನಲ್ಲಿ ಸಿಗರೇಟ್ ಹಿಡಿದಿರುವ ಫೋಟೊ ವೈರಲ್ ಆಗಿತ್ತು. ಈ ಫೋಟೊ ವೈರಲ್ ಬೆನ್ನಲ್ಲೇ ಸಿಸಿಬಿ ಅಧಿಕಾರಿಗಳ ದಾಳಿ ಮಾಹಿತಿ ಸೋರಿಕೆಯಾಗಿತ್ತಾ ಎಂಬ ಅನುಮಾನ ವ್ಯಕ್ತವಾಗಿದೆ.

ಶನಿವಾರ ಸಿಸಿಬಿ ಅಧಿಕಾರಿಗಳು ಜೈಲಿನೊಳಗೆ ಪ್ರವೇಶಿಸುವ ಮುನ್ನ ಅರ್ಧಗಂಟೆ ಹೊರಗಡೆ ಕಾದಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಸಿಸಿಬಿ ಅಧಿಕಾರಿಗಳು ದಾಳಿಗೆ ಬಂದಿದ್ದಾಗ ಜೈಲಾಧಿಕಾರಿಗಳು ಅರ್ಧ ಗಂಟೆ ಒಳಗೆ ಬಿಡಲಿಲ್ಲ. ಈ ವೇಳೆ ಸಿಸಿಬಿ ಅಧಿಕಾರಿಗಳು ಏಕೆ ಕಾಯಬೇಕು ಎಂದು ಜೈಲು ಸಿಬ್ಬಂದಿಗೆ ಪ್ರಶ್ನೆ ಮಾಡಿದ್ದಾರೆ. ಜೈಲು ಅಧೀಕ್ಷಕ ಬಂದಿಲ್ಲ, ಅವರಿಲ್ಲದೆ ಒಳಗೆ ಬಿಡಲ್ಲ ಎಂದು ಸಿಬ್ಬಂದಿ ಹೇಳಿದ್ದಾರೆ. ಹೀಗಾಗಿ, ಸಿಸಿಬಿ ಅಧಿಕಾರಿಗಳು ಸುಮಾರು ಅರ್ಧಗಂಟೆ ಜೈಲಿನ ಬಾಗಿಲಿನಲ್ಲೇ ಕಾದಿದ್ದಾರೆ. ಬ್ಯಾರಕ್‌ನಲ್ಲಿ ನಾಲ್ಕು ರಟ್ಟಿನ ಬಾಕ್ಸ್‌ಗಳನ್ನು ಶಿಫ್ಟ್ ಮಾಡಿದ ಬಗ್ಗೆಯೂ ಜೈಲು ಸಿಬ್ಬಂದಿಯನ್ನು ಸಿಸಿಬಿ ಅಧಿಕಾರಿಗಳು ಪ್ರಶ್ನಿಸಿದ್ದಾರೆ. ಬಾಕ್ಸ್‌ಗಳಲ್ಲಿ ಕಸ ಇತ್ತು ಜೈಲು ಸಿಬ್ಬಂದಿ ಹೇಳಿದ್ದಾರೆ. ಆದರೆ, ಜೈಲಿನ ಯಾವ ಬ್ಯಾರಕ್‌ನಿಂದಲೂ ಕಸ ತೆಗೆದುಕೊಂಡು ಹೋಗಿಲ್ಲ. ಕೇವಲ ಬ್ಯಾರಕ್ ನಂಬರ್ 10 ರಿಂದ ಏಕೆ ಕಸ ತೆಗೆದುಕೊಂಡು ಹೋಗಿದ್ದೀರಿ ಎಂದು ಸಿಸಿಬಿ ಪೊಲೀಸರು ಪ್ರಶ್ನಿಸಿದ್ದಾರೆ. ಈ ಬಗ್ಗೆ ಸಿಸಿಬಿ ಅಧಿಕಾರಿಗಳು ಪ್ರಾಥಮಿಕ ವರದಿ ನೀಡಿದ್ದಾರೆ. ಜೈಲು ಅಧಿಕಾರಿಗಳ ಈ ನಡೆ ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ.

ಅನುಮಾನಗಳಿಗೆ ಎಡೆಮಾಡಿಕೊಟ್ಟ ಮೊಬೈಲ್ ಬಳಕೆ

ಪರಪ್ಪನ ಅಗ್ರಹಾರ ಜೈಲಿನಲ್ಲಿ ನಟ ದರ್ಶನ್ ಸೇರಿ ರೌಡಿಗಳಿಗೆ ವಿಶೇಷ ಆತಿಥ್ಯ ಕಲ್ಪಿಸಿದ ಸಂಬಂಧ ಮೂರು ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆಗೆ ಮುಂದಾಗಿದ್ದಾರೆ. ಕರ್ತವ್ಯಲೋಪ ಹಾಗೂ ನಿರ್ಲಕ್ಷ್ಯ ಹಿನ್ನೆಲೆ ಅಧೀಕ್ಷಕ ಹಾಗೂ ಸೂಪರಿಡೆಂಟೆಂಟ್ ಸೇರಿದಂತೆ 9 ಮಂದಿ ಜೈಲು ಸಿಬ್ಬಂದಿಯನ್ನ ಅಮಾನತುಗೊಳಿಸಲಾಗಿದೆ. ದರ್ಶನ್ ಕುಳಿತುಕೊಂಡಿರುವ ಫೋಟೊ ತೆಗೆದ ವಿಚಾರಣಾಧೀನ ಕೈದಿ ಹಾಗೂ ಸೆಲ್‌ನಲ್ಲಿ ದರ್ಶನ್ ಜತೆ ಕುಳಿತಿರುವ ಮತ್ತೊಬ್ಬ ಕೈದಿ ಮೊಬೈಲ್ ಬಳಸಿರುವುದು ಬೆಳಕಿಗೆ ಬಂದಿದೆ. ಕೆಲ ಸಂದರ್ಭಗಳನ್ನು ಹೊರತುಪಡಿಸಿ ಅಧೀಕ್ಷಕರಿಗೂ ಮೊಬೈಲ್ ಬಳಕೆ ನಿಷಿದ್ಧ. ಆದಾಗ್ಯೂ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆಐಎಸ್‌ಎಫ್) ಸಿಬ್ಬಂದಿಯ ಕಣ್ತಪ್ಪಿಸಿ ಮೊಬೈಲ್ ಬಳಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ದರ್ಶನ್ ಸೇರಿದಂತೆ ಇನ್ನಿತರ ಆರೋಪಿಗಳು ಮೊಬೈಲ್ ಬಳಸುತ್ತಿರುವುದು ಭದ್ರತಾ ಸಿಬ್ಬಂದಿಗೆ ಗಮನಕ್ಕೆ ಬಂದಿತ್ತಾ ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ದರ್ಶನ್ ಫೋಟೊ ವೈರಲ್ ವೇಲುವಿನ ಮೇಲೆ ಹಲ್ಲೆ?

ಬೆಂಗಳೂರು: ಜೈಲಿನಲ್ಲಿ ದರ್ಶನ್ ಬಿಂದಾಸ್ ಆಗಿ ಸಿಗರೇಟ್ ಸೇದುವ, ಕಾಫಿ ಕುಡಿಯುತ್ತಿದ್ದ ಫೋಟೊ ವೈರಲ್ ಆಗಿದ್ದು ಈಗ ದೊಡ್ಡ ವಿವಾದವನ್ನೇ ಸೃಷ್ಟಿಸಿದೆ. ಇದರ ನಡುವೆಯೇ ಫೋಟೊ ವೈರಲ್ ಮಾಡಿದವನ ಮೇಲೆ ಜೈಲಿನಲ್ಲಿ ಹಲ್ಲೆಯೂ ಕೂಡ ಆಗಿದೆ.

ದರ್ಶನ್ ಫೋಟೊ ವೈರಲ್ ಮಾಡಿದ್ದು ವಿಲ್ಸನ್ ಗಾರ್ಡನ್ ಬಲಗೈ ಬಂಟ ಎಂದೇ ಖ್ಯಾತಿಯಾಗಿದ್ದ ವೇಲು. ವಿಲ್ಸನ್ ಗಾರ್ಡನ್ ನಾಗನಿಗಾಗಿ ವೇಲು ಮತ್ತೆ ಕಣ್ಣನ್ ಬ್ರದರ್ಸ್ ಎರಡೆರಡು ಕೊಲೆ ಮಾಡಿದ್ದಾರೆ. ನಾಗನನ್ನು ಬಿಡಲ್ಲ ಹೊಡಿತೀವಿ ಎಂದವರಿಗೆಲ್ಲಾ ಮುಹೂರ್ತವಿಟ್ಟು ಮುಗಿಸಿದ್ದಾರೆ. ಹೀಗಿದ್ದ ವೇಲುವಿನ ಮೇಲೆ ಭಾನುವಾರ ಜೈಲಿನಲ್ಲಿ ವಿಲ್ಸನ್ ಗಾರ್ಡನ್ ನಾಗ ದಾಳಿ ಮಾಡಿರುವುದು ತಿಳಿದುಬಂದಿದೆ.

ವೈರಲ್ ಆಗಿರುವ ದರ್ಶನ್ ಫೋಟೊ ತೆಗೆದಿದ್ದೇ ಕೈದಿ ವೇಲು. ಬಿಲ್ಡಪ್‌ಗಾಗಿ ದರ್ಶನ್ ಹಾಗೂ ನಾಗ ಒಟ್ಟಿಗಿರುವ ಫೋಟೊ ಕ್ಲಿಕ್ಕಿಸಿದ್ದಾನೆ. ಅದನ್ನ ತಮ್ಮ ಹುಡುಗರಿಗೆ ಕಳಿಸಿ ಬಿಲ್ಡಪ್ ವಿಡಿಯೊ ಮಾಡಿಸಲಿಕ್ಕೆ ಹೇಳಿದ್ದಾನೆ. ನಾಗ ಹಾಗೂ ಸಹೋದರ ಕಣ್ಣನ್ ಗಮನಕ್ಕೆ ತರದೇ ವೇಲು ಈ ಪ್ಲಾನ್ ಮಾಡಿದ್ದಾನೆ. ಆದರೆ ಅಷ್ಟರೊಳಗೆ ಫೋಟೊ ವೈರಲ್ ಆಗಿ ಹೋಗಿದೆ. ತನಗಾಗಿ ಎರಡೆರಡು ಮರ್ಡರ್ ಮಾಡಿದವನ ಮೇಲೆಯೇ ನಾಗ ಹಲ್ಲೆ ಮಾಡಿದ್ದಾನೆ. ಫೋಟೊ ವೈರಲ್ ಆಗಿದ್ದಕ್ಕೆ, ಅದಾದ ಬಳಿಕ ನಡೆದ ಬೆಳವಣಿಗೆಗೆ ನಾಗ ಕುದ್ದು ಹೋಗಿ ವೇಲು ಮೇಲೆ ಹಲ್ಲೆ ಮಾಡಿದ್ದಾನೆ.

IN THE COURT OF 38 TH ADDITIONAL CITY CIVIL JUDGE AT BENGALURU [CCH-39]
P & SC No. 414/2024
(In the matter of the estate of the deceased Arun Kumar Bhaskar Gandikota)
PETITIONERS : 1. SMT.M. NIRMALA W/o. Late Arun Kumar Bhaskar Gandikota Aged about 39 years; **2. MASTER SOMITH RAM REDDY G.A** S/o Late Arun Kumar Bhaskar Gandikota, Aged about 9 years; **3. MASTER LIKITH RAM REDDY G.A** S/o Late Arun Kumar Bhaskar Gandikota Aged about 6 years **Petitioner No.1 and 2 are represented by Natural Guardian Mother Petitioner No.1**
All are residing at: No.75, 4 th Cross, SBM Colony, Mathikere Bengaluru North, Msrit Bengaluru-560 054
/Vs/
RESPONDENT : NIL
PUBLIC NOTICE UNDER ORDER 5 RULE XX [1] OF CIVIL PROCEDURE CODE
WHEREAS, the above named petitioners have filed a petition to the court (CCH-39) U/s 372 of Indian Succession Act praying for issue of Succession Certificate in respect of schedule shares left by Arun Kumar Bhaskar Gandikota who expired on 02.03.2024. Interested parties are hereby warned to appear before this Hon'ble court in person or by a pleader duly instructed on 18.09.2024 at 11.00 clock, inform and show cause against the petitioners, failing which the appearance will be heard and declared as Ex-Parte.
SCHEDULE SHARES

Participant Name	Participant ID	Employee ID	Location Code	Country Name - Participant	Share Source	Grant Date	Acquisition Date	Number of Available Shares available to beneficiary after the account is re-registered in name of beneficiary
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	8/4/2020	8/4/2022	17
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	8/3/2021	8/3/2023	30
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	8/4/2020	8/4/2023	19
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	9/20/2022	9/20/2023	12
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	8/4/2020	3/2/2024	19
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	8/3/2021	3/2/2024	30
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	9/20/2022	3/2/2024	13
GANDIKOTA ARUN KUMAR	I02541722	I2600724	IN	INDIA	RSU-Restricted Stock Unit	9/15/2023	3/2/2024	8
							Total	148

Given under my hand and seal and signature on this 20th day of August 2024 at Bengaluru.
Advocate for petitioners:
J.S.Dinesh, Advocate
No.74,"Mathrushree" 12 th "E"Main Road, 76 th Cross, Rajajinagara 6 th Block, Bangalore-560 010
By Order of the Court Assistant Registrar
City Civil Court Bengaluru

ಪವಿತ್ರಾ ಗೌಡ ಜಾಮೀನು ಅರ್ಜಿ ವಿಚಾರಣೆ ಮುಂದಕ್ಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಪವಿತ್ರಾ ಗೌಡ ಜಾಮೀನು ಅರ್ಜಿ ವಿಚಾರಣೆಯನ್ನ 57ನೇ ಸಿಸಿಎಚ್ ನ್ಯಾಯಾಲಯ ಬುಧವಾರಕ್ಕೆ ಮುಂದೂಡಿದೆ. ಹತ್ಯೆ ಪ್ರಕರಣದಲ್ಲಿ ತನಿಖೆ ಮುಕ್ತಾಯವಾಗಿದ್ದು, ಜಾಮೀನು ಪುರಸ್ಕರಿಸಬೇಕೆಂದು ಕೋರಿ ಪವಿತ್ರಾ ಗೌಡ ಪರ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್ ಸಲ್ಲಿಸಿದ್ದ ಅರ್ಜಿಯನ್ನ ವಿಚಾರಣೆ ನಡೆಸಿತು. ಇದಕ್ಕೂ ಮುನ್ನ ಪೊಲೀಸರ ಪರ ವಕೀಲರು ಜಾಮೀನು ಅರ್ಜಿ ರದ್ದು ಮಾಡುವಂತೆ ಆಕ್ಷೇಪಣೆ ಸಲ್ಲಿಸಿತು. ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ(ಎ1) ಪವಿತ್ರಾ ಗೌಡ, ರೇಣುಕಾಸ್ವಾಮಿ ಹತ್ಯೆ ಷಡ್ಯಂತ್ರದಲ್ಲಿ ನೇರವಾಗಿ ಭಾಗಿಯಾಗಿದ್ದಾರೆ. ಅಕ್ರಮವಾಗಿ ರೇಣುಕಾಸ್ವಾಮಿ ಯನ್ನ ಪಟ್ಟಣಗೆರೆ ಶೆಡ್‌ನಲ್ಲಿ ಕರೆತಂದಾಗ ಸ್ಥಳಕ್ಕೆ ಹೋಗಿ ಚಪ್ಪಲಿಯಿಂದ ಪವಿತ್ರಾ ಹಲ್ಲೆ ಮಾಡಿದ್ದಾರೆ. ಈ ಸಂಬಂಧ ಎಫ್‌ಎಸ್‌ಎಲ್ ವರದಿಯಲ್ಲಿ ಬಹಿರಂಗವಾಗಿದೆ. ವ್ಯವಸ್ಥಿತವಾಗಿ ಸಂಚು ರೂಪಿಸುವಲ್ಲಿ ಪವಿತ್ರಾ ಪಾತ್ರ ದೊಡ್ಡದಾಗಿದೆ. ಪ್ರಕರಣವು ತನಿಖೆ ಹಂತದಲ್ಲಿದ್ದು, ಚಾರ್ಜ್‌ಶೀಟ್ ಕೂಡ ಸಲ್ಲಿಕೆಯಾಗಿಲ್ಲ. ಅಲ್ಲಿವರೆಗೂ ಜಾಮೀನು ಅರ್ಜಿ ಪುರಸ್ಕರಿಸ ಬಾರದು ಎಂದು ಆಕ್ಷೇಪಣೆಯಲ್ಲಿ ವಕೀಲರು ತಿಳಿಸಿದ್ದರು.

ವಾದ ಮಂಡಿಸಿದ ಟಾಮಿ ಸೆಬಾಸ್ಟಿಯನ್, ಹತ್ಯೆ ಪ್ರಕರಣ ಮೊದಲಿಗೆ ಅಪರಿಚಿತ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಬಳಿಕ ನಾಲ್ವರು ಪೊಲೀಸರ ಮುಂದೆ ಶರಣಾಗತಿಯಾಗಿದ್ದರು. ಎರಡನೇ ಆರೋಪಿ ದರ್ಶನ್ ಹಾಗೂ ಮೂರನೇ ಆರೋಪಿ ಪವನ್ ನಡುವೆ ಎರಡನೇ ಹಂತದ ಒಳಸಂಚು ರೂಪಿಸಿದ್ದಾರೆ. ಮೃತನ ಮನೆ ವಿಳಾಸ ಪತ್ತೆ ದರ್ಶನ್‌ಗೆ ಪವನ್ ನೀಡಿದ್ದ. ಸೂಚನೆ ಮೇರೆಗೆ ರಾಘವೇಂದ್ರ ಅಂಡ್ ಟೀಮ್ ಚಿತ್ರದುರ್ಗದಿಂದ ರೇಣುಕಾಸ್ವಾಮಿಯನ್ನ ಅಪಹರಿಸಿದ್ದಾರೆ. ಮಾರ್ಗಮಧ್ಯೆ ಚಿನ್ನಾಭರಣ ದೋಚಿದ್ದಾರೆ. ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿದ್ದ ದರ್ಶನ್‌ಗೆ ಕರೆ ಮಾಡಿ ರೇಣುಕಾಸ್ವಾಮಿಯನ್ನು ಕರೆತಂದಿರುವ ಮಾಹಿತಿಯನ್ನು ಪವನ್ ನೀಡಿದ್ದರು.

ಇಂದು ವಿಚಾರಣೆ

ಹತ್ಯೆ ಪ್ರಕರಣದಲ್ಲಿ ಎಲ್ಲಿಯೂ ಪವಿತ್ರಾ ಗೌಡ ಭಾಗಿಯಾಗಿಲ್ಲ. ಆರೋಪಿತ ಸ್ಥಾನದಲ್ಲಿರುವವರ ಅಪ್ರಾಪ್ತರು, ಮಹಿಳೆಯರು ಅಥವಾ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಸಿಆರ್‌ಪಿಸಿ ಸೆಕ್ಷನ್ ನಡಿ 437ನಂತೆ ಕಾನೂನಾತ್ಮಕ ವಿನಾಯಿತಿ ನೀಡಿರುವ ಬಗ್ಗೆ ದೇಶದ ವಿವಿಧ ನ್ಯಾಯಾಲಯಗಳು ಮಾನ್ಯ ಮಾಡಿವೆ. ಹತ್ಯೆಯಾದ 15 ದಿನದೊಳಗಾಗಿ ಪವಿತ್ರಾ ಗೌಡ ಅವರ ತನಿಖೆ ಮುಕ್ತಾಯಗೊಳಿಸಿದ್ದಾರೆ. ಹೀಗಾಗಿ ಜಾಮೀನು ಅರ್ಜಿ ಪುರಸ್ಕರಿಸಬೇಕೆಂದು ಮನವಿ ಮಾಡಿದರು. ಇದೇ ವೇಳೆ ಪ್ರಕರಣದ 16ನೇ ಆರೋಪಿ ಕೇಶವಮೂರ್ತಿ ಪರ ವಕೀಲ ರಂಗನಾಥ ರೆಡ್ಡಿ, ಜಾಮೀನು ಮಂಜೂರು ಮಾಡಬೇಕೆಂದು ವಾದ ಮಂಡಿಸಿದರು.
ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯವು ಬುಧವಾರ ಮಧ್ಯಾಹ್ನ 2.45ಕ್ಕೆ ವಿಚಾರಣೆಯನ್ನು ಮುಂದೂಡಿತು.

ಸಮಾಚಾರ ಸಣ್ಣದಲ್ಲ

ಡಿ.ಕೆ. ಶಿವಕುಮಾರ್ ಎಚ್.ವಿಶ್ವನಾಥ್ ಭೇಟಿ

ಬೆಂಗಳೂರು: ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಬಿಜೆಪಿ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಂಗಳವಾರ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಕೆಲ ತಿಂಗಳಿನಿಂದ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದ ವಿಶ್ವನಾಥ್ ಅವರು ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರನ್ನು ಟೀಕಿಸಿದ್ದರು. ಇದೀಗ ಎಚ್.ವಿಶ್ವನಾಥ್ ಡಿಕೆಶಿ ಭೇಟಿಯಾಗಿದ್ದು ಹಲವು ಚರ್ಚೆಗೆ ಕಾರಣವಾಗಿದೆ. ಇವರಷ್ಟೇ ಅಲ್ಲದೇ, ಎಸ್.ಆರ್. ವಿಶ್ವನಾಥ್ ಕೂಡ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ. ಭೇಟಿ ಬಳಿಕ ಮಾತನಾಡಿದ ಎಸ್.ಆರ್. ವಿಶ್ವನಾಥ್, ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಚರ್ಚಿಸಲು ಉಪಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದೆ ಎಂದು ಸ್ಪಷ್ಟಪಡಿಸಿದ್ದಾರೆ. ಯಲಹಂಕ ಶಾಸಕ ವಿಶ್ವನಾಥ್ ಅವರ ಭೇಟಿಗಿಂತ ಹೆಚ್ಚಾಗಿ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಭೇಟಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಸಿಎಂ ಸಿದ್ದು ಕೈಗೆ ಗುಂಡುಪಿನ್; ಗಾಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕೃತ ನಿವಾಸ ಕಾವೇರಿ ನಿವಾಸದಲ್ಲಿ ಜನರ ಅಹವಾಲು ಸ್ವೀಕರಿಸುವ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಕೈಗೆ ಗುಂಡುಪಿನ್ ಚುಚ್ಚಿ ಗಾಯವಾಗಿದೆ. ಗಾಯವಾಗಿರುವ ಜಾಗಕ್ಕೆ ಕರ್ಚಿಫ್ ಸುತ್ತಿಕೊಂಡು ಸಿಎಂ ಸಭೆಗೆ ತೆರಳಿದರು. ವಿಧಾನ ಸೌಧಕ್ಕೆ ಆಗಮಿಸಿದಾಗಲೂ ರಕ್ತ ನಿಂತಿರಲಿಲ್ಲ. ಅಧಿಕಾರಿಗಳು ವೈದ್ಯರಿಗೆ ಮಾಹಿತಿ ನೀಡಿದರು. ತಕ್ಷಣವೇ ಆಗಮಿಸಿದ ವೈದ್ಯರು ವಿಧಾನಸೌಧ ಸಮಿತಿ ಕೊಠಡಿಯಲ್ಲಿ ನಡೆಯುತ್ತಿದ್ದ ಸಭೆಯಲ್ಲೇ ಸಿದ್ದರಾಮಯ್ಯ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದರು. ರಾಜ್ಯದ ಮಾಹಿತಿ ಆಯೋಗ ಮುಖ್ಯ ಮಾಹಿತಿ ಆಯುಕ್ತರು, ಮಾಹಿತಿ ಆಯುಕ್ತರ ನೇಮಕ ಸಂಬಂಧ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆಯಿತು. ಆದರೆ ಮುಖ್ಯ ಆಯುಕ್ತರ ನೇಮಕ ಅಂತಿಮವಾಗಿಲ್ಲ ಎಂದು ತಿಳಿದುಬಂದಿದೆ.

ನಟ, ನಿರ್ಮಾಪಕ ಕೆ.ಪ್ರಭಾಕರ್ ನಿಧನ

ಬೆಂಗಳೂರು: ಕನ್ನಡ ಚಿತ್ರರಂಗಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದ ಹಿರಿಯ ನಟ ಕೆ.ಪ್ರಭಾಕರ್ (64) ನಿಧನರಾಗಿದ್ದಾರೆ. ಪ್ರಭಾಕರ್ ಅವರಿಗೆ ಎದೆ ನೋವು

ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಪ್ರಭಾಕರ್ ಅವರ ನಿಧನಕ್ಕೆ ಚಿತ್ರರಂಗದ ಹಿರಿಯರು, ಗಣ್ಯರು ಸಂತಾಪ ಸೂಚಿಸಿದ್ದಾರೆ. ಹಲವು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ನಿರ್ಮಾಪಕರಾಗಿ ಗುರುತಿಸಿಕೊಂಡಿರುವ ಪ್ರಭಾಕರ್, ಸೋಲಿಲ್ಲದ ಸರದಾರ, ಅವಳೇ ನನ್ನ ಹೆಂಡ್ತಿ, ಅಣ್ಣ ತಂಗಿ, ಎಲ್ಲರಂತಲ್ಲ ನನ ಗಂಡ, ಲವ ಕುಶ ಹೀಗೆ ಹಲವು ಸಿನಿಮಾ ನಿರ್ಮಿಸಿ ಪ್ರಸಿದ್ಧಿ ಪಡೆದಿದ್ದರು.

ಉದ್ಯಮಿ ಅನಂತ ಖೋಡೆ ನಿಧನ

ಬೆಂಗಳೂರು: ಕೈಗಾರಿಕೋದ್ಯಮಿ ಹಾಗೂ ಖೋಡೆ ಕುಟುಂಬದ ಸದಸ್ಯ ಅನಂತ ಪದ್ಮನಾಭ ಖೋಡೆ ಸೋಮವಾರ ನಿಧರಾಗಿದ್ದಾರೆ. ಅನಂತ ಪದ್ಮನಾಭ ಖೋಟೆ ಅವರಿಗೆ 85 ವರ್ಷ ವಯಸ್ಸಾಗಿತ್ತು. ಇವರು ದಿವಂಗತ ರಾಮಚಂದ್ರ ಖೋಡೆ ಮತ್ತು ಶ್ರೀಹರಿ ಖೋಡೆಯವರ ಸಹೋದರರು ಕುಟುಂಬದ ವ್ಯವಹಾರಗಳಲ್ಲಿ ಪ್ರಭಾವಿ ವ್ಯಕ್ತಿಗಳಾಗಿದ್ದರು. ತಮ್ಮ ಕೈಗಾರಿಕಾ ಉದ್ಯಮಗಳು ಮತ್ತು ಮದ್ಯದ ವ್ಯಾಪಾರದ ಜತೆಗೆ ಖೋಡೆಗಳು ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ವಲಯಗಳಲ್ಲಿ ದೀರ್ಘಕಾಲ ಪ್ರಭಾವ ಬೀರಿದ್ದಾರೆ. ಕುಟುಂಬವು 1960 ರ ದಶಕದಲ್ಲಿ 1990ರ ದಶಕದಲ್ಲಿ ಪ್ರಸಿದ್ಧಿ ಪಡೆಯಿತು. ಆ ಕಾಲದ ಅನೇಕ ಪ್ರಮುಖ ರಾಜಕಾರಣಿಗಳ ಗಮನ ಸೆಳೆದರು. ಖೋಡೆ ಅವರ ನಿಧನಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸಿಎಂ ಸಿದ್ದು ಬೆಂಬಲಿಸಿ ಹಿಂದುಳಿದ ಸಂಘಟನೆಗಳ ರಾಜಭವನ ಚಲೋ

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಕ್ಕೆ ಪ್ರತಿಭಟನಾಕಾರರ ಆಕ್ರೋಶ

ಬೆಂಗಳೂರು: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಶೋಷಿತ ಸಮುದಾಯದ ನಾಯಕರು, ಕಾಂಗ್ರೆಸ್ ಮುಖಂಡರು ಬೃಹತ್ ಪ್ರತಿಭಟನೆ ನಡೆಸುವ ಮೂಲಕ ಮುಖ್ಯಮಂತ್ರಿಗಳ ಪರ ಶಕ್ತಿ ಪ್ರದರ್ಶನ ಮಾಡಿದರು.

ಫ್ರೀಡಂ ಪಾರ್ಕಿನ ಮೈದಾನದಲ್ಲಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟ ಮತ್ತು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಹಾಗೂ ಕಾಂಗ್ರೆಸ್ ನಾಯಕರು, ಬೃಹತ್ ಪ್ರತಿಭಟನಾ ಸಮಾವೇಶ ನಡೆಸಿ ಕೇಂದ್ರ ಸರಕಾರ ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ವಾಗ್ದಾಳಿ ನಡೆಸಿದರು.

ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಾಗ ಸಂವಿಧಾನದ ಮೂಲ ತತ್ವಗಳನ್ನು ಗಾಳಿಗೆ ತೂರಿದ್ದಾರೆ. ರಾಜಭವನವನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ. ಅಲ್ಲದೆ ರಾಜ್ಯಪಾಲರು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಪಕ್ಷಪಾತಿ ಧೋರಣೆಯನ್ನು ಅನುಸರಿಸುತ್ತಿದ್ದಾರೆ ಎಂದು ಟೀಕಿಸಿದರು.

ಜನರಾಯ್ಕೆ ವಿರುದ್ಧ ತೀರ್ಮಾನ: ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ದಲಿತ ಮುಖಂಡ ಮಾವಳ್ಳಿ ಶಂಕರ್, ಜನರಿಂದ ಆಯ್ಕೆಯಾದ ಮುಖ್ಯಮಂತ್ರಿ ವಿರುದ್ಧ ಪಡೆಯುತ್ತಿರುವ ಪಿತೂರಿಯ ಭಾಗವಾಗಿ ನಡೆದುಕೊಳ್ಳುತ್ತಿದ್ದಾರೆ. ಒಂದು ಸ್ಥಿರ ಸರಕಾರವನ್ನು ವಾಮ ಮಾರ್ಗದಿಂದ ಕೆಡವಿ,ಮಜಾ ತೆಗೆದುಕೊಳ್ಳಲು ಹೊರಟಿರುವ ಜೆಡಿಎಸ್-ಬಿಜೆಪಿ ಪಕ್ಷಗಳು, ಇದಕ್ಕೆ ರಾಜಭವನವನ್ನು ದುರುಪಯೋಗ ಪಡಿಸಿಕೊಂಡಿವೆ ಎಂದರು. ಮುಡಾ ಹಗರಣ ನಡೆದಿರುವುದು ಬಿಜೆಪಿ ಅಧಿಕಾರದಲ್ಲಿದ್ದ ಕಾಲದಲ್ಲಿ, 1932ರಿಂದಲೂ ಸದರಿ ಭೂಮಿಗೆ ಸಂಬಂಧಿಸಿದಂತೆ ಪ್ರಕ್ರಿಯೆಗಳು ನಡೆದಿವೆ. ಈ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ಜೆಡಿಎಸ್-ಬಿಜೆಪಿ ಆರೋಪಿ ಎಂದು ಬಿಂಬಿಸುತ್ತಿರುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಲಿ, ನಗರಾಭಿವೃದ್ಧಿ ಸಚಿವರಾಗಲಿ, ಮುಡಾ ಅಧ್ಯಕ್ಷರಾಗಿರಲಿಲ್ಲ. ಪ್ರಕರಣದಲ್ಲಿ ಇವರ ತಪ್ಪು ಇಲ್ಲದಿದ್ದರೂ ಕ್ಲೀನ್ ಇಮೇಜ್ ಹೊಂದಿರುವ ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿದು, ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಲು ರಾಜ್ಯಪಾಲರ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿವೆ ಎಂದು ಆರೋಪಿಸಿದರು.

ಇದು ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದೆ. ಹಾಗಾಗಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆಗೆ ಈ ಹೋರಾಟ ಅನಿವಾರ್ಯ. ರೈತರು,ಕಾರ್ಮಿಕರು, ದಲಿತರು,ಹಿಂದುಳಿದ ವರ್ಗಗಳ ಜನರು ಒಗ್ಗೂಡಿ ಜೆಡಿಎಸ್-ಬಿಜೆಪಿ ಕುತಂತ್ರವನ್ನು ಎದುರಿಸಬೇಕಾಗಿದೆ ಎಂದರು.

ಶೋಷಿತ ಸಮುದಾಯದ ನಾಯಕರು, ಕಾಂಗ್ರೆಸ್ ಮುಖಂಡರು ಬೃಹತ್ ಪ್ರತಿಭಟನೆ ನಡೆಸುವ ಮೂಲಕ ಮುಖ್ಯಮಂತ್ರಿಗಳ ಪರ ಶಕ್ತಿ ಪ್ರದರ್ಶನ ಮಾಡಿದರು.

> ಶೋಷಿತ ಸಮುದಾಯಗಳ ಆಶಾಕಿರಣವಾಗಿರುವ ಸಿದ್ದರಾಮಯ್ಯ ಅವರು ಅಧಿಕಾರದಲ್ಲಿ ಮುಂದುವರೆಯಬೇಕು. ಅದರಲ್ಲೂ, ನೇರವಾಗಿ ಜನಾಧಿಕಾರ ಪಡೆಯಲು ಸಾಧ್ಯವಾಗದ ಜೆಡಿಎಸ್-ಬಿಜೆಪಿ ಪಕ್ಷಗಳು ಹಿಂಬಾಗಿಲ ಮೂಲಕ ಅಧಿಕಾರ ಪಡೆಯಲು ಪ್ರಯತ್ನಿಸುತ್ತಿವೆ. ಇದಕ್ಕೆ ಎಂದಿಗೂ ಅವಕಾಶ ನೀಡುವುದಿಲ್ಲ.
>
> **-ಅನಂತ್ ನಾಯ್ಕ್** ಚಿಂತಕ

> ಮುಡಾ ಹಗರಣದಲ್ಲಿ ಮೇಲ್ನೋಟಕ್ಕೆ ಸಿದ್ದರಾಮಯ್ಯ ಅವರದ್ದು ಯಾವುದೇ ತಪ್ಪಿಲ್ಲದಿದ್ದರೂ ಅವರನ್ನು ವಿನಾಕಾರಣ ಹಗರಣದಲ್ಲಿ ಸಿಲುಕಿಸಲು ಜೆಡಿಎಸ್ ಪ್ರಯತ್ನಿಸುತ್ತಿದೆ. ಸ್ವತಃ ಮುಖ್ಯಮಂತ್ರಿಗಳೇ ತನ್ನ ಮೇಲೆ ಬಂದಿರುವ ಹಗರಣದ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರನ್ನು ನೇಮಕ ಮಾಡಿದ್ದರೂ ಅವರಿಗೆ ತಮಲ್ಲಿರುವ ದಾಖಲೆ ಸಲ್ಲಿಸಿದೆ.
>
> **- ರಾಮಚಂದ್ರಪ್ಪ** ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ರಾಜ್ಯ ಪ್ರಧಾನ ಸಂಚಾಲಕ

ಬಿಗಿ ಪೊಲೀಸ್ ಬಂದೋಬಸ್ತ್

ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಬೃಹತ್ ಪ್ರತಿಭಟನೆ ನಡೆದಿದ್ದರಿಂದ ಫ್ರೀಡಂ ಪಾರ್ಕ್, ರೈಲ್ವೇ ನಿಲ್ದಾಣ ಹಾಗೂ ರಾಜಭವನದ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಲಾಗಿತ್ತು. ರಾಜಭವನ ಚಲೋ ಹಿನ್ನೆಲೆಯಲ್ಲಿ ಸಂಚಾರ ಮಾರ್ಗಗಳಲ್ಲಿ ಬದಲಾವಣೆ ಮಾಡಲಾಗಿತ್ತು. ಮೈಸೂರು, ತುಮಕೂರು, ಕನಕಪುರ ರಸ್ತೆ ಹಾಗೂ ಹಳೆ ಮದ್ರಾಸ್ ರಸ್ತೆಗಳ ಮೂಲಕ ಸಾಕಷ್ಟು ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಬಂದ ಹಿನ್ನೆಲೆ ಅಲ್ಲಲ್ಲಿ ಸಂಚಾರ ದಟ್ಟಣೆ ಕಂಡಿತು. ಇನ್ನೂ, ಈ ರಸ್ತೆಯನ್ನು ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಪರ್ಯಾಯ ರಸ್ತೆ ಬಳಕೆ ಮಾಡಲು ಸಂಚಾರ ಪೊಲೀಸರು ಸೂಚಿಸಿದ್ದರು.

ಡಾ.ಬಿಎನ್‌ವಿ ಜ್ಯೋತಿ ಮೆಮೋರಿಯಲ್ ಶಿಕ್ಷಣ ಟ್ರಸ್ಟ್‌ನ ಅಂಗ ಸಂಸ್ಥೆಯಾದ 'ಜ್ಯೋತಿ ಇನ್ಸಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್‌ನ ನೂತನ ಕಟ್ಟಡದ ನಾಲ್ವಡಿ ಕೃಷ್ಣರಾಜ ಒಡೆಯರ್ ಬ್ಲಾಕ್ ಅನ್ನು ಕೊಡಗು-ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು. ಈ ವೇಳೆ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕರಾದ ರಾಜೇಶ್.ಕೆ, ಅದಮ್ಯ ಚೇತನ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಟ್ರಸ್ಟ್ ಅಧ್ಯಕ್ಷೆ ಬಿ.ವಿ.ಸೀತಾ ಇದ್ದರು

ಕೆ.ಆರ್.ಪುರ ಮೆಟ್ರೋ ಸೇತುವೆ ಸಂಚಾರಕ್ಕೆ ಮುಕ್ತ

ಬೆಂಗಳೂರು: ನಗರದಲ್ಲಿರುವ ಕೆಆರ್‌ಪುರ ರೈಲ್ವೆ ನಿಲ್ದಾಣ ಮತ್ತು ಕೆಆರ್ ಪುರ ಮೆಟ್ರೋ ನಿಲ್ದಾಣ ಸಂಪರ್ಕಿಸುವ ಫುಟ್‌ಓವರ್ ಬ್ರಿಜ್ ಹಲವು ಗಡುವುಗಳ ಬಳಿಕ ಪೂರ್ಣಗೊಂಡಿದ್ದು, ಪಾದಚಾರಿಗಳಿಗೆ ಸಂಚಾರಕ್ಕೆ ಮುಕ್ತವಾಗಿದೆ.

ಕೆ.ಆರ್ ಪುರ ಹೆಚ್ಚು ಜನದಟ್ಟಣೆಯ ಪ್ರದೇಶವಾಗಿದ್ದು, ಇಂಟರ್ ಮೋಡಲ್ ಸಂಪರ್ಕ ಸುಧಾರಿಸುವ ಹಾಗೂ ಜನರಿಗೆ ಸಂಚರಿಸಲು ಅನುಕೂಲವಾಗುವಂತೆ ಈ ಫುಟ್‌ಓವರ್ ಬ್ರಿಜ್ ಮೂಲಸೌಕರ್ಯವನ್ನು ಆರಂಭಿಸಲಾಗಿದ್ದು, ನಮ್ಮ ಮೆಟ್ರೋ, ಬಿಡಿಎ, ಬಿಬಿಎಂಪಿ ಹಾಗೂ ಸಂಚಾರಿ ಪೊಲೀಸರ ಸಹಯೋಗದೊಂದಿಗೆ ನಿರ್ಮಾಣ ಮಾಡಲಾಗಿದೆ.

ಮೆಟ್ರೋ ನೀಲಿ ಹಾಗೂ ನೇರಳೆ ಮಾರ್ಗಕ್ಕೆ ಸಂಪರ್ಕ: ರೈಲು ನಿಲ್ದಾಣದಿಂದ ನಮ್ಮ ಮೆಟ್ರೋ ನೀಲಿ ಹಾಗೂ ಮೆಟ್ರೋ ನೇರಳೆ ಮಾರ್ಗಗಳನ್ನು ಸಂಪರ್ಕಿಸಲು ಪ್ರಯಾಣಿಕರಿಗೆ ನೆರವಾಗಲಿದ್ದು, ಈ

ರೈಲು ನಿಲ್ದಾಣಗಳ ಮಧ್ಯೆ ಸಂಚರಿಸಬಹುದಾಗಿದೆ. ಜನರಿಗೆ ರಸ್ತೆ ದಾಟುವ ಧಾವಂತ, ಭಯ, ಕಿರಿಕಿರಿ ಈ ತಪ್ಪಲಿದ್ದು, ಪಾದಾಚಾರಿಗಳ ಸಂಚಾರ ಈ ಫುಟ್‌ಓವರ್ ಬ್ರಿಜ್‌ನಿಂದ ಸರಳವಾಗಲಿದೆ. ಕೆಲವು ವರ್ಷಗಳವರೆಗೆ ಸರಿಯಾದ ಪಾದಚಾರಿ ಮಾರ್ಗವಿಲ್ಲದೇ ಜನರು ಪದಾಡುತ್ತಿದ್ದರು. ಪ್ರಯಾಣಿಕರು ರೈಲು ನಿಲ್ದಾಣದಿಂದ ಮೆಟ್ರೋಗೆ ಬರುವವರಿಗೆ ಹಾಗೂ ರಸ್ತೆ ದಾಟುವವರಿಗೂ ಸಮಸ್ಯೆ ಆಗಿತ್ತು. ಇದೀಗ ಆ ಸಮಸ್ಯೆಗೆ ಪರಿಹಾರ ದೊರೆತಿದ್ದು, ಕೆಲವು ಗಡುವುಗಳ ಮೀರಿದ ನಂತರ ಈ ಬ್ರಿಜ್ ಪೂರ್ಣಗೊಂಡಿದೆ. ಆದರೆ ಒಂದಷ್ಟು ಕೆಲಸಗಳು ಬಾಕಿ ಉಳಿದುಕೊಂಡಿದ್ದು, ವೃದ್ಧರು ಹಾಗೂ ಅಂಗವಿಕಲ ಪ್ರಯಾಣಿಕರಿಗೆ ಅಗತ್ಯವಾದ ಲಿಫ್ಟ್‌ಗಳ ಅಳವಡಿಕೆ ಕಾರ್ಯ ಬಾಕಿ ಉಳಿದಿದೆ. ಬ್ರಿಜ್ ಅನುಸರಿಸುವ ಬರುವವರಿಗೆ ಯಾವ ಮಾರ್ಗವಾಗಿ ಪ್ರಯಾಣಿಸಬೇಕು ಎಂಬ ಸೂಚನಾ ಫಲಕ ಸಹ ಹಾಕಿಲ್ಲ.

ರೈಲು ಪ್ರಯಾಣಿಕರಿಗೆ ಮೆಟ್ರೋ ನಿಲ್ದಾಣದಿಂದ ಬರುವವರಿಗೆ ಈ ಬ್ರಿಜ್ ಹೆಚ್ಚು ಸಹಕಾರಿಯಾಗಿದೆ. ಅದರಲ್ಲೂ ಬೆಳಗ್ಗೆ ಮತ್ತು ಸಂಜೆ ಪೀಕ್ ಅವರ್‌ನಲ್ಲಿ ರಸ್ತೆ ದಾಟುವುದು ಭಾರೀ ದೊಡ್ಡ ಸಮಸ್ಯೆಯಾಗಿತ್ತು. ಕೆ.ಆರ್.ಪುರ ರೈಲು ನಿಲ್ದಾಣ, ಮೆಟ್ರೋ ನಿಲ್ದಾಣಗಳಿಗೆ ಸಂಪರ್ಕಿಸಲು ಈ ಬ್ರಿಜ್ ಉತ್ತಮ ಯೋಜನೆಯಾಗಿದ್ದು, ಜನರು ಸುರಕ್ಷಿತವಾಗಿ ರಸ್ತೆ ದಾಟಲು ಅನುಕೂಲಕರವಾಗಿದೆ. ಜನರಿಗೆ ಸುರಕ್ಷಿತ ರಸ್ತೆ ದಾಟುವಿಕೆಯನ್ನು ಖಚಿತಪಡಿಸುತ್ತದೆ. ಆದಷ್ಟು ಬೇಗ ಲಿಫ್ಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಳಿಸಬೇಕು, ಸೂಚನಾ ಫಲಕ ಅಳವಡಿಸಬೇಕು ಎಂದು ಜನರು ಆಗ್ರಹಿಸಿದ್ದಾರೆ.

ನಿರ್ವಾಹಕರ ಹುದ್ದೆ ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು: ಬಿಎಂಟಿಸಿಯಿಂದ ಕರೆಯಲಾಗಿದ್ದ ನಿರ್ವಾಹಕರ ಹುದ್ದೆ ನೇಮಕಾತಿಗೆ ಸಂಬಂಧಿಸಿದ ಮೂಲ ದಾಖಲೆಗಳ ಪರಿಶೀಲನೆಗೆ 1:5 ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಲ್ಯಾಣ ಕರ್ನಾಟಕ (371-ಜೆ) ಮೀಸಲಾತಿಯ ಸ್ಥಳೀಯ ವೃಂದದ ನಿರ್ವಾಹಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ಜುಲೈ.14ರಂದು ನಡೆದ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇ.75ರಷ್ಟು ಮತ್ತು ಹುದ್ದೆಗೆ ನಿಗದಿಪಡಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇ.25ರಷ್ಟು ಅಂಕಗಳನ್ನು ಸೇರಿಸಿ ಬಂದ ಒಟ್ಟು ಶೇ. ಅಂಕಗಳ ಆಧಾರದ ಮೇಲೆ ಮತ್ತು ನೇರ ನೇಮಕಾತಿ ಸಂಬಂಧ ಜಾರಿಯಲ್ಲಿರುವ ಸರಕಾರದ ಮೀಸಲಾತಿ ನಿಯಮಾನುಸಾರ ಮೂಲದಾಖಲಾತಿಗಳ ಮತ್ತು ದೇಹದಾರ್ಢ್ಯತೆ ಪರಿಶೀಲನೆಗಾಗಿ 1:5ರ ಅನುಪಾತದಲ್ಲಿ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ವೆಬ್‌ಸೈಟ್‌ನಲ್ಲಿ ಪ್ರಕಟ: 1:5 ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಯಾದ ಅಭ್ಯರ್ಥಿಗಳ ವಿವರವನ್ನು ಸಂಸ್ಥೆಯ ವೆಬ್‌ಸೈಟ್ ಡಿಡಿಡಿ. ಇಢಚಿಇಶ್ರಿ.ಎಚ್ಚಿಚಿರಿಚ್ಚುಚಿ.ಜಟಡ.ಜ್ಞಿ ರಲ್ಲಿ ಪ್ರಕಟಿಸಲಾಗಿದೆ. 1:5 ರ ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಅಭ್ಯರ್ಥಿಗಳು ಅರ್ಜಿ ಸಂಖ್ಯೆ ಮತ್ತು ಹುಟ್ಟಿದ ದಿನಾಂಕ ಅಥವಾ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಲಾಗಿನ್ ಆಗಿ, ಕರೆಪತ್ರವನ್ನು ಸಂಸ್ಥೆಯ ವೆಬ್‌ಸೈಟ್ ಡಿಡಿಡಿ.ಇಢಚಿಇಶ್ರಿ.ಎಚ್ಚಿಚಿರಿಚ್ಚುಚಿ.ಜಟಡ.ಜ್ಞಿ ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳಬಹುದು. ಮೂಲ ದಾಖಲೆ ಮತ್ತು ದೇಹದಾರ್ಢ್ಯತೆ ಪರಿಶೀಲನೆಗೆ ನಿಗದಿಪಡಿಸಿದ ಸ್ಥಳ, ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಹಾಜರಾಗತಕ್ಕದ್ದು. ಈ ಸಂಬಂಧ ಯಾವುದೇ ಪತ್ರ ವ್ಯವಹಾರಗಳನ್ನು ಮಾಡಲಾಗುವುದಿಲ್ಲ. 1:5ರ ಅರ್ಹತಾ ಪಟ್ಟಿಯಲ್ಲಿ ಗುಂಪುವಾರು ಹಾಗೂ ಶೇಕಡವಾರು ಅಂಕಗಳಿಗಿಂತ ಹೆಚ್ಚಿನ ಅಂಕಗಳಿಸಿದಾಗ್ಯೂ ಮೂಲ ದಾಖಲಾತಿಗಳ ಪರಿಶೀಲನೆಗೆ ಈ ಪಟ್ಟಿಯಲ್ಲಿ ಸೇರ್ಪಡೆಗೊಳ್ಳದ ಅಭ್ಯರ್ಥಿಗಳು ಸಂಬಂಧಪಟ್ಟ ಮೂಲದಾಖಲಾತಿಗಳೊಂದಿಗೆ ಸೆ.3-2024ರೊಳಗೆ ಮೂಲ ದಾಖಲಾತಿಗಳೊಂದಿಗೆ ಖುದ್ದಾಗಿ ಹಾಜರಾಗಿ ಲಿಖಿತ ಆಕ್ಷೇಪಣೆ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಬೆಂ. ನಗರ ವಿವಿಯಲ್ಲಿ ಬಿಸಿಯು ಉತ್ಸವ

ಬೆಂಗಳೂರು: ಬೆಂಗಳೂರು ನಗರ ವಿವಿಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶನಾಲಯದ ವತಿಯಿಂದ ಅಂತರ ವಿಭಾಗ ಸಾಂಸ್ಕೃತಿಕ ಚಟುವಟಿಕೆಗಳ ಬಿಸಿಯು ಉತ್ಸವ 2.0 ಅನ್ನು ಆಯೋಜಿಸಲಾಗಿದೆ.

ಈ ಉತ್ಸವದ ಅಂಗವಾಗಿ ದ್ಯಾರ್ಥಿಗಳಿಗೆ ರಂಗೋಲಿ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಸಮೂಹ ನೃತ್ಯ, ಫ್ಯಾಷನ್ ಷೋ, ಗಾಯನ, ಸಮೂಹ ಗಾಯನ, ಕಿರು ನಾಟಕ ಹಾಗೂ ಭಾಷಣ ಸ್ಪರ್ಧೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಆ.28ರಂದು ಬುಧವಾರ ಮಧ್ಯಾಹ್ನ 2.00 ಗಂಟೆಗೆ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬಿಸಿಯು ಉತ್ಸವ 2.0 ಸಮಾರೋಪ ಸಮಾರಂಭವು ನಡೆಯಲಿದ್ದು, ಕನ್ನಡ ಚಿತ್ರರಂಗದ ತಾರೆಯರಾದ ದಿಗಂತ್ ಮಂಚಾಲೆ, ಅನಿರುಧ್ ಆಚಾರ್ಯ, ಧನ್ಯ ರಾಮ್‌ಕುಮಾರ್ ಮತ್ತು ಶರ್ಮಿಳಾ ಮಾಂಡ್ರೆ ಮುಖ್ಯ ಅತಿಥಿಗಳಾಗಿ ಭಾಗವಸಲಿದ್ದಾರೆ.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಇದೇ ಸಂದರ್ಭದಲ್ಲಿ ವಿತರಿಸಲಾಗುತ್ತದೆ. ಬಿಸಿಯು ಕುಲಸಚಿವ ಟಿ.ಜವರೇಗೌಡ, ಪ್ರಭಾರ ಕುಲಸಚಿವರು(ಮೌಲ್ಯಮಾಪನ) ಪ್ರೊ.ಕೆ.ಆರ್ ಜಲಜಾ ಹಾಗೂ ವಿತ್ತಾಧಿಕಾರಿ ಎಂ. ಜಯಲಕ್ಷ್ಮೀ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದೈಹಿಕ ಶಿಕ್ಷಕರಿಂದ ಧರಣಿ

ಬೆಂಗಳೂರು: ದೈಹಿಕ ಶಿಕ್ಷಕರ ನೇಮಕಾತಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆ.29ರಂದು ರಾಷ್ಟ್ರೀಯ ಕ್ರೀಡಾ ದಿನಾಚರಣೆಯಂದು ರಾಜ್ಯಮಟ್ಟದ ಧರಣಿಯನ್ನು ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚೌಡಪ್ಪ ಎಸ್. ಹೇಳಿದರು. ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಕಳೆದ 17 ವರ್ಷಗಳಿಂದ ವಿಳಂಬ ವಾಗಿರುವ ದೈಹಿಕ ಶಿಕ್ಷಣ ಶಿಕ್ಷಕರನ್ನು ಸಹ ಶಿಕ್ಷಕರೆಂದು ಇಲಾಖೆ ಪರಿಗಣಿಸಿದ್ದರೂ, ಇದುವರೆಗೂ ಮುಖ್ಯಶಿಕ್ಷಕರ ಮುಂಬಡ್ತಿ ಸೇರಿದಂತೆ ಸಹ ಶಿಕ್ಷಕರಿಗೆ ಸಿಗುವ ಸೌಲಭ್ಯಗಳನ್ನು ದೈಹಿಕ ಶಿಕ್ಷಣ ಶಿಕ್ಷಕರಿಗೆ ನೀಡುವ ಇಲಾಖಾ ಆದೇಶ ಅನುಷ್ಠಾನವಾಗಿಲ್ಲ. ಸಮಾನ ವೇತನ, ಸಮಾನ ವಿದ್ಯಾರ್ಹತೆ ಹಾಗೂ ಒಂದೇ ನೇಮಕಾತಿ ವಿಧಾನವಿದ್ದರೂ ಸಹ ಶಿಕ್ಷಕರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಇದರಿಂದ ಶಿಕ್ಷಕರಲ್ಲಿ ಅಸಮಾನತೆ ಉಂಟಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವೃತ್ತಿಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದ ಸಂಘದ ಮಹಾ ಪೋಷಕ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನೇತೃತ್ವದಲ್ಲಿ ಹಾಗೂ ವಿಧಾನಪರಿಷತ್ತಿನ ಶಿಕ್ಷಕರ ಹಾಗೂ ಪದವಿಧರ ಕ್ಷೇತ್ರದ ಶಾಸಕರ ಉಪಸ್ಥಿತಿಯಲ್ಲಿ ಸಾಕಷ್ಟು ಶಿಕ್ಷಣ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಗಿದೆ ಎಂದರು.



ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ನೂತನ ತಾಯಿ-ಮಕ್ಕಳ ಆಸ್ಪತ್ರೆಗೆ ಭೂಮಿಪೂಜೆ

ಜಯದೇವಕ್ಕೆ ಅಗತ್ಯ ಆರ್ಥಿಕ ನೆರವು: ಸಿಎಂ

ಬೆಂಗಳೂರು: ಜಯದೇವ ಆಸ್ಪತ್ರೆ 24 ಗಂಟೆ ಕಾರ್ಯನಿರ್ವಹಿಸಲು ಅಗತ್ಯ ಸಿಬ್ಬಂದಿ ಮತ್ತು ಹಣ ಒದಗಿಸಲಾಗುವುದು ಎಂದು ಸಿ.ಎಂ.ಸಿದ್ದರಾಮಯ್ಯ ಘೋಷಿಸಿದರು.

ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ನೂತನ ತಾಯಿ-ಮಕ್ಕಳ ಆಸ್ಪತ್ರೆ, ಬೋಧನಾ ಕಟ್ಟಡ, ಶವಾಗಾರ ಕಟ್ಟಡ, ನೂತನ ಮಾದರಿ ಅಡುಗೆ ಮನೆ, ಲಾಂಡ್ರಿ ಕಟ್ಟಡ, ವೈದ್ಯಕೀಯ ಘನ ತ್ಯಾಜ್ಯ ಘಟಕದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಕಾರ್ಯಕ್ರಮದ ವೇದಿಕೆಯಲ್ಲೇ ಜಯದೇವ ನಿರ್ದೇಶಕರನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಮುಖ್ಯಮಂತ್ರಿಗಳು, ಇನ್ನು ಮುಂದೆ ದಿನದ 24 ಗಂಟೆ ಜಯದೇವದಲ್ಲಿ ಎಲ್ಲಾ ರೀತಿಯ ಆರೋಗ್ಯ ಸೇವೆ ಒದಗಿಸಬೇಕು. ಇದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಿ ಎನ್ನುವ ಸೂಚನೆ ನೀಡಿದರು.

ನಾವೆಲ್ಲರೂ ಸರಕಾರಿ ಆಸ್ಪತ್ರೆಗೆ ಹೋಗಬೇಕು: ನಾನು ಸೇರಿ ಮಂತ್ರಿಗಳು, ರಾಜರಣಿಗಳು ಸರಕಾರಿ ಆಸ್ಪತ್ರೆಗಳಿಗೆ ಹೋಗುವುದಿಲ್ಲ, ಉಪ ಇದರಲ್ಲಿ ನಮ್ಮಗಳ ತಪ್ಪು ಕೂಡ ಇದೆ. ಆದರೆ ಖಾಸಗಿ ಆಸ್ಪತ್ರೆಗಳ ಗುಣಮಟ್ಟ ಮತ್ತು ಶುಚಿತ್ವ ಸರಕಾರಿ ಆಸ್ಪತ್ರೆಗಳಲ್ಲೂ ಇರುವಂತೆ ನೋಡಿಕೊಳ್ಳಲು ಅಗತ್ಯ ಅನುದಾನ ಕೊಡುತ್ತಲೇ ಇದ್ದೇವೆ. ಆಸ್ಪತ್ರೆಯ ಆಡಳಿತ ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ, ಸೇವೆ ಸಲ್ಲಿಸಿದರೆ ಇದು ಸಾಧ್ಯವಿದೆ ಎಂದರು.

> ಸರಕಾರಿ ಆಸ್ಪತ್ರೆ ವೈದ್ಯರು ಖಾಸಗಿ ಆಸ್ಪತ್ರೆ ವೈದ್ಯರಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ. ಸರಕಾರಿ ಆಸ್ಪತ್ರೆಗಳೂ ಖಾಸಗಿ ಆಸ್ಪತ್ರೆಗಳ ಗುಣಮಟ್ಟದಲ್ಲಿರಬೇಕು ಎನ್ನುವುದು ಸರಕಾರದ ಗುರಿ. ಜಯದೇವ ಆಸ್ಪತ್ರೆಯಲ್ಲಿರುವ ಗುಣಮಟ್ಟ ಮತ್ತು ಶುಚಿತ್ವ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲೂ ಬರಬೇಕು. ಆಗ ಮಾತ್ರ ಸರಕಾರ ಕೊಡುವ ಅನುದಾನಕ್ಕೆ ಅರ್ಥ ಬರುತ್ತದೆ.
>
> **-ಸಿದ್ದರಾಮಯ್ಯ** ಮುಖ್ಯಮಂತ್ರಿ

ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ನೂತನ ತಾಯಿ-ಮಕ್ಕಳ ಆಸ್ಪತ್ರೆ, ಬೋಧನಾ ಕಟ್ಟಡ, ಶವಾಗಾರ ಕಟ್ಟಡ, ನೂತನ ಮಾದರಿ ಅಡುಗೆ ಮನೆ, ಲಾಂಡ್ರಿ ಕಟ್ಟಡ, ವೈದ್ಯಕೀಯ ಘನ ತ್ಯಾಜ್ಯ ಘಟಕದ ಭೂಮಿ ಪೂಜೆ ಕಾರ್ಯಕ್ರಮವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

ಬಜೆಟ್‌ನಲ್ಲಿ ಹೇಳಿದ್ದನ್ನು ಜಾರಿ ಮಾಡಿ: ಸಿಎಂ ಸೂಚನೆ

ಬಜೆಟ್‌ನಲ್ಲಿ ಘೋಷಿಸಿರುವ ಎಲ್ಲಾ ಕಾರ್ಯಕ್ರಮಗಳನ್ನು ಜವಾಬ್ದಾರಿಯಿಂದ ಜಾರಿ ಮಾಡಿ ಎಂದು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ ಅವರಿಗೆ ವೇದಿಕೆಯಿಂದಲೇ ಸೂಚನೆ ನೀಡಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮುಂದಿಟ್ಟ ಬೇಡಿಕೆಗಳನ್ನು ಅನುಮೋದಿಸಿ ಹಣ ಬಿಡುಗಡೆ ಮಾಡಿದ್ದೇನೆ. ನೂತನ ಆಸ್ಪತ್ರೆ ಕಟ್ಟಡವನ್ನೂ ನಾನೇ ಉದ್ಘಾಟಿಸುತ್ತೇನೆ. ಬೇಗ ಕೆಲಸ ಮುಗಿಸಿ ಎಂದು ಸಚಿವರಿಗೆ ಸೂಚನೆ ನೀಡಿದರು.

ಅಪಘಾತ ವಲಯಗಳ ಹತ್ತಿರದಲ್ಲೇ ಟ್ರಾಮಾ ಸೆಂಟರ್‌ಗಳನ್ನು ತೆರೆಯಲು ಸರಕಾರ ಮುಂದಾಗಿದೆ. ಗಾಯಾಳುಗಳ ಜೀವ ಉಳಿಸಲು ಗೋಲ್ಡನ್ ಹವರ್ ಬಹಳ ಮುಖ್ಯ ಎನ್ನುವುದನ್ನು ಪರಿಗಣಿಸಿ ಸರಕಾರ ಈ ಕಾರ್ಯಕ್ಕೆ ಮುಂದಾಗಿದೆ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ದಿನೇಶ್ ಗುಂಡೂರಾವ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ಸಾಧುಕೋಕಿಲಾ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ಎಂ.ರೇವಣ್ಣ ಸೇರಿ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಶಾಲೆಯ ಗೋಡೆ ಕುಸಿತ: ನಾಲ್ವರಿಗೆ ಗಾಯ

ಕಡಬ: ಸರಕಾರಿ ಶಾಲಾ ಕೊಠಡಿಯ ಗೋಡೆ ಹಾಗೂ ಚಾವಣಿ ಕುಸಿದು ಬಿದ್ದ ಪರಿಣಾಮ ನಾಲ್ವರು ವಿದ್ಯಾರ್ಥಿಗಳು ಗಾಯಗೊಂಡ ಘಟನೆ ಮಂಗಳವಾರ ಮಧ್ಯಾಹ್ನ ಕುಂತೂರಿನಲ್ಲಿ ನಡೆದಿದೆ.

ಕುಂತೂರು ಸರಕಾರಿ ಶಾಲೆಯ ಕೊಠಡಿಯ ಚಾವಣಿ ಹಾಗೂ ಗೋಡೆ ಏಕಾಏಕಿ ಕುಸಿದಿದೆ. ಅವಘಡದ ವೇಳೆ ಹೆಚ್ಚಿನ ವಿದ್ಯಾರ್ಥಿಗಳು ತರಗತಿ ಕೊಠಡಿಯಿಂದ ಹೊರಗಡೆ ಇದ್ದುದರಿಂದ ಪ್ರಾಣಾಪಾಯ ಸಂಭವಿಸಿಲ್ಲ. ನಾಲ್ವರು ವಿದ್ಯಾರ್ಥಿಗಳು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಕ್ರಿಮಿನಾಶಕ ಸೇವಿಸಿ ಗ್ರಾಪಂ ಸದಸ್ಯ ಆತ್ಮಹತ್ಯೆ

ಹುಣಸೂರು: ಲಕ್ಷಾಂತರ ರೂ ಸಾಲ ಮಾಡಿಕೊಂಡಿದ್ದ ರೈತ, ಗ್ರಾಮ ಪಂಚಾಯತ್ ಸದಸ್ಯರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಹರೀನಹಳ್ಳಿಯಲ್ಲಿ ನಡೆದಿದೆ. ತಾಲೂಕಿನ ಹನಗೋಡು ಹೋಬಳಿಯ ಹರೀನಹಳ್ಳಿ ಗ್ರಾಮದ ಕುಮಾರಸ್ವಾಮಿ (55) ಆತ್ಮಹತ್ಯೆ ಮಾಡಿಕೊಂಡವರು. ಇವರಿಗೆ ಪತ್ನಿ, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕಾಂಗ್ರೆಸ್ ಮುಖಂಡರಾಗಿದ್ದ ಇವರು ಹುಣಸೂರು ತಾಲೂಕು ಕರ್ಣಕುಪ್ಪೆ ಗ್ರಾಪಂ ಮಾಜಿ ಉಪಾಧ್ಯಕ್ಷ ಹಾಗೂ ಹಾಲಿ ಸದಸ್ಯ ಪ್ರಸ್ತುತ ತಾಲೂಕು ಗ್ರಾ.ಪಂ. ಸದಸ್ಯರ ಒಕ್ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಕೃಷಿ ಚಟುವಟಿಕೆಗಾಗಿ ಇವರು ವಿವಿಧ ಬ್ಯಾಂಕ್‌ಗಳಲ್ಲಿ ಸುಮಾರು 15 ಲಕ್ಷಕ್ಕೂ ಹೆಚ್ಚು ಸಾಲ ಮಾಡಿಕೊಂಡಿದ್ದರು. ಸಾಲದ ಒತ್ತಡ ತಾಳಲಾರದೆ ಕ್ರಿಮಿನಾಶಕ ಸೇವಿಸಿ ಅಸ್ವಸ್ಥಗೊಂಡಿದ್ದ ಇವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆಂದು ಪತ್ನಿ ಸುಮಿತ್ರಾ, ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಪಾದಯಾತ್ರೆಯಿಂದ ಪಕ್ಷಕ್ಕೆ ಬಲ ತುಂಬಿದೆ; ವಿಜಯೇಂದ್ರ

ಗ್ಯಾರಂಟಿ ಯೋಜನೆಗಳಿಂದ ಸರಕಾರದ ಖಜಾನೆ ಖಾಲಿಯಾಗಿದೆ | ವಾಲ್ಮೀಕಿ ಪ್ರಕರಣದಲ್ಲಿ ಎಸ್‌ಐಟಿ ಮೂಲಕ ಕ್ಲೀನ್‌ಚಿಟ್ ಪಡೆಯುವ ಅಗತ್ಯವೇನಿತ್ತು?

ಬೆಂಗಳೂರು: ಬೆಂಗಳೂರಿನಿಂದ ಮೈಸೂರಿಗೆ ಬಿಜೆಪಿ-ಜೆಡಿಎಸ್ ನಡೆಸಿರುವ ಪಾದಯಾತ್ರೆಯಿಂದ ಪಕ್ಷಕ್ಕೆ ಬಲ ತುಂಬಿದೆ. ಸಾವಿರಾರು ಜನರು ಭಾಗವಹಿಸುವ ಮೂಲಕ ಯಶಸ್ವಿಗೊಳಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಭಿಪ್ರಾಯಪಟ್ಟರು.

- ದೆಹಲಿಯಲ್ಲಿ ಪಕ್ಷದ ವರಿಷ್ಠರೊಂದಿಗೆ ಸಭೆ ನಡೆಸಿದ ವಿಜಯೇಂದ್ರ
- ಪಾದಯಾತ್ರೆಯ ಯಶಸ್ಸಿನ ಬಗ್ಗೆ ವರಿಷ್ಠರಿಗೆ ಮಾಹಿತಿ ನೀಡಿದ ಬಿವೈವಿ
- ಕಾಂಗ್ರೆಸ್ ಸರಕಾರದ ವಿರುದ್ಧ ಕಿಡಿ

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ-ಜೆಡಿಎಸ್ ಪಾದಯಾತ್ರೆಯಲ್ಲಿ ಸಾವಿರಾರು ಜನರು ಉತ್ಸಾಹದಿಂದ ಭಾಗವಹಿಸಿದ್ದರು. ಕಾಂಗ್ರೆಸ್ಸಿಗರು ಗಾಬರಿಯಿಂದ ನಮ್ಮ ಪಾದಯಾತ್ರೆ ತಲುಪುವ ಮುನ್ನ ಜನಾಂದೋಲನ ಮಾಡಿದ್ದರು. ಮತ್ತೊಂದೆಡೆ ಸ್ವತಃ ಸಿದ್ದರಾಮಯ್ಯನವರು ಮೈಸೂರಿನಲ್ಲಿದ್ದು, ಜನಾಂದೋಲನಕ್ಕೆ ಸಿದ್ಧತೆ ಮಾಡಿದ್ದರು ಎಂದು ವ್ಯಂಗ್ಯವಾಡಿದರು.

ಪಾದಯಾತ್ರೆಯ ಯಶಸ್ಸಿನ ಬಗ್ಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾಗಿ ಮಾಹಿತಿ ನೀಡಿದ್ದೇನೆ. ಪಾದಯಾತ್ರೆ ಸಾಗಿದ ರೀತಿ, ಸಂಘಟನೆಗೆ ಅದರಿಂದ ಆಗಿರುವ ಸಹಾಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಅಧ್ಯಕ್ಷರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಕಳೆದ ಬಾರಿ 1.05 ಕೋಟಿ ಸದಸ್ಯತ್ವವನ್ನು ನಾವು ನೋಂದಣಿ ಮಾಡಿಸಿದ್ದೆವು. ಈ ಬಾರಿ ಇನ್ನೂ ಹೆಚ್ಚು ಸದಸ್ಯತ್ವ ದಾಖಲಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದಾಗಿ ಹೇಳಿದ್ದೇನೆ ಎಂದು ತಿಳಿಸಿದರು.

ದೂರು ಕೊಡಲು ನನ್ನನ್ನು ರಾಜ್ಯಾಧ್ಯಕ್ಷನನ್ನಾಗಿ ಮಾಡಿಲ್ಲ: ಜೆ.ಪಿ. ನಡ್ಡಾ ಅವರಿಗೆ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ತಮ್ಮ ವಿರುದ್ಧ ಆರೋಪಿಸುತ್ತಿರುವವರ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಲಾಗಿದೆಯೇ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಪಕ್ಷದ ವರಿಷ್ಠರು ನನ್ನನ್ನು ರಾಜ್ಯಾಧ್ಯಕ್ಷನನ್ನಾಗಿ ಮಾಡಿದ್ದಾರೆ. ಯತ್ನಾಳ್ ಅಥವಾ ಇನ್ಯಾರದೋ ವಿರುದ್ಧ ದೆಹಲಿಯಲ್ಲಿ ದೂರು ಕೊಡಲು ನನ್ನನ್ನು ರಾಜ್ಯಾಧ್ಯಕ್ಷನನ್ನಾಗಿ ಮಾಡಿಲ್ಲ. ಸಂಘಟನೆ ಬಲಪಡಿಸಲು, ಬಿಜೆಪಿ ಸ್ಪಷ್ಟ ಬಹುಮತ ಪಡೆಯಲು ರಾಜ್ಯಾಧ್ಯಕ್ಷನನ್ನಾಗಿ ಮಾಡಿದ್ದಾರೆ. ಯತ್ನಾಳ್ ಅವರ ಕುರಿತು ಇಲ್ಲಿ ನಾನು ಪ್ರಸ್ತಾಪಿಸಿಲ್ಲ. ಅದರ ಅವಶ್ಯಕತೆಯೂ ನನಗಿಲ್ಲ. ಪಕ್ಷದ ಬೆಳವಣಿಗೆಗೆ ಪೂರಕವಿದ್ದರೆ ರಾಷ್ಟ್ರೀಯ ನಾಯಕರ ಒಪ್ಪಿಗೆಯಿದ್ದರೆ ಇನ್ನೊಂದು ಪಾದಯಾತ್ರೆ ಮಾಡಬಹುದು. ಅದರ ಬಗ್ಗೆ ಈಗ ನಾನು ಮಾತನಾಡಲ್ಲ. ಆದರೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷಕ್ಕೆ ಬಲ ತುಂಬಲಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಅಹಿಂದ ಸಮುದಾಯಕ್ಕೆ ಅನ್ಯಾಯ: ವಾಲ್ಮೀಕಿ ನಿಗಮದ ಹಗರಣ ಸಂಬಂಧ ಎಸ್‌ಐಟಿ ರಚಿಸಿ ಕ್ಲೀನ್ ಚಿಟ್ ಕೊಡಿಸುವ ಅಗತ್ಯ ಏನಿತ್ತು? ಸರಕಾರದ ದಲಿತರ ಕಾಳಜಿ ಇದೇನಾ? ಈ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ, ಇ.ಡಿ. ತನಿಖೆ ನಡೆಯುತ್ತಿದೆ. ಇದೊಂದು ಗಂಭೀರ ಪ್ರಕರಣ. ಲೆಕ್ಕಾಧಿಕಾರಿ ಚಂದ್ರಶೇಖರನ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಮ್ಮ ಶಾಸಕರನ್ನು ದೂರವಿಟ್ಟು ಯಾರಿಗೆ ದ್ರೋಹ ಮಾಡುತ್ತಿದ್ದೀರಿ? ಅಹಿಂದ ಸಮುದಾಯಗಳಿಗೆ ಸಿದ್ದರಾಮಯ್ಯನವರು ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭೇಟಿಯಾಗಿ ಪಾದಯಾತ್ರೆಯ ಯಶಸ್ಸಿನ ಬಗ್ಗೆ ಮಾಹಿತಿ ನೀಡಿದರು.

ಸರಕಾರ ಕಾಲಹರಣ ಮಾಡುತ್ತಿದೆ. ವಾಲ್ಮೀಕಿ ನಿಗಮದಲ್ಲಿ 87 ಕೋಟಿ ಹಗರಣ ನಡೆದ ಕುರಿತು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಅದೇ ಮಾದರಿಯಲ್ಲಿ ಮುಡಾದ ತಪ್ಪನ್ನೂ ಒಪ್ಪಿಕೊಂಡು, ನ್ಯಾಯಾಲಯದ ಆದೇಶಕ್ಕೆ ಕಾಯದೆ ಕೂಡಲೇ ರಾಜೀನಾಮೆ ಕೊಡಬೇಕು.

- ಬಿ.ವೈ. ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಅಭಿವೃದ್ಧಿ ಕೆಲಸ ಶುರುವಾಗಿಲ್ಲ

ಸರಕಾರದ ಗ್ಯಾರಂಟಿ ಪರಿಣಾಮವಾಗಿ ಕೆಎಸ್‌ಆರ್‌ಟಿಸಿಗೆ 4,500 ಕೋಟಿ ಕೊಡಬೇಕಿದೆ. ಇನ್ನೂ ಮೂರ್ನಾಲ್ಕು ತಿಂಗಳು ಹೀಗೇ ಮುಂದುವರೆದರೆ ಕೆಎಸ್‌ಆರ್‌ಟಿಸಿ ಬಾಗಿಲು ಮುಚ್ಚಲಿದೆ. ಸಂಬಳ ಕೊಡಲೂ ದುಡ್ಡಿಲ್ಲ. ಮತ್ತೊಂದು ಕಡೆ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸುವುದಾಗಿ ತಿಳಿಸಿದ್ದರು. ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಕುಗ್ಗಿ ಹೋಗಿದ್ದು, 14 ಬಜೆಟ್ ಮಂಡಿಸಿದ ಅನುಭವಿ ಮುಖ್ಯಮಂತ್ರಿಗಳಿದ್ದರೂ ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸಿಲ್ಲ. ಮೂರು ತಿಂಗಳಿನಿಂದ ಗೌರವಧನವನ್ನು ಪಾವತಿಸಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಜಲಾಶಯಗಳ ಮಟ್ಟ

ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
ಕೆಆರ್‌ಎಸ್	124.80	123.74	4,695
ಕಬಿನಿ	2,282	2,282.33	2,684
ಹಾರಂಗಿ	2,869	2,858.43	1,918
ಹೇಮಾವತಿ	2,922	2,921.52	9,485
ತುಂಗಭದ್ರಾ	1,633	1,628.29	20,956
ಆಲಮಟ್ಟಿ	1,704.81	1,704.21	98,781
ನಾರಾಯಣಪುರ	1,615	1,612.35	1,21,837
ಲಿಂಗನಮಕ್ಕಿ	1,819.12	1,817.55	36,564



ಜೋಗ ವೀಕ್ಷಿಸಲು 2 ಗಂಟೆ ಸಮಯ ನಿಗದಿ

ಶುಲ್ಕ ಹೆಚ್ಚಳಕ್ಕೆ ಪ್ರವಾಸಿಗರ ಆಕ್ರೋಶ

ಶಿವಮೊಗ್ಗ: ಜೋಗ ಜಲಪಾತ ನೋಡಲು ಬರುವ ಪ್ರವಾಸಿಗರಿಗೆ ಜೋಗ ನಿರ್ವಹಣಾ ಪ್ರಾಧಿಕಾರ ಶುಲ್ಕ ಹೆಚ್ಚಳ ಮಾಡಿದ್ದಕ್ಕೆ ಪ್ರವಾಸಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಸ್‌ಗೆ 150 ರು. ಇದ್ದ ಶುಲ್ಕ 200 ರು., ಕಾರಿಗೆ 50 ರು. ಇದ್ದ ಶುಲ್ಕ 80 ರು. ಮತ್ತು ಒಬ್ಬ ಪ್ರವಾಸಿಗನಿಗೆ 10 ರು. ಇದ್ದ ಶುಲ್ಕ 20ರು.ಗೆ ಏರಿಕೆ

ಜೋಗ ಜಲಪಾತದಲ್ಲಿ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸುವ ಮೊದಲೇ ಶುಲ್ಕ ಹೆಚ್ಚಿಸಿ, ಜೋಗ ನಿರ್ವಹಣಾ ಪ್ರಾಧಿಕಾರವು ಪ್ರವಾಸಿಗರಿಂದ ಹಣ ವಸೂಲಿಗೆ ಇಳಿದಿದೆ. ಹಾಗೆಯೇ ಜೋಗದ ಸೌಂದರ್ಯ ನೋಡಲು 2 ಗಂಟೆಯ ಅವಧಿ ನಿಗದಿ ಮಾಡಿದೆ. ಇದರಿಂದಾಗಿ 2 ಗಂಟೆಯೊಳಗೆ ಜೋಗದ ಪರಿಸರ ನೋಡಲು ಸಾಧ್ಯವೇ? ಎಂದು ನಿರ್ವಹಣಾ ಪ್ರಾಧಿಕಾರದ ನಡೆಗೆ ಪ್ರವಾಸಿಗರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಬಸ್‌ಗೆ 150 ರು. ಇದ್ದ ಶುಲ್ಕ 200 ರು., ಕಾರಿಗೆ 50 ರು. ಇದ್ದ ಶುಲ್ಕ 80 ರು. ಮತ್ತು ಒಬ್ಬ ಪ್ರವಾಸಿಗನಿಗೆ 10 ರು. ಇದ್ದ ಶುಲ್ಕ 20ರು.ಗೆ ಏರಿಕೆ ಮಾಡಲಾಗಿದೆ. ಪ್ರಕೃತಿದತ್ತವಾಗಿರುವ ಜಲಪಾತ ವೀಕ್ಷಣೆಗೆ ಶುಲ್ಕ ದುಬಾರಿ ಮಾಡಲಾಗುತ್ತಿದೆ ಏಕೆ? ಪ್ರವಾಸಿಗರಿಂದ ಈ ರೀತಿ ಸುಲಿಗೆ ಏಕೆ? ಜಲಪಾತ ಪೂರ್ಣ ಅಭಿವೃದ್ಧಿಗೊಳಿಸದೇ ಶುಲ್ಕ ಹೆಚ್ಚಳ ಬೇಡ ಎಂದು ಸ್ಥಳೀಯರಿಂದಲೇ ಆಕ್ರೋಶ ವ್ಯಕ್ತವಾಗಿದೆ.

ದರ್ಶನ್ ಬಳ್ಳಾರಿ ಜೈಲಿಗೆ ಶಿಫ್ಟ್

← ಮೊದಲಪುಟದಿಂದ

ಪ್ರತ್ಯೇಕ ಮೂರು ತಂಡ ರಚನೆ: ದರ್ಶನ್‌ಗೆ ಜೈಲಿನಲ್ಲಿ ವಿಶೇಷ ಆತಿಥ್ಯ ನೀಡಿದ ಪ್ರಕರಣದ ತನಿಖೆಗೆ ಮೂರು ವಿಶೇಷ ತಂಡಗಳನ್ನು ರಚಿಸಲಾಗಿದೆ. ಕಾರಾಗೃಹದ ನಿಯಮಗಳನ್ನು ಉಲ್ಲಂಘಿಸಿರುವ ಆರೋಪದಡಿ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ 3 ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಆ ಪೈಕಿ 2 ಪ್ರಕರಣಗಳಲ್ಲಿ ದರ್ಶನ್ ಅವರೇ ಪ್ರಮುಖ ಆರೋಪಿಯಾಗಿದ್ದಾರೆ. ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಮೂರೂ ಪ್ರಕರಣಗಳ ತನಿಖೆಗಾಗಿ ಪ್ರತ್ಯೇಕ ತಂಡಗಳನ್ನು ರಚಿಸಿದ್ದಾರೆ.

ಮದ್ಯದ ಬೆಲೆ ಶೇ.15ರಿಂದ 20 ಕಡಿತ

ದುಬಾರಿ ಬೆಲೆಯ ಪ್ರೀಮಿಯಂ ಬ್ರ್ಯಾಂಡ್ ಮದ್ಯದ ದರ ಇಳಿಕೆ

ಬೆಂಗಳೂರು: ಪ್ರೀಮಿಯಂ ಮದ್ಯದ ಬೆಲೆ ಮಂಗಳವಾರದಿಂದ ಅಗ್ಗವಾಗಲಿದೆ. ದುಬಾರಿ ಬ್ರ್ಯಾಂಡ್‌ಗಳ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಇಳಿಕೆ ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಬಜೆಟ್‌ನಲ್ಲಿ ಘೋಷಿಸಿದಂತೆ ಜುಲೈ 1ರಿಂದ ರಾಜ್ಯದಲ್ಲಿ ಮದ್ಯದ ದರ ಇಳಿಕೆಯಾಗಬೇಕಿತ್ತು. ಜುಲೈನಿಂದ ಮದ್ಯದ ದರದಲ್ಲಿ ಪರಿಷ್ಕರಣೆ ಮಾಡುವ ಮೂಲಕ ಒಂದೆಡೆ ಮದ್ಯಪ್ರಿಯರಿಗೆ ಖುಷಿ ಪಡಿಸುವುದಷ್ಟೇ ಅಲ್ಲ ತನ್ನ ಅಬಕಾರಿ ಆದಾಯವನ್ನೂ ಹೆಚ್ಚಿಸುವ ಲೆಕ್ಕಾಚಾರ ರಾಜ್ಯ ಸರಕಾರದ್ದಾಗಿತ್ತು. ಈ ಸಂಬಂಧ ಜುಲೈ 1ಕ್ಕೆ ಪರಿಷ್ಕೃತ ದರಗಳ ಅಧಿಸೂಚನೆ ಹೊರಡಿಸಿತ್ತು. ಆದರೆ, ಸಿಎಂ ಸೂಚನೆ ಮೇರೆಗೆ ದರ ಪರಿಷ್ಕರಣೆ ಆದೇಶ ಜಾರಿಯನ್ನು ತಡೆಹಿಡಿಯಲಾಗಿತ್ತು. ಇದೀಗ ಮತ್ತೆ ಕೆಲ ಪರಿಷ್ಕರಣೆ ಮಾಡಿ ದುಬಾರಿ ಬ್ರಾಂಡ್‌ಗಳ ಮದ್ಯದ ಮೇಲಿನ ದರವನ್ನು ಶೇ.15 ರಿಂದ 20 ವರೆಗೆ ಕಡಿತಗೊಳಿಸಲಾಗಿದೆ.

ಪರಿಷ್ಕೃತ ದರದಂತೆ ಮದ್ಯದ ಸ್ಲ್ಯಾಬ್ ವಾರು ದರವನ್ನು ಪರಿಷ್ಕರಿಸಿರುವ ಸರಕಾರ ಪ್ರಸ್ತುತ ಇದ್ದ 18 ಸ್ಲ್ಯಾಬ್‌ಗಳಲ್ಲಿ ವಿಧಿಸಲಾಗುತ್ತಿದ್ದ ಅಬಕಾರಿ ಸುಂಕವನ್ನು 16 ಸ್ಲ್ಯಾಬ್‌ಗಳಿಗೆ ಇಳಿಕೆ ಮಾಡಿದೆ. ಅದಕ್ಕನುಗುಣವಾಗಿ ಅಬಕಾರಿ ಸುಂಕವನ್ನು ಪರಿಷ್ಕರಿಸಿದೆ. ಇಂದಿನಿಂದ ಪರಿಷ್ಕೃತ ದರ ಜಾರಿಗೆ ಬರಲಿದೆ.

ಪರಿಷ್ಕೃತ ದರ ಹೇಗಿರಲಿದೆ?: ಅಬಕಾರಿ ಇಲಾಖೆ ಪ್ರತಿ ಬಾಕ್ಸ್ (8.64/9/12 ಬಲ್ಕ್ ಲೀಟರ್ ಮದ್ಯದ ಬಾಕ್ಸ್)ನ ಘೋಷಿತ ಉತ್ಪಾದನಾ ಬೆಲೆಯ ಆಧಾರದಲ್ಲಿ ಸ್ಲ್ಯಾಬ್ ವೈಸ್ ಅಬಕಾರಿ ಸುಂಕ ವಿಧಿಸುತ್ತದೆ. ಪ್ರಸ್ತುತ ಅಬಕಾರಿ ಸುಂಕವನ್ನು 18 ಸ್ಲ್ಯಾಬ್‌ಗಳಲ್ಲಿ ವಿಧಿಸಲಾಗುತ್ತಿತ್ತು. ಇದೀಗ ಪರಿಷ್ಕೃತ ಅಬಕಾರಿ ಸುಂಕದಲ್ಲಿ ಪ್ರಸ್ತುತ ಇರುವ 18 ಸ್ಲ್ಯಾಬ್‌ಗಳನ್ನು 16ಕ್ಕೆ ಕಡಿತಗೊಳಿಸಲಾಗಿದೆ. ಹಳೆಯ ಸ್ಲ್ಯಾಬ್‌ಗೆ ಹೋಲಿಸಿದರೆ 5ನೇ ಸ್ಲ್ಯಾಬ್‌ನಿಂದ 16 ಸ್ಲ್ಯಾಬ್ ವರೆಗಿನ ಮದ್ಯದ ದರದಲ್ಲಿ ಇಳಿಕೆ ಮಾಡಲಾಗಿದೆ.

ಪರಿಷ್ಕೃತ 16 ಸ್ಲ್ಯಾಬ್ ವೈಸ್ ಘೋಷಿತ ಉತ್ಪಾದನಾ ಬೆಲೆಯ ಪ್ರಕಾರ 0-450 ಘೋಷಿತ ಉತ್ಪಾದನಾ ದರ ಸ್ಲ್ಯಾಬ್‌ಗೆ ಹೆಚ್ಚುವರಿ ಅಬಕಾರಿ ಸುಂಕ 215 ರು. ಇರಲಿದೆ. 451-500 ದರ ಸ್ಲ್ಯಾಬ್‌ಗೆ ಸುಂಕ 294 ರು. ಪರಿಷ್ಕರಣೆ ಆಗಲಿದೆ. ಇನ್ನು 501-550 ದರ ಸ್ಲ್ಯಾಬ್‌ಗೆ ಹೆಚ್ಚುವರಿ ಸುಂಕ 386 ರು., 551-650 ಘೋಷಿತ ಉತ್ಪಾದನಾ ದರ ಸ್ಲ್ಯಾಬ್‌ಗೆ ಸುಂಕ 523 ರು., 651-750 ವರೆಗಿನ ಘೋಷಿತ ಉತ್ಪಾದನಾ ದರ ಸ್ಲ್ಯಾಬ್‌ಗೆ ಹೆಚ್ಚುವರಿ ಸುಂಕ 620 ರು., 751-900 ದರ ಸ್ಲ್ಯಾಬ್‌ಗೆ ಸುಂಕ 770 ರು., 901-1050 ದರ ಸ್ಲ್ಯಾಬ್‌ಗೆ ಸುಂಕ 870 ರು., 1051-1300 ದರ ಸ್ಲ್ಯಾಬ್‌ಗೆ ಸುಂಕ 970 ರು., 1301-1800 ದರ ಸ್ಲ್ಯಾಬ್‌ಗೆ ಸುಂಕ 1200 ರು., 1801-2500 ದರ ಸ್ಲ್ಯಾಬ್‌ಗೆ ಸುಂಕ 1400 ರು., 2501-5000 ದರ ಸ್ಲ್ಯಾಬ್‌ಗೆ ಸುಂಕ 1600 ರು., 5001-8000 ದರ ಸ್ಲ್ಯಾಬ್‌ಗೆ ಸುಂಕ 2000 ರು., 8001-12,500 ದರ ಸ್ಲ್ಯಾಬ್‌ಗೆ ಸುಂಕ 2400 ರು., 12501-15000 ದರ ಸ್ಲ್ಯಾಬ್‌ಗೆ ಸುಂಕ 2600 ರು., 15001-20000 ದರ ಸ್ಲ್ಯಾಬ್‌ಗೆ ಸುಂಕ 2800 ರು. ಮತ್ತು 20000 ಮೇಲ್ಪಟ್ಟ ದರ ಸ್ಲ್ಯಾಬ್‌ಗೆ ಹೆಚ್ಚುವರಿ ಅಬಕಾರಿ ಸುಂಕ 3000 ರು. ವಿಧಿಸಲಾಗುತ್ತದೆ.

ಸರಕಾರ ಅಸ್ಥಿರಗೊಳಿಸುವ ಮಾಡುವ ಪ್ರಯತ್ನ ಇಲ್ಲ

ಸ್ವಯಂಕೃತ ತಪ್ಪುಗಳಿಂದ ಸರಕಾರ ತಾನಾಗಿಯೇ ಪತನ: ಎಂ.ಪಿ. ರೇಣುಕಾಚಾರ್ಯ

ದಾವಣಗೆರೆ: ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಅಮಿತ್ ಶಾ ಯಾರೂ ಸಹ ರಾಜ್ಯ ಕಾಂಗ್ರೆಸ್ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಮಾಡುತ್ತಿಲ್ಲ. ಸ್ವಯಂಕೃತ ತಪ್ಪುಗಳಿಂದ ಸರಕಾರ ತಾನಾಗಿಯೇ ಪತನವಾಗಲಿದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಭವಿಷ್ಯ ನುಡಿದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರ ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ ನಡೆಸುವ ಮೂಲಕ ಮಹರ್ಷಿ ವಾಲ್ಮೀಕಿಗೆ ಅವಮಾನ ಮಾಡಿದೆ. ಮುಡಾ, ವಾಲ್ಮೀಕಿ ಹಗರಣದಿಂದ ರಾಜ್ಯದ ಜನರು ಸರಕಾರದ ವಿರುದ್ಧ ಆಕ್ರೋಶಗೊಂಡಿದ್ದಾರೆ. ಹಾಗಾಗಿಯೇ ಕಾಂಗ್ರೆಸ್ ನ ರಾಷ್ಟ್ರೀಯ ನಾಯಕರು ವಿಷಯಾಂತರ ಮಾಡಲು ಶಾಸಕ ರವಿ ಗಣಿಗ ಇತರರಿಗೆ ಸುಪಾರಿ ನೀಡಿದ್ದಾರೆ ಎಂದು ದೂರಿದರು.

ಬಿಜೆಪಿ ಸರಕಾರವನ್ನು ಅಸ್ಥಿರಗೊಳಿಸಲು ಶಾಸಕರಿಗೆ 100 ಕೋಟಿ ಆಮಿಷ ನೀಡಿದೆ ಎಂದು ಹೇಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ರವಿ ಗಣಿಗ, ಯಾವ ಸಂದರ್ಭ, ಯಾರು ಆಮಿಷವೊಡ್ಡಿದ್ದರು ಎಂಬುದು ಸೇರಿದಂತೆ ಆಡಿಯೊ ಮತಿತ್ತರ ದಾಖಲೆ ಬಿಡುಗಡೆ ಮಾಡಲಿ ಎಂದು ರೇಣುಕಾಚಾರ್ಯ ಸವಾಲು ಹಾಕಿದರು.

..31ಕ್ಕೆ ರಾಜಭವನ ಚಲೋ

← ಮೊದಲಪುಟದಿಂದ

ಎಚ್‌ಡಿಕೆ ಪ್ರಾಮಾಣಿಕ ರಾಜಕಾರಣಿ- ಡಿಕೆಶಿ: ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಘನತೆವೆತ್ತ ರಾಜ್ಯಪಾಲರು ಕೇಂದ್ರ ಸಚಿವ ಕುಮಾರಸ್ವಾಮಿ, ಮಾಜಿ ಸಚಿವ ಮುರುಗೇಶ್ ನಿರಾಣಿ, ಜನಾರ್ದನ ರೆಡ್ಡಿ ಹಾಗೂ ಶಶಿಕಲಾ ಜೊಲ್ಲೆ ಸೇರಿದಂತೆ ತಮ್ಮ ಮುಂದೆ ವಿಚಾರಣೆಗೆ ಅನುಮತಿ ಕೋರಿ ಬಾಕಿಯಿರುವ ಪ್ರಕರಣಗಳಲ್ಲೂ ಅನುಮತಿ ನೀಡಬೇಕು ಎಂದು ಮನವಿ ಮಾಡಲು ಕಾಂಗ್ರೆಸ್ ಪಕ್ಷದ ವತಿಯಿಂದ ಆಗಸ್ಟ್ 31ರಂದು ರಾಜಭವನ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

'ಪ್ರಾಮಾಣಿಕ' ಕುಮಾರಸ್ವಾಮಿ ಅವರ ವಿರುದ್ಧ ಅಕ್ರಮವಾಗಿ ಗಣಿಗಾರಿಕೆಗೆ ಮಂಜೂರು ಮಾಡಿದ ಪ್ರಕರಣವೂ ರಾಜ್ಯಪಾಲರ ಮುಂದಿದೆ. ಲೋಕಾಯುಕ್ತ ಸಂಸ್ಥೆಯು ಸುದೀರ್ಘ 10 ವರ್ಷಗಳ ತನಿಖೆ ನಡೆಸಿ ಕುಮಾರಸ್ವಾಮಿ ಅವರ ವಿಚಾರಣೆಗೆ ಅನುಮತಿ ಕೋರಿದ್ದಾರೆ. ಆದರೂ ವಿಚಾರಣೆಗೆ ಅನುಮತಿ ನೀಡಿಲ್ಲ. ಕುಮಾರಸ್ವಾಮಿ ಅವರು ಎಂದಿಗೂ ನಕಲಿ ಕೆಲಸ ಮಾಡುವುದಿಲ್ಲ. ಕೇವಲ ಅಸಲಿ ಕೆಲಸ ಮಾಡುವವರು ಎಂದು ವ್ಯಂಗ್ಯವಾಡಿದರು.

ಪ್ರಾಥಮಿಕ ತನಿಖೆ ಇಲ್ಲದೆ ಅನುಮತಿ: ರಾಜ್ಯಪಾಲರು ಬೇರೆ ನಾಯಕರ ವಿರುದ್ಧ ಪ್ರಾಥಮಿಕ ತನಿಖೆ ನಡೆದು ವಿಚಾರಣೆಗೆ ಅನುಮತಿ ಕೇಳಿದ್ದರೂ ನೀಡಿಲ್ಲ. ಆದರೆ ಯಾವುದೇ ಪ್ರಾಥಮಿಕ ತನಿಖೆ ನಡೆಯದಿದ್ದರೂ ರಾಜ್ಯಪಾಲರು ಮುಖ್ಯಮಂತ್ರಿಗಳ ವಿರುದ್ಧ ವಿಚಾರಣೆಗೆ ತರಾತುರಿಯಲ್ಲಿ ಅನುಮತಿ ನೀಡಿದ್ದಾರೆ. ಯಾವುದೇ ಪ್ರಾಥಮಿಕ ತನಿಖೆ ಇಲ್ಲದೇ, ಕೆಲವು ದೂರುಗಳನ್ನು ಆಧರಿಸಿ ಸಿಎಂ ವಿರುದ್ಧ ವಿಚಾರಣೆಗೆ ಅನುಮತಿ ನೀಡಿದ್ದಾರೆ. ಈ ವಿಚಾರ ನ್ಯಾಯಾಲಯದಲ್ಲಿದ್ದು ಈ ಬಗ್ಗೆ ಹೆಚ್ಚಿನ ವಿಚಾರ ಪ್ರಸ್ತಾಪ ಮಾಡುವುದಿಲ್ಲ. ನ್ಯಾಯಾಲಯ ಕಾನೂನಿನ ಪ್ರಕಾರ ಯಾವ ತೀರ್ಮಾನ ಮಾಡಬೇಕೋ ಮಾಡಲಿದೆ ಎಂದು ಡಿಕೆಶಿ ನುಡಿದರು.

ಪುರಸಭೆ ಕಾರ್ಯಾಲಯ ಹುನಗುಂದ

ನಂ. ಪು.ಸ.ಹು/15ನೇಹ/ಎಸ್.ಬಿ.ಎಂ/2024-25 ದಿನಾಂಕ: 26-08-2024

ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಸನ್ 2023-24ನೇ ಸಾಲಿನ 15ನೇ ಹಣಕಾಸು ಜನರಲ್ ಬೇಸಿಕ್ ಗ್ರ್ಯಾಂಟ್ ಯೋಜನೆಯಡಿ, ಹುನಗುಂದ ಪುರಸಭೆಗೆ ಬಿಡುಗಡೆ ಮಾಡಿರುವ ಅನುದಾನದಡಿಯಲ್ಲಿ ಪುರಸಭೆ ಹುನಗುಂದ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2001 ರ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಟೆಂಡರ್ ಡಾಕ್ಯುಮೆಂಟ್ KW-1 ನಿಬಂಧನೆಗೊಳಪಟ್ಟಂತೆ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇಂಡೆಂಟ್ ಸಂಖ್ಯೆಗಳು DMA/2024-25/OW/WORK_INDENT27850 & 27852 ಈ ಮೇಲಿನ ಇಂಡೆಂಟ್ ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಚೇರಿಗೆ ಸಂಪರ್ಕಿಸಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸುವ ಷೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ.

1	ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ ಮತ್ತು ಸಮಯ	28-08-2024	ಸಂಜೆ 4.30 ಗಂಟೆವರೆಗೆ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	03-09-2024	ಸಂಜೆ 4.30 ಗಂಟೆವರೆಗೆ
3	ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ	04-09-2024	ಸಂಜೆ 4.31 ಗಂಟೆ ನಂತರ

ಸಹಿ/- ಮುಖ್ಯಾಧಿಕಾರಿಗಳು ಪುರಸಭೆ ಹುನಗುಂದ
ಸಹಿ/- ಆಡಳಿತಾಧಿಕಾರಿಗಳು ಪುರಸಭೆ ಹುನಗುಂದ

ನಗರಸಭಾ ಕಾರ್ಯಾಲಯ ದೊಡ್ಡಬಳ್ಳಾಪುರ - 561 203.
E-mail : itstaff_ulb_doddaballapur@yahoo.com
Website : www.doddaballapurcity.gov.in
ಸಂಖ್ಯೆ : ನ.ಸ.ದೊ./ತಾಂ.ವಿ./ಟಿ.ಎನ್. ನಂ. 03/2024-25
ದಿನಾಂಕ : 27-08-2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು ಎಸ್.ಬಿ.ಎಂ. - 2.0 ಅನುದಾನದಲ್ಲಿ Material Recovery Facility (MRF) ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

1) DMA/2024-25/BD/WORK_INDENT27340

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp.karnataka.gov.in) ಮುಖಾಂತರ ಮೇಲ್ಕಂಡ ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 26-09-2024 ರ ಸಂಜೆ 5.00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ : 30-09-2024 ರ ಬೆಳಿಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಪಡೆದು ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/- ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/1686/2024-25

ಕರ್ನಾಟಕ ಸರ್ಕಾರ
ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಎ6/ಬಿಜಿಟಿ/ಟೆಂಡರ್/ಸಿಆರ್-22/2024-25 ದಿ: 26.08.2024

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024-25ನೇ ಸಾಲಿನಲ್ಲಿ ವಿವಿಧ 4406-Capital Outlay on Forestry & Wildlife-01-Forestry-101-0-03-Afforestration on Forest And Non Forest Areas-139 MW-DDF ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ "ಮುಂಗಡ ಕಾಮಗಾರಿ (ಸಸಿಗಳನ್ನು ಬೆಳೆಸುವುದು ಸೇರಿದಂತೆ)" ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2024-25 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿ:02.09.2024 ರ ಸಂಜೆ 4.00 ಗಂಟೆಯುವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸ ಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸ.ಸಂ.ಹಿ/ಕೆಎಸ್‌ಎಂಸಿಎ/ಶಿ/24-25/163/08/568

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recoginzed by Medical Council of India, New Dilhi vide No: MCI-57(3)/79-Med/1912, Dtd.16.04.1979. e-mail-ids:directorbmcrcbellary@gmail.com
website: https://vims.karnataka.gov.in
ಸಂ:ಬಿಎಂಸಿಆರ್‌ಸಿ/ಟೆಂಡರ್/ಸಾಮಾನ್ಯ-1/01/2024-25, ದಿನಾಂಕ:23.08.2024

ಇ-ಟೆಂಡರ್ ಅಧಿಸೂಚನೆ

ಬಿಎಂಸಿಆರ್‌ಸಿ ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸ್ವಚ್ಛತಾ ಮತ್ತು ನೈರ್ಮಲ್ಯ ಸೇವೆಗಳಿಗಾಗಿ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ- 1999-2000ರಂತೆ ಒಂದು-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ **https://kppp.karnataka.gov.in** ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್ ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು **ದಿನಾಂಕ:23/08/2024 ರಿಂದ ದಿನಾಂಕ:23/09/2024** ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ **ರೂ.179.00** ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ **www.bmcrc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/- ಡೀನ್ & ನಿರ್ದೇಶಕರು, ಬಿಎಂಸಿಆರ್‌ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/385/ಕೆಎಸ್‌ಎಂಸಿಎ/2024-25

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಲೋ.ಇ., ಉಡುಪಿ ವಿಭಾಗ - ಉಡುಪಿ - 576101
ದೂರವಾಣಿ ಫ್ಯಾಕ್ಸ್ : (08 20) 2531802
ನಂ.ಪಿಡಬ್ಲೂಡಿ: ಯುಡಿಎನ್: ಎನ್‌ಐಟಿ: 09:2024-25: ಎಇ-2 ದಿ:26.08.2024

ಟೆಂಡರ್ ಪ್ರಕಟಣೆ

2024-25ನೇ ಸಾಲಿಗೆ ರೂ. 40.00 ಲಕ್ಷ ಮೊತ್ತದ ಒಂದು ಕಟ್ಟಡ ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 'ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್' kppp.karnataka.gov.in ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಆ್ಯಕ್ಟ್-2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12.09.2024ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ.

ನಗರಸಭಾ ಕಾರ್ಯಾಲಯ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.
ದೂ.ಸಂ: 08172-268276, 233702 Email: commn_hassan@yahoo.com
ಸಂ:ಪೌಆ/ಹಾನಸ/ಇ.ವಿ/ಟೆಂಡರ್ ಶಾಖೆ/2024-25ದಿನಾಂಕ:26-08-2024

ಟೆಂಡರ್ ಮುಂದೂಡಿಕೆ ಪ್ರಕಟಣೆ : ಕೆ.ಪಿ.ಪಿ ಪೋರ್ಟಲ್ ಮೂಲಕ :

ಹಾಸನ ನಗರಸಭಾ ವ್ಯಾಪ್ತಿಯಲ್ಲಿ 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಪ್ಯಾಕೇಜ್ ಕಾಮಗಾರಿಯ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಐಟಂವಾರು ದರಗಳ ಟೆಂಡರನ್ನು ಕೆ.ಪಿ.ಪಿ. ಪೋರ್ಟಲ್ (https://kppp.karnataka.gov.in) ಮೂಲಕ ದಿನಾಂಕ:08-08-2024 ರಂದು ಟೆಂಡರ್ ಕರೆಯಲಾಗಿದ್ದು, (DMA/2023-24/OW/WORK_INDENT 15543/CALL-2) ಕಾರಣಾಂತರಗಳಿಂದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು ದಿನಾಂಕ:04-09-2024ರ ಸಂಜೆ:5.30 ಗಂಟೆಗೆ ಮುಂದೂಡಲಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದಂತೆ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-ಪೌರಾಯುಕ್ತರು, ನಗರಸಭೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/350/ಕೆಎಸ್‌ಎಂಸಿಎ/2024-25

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560009.
ದೂ: 080 22341230 / 35 Email: bmicapa@gmail.com
ಸಂ: ಬಿ.ಎಂ.ಐ.ಸಿ.ಎ.ಪಿ.ಎ./ವಿನ್ಯಾಸ-02/10/2023-24/781 ದಿನಾಂಕ: 26.08.2024

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಕೃಷ್ಣಪ್ರಸಾದ್ ಎ.ಎಸ್. ಇವರು ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕುರುಬರಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 15/4ರ 0ಎ-15ಗು ವಿಸ್ತೀರ್ಣದ ಜಮೀನಿನ ಮಧ್ಯ ಭಾಗದಲ್ಲಿ ಪ್ರಸ್ತಾಪಿತ 18.29ಮೀ ಅಗಲದ ಮಹಾಯೋಜನೆ ರಸ್ತೆಯನ್ನು ಪ್ರಸ್ತಾಪಿಸಲಾಗಿದೆ. ಆದರೆ ಹಾಲಿ ಸ್ಥಳದಲ್ಲಿ ಪ್ರಸ್ತಾಪಿತ ಜಮೀನಿನ ಪೂರ್ವ ಭಾಗದಲ್ಲಿ ಜಿಲ್ಲಾ ಮುಖ್ಯ ರಸ್ತೆ ಹಾದುಹೋಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ, ಮಹಾಯೋಜನೆ ನಕ್ಷೆ ಪ್ರಕಾರ ಪ್ರಸ್ತಾಪಿತ ಜಮೀನಿನ ಮಧ್ಯ ಭಾಗದಲ್ಲಿ ಪ್ರಸ್ತಾಪಿಸಿರುವ 18.29ಮೀ ಅಗಲದ ಮಹಾಯೋಜನೆ ರಸ್ತೆಯನ್ನು ಕಾರ್ಟೋಗ್ರಾಫಿಕಲ್ ಎರರ್ ನಡಿ ಪ್ರಸ್ತಾಪಿತ ಜಮೀನುಗಳ ಪೂರ್ವದಲ್ಲಿ ಇರುವ ಹಾಲಿ ರಸ್ತೆಯ ಜಾಗಕ್ಕೆ ಸ್ಥಳಾಂತರಿಸಿಕೊಡುವಂತೆ ಹಾಗೂ ಸದರಿ ಜಮೀನಿನಲ್ಲಿ ಪ್ರಸ್ತಾಪಿಸಿರುವ 0ಎ-15ಗು ಜಮೀನಿನ ಪೈಕಿ 0ಎ-01½ ಗು ಸಾರಿಗೆ ಮತ್ತು ಸಂಪರ್ಕ ವಲಯದಲ್ಲಿರುವ 18.29ಮೀ ಅಗಲದ ರಸ್ತೆಯನ್ನು ವಸತಿ ಉದ್ದೇಶಕ್ಕೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಿಕೊಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕುರುಬರಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 15/4ರ 0ಎ-15ಗು ಜಮೀನಿನ ಮಧ್ಯಭಾಗದಲ್ಲಿ 18.29ಮೀ ಅಗಲದ ರಸ್ತೆಯನ್ನು ಮಹಾಯೋಜನೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಸದರಿ ಪ್ರಸ್ತಾಪಿತ ರಸ್ತೆಯನ್ನು ಅಳವಡಿಸಿದಲ್ಲಿ ಹಾಲಿ ಇರುವ ರಸ್ತೆಯ ಪಕ್ಕದಲ್ಲಿ ಮತ್ತೊಂದು 18.29ಮೀ ರಸ್ತೆಯನ್ನು ಅಳವಡಿಸಿದಂತಾಗುತ್ತದೆ. ಆದ್ದರಿಂದ, ಗ್ರಾಮ ನಕ್ಷೆಯಂತೆ ಹಾಲಿ ಇರುವ ರಸ್ತೆಯನ್ನು 18.29ಮೀ ಅಗಲಕ್ಕೆ ವಿಸ್ತರಿಸಿ ಸ್ಥಳಾಂತರ ಮಾಡುವ ಸಂಬಂಧ ಹಾಗೂ ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವ 18.29ಮೀ ಅಗಲದ ರಸ್ತೆಯ ಒಟ್ಟು ವಿಸ್ತೀರ್ಣ 0ಎ-15ಗು ಜಮೀನಿನ ಪೈಕಿ 0ಎ-1½ ಗು ಪ್ರಸ್ತಾಪಿತ 18.29ಮೀ ಅಗಲದ ರಸ್ತೆಯ ಜಾಗವನ್ನು (ಸಾರಿಗೆ ಮತ್ತು ಸಂಪರ್ಕ) ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ **ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ** ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ-ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸದಸ್ಯ-ಕಾರ್ಯದರ್ಶಿಗಳು ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು
ವಾಸಸಂಇ/ಸಿಪಿ/ಎಎಎ/1677/2024-25

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಡಾಗೆ ಬದಲಿ ಭೂಮಿ ನೀಡುವಂತೆ ನೀಡಿದ ಅರ್ಜಿಯಲ್ಲಿ ವೈಟ್ನರ್ ಹಚ್ಚಿರುವುದಕ್ಕೆ ನಾನಾರ್ಥ ಕಲ್ಪಿಸಿ ನನ್ನ ವಿರುದ್ಧ ಮುಗಿಬಿದ್ದಿದ್ದ ಬಿಜೆಪಿ-ಜೆಡಿಎಸ್‌ನ ಸ್ವಯಂಘೋಷಿತ ಕಾನೂನು ಪಂಡಿತರ ಲೆಕ್ಕಾಚಾರ ಈಗ ತಲೆಕೆಳಗಾಗಿದೆ. ಜಟ್ಟಿ ನೆಲಕ್ಕೆ ಬಿದ್ದರು ಮೀಸೆ ಮಣ್ಣಾಗಲಿಲ್ಲ ಎಂಬಂತೆ ಕೆಲವರು, 'ಟಾರ್ಚ್ ಹಿಡಿದವರು ಯಾರು..? ವಿಡಿಯೊ ಮಾಡಿದ್ದು ಯಾರು..?' ಎಂಬ ತಲೆಬುಡವಿಲ್ಲದ ಪ್ರಶ್ನೆ ಕೇಳುತ್ತಾ ತಮ್ಮನ್ನು ತಾವೇ ಸಮಾಧಾನಪಡಿಸಿಕೊಳ್ಳುತ್ತಿದ್ದಾರೆ.

ಭಾರತೀಯ, ರೈತ

ನೀವು ಹೇಳಿದ್ದು ಸರಿಯಾಗಿದೆ. ಹಾಗಾದರೆ ಈ ಪ್ರಕರಣದ ಬಗ್ಗೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಮಂಡಳಿಯಿಂದ ತನಿಖೆ ನಡೆಸಲು ನ್ಯಾಯಾಂಗಕ್ಕೆ ನೀವು ಕೇಳಿ..

ಭದ್ರತಾ ದೃಷ್ಟಿಯಿಂದ ಜೈಲು ಸಿಬ್ಬಂದಿ ಮೇಲಿನ ಒತ್ತಡ ಕಡಿಮೆ ಮಾಡಿಕೊಳ್ಳಲು ಆಂತರಿಕವಾಗಿ ವಿಭಜನೆ ಮಾಡಬಹುದು

ಪರಪ್ಪನ ಅಗ್ರಹಾರ ವಿಭಜನೆ ಇಲ್ಲ: ಪರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೈದಿಗಳ ಹಾಗೂ ವಿಐಪಿ ಕೈದಿಗಳ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿರುವುದರಿಂದ ಪರಪ್ಪನ ಅಗ್ರಹಾರವನ್ನು ಮೂರು ಭಾಗವಾಗಿ ವಿಭಜನೆ ಮಾಡಲಾಗುತ್ತದೆ ಎನ್ನುವ ಮಾತುಗಳು ಕೇಳಿ ಬಂದಿತ್ತು. ಆದರೆ ವಿಭಜನೆ ಮಾಡುವ ಪ್ರಸ್ತಾಪವಿಲ್ಲವೆಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಪ್ಪನ ಅಗ್ರಹಾರ ಜೈಲನ್ನು ವಿಭಜನೆ ಮಾಡಲು ಆಗುವುದಿಲ್ಲ. ಕಾರಾಗೃಹದಲ್ಲಿ ಭದ್ರತೆ ದೃಷ್ಟಿಯಿಂದ ಆಂತರಿಕ ಆಡಳಿತದ ಬದಲಾವಣೆ ಮಾಡಬಹುದು. ಆದರೆ, ಮೂರು ಭಾಗ ಮಾಡಲು ಆಗುವುದಿಲ್ಲ. ಬ್ಲಾಕ್ 1, ಬ್ಲಾಕ್ 2 ಬ್ಲಾಕ್ 3 ಇವೆ. ಅದರ ಜತೆಗೆ ಬೇರೆ ಬ್ಯಾರಕ್‌ಗಳಿವೆ. ಇದರಲ್ಲಿ ಕೈದಿಗಳನ್ನು ಇರಿಸಲು ಮಾರ್ಪಾಡು ತರಬಹುದು, ಭಾಗ ಮಾಡುವುದಿಲ್ಲ ಎಂದು ತಿಳಿಸಿದರು.

ಕೊಲೆ ಪ್ರಕರಣದಲ್ಲಿ ಬಂಧಿತನಾಗಿರುವ ದರ್ಶನ್‌ನನ್ನು ಬೇರೆ ಜೈಲಿಗೆ ಸ್ಥಳಾಂತರಿಸುವ ಬಗ್ಗೆ ನ್ಯಾಯಾಲಯ ಹಾಗೂ ಬಂದಿಖಾನೆ ಪ್ರಾಧಿಕಾರ ತೀರ್ಮಾನಿಸುತ್ತದೆ.

ಸರಕಾರದ ವ್ಯಾಪ್ತಿಯಲ್ಲಿಲ್ಲ. ವಿಚಾರಣಾ ದೀನ ಕೈದಿಯಾಗಿರುವುದರಿಂದ ಕೆಲವು ನಿಯಮಗಳ ಪ್ರಕಾರವೇ ಸ್ಥಳಾಂತರ ಮಾಡಬೇಕಾಗುತ್ತದೆ. ಮುಂದಿನ ಎರಡು ದಿನಗಳಲ್ಲಿ ಸ್ಥಳಾಂತರ ಆಗಬಹುದು ಎಂದರು.

ಸಾಕ್ಷಿಗಳನ್ನು ಹೆದರಿಸುವ ನಿಟ್ಟನಲ್ಲಿ ಫೋಟೊಗಳನ್ನು ವೈರಲ್ ಮಾಡಲಾಗುತ್ತಿದೆ ಎಂದು ಬಿಜೆಪಿಗರು ಆರೋಪಿಸಿದ್ದಾರೆ. ಸಾಕ್ಷಿಗಳನ್ನು ಹೆದರಿಸುವ ಅಗತ್ಯ ನಮಗಿಲ್ಲ. ನ್ಯಾಯಯುತವಾಗಿ ಯಾರಿಗೆ ಏನು ಶಿಕ್ಷೆ ಆಗಬೇಕು. ಯಾರಿಗೆ ನ್ಯಾಯ ಸಿಗಬೇಕು. ನ್ಯಾಯಯುತವಾಗಿ ಕಾನೂನು ಚೌಕಟ್ಟನಲ್ಲಿ ಕ್ರಮಕ್ಕೆಗೊಳ್ಳುತ್ತೇವೆ. ಇದರಲ್ಲಿ ರಾಜಕೀಯ ಲಾಭ ಪಡೆಯುವ ಅಗತ್ಯವಿಲ್ಲ.

-**ಡಾ.ಜಿ. ಪರಮೇಶ್ವರ್** ಗೃಹ ಸಚಿವ

ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಎಂಬುವನಿಗೆ ಒಂದು ಬ್ಯಾರಕ್‌ನಿಂದ ಮತ್ತೊಂದು ಬ್ಯಾರಕ್‌ಗೆ ಹೋಗಲು ಅವಕಾಶ ಕೊಟ್ಟಿದ್ದಾರೆ ಎಂಬುದು ಭೇಟಿ ನೀಡಿದ ವೇಳೆ ಗೊತ್ತಾಗಿದೆ. ಈ ದೃಶ್ಯಾವಳಿ ಸಿಸಿ ಕ್ಯಾಮೆರಾದಲ್ಲಿಯೂ ಸೆರೆಯಾಗಿದೆ. ಈ ಹಿನ್ನೆಲೆಯಲ್ಲಿ ನಾವು ಕ್ರಮ ಕೈಗೊಳ್ಳಲು ಸಾಧ್ಯವಾಗಿದೆ. ಈಗಾಗಲೇ 9 ಅಧಿಕಾರಿಗಳನ್ನು ಅಮಾನತು ಮಾಡಿದ್ದೇವೆ. ಜೈಲಿನ ಮುಖ್ಯ ಅಧೀಕ್ಷಕ, ಅಧೀಕ್ಷಕನನ್ನು ಅಮಾನತು ಮಾಡಿದ್ದೇವೆ. ಈ ಸ್ಥಳಗಳಿಗೆ ಬೇರೆ ಅಧಿಕಾರಿಗಳನ್ನು ನಿಯೋಜಿಸಲಾಗುವುದು ಎಂದರು.

ಕಾರಾಗೃಹದಲ್ಲಿ ದರ್ಶನ್‌ಗೆ ಯಾರೆಲ್ಲ ಸಹಕಾರ ಕೊಟ್ಟಿದ್ದಾರೋ ಅವರನ್ನು ಅಮಾನತು ಮಾಡಲಾಗಿದೆ. ತನಿಖೆ ಇನ್ನೂ ಮುಂದುವರೆದಿದೆ. ಹೆಚ್ಚಿನ ತನಿಖೆಗಾಗಿ ಒಬ್ಬರು ಹಿರಿಯ ಐಪಿಎಸ್ ಅಧಿಕಾರಿ ನೇಮಕ ಮಾಡುತ್ತೇವೆ. ಇವರು ಕೊಡುವ ವರದಿ ಆಧರಿಸಿ ಶಾಶ್ವತ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ನ್ಯಾಯಾಲಯದ ಕೋಪಕ್ಕೆ ತುತ್ತಾಗುವರೇ ದರ್ಶನ್?

ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ನಟ ದರ್ಶನ್ ಮನೆ ಊಟಕ್ಕೆ ಮನವಿ ಸಲ್ಲಿಸಿದ್ದರು.

ಜೈಲಿನ ಊಟ ಸರಿಹೊಂದುತ್ತಿಲ್ಲ ಎಂದು ನ್ಯಾಯಾಲಯದ ಮುಂದೆ ಹೇಳಿದ್ದರು. ಆದರೆ ಈ ಹೇಳುತ್ತಲ್ಲೇ, ಜೈಲಿನೊಳಗೆ ಬಿರಿಯಾನಿ ಸೇವಿಸಿರುವ ಘಟನೆ ಬಹಿರಂಗವಾಗಿರುವುದು ಇದೀಗ ದರ್ಶನ್‌ಗೆ ಮುಳುವಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಹೌದು, ಆರೋಗ್ಯ ಸರಿಯಿಲ್ಲ ಎಂದು ಹೈಕೋರ್ಟ್‌ಗೆ ದರ್ಶನ್ ಅರ್ಜಿ ಸಲ್ಲಿಸಿದ್ದರು. ಆದರೀಗ ಜೈಲಿನೊಳಗೆ ರಾಜಾತಿಥ್ಯವನ್ನು ಪಡೆಯುತ್ತಿದ್ದಾರೆ. ರಾಜಾತಿಥ್ಯ ಪಡೆದಿದ್ದರೂ, ಕೋರ್ಟ್ ಮುಂದೆ ಸುಳ್ಳು ಹೇಳಿರುವುದು ಇದೀಗ ನ್ಯಾಯಾಲಯದ ಕೋಪಕ್ಕೆ ತುತ್ತಾಗುವರೇ ಎನ್ನುವ ಮಾತುಗಳು ಶುರುವಾಗಿದೆ. ಕೇವಲ ದರ್ಶನ್ ಮಾತ್ರವಲ್ಲದೇ, ಬಂದಿಖಾನೆ ಹಾಗೂ ಸುಧಾರಣಾ ಇಲಾಖೆಯ ಅಧಿಕಾರಿಗಳು ರಾಜ್ಯ ಹೈಕೋರ್ಟ್ ದಿಕ್ಕು ತಪ್ಪಿಸಿರುವ ಅನುಮಾನಗಳು ಶುರುವಾಗಿದೆ. ಆದ್ದರಿಂದ ಮುಂದಿನ ವಿಚಾರಣೆ ವೇಳೆ ದರ್ಶನ್ ಹಾಗೂ ಜೈಲಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚನೆ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

- ದರ್ಶನ್‌ಗೆ ಬೆಂಬಲ ನೀಡಿದವರನ್ನೆಲ್ಲ ಅಮಾನತು ಮಾಡಲಾಗುವುದು
- ಹೆಚ್ಚಿನ ತನಿಖೆಗಾಗಿ ಒಬ್ಬರು ಹಿರಿಯ ಐಪಿಎಸ್ ಅಧಿಕಾರಿ ನೇಮಕ
- ಹಿರಿಯ ಐಪಿಎಸ್ ಅಧಿಕಾರಿಗಳ ಕೊಡುವ ವರದಿ ಆಧರಿಸಿ ಕ್ರಮ

ಎಚ್‌ಕೆಪಿ ವರದಿ ಪರಿಶೀಲನೆ

ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು ಈ ಹಿಂದೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷರಾಗಿದ್ದ ವೇಳೆ 2020ರಲ್ಲಿ ಜೈಲು ಸುಧಾರಣೆಗೆ, ವರದಿ ನೀಡಿರುವುದು ಗಮನಕ್ಕೆ ಬಂದಿದೆ. ಅದನ್ನು ತರಿಸಿಕೊಂಡು ಪರಿಶೀಲಿಸಲಾಗುವುದು. ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿದ್ದ ವೇಳೆ ರಾಷ್ಟ್ರಮಟ್ಟದಲ್ಲಿ ಪೊಲೀಸ್ ಸುಧಾರಣೆ, ಕಾರಾಗೃಹ ಸುಧಾರಣೆಗೆ ವರದಿ ನೀಡಲಾಗಿತ್ತು. ಆ ವರದಿಯನ್ನು ತರಿಸಿಕೊಳ್ಳಲಾಗುವುದು. ಈಗಿನ ವ್ಯವಸ್ಥೆಯನ್ನು ಸುಧಾರಣೆ ಮಾಡಲಾಗುವುದು. ಪರಪ್ಪನ ಅಗ್ರಹಾರದಲ್ಲಿ ನಡೆದ ಘಟನೆಯನ್ನು ಮಾತ್ರ ತನಿಖೆ ನಡೆಸುತ್ತಿಲ್ಲ. ರಾಜ್ಯದ ಎಲ್ಲ ಕಾರಾಗೃಹಗಳಲ್ಲಿ ಏನೆಲ್ಲ ನಡೆಯುತ್ತಿದೆ. ಅಲ್ಲಿನ ವ್ಯವಸ್ಥೆಯನ್ನು ಪರಿಶೀಲನೆ ನಡೆಸಲಾಗುವುದು. ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಿ ವರದಿ ತರಿಸಿಕೊಳ್ಳಲಾಗುವುದು. ಹಿಂಡಲಗಾ ಜೈಲಿಗೆ ಭೇಟಿ ನೀಡಿದಾಗ ಕೆಲವು ಲೋಪದೋಷಗಳು ಕಂಡುಬಂದಿತ್ತು ಎಂದರು.

ಸಮಾಚಾರ ಸಣ್ಣದಲ್ಲ

ಆಕಸ್ಮಿಕವಾಗಿ ಗುಂಡು ಹಾರಿ ವ್ಯಕ್ತಿ ಸಾವು

ಚಿಕ್ಕಮಗಳೂರು: ಮನೆಯಲ್ಲಿದ್ದ ಗನ್ ಒರೆಸುವ ವೇಳೆ ಆಕಸ್ಮಿಕವಾಗಿ ಗುಂಡುಹಾರಿ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ತಾಲೂಕಿನ ಕಳವಾಸೆ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಕಳವಾಸೆ ಗ್ರಾಮದ ಅರುಣ್ (47) ಮೃತ ವ್ಯಕ್ತಿ . ಅರುಣ್ ತಮ್ಮ ಮನೆಯ ಶೆಡ್ ನಲ್ಲಿದ್ದ ಗನ್ ಒರೆಸುವ ವೇಳೆ ಏಕಾಏಕಿ ಗುಂಡು ಹಾರಿ ಬಲಕಣ್ಣನ್ನು ಹೊಕ್ಕಿ, ಗಂಭೀರವಾಗಿ ಗಾಯಗೊಂಡ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಈ ಘಟನೆ ನಡೆದಿದ್ದು, ಇದು ಆತ್ಮಹತ್ಯೆಯೋ ಅಥವಾ ಆಕಸ್ಮಿಕವೋ ಎಂದು ಸ್ಪಷ್ಟವಾಗಿಲ್ಲ. ಮಲ್ಲಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಬಿದರಿ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು, ರಾಜ್ಯ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಚುನಾವಣೆ ಸೋಮವಾರ ನಡೆಯಿತು.ಚುನಾವಣೆಯಲ್ಲಿ

ಕರ್ನಾಟಕದಿಂದ 30, ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದ ತಲಾ ಐದು ಸದಸ್ಯರಂತೆ ಕೇಂದ್ರ ಕಾರ್ಯಕಾರಿ ಸಮಿತಿಯ ಒಟ್ಟು 55 ಸದಸ್ಯರು ಮತ್ತು ಕರ್ನಾಟಕ, ಕೇರಳ, ಆಂಧ್ರಪ್ರದೇಶ ರಾಜ್ಯ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆದರೆ ಕರ್ನಾಟಕದಲ್ಲಿ ಕಾರ್ಯನಿರ್ವಾಹಕ ಸಮಿತಿಯ 27 ಸಾಮಾನ್ಯ ಸದಸ್ಯರಿಗೆ ಮಹಾಸಭಾ ಮಹಾ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ಈಶ್ವರ ಬಿ. ಖಂಡ್ರೆ ಹಾಗೂ ನೂತನ ರಾಜ್ಯಾಧ್ಯಕ್ಷ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿಯಾದ ಶಂಕರ ಎಂ.ಬಿದರಿ ನೇತೃತ್ವದ ಎಲ್ಲಾ 27 ಅಭ್ಯರ್ಥಿಗಳು ಹೆಚ್ಚು ಮತಗಳಿಸಿ ಜಯಶೀಲರಾಗಿ ದ್ದಾರೆ ಎಂದು ಮಹಾಸಭಾದ ಅಧ್ಯಕ್ಷ ಮತ್ತು ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರು ತಿಳಿಸಿದ್ದಾರೆ.

ಕೃಷಿಹೊಂಡಕ್ಕೆ ಹಾರಿ ರೈತನ ಆತ್ಮಹತ್ಯೆ

ಸಾಗರ: ತಾಲೂಕಿನ ಬ್ಯಾಕೋಡು ಸಮೀಪದ ಬೈನೆ ಮನೆಯ ರೈತ ಅಶೋಕ(42) ಈ ಬಾರಿಯ ಅಡಕೆಯ ತೀವ್ರ ಕೊಳೆ ಹಾವಳಿಯಿಂದ ಸಂಕಷ್ಟಕ್ಕೊಳಗಾಗಿ

ಕೃಷಿಹೊಂಡಕ್ಕೆ ಹಾರಿ ಆತ್ಮಹತ್ಯೆಗೆ ಶರಣಾದ ಘಟನೆ ನಡೆದಿದೆ. ಅಶೋಕ್ ಬ್ಯಾಂಕ್‌ಗಳಲ್ಲಿ ದೊಡ್ಡ ಮೊತ್ತದ ಸಾಲ ಪಡೆದಿದ್ದರು. ಆದರೆ ಅಡಕೆಗೆ ಕೊಳೆ ರೋಗ ಬಂದ ಕಾರಣ ಬೆಳೆ ಸಂಪೂರ್ಣವಾಗಿ ನೆಲದ ಪಾಲಾಗಿತ್ತು. ಇಬ್ಬರು ಪುತ್ರರು ಹಾಗೂ ಒಬ್ಬಳು ಮಗಳು ಸೇರಿದಂತೆ ಮೂರು ಮಕ್ಕಳ ವಿದ್ಯಾಭ್ಯಾಸದ ಒತ್ತಡವೂ ಸೇರಿದಂತೆ ತೀವ್ರ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದರು. ಇದರಿಂದ ಮನನೊಂದ ಅಶೋಕ್, ಕೃಷಿಹೊಂಡಕ್ಕೆ ಹಾರಿ ಜೀವ ಕಳೆದುಕೊಂಡಿದ್ದಾರೆ.

ಬಿಜೆಪಿಯವರು ನಮ್ಮನ್ನು ಸಂಪರ್ಕಿಸಿಲ್ಲ

ಮೈಸೂರು: ಬಿಜೆಪಿಯವರು ತಿಪ್ಪರಲಾಗ ಹಾಕಿದರೂ ನಮ್ಮನ್ನು ಮುಟ್ಟಲು ಸಾಧ್ಯವಿಲ್ಲ ಎಂದು ಶಾಸಕ ಕೆ.ಹರೀಶ್ ಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನನ್ನು ಯಾವ ಬಿಜೆಪಿ ಶಾಸಕರು ಸಂಪರ್ಕ ಮಾಡಿಲ್ಲ, ನಮ್ಮನ್ನು ಯಾರೇ ಸಂಪರ್ಕ ಮಾಡಿದರೂ ನಾವೂ ಹೋಗೋದಿಲ್ಲ. ನಮ್ಮಲ್ಲಿ ಒಗ್ಗಟ್ಟಿದೆ ಎಂದು ಹೇಳಿದರು. ಮುಡಾ ಹಗರಣದಲ್ಲಿ ಸಿಎಂ ಕುಟುಂಬ ನ್ಯಾಯಯುತವಾಗಿದ್ದು, ಆರೋಪ ಮಾಡುತ್ತಿರುವವರಿಂದಲೇ ಹೆಚ್ಚಿನ ಭ್ರಷ್ಟಾಚಾರ ಆಗಿದೆ. ಈ ಬಗ್ಗೆ ದಾಖಲೆ ಸಂಗ್ರಹಿಸುತ್ತಿದ್ದು, ಇದೆಲ್ಲವನ್ನೂ ದೇಸಾಯಿ ಆಯೋಗ, ಲೋಕಾಯುಕ್ತ ಹಾಗೂ ಮಾಧ್ಯಮಗಳಿಗೂ ಶೀಘ್ರವೇ ನೀಡುವುದಾಗಿ ಹರೀಶ್‌ಗೌಡ ಹೇಳಿದರು.

ಸಿಎಂ ವಿಚಾರದಲ್ಲಿ ಕಾನೂನು ಉಲ್ಲಂಘನೆಯಾಗಿಲ್ಲ: ಮುಡಾದಲ್ಲಿ ಹಗರಣ ನಡೆದಿರುವುದು ಸಾವಿರದಷ್ಟು ನಿಜ. ಆದರೆ, ಸಿಎಂ ಪ್ರಕರಣದಲ್ಲಿ ಯಾವುದೇ ಕಾನೂನು ಉಲ್ಲಂಘನೆ ಆಗಿಲ್ಲ. ಹಿಂದೆ ಅರ್ಜಿ ಸಲ್ಲಿಸಿ ಕಾನೂನು ಪ್ರಕಾರದಲ್ಲೇ ನಿವೇಶನ ನೀಡಿದ್ದಾರೆ. ಆದರೆ, ನಿಜಕ್ಕೂ ಮುಡಾದಲ್ಲಿ ಹಗರಣ ಮಾಡಿರುವವರು ಯಾರು ಎಂಬ ಮಾಹಿತಿ ಕಲೆ ಹಾಕುತ್ತಿದ್ದು, ಶೀಘ್ರವೇ ದಾಖಲೆಯ ಪಟ್ಟಿ ಬಿಡುಗಡೆ ಮಾಡಲಾಗುವುದು. ಅದನ್ನು ಲೋಕಾಯುಕ್ತಕ್ಕೂ ಹಾಗೂ ದೇಸಾಯಿ ಆಯೋಗಕ್ಕೂ ನೀಡುತ್ತೇನೆ ಎಂದರು.

ಜುಲೈ-ಆಗಸ್ಟ್ ಹಣ ಶೀಘ್ರ ಬಿಡುಗಡೆ: ಸಚಿವೆ ಹೆಬ್ಬಾಳ್ಕರ್

ಗೃಹಲಕ್ಷ್ಮಿ ಅರ್ಜಿ: ಇನ್ನೂ ಅವಕಾಶ

ಬೆಂಗಳೂರು: ಗೃಹಲಕ್ಷ್ಮೀ ಯೋಜನೆಯಲ್ಲಿ ಎರಡು ತಿಂಗಳ ಬಾಕಿ ಮೊತ್ತವನ್ನು ಬಿಡುಗಡೆ ಮಾಡಬೇಕಿದ್ದು, ಈಗಲೂ ಅರ್ಜಿ ಸಲ್ಲಿಸದವರು ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ 1.58 ಕೋಟಿ ಕುಟುಂಬಗಳಿವೆ. ಅವುಗಳ ಪೈಕಿ 1.23 ಕೋಟಿ ಕುಟುಂಬದ ಯಜಮಾನಿಯರಿಗೆ ಮಾಸಿಕ ಎರಡು ಸಾವಿರ ಪಾವತಿಸುವ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇನ್ನು 27 ಲಕ್ಷ ಕುಟುಂಬಗಳು ಯೋಜನೆಯಿಂದ ಹೊರಗಿವೆ. ಬಹುತೇಕ ಅವರಲ್ಲಿ ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಪಾವತಿದಾರರು ಇರಬಹುದು ಅಥವಾ ಯೋಜನೆಯ ಸೌಲಭ್ಯ ತಮಗೆ ಬೇಡ ಎಂದು ನಿರಾಕರಿಸಿರಲೂಬಹುದು ಎಂದು ಹೇಳಿದರು.

ಆದರೆ ಈಗಲೂ ವೆಬ್‌ಸೈಟ್ ಮುಕ್ತವಾಗಿದ್ದು, ಆದಾಯ ತೆರಿಗೆ ಜಿಎಸ್‌ಟಿ ಪಾವತಿ ಮಾಡದಿರುವವರು ಇರುವವರು ಗೃಹಲಕ್ಷ್ಮಿ ಯೋಜನೆಗಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಜಿಎಸ್‌ಟಿ ಮತ್ತು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರೆ ಅರ್ಜಿಯೇ ಸ್ವೀಕಾರವಾಗುವುದಿಲ್ಲ. ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಆಧಾರ್ ಸಂಖ್ಯೆಯನ್ನು ನಮೂದಿಸುತ್ತಿದ್ದಂತೆ ಸ್ಪಷ್ಟ ಮಾಹಿತಿಗಳು ಲಭ್ಯವಾಗುತ್ತವೆ. ಈ ಮೊದಲು ಈ ರೀತಿಯ 15 ಸಾವಿರ ಜನ

ಗೃಹಲಕ್ಷ್ಮಿಯರಿಗೆ ಜೂನ್ ತಿಂಗಳ ಕಂತನ್ನು ಪಾವತಿ ಮಾಡಲಾಗಿದೆ. ಜುಲೈ ಮತ್ತು ಆಗಸ್ಟ್ ತಿಂಗಳ ಹಣವನ್ನು ವಾರದೊಳಗಾಗಿ ಬಿಡುಗಡೆ ಮಾಡಲು ಮುಖ್ಯಮಂತ್ರಿಯವರ ಜೊತೆ ನಡೆಸಲಾಗಿದೆ. ಅರ್ಜಿ ಸಲ್ಲಿಸಿದವರ ಪೈಕಿ 80 ಸಾವಿರ ಜನರಿಗೆ ತಾಂತ್ರಿಕ ಕಾರಣಗಳಿಗಾಗಿ ಹಣ ತಲುಪುತ್ತಿರಲಿಲ್ಲ. ಅದನ್ನು ಸರಿಪಡಿಸಲಾಗಿದೆ.

-**ಲಕ್ಷ್ಮೀ ಹೆಬ್ಬಾಳ್ಕರ್** ಸಚಿವೆ

ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆ

ಕಾಯಿದೆಯಂತೆ ಜಿಂದಾಲ್‌ಗೆ ಭೂಮಿ

ಧಾರವಾಡ: ಅರವಿಂದ್ ಬೆಲ್ಲದ್ ಅವರು ಜಿಂದಾಲ್‌ಗೆ ಭೂಮಿ ಕೊಡಲು ವಿರೋಧಿಸು ತ್ತಿದ್ದಾರೆ. ಅವರು ಸಹ ಉದ್ಯಮ ಹೊಂದಿ ದವರು. ಕೆಐಎಡಿಬಿ ಜಾಗ ವನ್ನು ಗುತ್ತಿಗೆ

ಮೇಲೆ ನೀವು ತೆಗೆದುಕೊಂಡಿದ್ದೀರಿ. ಇದು ಕೂಡ ಒಂದು ಕಾಯಿದೆ ವ್ಯಾಪ್ತಿಗೆ ಬರುತ್ತದೆ. ದೇಶಾದ್ಯಂತ ಒಂದೇ ಕಾಯಿದೆಯಿದೆ. ಯಾವುದೇ ಒಂದು ಸಂಸ್ಥೆಗೆ ಲೀಸ್ ಕೊಟ್ಟಾಗ ಕಾನೂನು ಪ್ರಕಾರ ಷರತ್ತು ವಿಧಿಸಲಾಗುತ್ತದೆ. ಅವರು ಸಂಪೂರ್ಣ ದುಡ್ಡು ಕೊಟ್ಟಿದ್ದಾರೆ. ಆದರೆ, ಷರತ್ತು ವಿಧಿಸಿ ಅವರಿಗೆ ಭೂಮಿ ಕೊಡಲಾಗುತ್ತದೆ ಸಚಿವ ಸಂತೋಷ್ ಲಾಡ್ ತಿಳಿಸಿದರು.

ಜಿಂದಾಲ್‌ಗೆ ಭೂಮಿ ಕೊಡುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಬೆಲ್ಲದ ಅವರಿಗೆ ಇದರ ಬಗ್ಗೆ ಬೇರೆ ಅಭಿಪ್ರಾಯ ಇರಬಹುದು. ಕೇಂದ್ರ ಸರಕಾರ ಅವರದ್ದೇ ಇದೆ. ಯಾರ್‍ಯಾರಿಗೆ ಭೂಮಿ ಕೊಟ್ಟಿದ್ದಾರೆ ಅದನ್ನು ಹೇಳಲಿ. ನಾವು ಜಿಂದಾಲ್‌ಗೆ ಪರವಾಗಿ ಮಾಡಿ ಕೊಡುತ್ತಿಲ್ಲ. 90 ಸಾವಿರ ಕೋಟಿ ಹೂಡಿಕೆಯನ್ನು ಜಿಂದಾಲ್ ಮಾಡಿದೆ. ನಾನು ಹುಟ್ಟಿ ಬೆಳೆದ ಜಾಗ ಅದು. ಬೆಲ್ಲದ ಅವರಿಗೆ ಪೂರ್ಣ ಇಲ್ಲದಿದ್ದರೆ ಬೇಕಾದರೆ ಕೊಡುತ್ತೇವೆ ಎಂದರು.

ಈವರೆಗೂ ಅವರು ಎಷ್ಟು ಸರಕಾರ ಕೆಡವಿದ್ದಾರೆ?

ಕಾಂಗ್ರೆಸ್ ಶಾಸಕನ 100 ಕೋಟಿ ಆಮಿಷದ ವಿಚಾರಕ್ಕೆ ಪ್ರತಿಕ್ರಿಯಿಸಿ, ರಾಜ್ಯಪಾಲರ ಮೂಲಕ ಸರಕಾರ ಕೆಡವಲು ಮುಂದಾಗಿದ್ದಾರೆ. ಇಲ್ಲಿಯವರೆಗೆ ಎಷ್ಟು ಸರಕಾರ ಬೀಳಿಸಿದ್ದಾರೆ ಎಂದು ಬೆಲ್ಲದ ಅವರಿಗೆ ಕೇಳಿ. ಮೋದಿ ಸರಕಾರ ಬಂದ ಮೇಲೆ ಎಷ್ಟು ಯಶಸ್ವಿಯಾಗಿ ಸರಕಾರ ಬೀಳಿಸಿದ್ದೀರಿ ಎಂದು ಕೇಳಿ. ಶಾಸಕರು ಬರುವಾಗ ಸುಮ್ಮನೇ ಬರುತ್ತಾರಾ? ಬೆಲ್ಲದ ಅವರಿಗೆ ಬರಲು ಹೇಳಿ . ಇದರ ಬಗ್ಗೆ ಬಹಿರಂಗ ಚರ್ಚೆ ಬೇಕಾದರೂ ಮಾಡಲಿ.ಬಂದರೆ ಕೇಂದ್ರ ಸರಕಾರದಲ್ಲಿ ಮಹಾ ಏನು ಕೆಲಸ ಆಗಿವೆ ಅನ್ನುವ ಬಗ್ಗೆ ಚರ್ಚೆ ಮಾಡೋಣ ಎಂದು ಸಚಿವ ಲಾಡ್ ಟೀಕಿಸಿದರು.

ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ವಿಶೇಷ ಮೇಲ್ಮನವಿ ಅರ್ಜಿ ವಜಾ

ಡಿವೈಎಸ್‌ಪಿ ಆತ್ಮಹತ್ಯೆ: ಜಾರ್ಜ್‌ಗೆ ನಿರಾಳ

ಬೆಂಗಳೂರು: ಡಿವೈಎಸ್‌ಪಿ ಎಂ.ಕೆ.ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರಿಗೆ ಸಿಬಿಐ ಕ್ಲೀನ್‌ಚಿಟ್ ನೀಡಿದ್ದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ವಿಶೇಷ ಮೇಲ್ಮನವಿ ಅರ್ಜಿ ವಜಾಗೊಂಡಿದೆ.

ಸಿಬಿಐ ಕ್ರಮ ಪ್ರಶ್ನಿಸಿ ಗಣಪತಿ ಸಹೋದರಿ ಸಬಿತಾ ಮತ್ತಿತರರು ಸಲ್ಲಿಸಿದ್ದ ಅರ್ಜಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಮತ್ತು ಸತೀಶ್ಚಂದ್ರ ಶರ್ಮಾ ಅವರನ್ನೊಳಗೊಂಡ ಪೀಠ ಮಂಗಳವಾರ ವಜಾಗೊಳಿಸಿದೆ. ಗಣಪತಿ ಆತ್ಮಹತ್ಯೆಗೆ ಜಾರ್ಜ್, ಅಧಿಕಾರಿಗಳಾದ ಎ.ಎಂ.ಪ್ರಸಾದ್ ಮತ್ತು ಪ್ರಣವ್ ಮೊಹಾಂತಿ ಕಾರಣ ಎಂಬ ಆರೋಪದಲ್ಲಿ ದಾಖಲಾದ ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ, ಆರೋಪಗಳಲ್ಲಿ ಸತ್ಯಾಂಶವಿಲ್ಲ ಎಂದು ಬಿ ವರದಿ ಸಲ್ಲಿಸಿತ್ತು. ಆದರೆ, ಸಿಬಿಐ ವರದಿಯನ್ನುತಿರಸ್ಕರಿಸಿದ್ದ ಜನಪ್ರತಿನಿಧಿಗಳು ವಿಶೇಷ ನ್ಯಾಯಾಲವಯ, ಜಾರ್ಜ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಸಮನ್ಸ್ ಜಾರಿಗೊಳಿಸಿತ್ತು. ವಿಶೇಷ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತ್ತು.

ಆತ್ಮಹತ್ಯೆಗೆ ಜಾರ್ಜ್ ಮತ್ತು ಐಪಿಎಸ್ ಅಧಿಕಾರಿಗಳು ಕಾರಣ ಎಂದು ಆರೋಪಿಸಿ ಗಣಪತಿ ಅವರ ಮಗ ನೇಹಲ್ ಸಲ್ಲಿಸಿದ್ದ ಖಾಸಗಿ ದೂರಿನ ಆಧಾರದಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಸುಪ್ರೀಂಕೋರ್ಟ್ ಸಿಬಿಐಗೆ ವರ್ಗಾಯಿಸಿತ್ತು. 42 ದಾಖಲೆಗಳನ್ನು ಸಂಗ್ರಹಿಸಿ, 108 ಸಾಕ್ಷಿಗಳ ವಿಚಾರಣೆ ನಡೆಸಿದ್ದ ಸಿಬಿಐ ತನಿಖಾ ತಂಡ 2019ರ ಅಕ್ಟೋಬರ್ 30 ರಂದು ಬಿ ವರದಿ ಸಲ್ಲಿಸಿತ್ತು. ಸಾಯುವ ಮುನ್ನ ಗಣಪತಿ ಹೇಳಿದ್ದ ಯಾವುದೇ ಸಂಗತಿಯೂ ಅವರ ಆತ್ಮಹತ್ಯೆಗೆ ಕಾರಣವಲ್ಲ ಎಂದು ವರದಿಯಲ್ಲಿ ಹೇಳಿತ್ತು. 2020ರ ಆಗಸ್ಟ್‌ನಲ್ಲಿ ಬಿ ವರದಿ ತಿರಸ್ಕರಿಸಿದ್ದ ವಿಶೇಷ ನ್ಯಾಯಾಲಯ, ಮೂವರಿಗೆ ಸಮನ್ಸ್ ಜಾರಿ ಮಾಡಿತ್ತು. ಇದಕ್ಕೂ ಮೊದಲು ಗಣಪತಿ ಆತ್ಮಹತ್ಯೆ ಪ್ರಕರಣ ವಿಚಾರಣೆಗೆ ನ್ಯಾ.ಕೆ.ಎನ್.ಕೇಶವನಾರಾಯಣ ನೇತೃತ್ವದಲ್ಲಿ ರಚಿಸಿದ್ದ ಏಕಸದಸ್ಯ ಆಯೋಗವು 2018ರ ಫೆಬ್ರವರಿ 27 ರಂದು ಸರಕಾರಕ್ಕೆ ತನ್ನ ವರದಿ ಸಲ್ಲಿಸಿತ್ತು. ಜಾರ್ಜ್ ಹಾಗೂ ಪ್ರಣಬ್ ಮೊಹಾಂತಿ, ಎಂ. ಎಂ.ಪ್ರಸಾದ್ ಅವರಿಗೆ ಈ ವರದಿಯಲ್ಲಿ ಕ್ಲೀನ್‌ಚೀಟ್ ನೀಡಲಾಗಿತ್ತು.

ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಮೊದಲಿನಿಂದಲೂ ಹೇಳುತ್ತಿದೆ. ಈ ನೆಲದ ಕಾನೂನಿನ ಬಗ್ಗೆ ನನಗೆ ಸಂಪೂರ್ಣ ನಂಬಿಕೆಯಿದೆ. ನ್ಯಾಯ ಯಾವತ್ತೂ ಸತ್ಯದ ಪರವಾಗಿರುತ್ತದೆ ಎಂಬುದು ಈಗ ಮತ್ತೊಮ್ಮೆ ಸಾಬೀತಾಗಿದೆ. ನನ್ನ ವಿರುದ್ಧ ಮಾಡಿದ್ದ ಸುಳ್ಳು ಆರೋಪಿಗಳಿಂದ ಮುಕ್ತಿ ಸಿಕ್ಕಿದೆ.

-**ಕೆ.ಜೆ. ಜಾರ್ಜ್** ಇಂಧನ ಸಚಿವ

ಅಫ್ಸರ್ ಪಾಷಾ ಹಿಂಡಲಗಾ ಜೈಲಿಗೆ ಶಿಫ್ಟ್

ಬೆಳಗಾವಿ: ಉಗ್ರರ ಜತೆ ನಂಟು ಹೊಂದಿದ್ದ ಹಾಗೆಯೇ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಕಾರಾಗೃಹದಿಂದ ಬೆದರಿಕೆ ಕರೆ ಮಾಡಿ ಕೋಟ್ಯಂತರ ರು. ಮೌಲ್ಯದ ಬೇಡಿಕೆ ಇಟ್ಟಿದ್ದ ಕೈದಿಯನ್ನು ಸೋಮವಾರ ರಾತ್ರಿ ನಾಗ್ಪುರ್‌ನಿಂದ ವಿಮಾನದ ಮೂಲಕ ಕರೆತಂದು ಹಿಂಡಲಗಾ ಕಾರಾಗೃಹಕ್ಕೆ ರವಾನಿಸಲಾಯಿತು. ಉಗ್ರ ಅಕ್ಬರ್ ಪಾಷಾನನ್ನು ನಾಗ್ಪುರ್ ದಿಂದಲೇ ವಿಮಾನದಲ್ಲಿ ಬೆಳಗಾವಿಗೆ ಕರೆ ತರಲಾಗಿತ್ತು. ಉಗ್ರ ಅಕ್ಬರ್ ಪಾಷಾಗೆ ಭಯೋತ್ಪಾದಕ ಸಂಘಟನೆಗಳೊಂದಿಗೆ ಲಿಂಕ್ ಇದೆ. ಇತ್ತೀಚೆಗೆ ಬೆಳಗಾವಿ

ನ್ಯಾಯಾಲಯದ ಆವರಣದಲ್ಲಿ ಪಾಕ್ ಪರ ಘೋಷಣೆ ಕೂಗಿದ್ದ ಕೈದಿ ಜಯೇಶ್ ಪೂಜಾರಿಯಿಂದ ಹಿಂಡಲಗಾ ಕಾರಾಗೃಹದಿಂದಲೇ ಕೇಂದ್ರ ಸಚಿವ ನಿತಿನ್ ಗಡ್ಕರಿ ಕಚೇರಿಗೆ ದೂರವಾಣಿ ಕರೆ ಮಾಡಿಸಿ 200 ಕೋಟಿ ರು. ನೀಡಬೇಕೆಂದು ಬೆದರಿಕೆ ಹಾಕಿಸಿದ್ದ.

ಅಕ್ಬರ್ ಪಾಷಾ ಮತ್ತು ಜಯೇಶ್ ಪೂಜಾರಿಯನ್ನು ನಾಗ್ಪುರ್ ಪೊಲೀಸರು ವಶಪಡಿಸಿಕೊಂಡು ವಿಚಾರಣೆ ನಡೆಸಿದ್ದರು. ಜಯೇಶ್ ಪೂಜಾರಿಯನ್ನು ಕೆಲ ದಿನಗಳ ಹಿಂದೆಯೇ ಹಿಂಡಲಗಾಗೆ ರವಾನಿಸಿದ್ದ ನಾಗ್ಪುರ್ ಪೊಲೀಸರು ಈಗ ಉಗ್ರ ಅಕ್ಬರ್ ಪಾಷಾನನ್ನು ನಾಗ್ಪುರ್ ಕೇಂದ್ರ ಕಾರಾಗೃಹದಿಂದ ಬೆಳಗಾವಿಗೆ ಕರೆತಂದು ಬಿಗಿ ಹಿಂಡಲಗಾ ಕಾರಾಗೃಹಕ್ಕೆ ರವಾನಿಸಿದ್ದಾರೆ.

ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಉಡುಪಿಯ ಕೃಷ್ಣ ಮಠದಲ್ಲಿ ಮಂಗಳವಾರ ಸಂಜೆ ವಿಟ್ಲಪಿಂಡಿ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಸಾವಿರಾರು ಮಂದಿ ಭಕ್ತರು ವಿಟ್ಲಪಿಂಡಿ ಮಹೋತ್ಸವಕ್ಕೆ ಸಾಕ್ಷಿಯಾದರು.

ಆಗಸ್ಟ್ ತಿಂಗಳ ಎಣಿಕೆ ಮುಕ್ತಾಯ

ಮಂತ್ರಾಲಯಕ್ಕೆ 3.23 ಕೋಟಿ ಕಾಣಿಕೆ

ರಾಯಚೂರು; ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಆಗಸ್ಟ್ ತಿಂಗಳಲ್ಲಿ ಭಕ್ತರಿಂದ 3.23 ಕೋಟಿ ರು.ಗಳಿಗೂ ಅಧಿಕ ಕಾಣಿಕೆ ಹರಿದುಬಂದಿದೆ. ಇತ್ತೀಚೆಗೆ ತಾನೇ ಮುಕ್ತಾಯಗೊಂಡ ರಾಯರ ಮಧ್ಯಾರಾಧನೆ ಹಿನ್ನೆಲೆಯಲ್ಲಿ ಮಠಕ್ಕೆ ಈ ಪ್ರಮಾಣದ ಕಾಣಿಕೆ ಬಂದಿದೆ.

ಮಂಗಳವಾರ ಕ್ಷೇತ್ರದ ಹುಂಡಿಗಳ ಎಣಿಕೆ ಕಾರ್ಯ ಮುಕ್ತಾಯಗೊಂಡಿದ್ದು, ಒಟ್ಟು 3,23,44,480 ರು. ದೇಣಿಗೆ ಸಂದಾಯವಾಗಿದೆ. ಈ ಪೈಕಿ 3,18,02,880 ರು.ಗಳಷ್ಟು ನೋಟುಗಳಿದ್ದರೆ, 5,41,600 ರು. ಗಳಷ್ಟು ನಾಣ್ಯಗಳನ್ನು ಹುಂಡಿಗಳಿಗೆ ಹಾಕಲಾಗಿದೆ. ಅಲ್ಲದೆ, ಭಕ್ತರು 156 ಗ್ರಾಂ ಚಿನ್ನ, 1273 ಗ್ರಾಂ ಬೆಳ್ಳಿ ವಸ್ತುಗಳನ್ನು ಹುಂಡಿಗೆ ಸಮರ್ಪಿಸಿದ್ದಾರೆ.

ಮಗನನ್ನು ಪಾಸ್ ಮಾಡಲು ಮುಖ್ಯ ಶಿಕ್ಷಕನ ಒತ್ತಾಯ

ಹುಣಸಗಿ: ಸರಕಾರಿ ಶಾಲೆಯ ಮುಖ್ಯಶಿಕ್ಷಕ ತನ್ನ ಮಗನಿಗೆ ಪರೀಕ್ಷೆಯಲ್ಲಿ ನಕಲು ಮಾಡಲು ಸಹಕರಿಸುವಂತೆ ಕೊಠಡಿ ಮುಖ್ಯ ಅಧೀಕ್ಷಕನಿಗೆ ಕರೆ ಮಾಡಿ ಒತ್ತಾಯಿಸಿರುವ ಆಡಿಯೊ ಇದೀಗ ಎಲ್ಲೆಡೆ ವೈರಲ್‌ಯಾಗಿದೆ. ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-3ರಲ್ಲಿ ತಾಲೂಕಿನ ವಜ್ಜಲ್ ಸರಕಾರಿ ಪ್ರೌಢಶಾಲೆಯ ಮುಖ್ಯಗುರು ಗುರುಬಸಪ್ಪ ಅಪ್ಪಗೋಳ ಅವರು ತಮ್ಮ ಮಗನನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಕಲಿಗೆ ಸಹಕರಿಸುವಂತೆ ಪರೀಕ್ಷಾ ಮುಖ್ಯ ಅಧೀಕ್ಷಕ ಶಿವರಾಜ ಬಿರಾದಾರ ಅವರಿಗೆ ಒತ್ತಾಯ ಮಾಡಿದ್ದಾರೆ ಎನ್ನಲಾದ ಸಂಭಾಷಣೆ ಆಡಿಯೊದಲ್ಲಿದೆ. ವಜ್ಜಲ್‌ನ ಸರಕಾರಿ ಪ್ರೌಢಶಾಲೆಯ ಗುರುಬಸಪ್ಪ ಅಪ್ಪಗೋಳ ಕಾರ್ಯ ನಿರ್ವ ಹಿಸುತ್ತಿದ್ದು, ಅವರ ಮಗ ಶಿವರಾಜ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 2 ಬಾರಿ ಫೇಲ್ ಆಗಿದ್ದಾನೆ.ಇದರಿಂದ ತನ್ನ ಮಗನನ್ನು ಹೇಗಾದರೂ ಮಾಡಿ ಪರೀಕ್ಷೆಯಲ್ಲಿ ಪಾಸ್ ಮಾಡಿಸಬೇಕೆಂದು ಪರೀಕ್ಷಾ ಅಧೀಕ್ಷಕ ಶಿವರಾಜ ಬಿರಾದಾರಗೆ ಆ.3 ರಿಂದ 8 ರ ವರೆಗೆ ಮುಖ್ಯಗುರು ಗುರುಬಸಪ್ಪ ಕರೆ ಮಾಡಿ ಏನಾದರು ಮಾಡಿ ನನ್ನ ಮಗನನ್ನು ಪಾಸ್ ಮಾಡೋಣ ನನ್ನ ಮಗನ ಬದಲಾಗಿ 10ನೇ ತರಗತಿಯ ಬೇರೆ ವಿದ್ಯಾರ್ಥಿಯನ್ನು ಕೂರಿಸೋಣ ನಿಮ್ಮ ದಯೆಯಿಂದ ನನ್ನ ಮಗ ಪಾಸಾಗಲಿ ಎಂದು ಶಿವರಾಜ್‌ಬಿರಾದಾರನಲ್ಲಿ ಬೇಡಿಕೊಂಡಿದ್ದಾನೆ. ಗುರುಬಸಪ್ಪ ಪರೀಕ್ಷಾ ಅವ್ಯವಹಾರದ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರಿಗೆ ಶಿವರಾಜ ಬಿರಾದಾರ ಪತ್ರ ಬರೆದು ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಇಡೀ ಸಚಿವ ಸಂಪುಟ ಸಿದ್ದರಾಮಯ್ಯ ಜತೆ ನಿಂತಿದೆ: ಅಜಯ್‌ಸಿಂಗ್

ಸಿಎಂ ರಾಜೀನಾಮೆ ಪ್ರಶ್ನೆಯೇ ಅಪ್ರಸ್ತುತ

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಪ್ಪು ಮಾಡಿಲ್ಲದಿದ್ದಾಗ ರಾಜೀನಾಮೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಇಡೀ ಸಚಿವ ಸಂಪುಟ ಹಾಗೂ 135 ಶಾಸಕರು ಅವರ ಜತೆಗೆ ನಿಂತಿದ್ದೇವೆ ಎಂದು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ



ಡಾ.ಅಜಯ್ ಸಿಂಗ್ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಆ. 29ರಂದು ಕೋರ್ಟ್ ನೀಡಲಿರುವ ತೀರ್ಪಿಗಾಗಿ ನಾವೆಲ್ಲರೂ ಕಾತುರದಿಂದ ಕಾಯಿತ್ತಿದ್ದೇವೆ. ಸಿಎಂ ಸಿದ್ದರಾಮಯ್ಯ ಅವರು 40 ವರ್ಷದ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದೇ ರಾಜಕಾರಣ ಮಾಡಿದ್ದಾರೆ. ಕಳೆದ ಒಂದೂವರೇ ವರ್ಷದಿಂದ ಜನಪರ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿ ಹೆಸರಿಗೆ ಕಪ್ಪು ಚುಕ್ಕೆ ತರುವ ಕೆಲಸ ಬಿಜೆಪಿ-ಜೆಡಿಎಸ್ ನಾಯಕರು ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಬಿಜೆಪಿಗೆ ಕೇಂದ್ರ ಕುಮ್ಮಕ್ಕು : ಮುಡಾ ಹಗರಣದ ಹೆಸರಿನಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಬಿಜೆಪಿಯವರು ಪ್ರಯತ್ನ ಪಡುತ್ತಿದ್ದಾರೆ. ಇದಕ್ಕೆಲ್ಲಾ ಕೇಂದ್ರ ಸರಕಾರ ಕುಮ್ಮಕ್ಕು ನೀಡುತ್ತಿದೆ. ಕೇಂದ್ರದಲ್ಲಿ ಬಿಜೆಪಿ ಸರಕಾರವೇ ಗಟ್ಟಿಯಾಗಿಲ್ಲ, ಅವರಿವರನ್ನು ತೆಗೆದುಕೊಂಡು ಆಡಳಿತ ನಡೆಸುತ್ತಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಗಟ್ಟಿ ಸರಕಾರ ಆಡಳಿತ ನಡೆಸುತ್ತಿದೆ ಎಂದ ಅಜಯ್ ಸಿಂಗ್, ಮುಡಾ ವಿಷಯದಲ್ಲಿ ನಮಗೆ ನ್ಯಾಯ ಸಿಗುವ ಸಂಪೂರ್ಣ ಭರವಸೆಯಿದೆ ಎಂದರು.

ಐದು ವರ್ಷ ನಮ್ಮದೇ ಆಡಳಿತ

ಕಾಂಗ್ರೆಸ್ ಶಾಸಕರಿಗೆ 100 ಕೋಟಿ ರು. ಆಮಿಷ ಒಡ್ಡಿರುವ ಬಗ್ಗೆ ಉತ್ತರಿಸಿದ ಸಿಂಗ್, ಖುದ್ದು ಶಾಸಕರೇ ಹೇಳುತ್ತಿದ್ದಾರೆ ಎಂದರೆ, ಬಿಜೆಪಿಯವರು ಅಂತಹ ಕೆಲಸ ಮಾಡಿರಬಹುದು. ಈ ಹಿಂದೇ 2008 ಹಾಗೂ 2018ರಲ್ಲಿ ಜನರ ವಿಶ್ವಾಸ ಕಳೆದುಕೊಂಡು ಕಡಿಮೆ ಸ್ಥಾನಗಳನ್ನು ಪಡೆದಾಗ ಇದೇ ರೀತಿಯ ಹಿಂಬಾಗಿಲ ಪ್ರವೇಶದ ಮೂಲಕ ಬಿಜೆಪಿಯವರು ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಮಾಡಿತ್ತು. ಈಗ ಮತ್ತೇ ಅದೇ ತನ್ನ ಚಾಳಿ ಮುಂದುವರೆಸಿದ್ದು, ರಾಜ್ಯದ ಜನರ ಆಶೀರ್ವಾದ ಕಾಂಗ್ರೆಸ್ ಪಕ್ಷದ ಮೇಲಿರುವ ಕಾರಣ ಮುಂದಿನ ಐದು ವರ್ಷಗಳ ಕಾಲ ನಾವೇ ಆಡಳಿತ ನಡೆಸಲಿದ್ದೇವೆ ಎಂದು ಸ್ಪಷ್ಟಪಡಿಸಿದರು.

- ಮೈತ್ರಿ ನಾಯಕರಿಂದ ಸಿಎಂಗೆ ಹೆಸರಿಗೆ ಕಪ್ಪು ಚುಕ್ಕೆ ತರುವ ಕೆಲಸ
- ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಹುನ್ನಾರ
- ಬಿಜೆಪಿ , ಜೆಡಿಎಸ್ ನಾಯಕರ ವಿರುದ್ಧ ಅಜಯ್ ಸಿಂಗ್ ಆಕ್ರೋಶ

ಹಣ ದುರ್ಬಳಕೆ: ಅಧಿಕಾರಿ ಅಮಾನತು

ಚಿಕ್ಕಮಗಳೂರು: ಸರಕಾರದ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪದಡಿಯಲ್ಲಿ ಕಳಸ ಅರಣ್ಯ ಇಲಾಖೆ ಡಿಆರ್‌ಎಫ್ ಓ ಚಂದನ್ ಗೌಡ ಅವರನ್ನು ಅಮಾನತ್ತುಗೊಳಿಸಿ ಕೊಪ್ಪ ಅರಣ್ಯ ವಿಭಾಗದ ಡಿಎಫ್ ಓ



ಉಪೇಂದ್ರ ಪ್ರತಾಪ್ ಸಿಂಗ್ ಆದೇಶ ಹೊರಡಿಸಿದ್ದಾರೆ. ಕಳಸ ಅರಣ್ಯ ಇಲಾಖೆ ಡಿಆರ್‌ಎಫ್ ಓ ಚಂದನ್ ಗೌಡ ರಾಣಿಝರಿ, ಬಂಡಾಜೆ ಫಾಲ್ಸ್ ಟಿಕೆಟ್ ಗೋಲ್ ಮಾಲ್ ಮಾಡಿ ಅಂದರೇ ಆನ್‌ಲೈನ್ ಟಿಕೆಟ್ ಫೋರ್ಜರಿ ಮಾಡಿ ಸರಕಾರಕ್ಕೆ ಮೋಸ ಮಾಡಿದ್ದಾರೆ ಎಂಬ ಆರೋಪ ಅವರ ಮೇಲಿದೆ.

ನಕಲಿ ಆನ್ ಲೈನ್ ಟಿಕೆಟ್ ಮುದ್ರಿಸಿ ಸರಕಾರಕ್ಕೆ ವಂಚನೆ ಮಾಡಿದ್ದು 9 ಸಾವಿರ ವಂಚನೆ ಮಾಡಲಾಗಿದೆ ಎನ್ನಲಾಗುತ್ತಿದೆ. ಈ ಹಣವನ್ನು ಫೋನ್ ಪೇ ಮೂಲಕ ಯುವತಿಯೊಬ್ಬರಿಗೆ ವರ್ಗಾವಣೆ ಮಾಡಿದ್ದಾರೆ ಎಂಬ ದೂರು ಇದೆ.

ಕೇವಲ 9 ಸಾವಿರ ಅಲ್ಲದೇ ಲಕ್ಷಗಟ್ಟಲೆ ಹಣ ದುರುಪಯೋಗವಾಗಿರುವ ಅನುಮಾನ ವ್ಯಕ್ತವಾಗಿದೆ. ಬಂಡಾಂಜೆ ಫಾಲ್ಸ್ ಬಳಿ 200 ಜನರಿಗೆ ಟಿಕೆಟ್ ನೀಡದೆ ಬಿಡಲಾಗಿದ್ದು ಮದ್ಯ ವಶಕ್ಕೆ ತೆರಳಿದ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದರು.

ವಿಶ್ವವಾಣಿ ಪುಸ್ತಕ

₹ 160/-

ಭಟ್ರೇ, ಮೊನ್ನೆ ದಿಲ್ಲಿಗೆ ಹೋಗುವಾಗ ವಿಮಾನದಲ್ಲಿ ನಿಮ್ಮ 'ಅರ್ಧನಾರೀಶ್ವರ' ಕೃತಿಯನ್ನು ಓದುತ್ತಿದ್ದೆ. ಒಬ್ಬಳೇ ಜೋರಾಗಿ ನಗುತ್ತಿದ್ದೆ. ಗಗನಸಖಿ ಬಂದು 'ಆರ್ ಯು ಆಲ್ ರೈಟ್' ಎಂದು ಕೇಳಿದಳು ಅವಳಿಗೆ ನಿಮ್ಮ ಪುಸ್ತಕ ತೋರಿಸಿ 'ಸಮಸ್ಯೆ ಇರೋದು ಈ ಪುಸ್ತಕದಲ್ಲಿ' ಎಂದೆ.

- ಪವಿತ್ರಾ ವಿನಾಯಕ, ಬೆಂಗಳೂರು

10% ರಿಯಾಯಿತಿ ದರದಲ್ಲಿ ಮಾರಾಟ

ನಿಮ್ಮ ಮನೆ ಬಾಗಿಲಿಗೆ ನಮ್ಮ ಖರ್ಚಿನಲ್ಲಿ ಪುಸ್ತಕ ಕಳಿಸುತ್ತೇವೆ

ಪುಸ್ತಕವನ್ನು ಖರೀದಿಸ ಬಯಸುವವರು ಫೋನ್ ಪೇ ಮಾಡಿದ ಸ್ಕ್ರೀನ್ ಶಾಟ್ ಅನ್ನು ಕೆಳಗಿನ ನಂಬರ್ ಗೆ ಶೇರ್ ಮಾಡಿ

63623 93966

ವಿಶ್ವವಾಣಿ

ಸಂಪಾದಕೀಯ

ಪುರುಷರ ಮನಸ್ಥಿತಿ ಬದಲಾಗಲಿ

ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಿರುವ ಜಸ್ಟಿಸ್ ಹೇಮಾ ಸಮಿತಿಯ ವರದಿಯು ಚಿತ್ರರಂಗದ ಕರಾಳಮುಖವನ್ನು ಬಿಚ್ಚಿಟ್ಟಿದೆ. ವರದಿ ಬಹಿರಂಗವಾಗುತ್ತಿದ್ದಂತೆಯೇ ಅಲ್ಲಿ ಬಿರುಗಾಳಿ ಎದ್ದಿದೆ. ಹೊಸದಾಗಿ ಹಲವು ಪ್ರಮುಖ ನಟ, ನಿರ್ದೇಶಕರ ಮೇಲೆ ಲೈಂಗಿಕ ದೌರ್ಜನ್ಯದ ದೂರುಗಳು ಕೇಳಿಬಂದಿವೆ. ಹೇಮಾ ಸಮಿತಿ ವರದಿಯನ್ನು ಕೇವಲ ಮಲೆಯಾಳಂ ಚಿತ್ರರಂಗಕ್ಕೆ ಅನ್ವಯಿಸಬೇಕಾದ ಅಗತ್ಯವಿಲ್ಲ. ಹಿಂದಿ ಸೇರಿದಂತೆ ಇಡೀ ಭಾರತೀಯ ಚಿತ್ರರಂಗದ ಪರಿಸ್ಥಿತಿ ಇದಕ್ಕೆ ಭಿನ್ನವಾಗಿಲ್ಲ. ಇಲ್ಲಿ ಮಹಿಳೆಯನ್ನು ತೆರೆಯ ಮೇಲೆ ಮತ್ತು ತೆರೆಯ ಹಿಂದೆ ಪ್ರದರ್ಶನದ ವಸ್ತು ಎಂಬಂತೆಯೇ ಬಿಂಬಿಸಲಾಗುತ್ತಿದೆ. ವೃತ್ತಿ ಗೌರವ, ಘನತೆ ಉಳಿಸಿಕೊಂಡು ಈ ರಂಗದಲ್ಲಿ ಕೆಲಸ ಮಾಡುವುದು ಕಷ್ಟ ಎನ್ನುವುದು ಬಹುತೇಕ ಕಲಾವಿದೆಯರ ಮಾತು. 2017ರಲ್ಲಿ ಕನ್ನಡ ಚಿತ್ರರಂಗದಲ್ಲೂ ನಟಿಸಿ ಸೈ ಎನಿಸಿಕೊಂಡಿರುವ ಖ್ಯಾತ ನಟಿಯೊಬ್ಬನ್ನು ಸ್ಟಾರ್ ನಟ ದಿಲೀಪ್ ಕುಮ್ಮಕ್ಕಿನ ಮೇರೆಗೆ ಅಪಹರಿಸಿ, ಲೈಂಗಿಕ ದೌರ್ಜನ್ಯ ಎಸಗಲಾಗಿತ್ತು. ಈ ಬಳಿಕ ಮಲಯಾಳಂ ಚಿತ್ರರಂಗದ ಕಲಾವಿದೆಯರ ಸಂಘ 'ವಿಮೆನ್ ಇನ್ ಸಿನೆಮಾ ಕಲೆಕ್ಟಿವ್' ಒತ್ತಾಯದ ಮೇರೆಗೆ ನ್ಯಾಯಮೂರ್ತಿ ಹೇಮಾ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಈ ಸಮಿತಿ 2019ರಲ್ಲಿಯೇ ಸರಕಾರಕ್ಕೆ ವರದಿ ಸಲ್ಲಿಸಿದೆ. ಆದರೆ, ಸರಕಾರ ವರದಿಯನ್ನು ಈ ತನಕ ಮುಚ್ಚಿಟ್ಟಿತ್ತು. ಇದೀಗ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಲಾಗಿದ್ದ ಅರ್ಜಿ ಹಾಗೂ ನ್ಯಾಯಾಲಯದ ಸೂಚನೆ ಮೇರೆಗೆ ವರದಿಯನ್ನು ಬಹಿರಂಗಪಡಿಸಲಾಗಿದೆ. ಕಲಾವಿದರು ಜೀವ ಭಯ ಮತ್ತು ಚಿತ್ರರಂಗದಲ್ಲಿ ನೆಲೆ ಕಳೆದುಕೊಳ್ಳುವ ಭಯದಿಂದಾಗಿ ದೌರ್ಜನ್ಯದ ವಿರುದ್ಧ ಮಾತನಾಡಲು ಹೆದರುತ್ತಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸಿನಿಮಾ ನಾಯಕಿಯರು ಆರಂಭದಲ್ಲಿ ನಿರ್ಮಾಪಕ, ನಿರ್ದೇಶಕ ಮತ್ತು ನಾಯಕನ ಮರ್ಜಿಗನುಸಾರ ನಡೆದುಕೊಳ್ಳುವುದು ಅನಿವಾರ್ಯ ಎಂಬ ಮಾತಿದೆ. ಇದಕ್ಕೆ ಕೆಲವೊಂದು ಅಪವಾದಗಳಿರಬಹುದು. ಆದರೆ 'ಮೀ ಟೂ' ಅಭಿಯಾನದ ಸಂದರ್ಭದಲ್ಲಿ ಹಲವು ನಟಿಯರು ತಮಗಾದ ಕೆಟ್ಟ ಅನುಭವ ಗಳನ್ನು ಹಂಚಿಕೊಂಡಿದ್ದಾರೆ. ಇದೀಗ ವರದಿ ಬೆನ್ನಲ್ಲೇ 'ದೃಶ್ಯಂ'ನಂತಹ ಹಲವು ಚಿತ್ರಗಳಿಗೆ ಹೆಸರಾದ ನಟ-ನಿರ್ಮಾಪಕ ಸಿದ್ದಿಕ್ ವಿರುದ್ಧ ದೂರು ದಾಖಲಾಗಿದೆ. ನಟ ಮೋಹನ್‌ಲಾಲ್ ಸೇರಿದಂತೆ ಕಲಾವಿದರ ಸಂಘಟನೆ 'ಅಮ್ಮ'ದ ಪದಾಧಿಕಾರಿ ಗಳೆಲ್ಲರೂ ರಾಜೀನಾಮೆ ನೀಡಿದ್ದಾರೆ. ಮಹಿಳೆಯರ ಕುರಿತ ಪುರುಷ ಮನಸ್ಥಿತಿ ಬದಲಾಗದ ಹೊರತು ಸಿನಿಮಾರಂಗ ಕಲಾವಿದೆಯರ ಪಾಲಿಗೆ ಗೌರವದ ಸ್ಥಳವಾಗಿ ಉಳಿಯಲು ಸಾಧ್ಯವಿಲ್ಲ.

ಸೊಂಪಾದಕೀಯ

ಗೋಟ್ ವಿಜಯ್

ತಮಿಳು ನಟ ವಿಜಯ್ ತಮ್ಮ 'ಗೋಟ್' ಸಿನಿಮಾದ ಝಲಕ್ ಅನ್ನು ಬಿಟ್ಟಿದ್ದಾರೆ. ಆದರೆ ಈ ಸಿನಿಮಾ ಅವರು ಚಿತ್ರರಂಗವನ್ನೇ ಬಿಡಲಿದ್ದಾರೆ ಅನ್ನುವ ಕಾರಣಕ್ಕೂ ಸದ್ದು ಮಾಡುತ್ತಿದೆ. ಕ್ರಿಕೆಟ್ ರಂಗದಲ್ಲಿ ಇರುವವರಿಗೆ ನಿವೃತ್ತಿಯ ವಯಸ್ಸಿನ ಬಗ್ಗೆ ಒಂದು ಅಂದಾಜು ಇರುತ್ತದೆ. ಹೆಚ್ಚು ಎಂದರೆ 40 ವರ್ಷಗಳವರೆಗೆ ಆಡುವ ಕ್ರಿಕೆಟ್ ಆಟಗಾರರು ಬಳಿಕ ನಿವೃತ್ತ ಜೀವನ ನಡೆಸುತ್ತಾರೆ. ಆದರೆ ಸಿನಿಮಾ ನಟರಿಗೆ ನಿವೃತ್ತಿಯ ವಯಸ್ಸು ಅನ್ನೋದು ಇರುವುದಿಲ್ಲ. ಹಾಗಾಗಿ ಅವರು ಕೊನೆಯ ಉಸಿರು ಇರುವವರೆಗೂ ನಟರಾಗಿಯೇ ಮುಂದುವರಿಯುತ್ತಾರೆ. ರಂಗದ ಮೇಲೆ ಕೊನೆಯ ಉಸಿರನ್ನು ಬಿಟ್ಟ ಅನೇಕ ಕಲಾವಿದರನ್ನು ನೋಡಿದ್ದೇವೆ. ಹಾಗಾಗಿ ಯಾವ ಕಲಾವಿದ ಕೂಡ ನಾನು ಇನ್ನು ನಿವೃತ್ತನಾಗುತ್ತೇನೆ ಅಂತ ಹೇಳಿಕೆ ನೀಡುವುದು ಅಪರೂಪದ ಸಂಗತಿ. ಅಂಥ ಅಪರೂಪದ ವ್ಯಕ್ತಿಯಾಗೋಕೆ ವಿಜಯ್ ಹೊರಟಿದ್ದಾರೆ. ಹಾಗಂತ ಸಿನಿಮಾ ಬಿಟ್ಟು ಮನೆಯಲ್ಲಿ ಕುಳಿತುಕೊಳ್ಳುತ್ತೇನೆ ಅಂತ ಅವರು ಹೇಳಿಲ್ಲ. ಅವರು ಸಿನಿಮಾ ರಂಗ ಬಿಡುತ್ತಿರುವುದಕ್ಕೆ ಕಾರಣ ರಾಜಕೀಯ ರಂಗದಲ್ಲಿ ಅವರಿಗಿ ರುವ ಮಹತ್ವಾಕಾಂಕ್ಷೆ. ಈಗಾಗಲೇ ತಮ್ಮದೇ ಆದ ರಾಜಕೀಯ ಪಕ್ಷವನ್ನು ಹುಟ್ಟುಹಾಕಿರುವ ಅವರು ಮುಂದೆ ರಾಜಕೀಯ ರಂಗದಲ್ಲಿ ಸಂಪೂರ್ಣ ತೊಡಗುವ ಇರಾದೆ ಹೊಂದಿದ್ದಾರೆ. ಹಾಗಾಗಿ ಅವರು ಚಿತ್ರರಂಗದಿಂದ ದೂರವಾಗಲು ನಿರ್ಧರಿಸಿದ್ದಾರೆ. ಕೊನೆಯ ಸಿನಿಮಾ ಆದ್ದರಿಂದ 'ಗೋಟ್' ಚಿತ್ರದಲ್ಲಿ ಸಂಪೂರ್ಣ ನಟನಾಗಿ ಎಲ್ಲವನ್ನು ಅನುಭವಿಸಬೇಕು ಅನ್ನೋ ಕಾರಣಕ್ಕೋ ಏನೋ ವಿಜಯ್ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಈ ಚಿತ್ರದ ನಂತರ ಅವರು ನಿಜಕ್ಕೂ ಚಿತ್ರರಂಗದಿಂದ ದೂರ ಉಳಿಯುತ್ತಾರಾ ಅನ್ನೋದು ಪ್ರಶ್ನೆ. ಯಾಕೆಂದರೆ ಕ್ರಿಕೆಟ್ ರಂಗದಲ್ಲೇ ನಾವು ಅನೇಕ ಆಟ ಗಾರರು ಮೊದಲು ನಿವೃತ್ತಿ ಘೋಷಿಸಿ ನಂತರ 'ನಾನು ಮತ್ತೆ ಆಡುತ್ತೇನೆ' ಎಂದು ವಾಪಸ್ ಬಂದ ಉದಾರಣೆಗಳನ್ನು ನೋಡಿದ್ದೇವೆ. ಹಾಗಾಗಿ ವಿಜಯ್ ಕೂಡ ಈ ಸಿನಿಮಾದ ನಂತರ ಮತ್ತೆ ಚಿತ್ರರಂಗಕ್ಕೆ ಕಮ್‌ಬ್ಯಾಕ್ ಮಾಡಬಹುದೇನೋ. ಅದರಲ್ಲೂ ಅವರು ರಾಜಕೀಯದಲ್ಲಿ ವಿಫಲರಾದರೆ ಆದರೆ ಆ ಸಾಧ್ಯತೆ ಸ್ವಲ್ಪ ಹೆಚ್ಚೇ.

ಸಂಪಾದಕರ ಸದ್ಯಶೋಧನೆ

ಮಂಡಲ್ ವರದಿ ಸಲ್ಲಿಕೆ ಹಿನ್ನೆಲೆ

1978ರ ಡಿಸೆಂಬರ್‌ನಲ್ಲಿ ಅಂದಿನ ಪ್ರಧಾನಿ ಮೊರಾರ್ಜಿ ದೇಸಾಯಿ ಅವರು ಬಾಬು ಬಿಂದೇಶ್ವರಿ ಪ್ರಸಾದ್ ಮಂಡಲ್ ನೇತೃತ್ವದಲ್ಲಿ ಐವರು ಸದಸ್ಯರ ನಾಗರಿಕ ಹಕ್ಕುಗಳ ಆಯೋಗವನ್ನು ರಚಿಸಿದರು. ತುಳಿತಕ್ಕೊಳಗಾದ ವರ್ಗದ ಪರವಾಗಿ ಹೋರಾಡಿದ ಮಂಡಲ್ ಅವರೇ ಈ ಆಯೋಗದ ಮುಖ್ಯಸ್ಥರಾಗಲು ಅರ್ಹರು ಎಂದು ದೇಸಾಯಿ ಭಾವಿಸಿದ್ದರು. ಇದೇ ಮುಂದೆ ಮಂಡಲ್ ಆಯೋಗದ ವರದಿ ಅಥವಾ ಹಿಂದುಳಿದ ವರ್ಗಗಳ ಆಯೋಗದ ವರದಿ ಎಂದು ಮನೆಮಾತಾಯಿತು. ಮೊರಾರ್ಜಿ ಸರಕಾರ ಪತನವಾದ ಬಳಿಕ ಇಂದಿರಾ ಗಾಂಧಿ ಅಧಿಕಾರಕ್ಕೆ ಬಂದರು. ಅವರು ಪ್ರಧಾನಿಯಾದ ಕೆಲವೇ ದಿನಗಳಲ್ಲಿ, ಅಂದಿನ ಗೃಹ ಸಚಿವ ಗ್ಯಾನಿ ಜೈಲ್ ಸಿಂಗ್‌ರನ್ನು ಭೇಟಿಯಾಗುವಂತೆ ಮಂಡಲ್ ಅವರಿಗೆ ಸೂಚನೆ ಬಂದಿತು. ಮಂಡಲ್ ಅವರನ್ನು ಖುದ್ದು ಭೇಟಿ ಮಾಡುವಂತೆ ಜೈಲ್ ಸಿಂಗ್‌ಗೂ ಪ್ರಧಾನಿ ಕಚೇರಿಯಿಂದ ಸೂಚನೆ ಬಂದಿತು. ಇದು ಹತ್ತರಲ್ಲಿ ಹನ್ನೊಂದನೇ ವರದಿಯಾಗಲಿದೆ ಎಂಬುದು ಜೈಲ್ ಸಿಂಗ್‌ಗೆ ಅನಿಸಿದ್ದರಿಂದ ಮಂಡಲ್ ಭೇಟಿ ಬಗ್ಗೆ ಅವರಲ್ಲಿ ಹೆಚ್ಚಿನ ಆಸಕ್ತಿ ಇರಲಿಲ್ಲ. ಆದರೂ ಮೇಲಿಂದ ಬಂದ ಸೂಚನೆಯನ್ನು ಪಾಲಿಸಬೇಕಲ್ಲ? ಮಂಡಲ್ ಬರುವ ವೇಳೆಗೆ 'ಹಿಂದುಳಿದ ವರ್ಗಗಳ' ವಿಷಯವನ್ನು ನಿರ್ವಹಿಸುವ ಅಧಿಕಾರಿಗಳೆಲ್ಲರೂ ಹಾಜರಿರುವಂತೆ ಜೈಲ್ ಸಿಂಗ್ ಸೂಚಿಸಿದರು. ಮಂಡಲ್ ಆಯೋಗ ರಚನೆಯಾದಂದಿನಿಂದ ಅದರ ವ್ಯವಹಾರಗಳನ್ನು ಹಿರಿಯ ಅಧಿಕಾರಿ ಬಿ.ಜಿ. ದೇಶಮುಖ್ ನೋಡಿಕೊಳ್ಳುತ್ತಿದ್ದರು. ಅಂದು ಎಲ್ಲರಿಗಿಂತ ಮುಂಚೆಯೇ ದೇಶಮುಖ್, ಗೃಹ ಸಚಿವಾಲಯವಿರುವ ನಾರ್ಥ್ ಬ್ಲಾಕ್‌ಗೆ ಆಗಮಿಸಿದ್ದರು. ಮಂಡಲ್ ಅವರು ಎಸ್.ಎಸ್.ಗಿಲ್ ಸೇರಿದಂತೆ ಆಯೋಗದ ಇತರ ಸದಸ್ಯರೊಂದಿಗೆ ಆಗಮಿಸಿದರು. ಜೈಲ್ ಸಿಂಗ್ ಖುದ್ದು ಹಾಜರಿದ್ದು ಮಂಡಲ್ ಮತ್ತು ಆಯೋಗದ ಸದಸ್ಯರನ್ನು ಸ್ವಾಗತಿಸಿದರು. ಉಭಯಕುಶಲೋಪರಿ ಬಳಿಕ, ಮಂಡಲ್ ನೇರವಾಗಿ ವಿಷಯ ಪ್ರಸ್ತಾಪಿಸಿದರು. ತಾವು ಸಿದ್ಧಪಡಿಸಿದ ವರದಿಯನ್ನು ಜೈಲ್ ಸಿಂಗ್‌ಗೆ ಹಸ್ತಾಂತರಿಸಿದರು. ಜೈಲ್ ಸಿಂಗ್ ಆ ವರದಿಯ ಪುಟಗಳನ್ನು ತೆರೆದು ನೋಡುವುದಿರಲಿ, ಕಣ್ಣೆತ್ತಿಯೂ ನೋಡದೇ ಪಕ್ಕಕ್ಕಿಟ್ಟರು. ಅಷ್ಟೊತ್ತಿಗೆ ನೀಟಾಗಿ ಬಿಳಿವಸ್ತ್ರ ಧರಿಸಿದ ಸೇವಕರು ಬಂದು ಕಾಫಿ, ಬಿಸ್ಕತ್ ತಂದಿಟ್ಟರು. ಜೈಲ್ ಸಿಂಗ್ ಮುಗುಮ್ಮಾಗಿಯೇ ಇದ್ದರು. ಅವರಿಗೆ ಆ ವರದಿಯ ಬಗ್ಗೆ ಕೇಳುವ ಉತ್ಸಾಹ ಇರಲಿಲ್ಲ. ಗೃಹ ಸಚಿವರ ನೀರಸ ಪ್ರತಿಕ್ರಿಯೆ ಕಂಡು ಮಂಡಲ್ ಸೇರಿದಂತೆ ಆಯೋಗದ ಸದಸ್ಯರೂ ವರದಿ ಬಗ್ಗೆ ವಿವರಿಸಲು ಉತ್ಸಾಹ ತೋರಲಿಲ್ಲ. ಅಲ್ಲಿಗೆ ಗೃಹ ಸಚಿವರೊಂದಿಗಿನ ಮೀಟಿಂಗ್ ಮುಗಿಯಿತು ಎಂದು ಅಲ್ಲಿದ್ದವರಿಗೆಲ್ಲ ಅನಿಸಿತು. ಮಂಡಲ್ ಅವರು ಎದ್ದು ನಿಂತು, ಮತ್ತೊಮ್ಮೆ ಜೈಲ್ ಸಿಂಗ್ ಅವರ ಕೈಕುಲುಕಿದರು. ಇತರರೂ ಹಾಗೆ ಮಾಡಿದರು. ಎರಡು ವರ್ಷ ನಿರಂತರವಾಗಿ ಕೆಲಸ ಮಾಡಿ ವರದಿ ಸಿದ್ಧಪಡಿಸಿದ್ದಕ್ಕೆ ಗೃಹ ಸಚಿವರು ಒಂದು ಮೆಚ್ಚುಗೆಯ ಮಾತನ್ನೂ ಹೇಳಲಿಲ್ಲವಲ್ಲ ಎಂದು ಎಲ್ಲರೂ ಅಂದುಕೊಂಡರು. ಗೃಹ ಸಚಿವರ ಆಫೀಸಿನಿಂದ ಹೊರ ಬಂದ ಬಳಿಕ ಮಂಡಲ್ ಅವರು ಗಿಲ್ ಅವರೆಡೆಗೆ ತಿರುಗಿ, 'ನೀವು ಈ ವರದಿ ಸಿದ್ಧಪಡಿಸಲು ಬಹಳ ಶ್ರಮಪಟ್ಟಿರಿ. ಇಂದು ಅಂತೂ ಅದನ್ನು ವಿಸರ್ಜಿಸಿದಂತೆ ಆಯಿತು' ಎಂದು ಹೇಳಿದರು. ಗಿಲ್ ಮರು ಮಾತಾಡಲಿಲ್ಲ. 'ನನಗೆ ಗೊತ್ತು, ಈ ವರದಿ ಗೃಹ ಸಚಿವಾಲಯದಲ್ಲಿ ಧೂಳು ತಿನ್ನುತ್ತದೆ. ಇದನ್ನು ಯಾರೂ ತೆರೆದು ಸಹ ನೋಡುವುದಿಲ್ಲ. ಮೊರಾರ್ಜಿ ದೇಸಾಯಿ ನೇಮಿಸಿದ ಆಯೋಗ ಕೊಟ್ಟ ವರದಿ ಎಂದು ಇಂದಿರಾ ಗಾಂಧಿಯವರಂತೂ ಕಣ್ಣೆತ್ತಿಯೂ ನೋಡುವುದಿಲ್ಲ. ಮುಂದೆ ಯಾರು ಬರುತ್ತಾರೋ ಏನೋ? ಅಂತೂ ನಮಗೆ ವಹಿಸಿದ ಕೆಲಸವನ್ನು ಮಾಡಿದ ಸಂತೃಪ್ತಿ ನಮಗಿದೆ' ಎಂದು ಮಂಡಲ್ ಹೇಳಿದರು. ಅವರು ಹೇಳಿದಂತೆಯೇ ಆಯಿತು. ಮುಂದಿನ ಹತ್ತು ವರ್ಷಗಳ ಕಾಲ ಅದನ್ನು ಯಾರೂ ಕಣ್ಣೆತ್ತಿಯೂ ನೋಡಲಿಲ್ಲ. ಮುಂದೊಂದು ದಿನ ತಮ್ಮ ಹೆಸರು ದೇಶಾದ್ಯಂತ ಮನೆಮಾತಾಗುತ್ತದೆ ಎಂಬ ಸಣ್ಣ ಯೋಚನೆಯೂ ಮಂಡಲ್‌ಗೆ ಇರಲಿಲ್ಲ, ಪ್ರಧಾನಿ ವಿ.ಪಿ.ಸಿಂಗ್ ಆ ವರದಿಯನ್ನು ಜಾರಿಗೊಳಿಸುವ ತನಕ.

ಪ್ರಾಚೀನ ಭಾರತದಲ್ಲಿ ಆರೋಗ್ಯ ವಿಜ್ಞಾನ



ಡಾ. ನಾ.ಸೋಮೇಶ್ವರ
ಹಿಂದಿರುಗಿ ನೋಡಿದಾಗ
vveditoped@gmail.com

ಇಂದಿಗೆ 50 ದಶಲಕ್ಷ ವರ್ಷಗಳ ಹಿಂದೆ ಭಾರತ ಉಪಖಂಡದ ಭೂಫಲಕವು ಏಷ್ಯಾ ಭೂಫಲಕದೊಡನೆ ಘಟ್ಟಿಸಿತು. ಆಗ ಸುಮಾರು 3,500 ಕಿ.ಮೀ. ಉದ್ದದ ಹಿಂದುಕುಶ್-ಹಿಮಾಲಯನ್ ಪರ್ವತ ಶ್ರೇಣಿಯು ಹುಟ್ಟಿತು. ಇದು ಇಂದಿನ ಆಫ್ಘಾನಿಸ್ತಾನದಿಂದ ಹಿಡಿದು ಬರ್ಮಾದವರೆಗೆ ವ್ಯಾಪಿಸಿದೆ. ಏಷ್ಯಾ ಖಂಡದ 10 ಮಹಾನ್ ನದಿಗಳು ಅಮು ದರ್ಯಾ, ಸಿಂಧು, ಗಂಗಾ, ಬ್ರಹ್ಮಪುತ್ರ, ಇರಾವತಿ, ಸಾಲ್ವಿನ್, ಮೆಕಾಂಗ್, ಯಾಂಗ್‌ಸ್ಟೆ, ಹುವಾಂಗೆ ಮತ್ತು ತರೀಮ್. ಈ ಹಿಂದುಕುಶ್-ಹಿಮಾಲಯನ್ ಪರ್ವತಶ್ರೇಣಿಯು ನೈಋತ್ಯ ಮಾರುತಗಳನ್ನು ತಡೆಯುತ್ತಿದ್ದ ಕಾರಣ ಈ ಹತ್ತು ನದಿಗಳಲ್ಲಿ ಸದಾ ನೀರನ್ನು ಹರಿಸುತ್ತಿತ್ತು. ಇಂದಿನ ವಾಯವ್ಯ ಭಾರತ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಪ್ರದೇಶದಲ್ಲಿ ಸರಸ್ವತಿ ನದಿ, ಸಿಂಧು ನದಿ ಹಾಗೂ ಏಳು ಉಪನದಿಗಳು ಹರಿಯುತ್ತಿದ್ದು, 'ಸಪ್ತ ಸಿಂಧು' ಪ್ರದೇಶವೆಂದು ಹೆಸರಾಗಿತ್ತು.

ಸಪ್ತಸಿಂಧು ಪ್ರದೇಶದಲ್ಲಿ ಇಂದಿಗೆ ಕ್ರಿ.ಪೂ.7000-ಕ್ರಿ.ಪೂ.5500 ವರ್ಷಗಳ ಹಿಂದೆ ಮೊದಲ ಬಾರಿಗೆ ಮಾನವ ಜನಾಂಗವು ನೆಲೆಸಿತು, ತನ್ನದೇ ನಾಗರಿಕತೆಯನ್ನು ಬೆಳೆಸಿತು. ಅದುವೇ ಮೆಹರ್ಘಡ-1 ನಾಗರಿಕತೆ. ಇದು ಕ್ರಿ.ಪೂ. 3300ರ ವೇಳೆಗೆ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ಕ್ರಿ.ಪೂ.300ರವರೆಗೂ ಮೆರೆದ ಈ ನಾಗರಿಕತೆಯು ಕ್ರಮೇಣ ವೈದಿಕ ನಾಗರಿಕತೆಯ ಜತೆಯಲ್ಲಿ ಸೇರಿಹೋಯಿತು. ಈ ನಾಗರಿಕತೆಯು ಪ್ರಧಾನವಾಗಿ ಸರಸ್ವತಿ ನದಿ (ಗಗ್ರಾ-ಹಕ್ಕರ್) ಮತ್ತು ಸಿಂಧು ನದಿಯ ಇಕ್ಕೆಲಗಳಲ್ಲಿ ವ್ಯಾಪಿಸಿದ್ದ ಕಾರಣ, ಇದನ್ನು ಸಿಂಧು-ಸರಸ್ವತಿ ನಾಗರಿಕತೆ ಎಂದು ಕರೆದರು. 10 ಲಕ್ಷ ಚ.ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ 2,600 ನಗರಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಕೇವಲ ಶೇ.2ರಷ್ಟು ನಗರಗಳ ಉತ್ಖನನ ಮತ್ತು ಸಂಶೋಧನೆಯು ನಡೆದಿದೆ. ಹಾಗಾಗಿ ನಮಗೆ ಸಿಂಧು-ಸರಸ್ವತಿ ನಾಗರಿಕತೆಯ ಬಗ್ಗೆ ಎಷ್ಟು ತಿಳಿದಿದೆಯೋ, ಅದಕ್ಕಿಂತಲೂ ಹೆಚ್ಚಿನದನ್ನು ತಿಳಿಯಬೇಕಾಗಿದೆ.

ಸಿದ್ಧ ಪದ್ಧತಿಯ ಋಷಿ.

ಸಾರ್ವಜನಿಕ ನೈರ್ಮಲ್ಯ: ಸಿಂಧು-ಸರಸ್ವತಿ ನಾಗರಿಕತೆಯ ಜನರ ಆರೋಗ್ಯಪ್ರಜ್ಞೆಯು ಅದ್ಭುತವಾಗಿತ್ತು. ಜಗತ್ತಿನ ಯಾವುದೇ ನಾಗರಿಕತೆಯಲ್ಲಿ ಕಂಡುಬರದಂಥ ವ್ಯವಸ್ಥಿತ ನಗರ ಯೋಜನೆಯನ್ನು ಇಲ್ಲಿ ಕಾಣಬಹುದು. ನಗರಗಳಲ್ಲಿ ಪ್ರಧಾನ ರಸ್ತೆಯು ಉತ್ತರದಿಂದ ದಕ್ಷಿಣಕ್ಕೆ ಸಾಗುತ್ತಿತ್ತು. ಈ ಪ್ರಧಾನ ರಸ್ತೆಯನ್ನು ಅಲ್ಲಲ್ಲಿ ಛೇದಿಸುವ ಅಡ್ಡರಸ್ತೆಗಳಿದ್ದವು. ಹಾಗಾಗಿ ಮನೆಗಳನ್ನು ಕಟ್ಟಲು ನಿರ್ದಿಷ್ಟ ಚೌಕಗಳು ರೂಪುಗೊಳ್ಳುತ್ತಿದ್ದವು. ಅಲ್ಲಿ ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ ಮನೆಗಳಿದ್ದವು. ಪ್ರತಿಯೊಂದು ಮನೆಯಲ್ಲಿ ಶೌಚ ಮತ್ತು ಸ್ನಾನದ ಗೃಹಗಳಿದ್ದವು. ಪ್ರತಿಯೊಂದು ಮನೆಯ ಮುಂಭಾಗ ದಲ್ಲಿ ಮುಚ್ಚಳವಿರುವ ಕಸದ ತೊಟ್ಟಿಗಳು ಇರುತ್ತಿದ್ದವು. ಪ್ರತಿದಿನ ನಸುಕಿನಲ್ಲಿಯೇ ಅವುಗಳ ಸ್ವಚ್ಛತಾಕಾರ್ಯ ಪೂರ್ಣಗೊಳ್ಳುತ್ತಿತ್ತು. ಪ್ರತಿಯೊಂದು ಮನೆಯ ಹಿಂಭಾಗದಲ್ಲಿ ಕುಡಿಯುವ ನೀರಿನ ಬಾವಿಗಳಿರುತ್ತಿದ್ದವು. ಸಾರ್ವಜನಿಕ ಸ್ನಾನದ ಕೊಳಗಳು ಹಾಗೂ ಅವುಗಳಿಗೆ ಹೊಂದಿಕೊಂಡಂತಿ ರುವ ಕಟ್ಟಡಗಳು ಬಹುಶಃ ಪೂಜಾಸ್ಥಳ ಆಗಿದ್ದಿರಬಹುದು. ಕೆಲವು ನಗರಗಳಲ್ಲಿ ಮಳೆನೀರಿನ ಕೊಯ್ಲು ವ್ಯವಸ್ಥಿತವಾಗಿ ನಡೆಯುತ್ತಿತ್ತು. ಕುಡಿಯುವ ನೀರಿಗೆ ಯಾವ ತೊಂದರೆಯೂ ಇರಲಿಲ್ಲ.

ನೀರಾವರಿ ಮತ್ತು ಕೃಷಿ ಚಟುವಟಿಕೆಗಳು ಅತ್ಯುತ್ತಮ ಸ್ತರವನ್ನು ತಲುಪಿದ್ದವು. ಹಸು, ಎಮ್ಮೆ, ಮೇಕೆ, ಕುರಿ, ಹಂದಿಗಳನ್ನು ಸಾಕಿಕೊಂಡಿದ್ದರು. ಧಾನ್ಯಗಳನ್ನು ಒಕ್ಕುವ ಒರಳುಗಳು, ಬೀಸುವ ಕಲ್ಲುಗಳು ಹಾಗೂ ಕುಟ್ಟುವ ಉಪಕರಣಗಳು ದೊರೆತಿವೆ. ಕುಂಭ ಕಲೆಯು ಅವರಿಗೆ ಚೆನ್ನಾಗಿ ತಿಳಿದಿತ್ತು. ಮನೆಗಳಲ್ಲಿ ದೊಡ್ಡ ಒಲೆಗಳು ಇರುತ್ತಿದ್ದವು. ಇಂದಿನ ತಂದೂರಿ ಒಲೆಗಳಂಥವೂ ದೊರೆತಿವೆ. ಬಹುಶಃ ಅವರು ರೊಟ್ಟಿ ಮತ್ತು ಗಂಜಿಯನ್ನು ನಿತ್ಯ ಸೇವಿಸುತ್ತಿದ್ದಿರಬೇಕು. ಅನ್ನವನ್ನು ಮಾಡುವುದೂ ಅವರಿಗೆ ಗೊತ್ತಿರಬೇಕು. ಹಾಗಾಗಿ ಸಿಂಧು-ಸರಸ್ವತಿ ಸಂಸ್ಕೃತಿಯ ಜನರು ಸಮತೋಲಿತ ಆಹಾರವನ್ನು ಸೇವಿಸುತ್ತಿದ್ದು, ಆರೋಗ್ಯವಂತರಾಗಿ ಇದ್ದಿರಬೇಕು ಎಂದು ಭಾವಿಸಬಹುದು.

ಭಾರತದ ಪಶ್ಚಿಮದಲ್ಲಿ ಲೋಥಾಲ್ ನಗರವು ಬಂದರು ಕಟ್ಟೆಯಾಗಿತ್ತು. ಇಲ್ಲಿಂದ ಹೊರಟ ಹಡಗುಗಳು ಪರ್ಷಿಯಾ, ಮೆಸೊಪೊಟೋಮಿಯ ಮತ್ತು ಈಜಿಪ್ಷಿಯನ್ ನಾಗರಿಕತೆಯ ಜನರೊಡನೆ ವ್ಯಾಪಾರ-ವಾಣಿಜ್ಯ-ವಹಿವಾಟುಗಳನ್ನು ನಡೆಸುತ್ತಿದ್ದವು. ಚೀನಾ ದೇಶದೊಡನೆಯೂ ವಹಿವಾಟು ಇದ್ದಿರಬೇಕು. ಹಾಗಾಗಿ ಈ ಎಲ್ಲ ಸಂಸ್ಕೃತಿಯಲ್ಲಿ ಇದ್ದಂಥ ವೈದ್ಯಕೀಯ ಜ್ಞಾನವು, ಸಿಂಧು-ಸರಸ್ವತಿ ಜನರಲ್ಲೂ ಇದ್ದಿರಬೇಕು ಎಂದು ನಾವು ಸರಳವಾಗಿ ತರ್ಕಿಸಬಹುದು. ಅವುಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು:

- ಸಿಂಧು-ಸರಸ್ವತಿಯ ಯಾವ ನಗರದಲ್ಲಿಯೂ ವ್ಯವಸ್ಥಿತ ಆಸ್ಪತ್ರೆಗಳು ಇದ್ದ ಬಗ್ಗೆ ಪುರಾವೆಗಳು ದೊರೆತಿಲ್ಲ. ಸಾರ್ವಜನಿಕ ನೈರ್ಮಲ್ಯದ ಬಗ್ಗೆ ಇಷ್ಟೆಲ್ಲ ಕಾಳಜಿ ತೆಗೆದುಕೊಂಡಿರುವವರು, ವ್ಯವಸ್ಥಿತ ಆಸ್ಪತ್ರೆಗಳನ್ನು ಕಟ್ಟಿರಲಿಲ್ಲ ಎಂದರೆ ನಂಬಲು ಕಷ್ಟ. ಆ ಕಟ್ಟಡಗಳು ನಮಗೆ ದೊರೆತಿಲ್ಲ, ಅಷ್ಟೆ. ಬಹುಶಃ ಮುಂದಿನ ದಿನಗಳಲ್ಲಿ ದೊರೆಯಬಹುದು.
- ಇವರು ಕಪಾಲರಂಧ್ರನವನ್ನು (ಟ್ರೆಫೈನೇಶನ್) ಮಾಡುತ್ತಿದ್ದರು. ಕೋಲ್ಕತ್ತದಲ್ಲಿರುವ ಭಾರತೀಯ ಮಾನವಶಾಸ್ತ್ರದ ಸರ್ವೇಕ್ಷಣ ವಿಭಾಗದ ಉಗ್ರಾಣದಲ್ಲಿ ಕ್ರಿ.ಪೂ.4300 ವರ್ಷಗಳಷ್ಟು ಹಿಂದಿನ ಕಪಾಲವಿದೆ. ಈ ಕಪಾಲದ ಕಪಾಲರಂಧ್ರನವು ಕ್ರಮೇಣ ಗುಣಮುಖವಾಗುತ್ತಿದ್ದ, ಅಂದರೆ ಹೊಸ ಮೂಳೆ ಬೆಳೆಯುತ್ತಿದ್ದ ಲಕ್ಷಣಗಳು ಇವೆ. ಕಪಾಲರಂಧ್ರನವನ್ನು ನಡೆಸಲು ಆಸ್ಪತ್ರೆಯಂಥ ಒಂದು ಕಟ್ಟಡ ಇದ್ದಿರಲೇಬೇಕು.
- ಕ್ರಿ.ಪೂ.7000 ವರ್ಷಗಳಷ್ಟು ಹಿಂದೆಯೇ ಆರಂಭವಾದ ಮೆಹರ್ಘಡ ನಾಗರಿಕತೆಯ ಕಪಾಲಗಳನ್ನು ಅಧ್ಯಯನ ಮಾಡಿದಾಗ, ಹಲ್ಲುಗಳನ್ನು ಕೊರೆದು ಅದರಲ್ಲಿ ಜಡವಸ್ತುವನ್ನು ತುಂಬಿರುವ ಉದಾಹರಣೆಗಳು ದೊರೆತಿವೆ. ಹಲ್ಲಿನಲ್ಲಿ ರಂಧ್ರವನ್ನು ಮಾಡಲು ಅವರು 'ಬೋ-ಡ್ರಿಲ್' ಎಂಬ ಸರಳ ಸಾಧನವನ್ನು ಬಳಸುತ್ತಿದ್ದರು. ಇಲ್ಲಿ ದೊರೆತ ಪೂರ್ಣ ಅಸ್ಥಿಪಂಜರಗಳ ಬಾಯಿಯನ್ನು ಗಮನಿಸಿದಾಗ, ಅವು ಬಹುಪಾಲು ಆರೋಗ್ಯವಾಗಿದ್ದವು.
- ಇವರು ಸಸ್ಯಜನ್ಯ-ಪ್ರಾಣಿಜನ್ಯ-ಖನಿಜಜನ್ಯ ವಸ್ತುಗಳನ್ನು ಬಳಸಿ ನಾನಾ ಔಷಧಿಗಳನ್ನು ತಯಾರಿಸುತ್ತಿದ್ದಿರಬೇಕು. ಜಿಂಕೆಯ ಕೊಂಬು ಹಾಗೂ ಬೆಣಸ ಅಥವಾ ಕಟ್ಲ್ ಮೀನಿನ ಮೂಳೆಗಳು ದೊರೆತಿವೆ.
- ಆಯುರ್ವೇದ, ಸಿದ್ಧ (ಸಿದ್ಧರ ಮುದ್ರೆ) ಹಾಗೂ ಯೋಗ ವಿಜ್ಞಾನಗಳು (ಪಶುಪತಿನಾಥ ಮುದ್ರೆ) ಸಿಂಧು-ಸರಸ್ವತಿ ಸಂಸ್ಕೃತಿಯಲ್ಲಿಯೇ ಜನಿಸಿದವು.
- **ತಕ್ಷಶಿಲಾ ವಿವಿ:** ಸಿಂಧು-ಸರಸ್ವತಿ ಒಡಲಿನಲ್ಲಿ ಸರಿಸುಮಾರು ಕ್ರಿ.ಪೂ.1500ರ ಆಸುಪಾಸಿನಲ್ಲಿ ಜನ್ಮತಳೆದ ಋಗ್ವೇದದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಮೂಲಭೂತ ಮಾಹಿತಿ ದೊರೆಯುತ್ತದೆ. ಋಗ್ವೇದದ ಉಪವೇದವಾಗಿ ಆಯುರ್ವೇದವು ಉದಯಿಸಿತು. ಅಥರ್ವಣ ವೇದವು ಆರೋಗ್ಯದ ವಿಸ್ತೃತ ವಿವರಣೆಯನ್ನು ಒಳಗೊಂಡಿದೆ. ವೈದಿಕ ಯುಗದ ವೈದ್ಯಕೀಯ ಸೌಲಭ್ಯಗಳನ್ನು ಅರಿಯಲು ಬಹುಶಃ ತಕ್ಷಶಿಲಾ ವಿಶ್ವವಿದ್ಯಾಲಯದ ಕಾಲಕ್ಕೆ ಬರಬೇಕು. ಇದು ಸುಮಾರು ಕ್ರಿ.ಪೂ.5ನೆಯ ಶತಮಾನದಲ್ಲಿ ಆರಂಭವಾಗಿ ಕ್ರಿ.ಶ. 5ನೆಯ ಶತಮಾನದವರೆಗೆ, ಸುಮಾರು 1000 ವರ್ಷಗಳ ಕಾಲ ಮೆರೆಯಿತು. ಭಾರತ, ಚೀನಾ, ಗ್ರೀಸ್, ಪರ್ಷಿಯಾ, ಬ್ಯಾಬಿಲೋನಿಯ, ಈಜಿಪ್ಟ್, ಫೊನೀಶಿಯ, ಸಿರಿಯ, ಅರೇಬಿಯಾ, ಶ್ರೀಲಂಕಾ ದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ವೈದ್ಯವಿದ್ಯಾರ್ಥಿಗಳು ಅಂಗರಚನ ವಿಜ್ಞಾನ, ಶಸ್ತ್ರವೈದ್ಯಕೀಯ, ರೋಗ ವಿಜ್ಞಾನ, ಸಸ್ಯವಿಜ್ಞಾನ, ಔಷಧ ವಿಜ್ಞಾನಗಳನ್ನು ಕಲಿಯುತ್ತಿದ್ದರು. ಹತ್ತು ವಿದ್ಯಾರ್ಥಿಗಳಿಗೆ ಒಬ್ಬ ಗುರುವಿರುತ್ತಿದ್ದರು. ಗುರುಗಳು ವೈದ್ಯಕೀಯ ಸಿದ್ಧಾಂತಕ್ಕೆ ಎಷ್ಟು ಆದ್ಯತೆಯನ್ನು ಕೊಡುತ್ತಿದ್ದರೋ ಅಷ್ಟೇ ಆದ್ಯತೆಯನ್ನು ಪ್ರಾಯೋಗಿಕ ಚಟುವಟಿಕೆಗಳಿಗೆ ನೀಡುತ್ತಿದ್ದರು.

ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಚರಕ ಮಹರ್ಷಿಗಳು ಅಧ್ಯಯನ ಮಾಡಿದರು. ಬಹುಶಃ ಚರಕ ಸಂಹಿತೆಯನ್ನೂ ಅವರು ಇಲ್ಲಿಯೇ ರಚಿಸಿರಬೇಕು. ಗೌತಮ ಬುದ್ಧನಿಗೆ ಚಿಕಿತ್ಸೆಯನ್ನು ನೀಡಿದ ಜೀವಕ ಮಹರ್ಷಿಯು ಇಲ್ಲಿಯೇ ಅಧ್ಯಯನವನ್ನು ಮಾಡಿದ್ದರು. ಸುಶ್ರುತ ಮಹರ್ಷಿಗಳೂ ಇಲ್ಲಿಯೇ ಅಧ್ಯಯನ ಮಾಡಿರಬೇಕು ಎನ್ನುವ ಅಭಿಪ್ರಾಯವಿದೆ. ಆಯುರ್ವೇದದಲ್ಲಿ ಬರುವ ಅಷ್ಟಾಂಗ ಹೃದಯದ ಐದನೆಯ ಅಂಗವೇ ಶಲ್ಯತಂತ್ರ ಅಥವಾ ಶಸ್ತ್ರವೈದ್ಯಕೀಯ. ಶಲ್ಯತಂತ್ರವು ಚುಚ್ಚಿಕೊಂಡ ದರ್ಭೆಯನ್ನು ತೆಗೆಯುವುದರಿಂದ ಹಿಡಿದು ಉದರದಲ್ಲಿರುವ ಮೃತಶಿಶುವನ್ನು ಛೇದಿಸಿ ಹೊರತೆಗೆಯುವವರೆಗೂ ಹಲವು ತಂತ್ರಗಳನ್ನು ವಿವರಿಸುತ್ತದೆ. ಮೂಗು, ಕಿವಿಗಳ ವಿರೂಪವನ್ನು ಸರಿಪಡಿಸುತ್ತಿದ್ದ ಸುರೂಪಿಕಾ ಶಸ್ತ್ರಚಿಕಿತ್ಸೆ, ಕಣ್ಣುಪೊರೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆ, ಮೂತ್ರಾಶಯದಲ್ಲಿ ಬೆಳೆದ ಕಲ್ಲುಗಳನ್ನು ನಿವಾರಿಸುವ ಶಸ್ತ್ರಚಿಕಿತ್ಸೆ ಇತ್ಯಾದಿಗಳನ್ನು ನಡೆಸುತ್ತಿದ್ದರು. ಇದಕ್ಕಾಗಿ ಸುಮಾರು 120 ಯಂತ್ರಗಳನ್ನು ಅಂದರೆ ಉಪಕರಣಗಳನ್ನು ಹಾಗೂ 300ಕ್ಕೂ ಹೆಚ್ಚು ಶಸ್ತ್ರಗಳನ್ನು ರೂಪಿಸಿದ್ದರು. ಇವುಗಳಲ್ಲಿ ನಳಿಕೆಯಂಥವೂ ಇದ್ದವು. ವಿಶೇಷವಾದ ಕ್ಷಾರದ್ರಾವಣದಿಂದ ಶಸ್ತ್ರಗಳನ್ನು ಶುದ್ಧೀಕರಿಸುತ್ತಿದ್ದರು. ಕ್ಷಾರ ಕರ್ಮ ಮತ್ತು ಅಗ್ನಿಕರ್ಮ ಎಂಬ ವಿಶೇಷ ಶಸ್ತ್ರಚಿಕಿತ್ಸಾ ತಂತ್ರಗಳನ್ನೂ ಬಳಸುತ್ತಿದ್ದರು.

10,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದ ತಕ್ಷಶಿಲಾದಂಥ ದೊಡ್ಡ ವಿಶ್ವವಿದ್ಯಾಲಯದಲ್ಲಿ ಆಸ್ಪತ್ರೆಗಳು ಇರಲಿಲ್ಲ ಎಂದರೆ ನಂಬಲು ಕಷ್ಟ. ಆದರೆ ಆಸ್ಪತ್ರೆಗಳ ಕುರುಹುಗಳು ನಮಗೆ ದೊರೆತಿಲ್ಲ. ಬಹುಶಃ ಸಿಂಧು ಸರಸ್ವತಿ ಸಂಸ್ಕೃತಿಯ ಶೇ.98ರಷ್ಟು ನಗರಗಳ ಉತ್ಖನನವನ್ನು ನಡೆಸಿದಾಗ, ಈ ಬಗ್ಗೆ ಹೆಚ್ಚಿನ ಮಾಹಿತಿಯು ದೊರೆಯಬಹುದು.

ಕೇವಲ ಮುಖಪುಟ ನೋಡಿ ವೀರಾವೇಶವೇ?

ವಚನ ವಿವಾದ
ರವಿ ಹಂಜ್
vveditoped@gmail.com

ಷಟ್‌ಸ್ಥಲ ಸಿದ್ಧಾಂತದ ಪ್ರತಿಪಾದಕರಾದ ಚೆನ್ನಬಸವಣ್ಣನ ಹುಟ್ಟಿನ ಬಗ್ಗೆ ಡಾ. ಎಂ.ಎಂ. ಕಲಬುರ್ಗಿಯವರು ಸಂಶೋಧನೆ ನಡೆಸಿ, ''ಚೆನ್ನಬಸವಣ್ಣನು ಬಸವಣ್ಣನವರ ತಂಗಿ ಅಕ್ಕನಾಗಮ್ಮ ಮತ್ತು ಡೋಹರ ಕಕ್ಕಯ್ಯನಿಗೆ ಹುಟ್ಟಿದವನು'' ಎಂದು ಒಬ್ಬ ವಿರಕ್ತ ಪೀಠಾಧಿಪತಿಗಳಿಗೆ ತಿಳಿಸಿದರು. ವಿರಕ್ತರು, ''ಓಹ್, ಹಾಗಿದ್ದರೆ ಈ ವಿಚಾರವನ್ನು ಏಕೆ ಎಲ್ಲಿಯೂ ದಾಖಲಿಸಿಲ್ಲ?'' ಎಂದಿದ್ದಕ್ಕೆ. ''ಕೆಳಜಾತಿಯ ಕಕ್ಕಯ್ಯನನ್ನು ಅಕ್ಕನಾಗಮ್ಮ ಮದುವೆಯಾಗಿದ್ದಳು ಎಂದರೆ ಅದು ಅವಮಾನಕರವೆಂದು ಬಗೆದು ಅದನ್ನು ಮುಚ್ಚಿಡಲಾಗಿದೆ'' ಎಂದರು. ಇದು ಕಲಬುರ್ಗಿಯವರ ರೋಚಕ ಸಂಶೋಧನೆಯಾಗಿತ್ತು. ''ಸರಿ, ಅದಕ್ಕೆ ಆಧಾರವೇನು?'' ಎಂದಿದ್ದಕ್ಕೆ, ''ಕೆಲವು ಪುರಾಣಗಳಲ್ಲಿ ಚೆನ್ನಬಸವಣ್ಣನನ್ನು ಕಕ್ಕಯ್ಯನ 'ಪ್ರಸಾದದಿಂದ' ಹುಟ್ಟಿದವನು ಎಂದಿದೆ. ವಾಚ್ಯವಾಗಿ ಹೇಳಲಾಗದ್ದನ್ನು ಪುರಾಣಗಳಲ್ಲಿ ಹೀಗೆ ಸೂಚ್ಯವಾಗಿ ಹೇಳಲಾಗಿದೆ'' ಎಂಬುದು ಅವರ ಪುರಾವೆಯಾಗಿತ್ತು.

ಅವರ ನವರಸ-ಸಂಶೋಧನೆಯಿಂದ ರೋಮಾಂಚನಗೊಂಡ ವಿರಕ್ತ ಮಹಾಸ್ವಾಮಿಗಳು 26.10.1980ರ ಕಾರ್ಯಕರ್ತರ ಮಹಾಸಭೆಯಲ್ಲಿ, ''ಚೆನ್ನಬಸವಣ್ಣನು ಡೋಹರ ಕಕ್ಕಯ್ಯನ ಮಗ. ಈ ಜನ್ಮರಹಸ್ಯವನ್ನು ನಾಡಿನ ಖ್ಯಾತ ಸಂಶೋಧಕರು ಕಂಡುಹಿಡಿದಿದ್ದಾರೆ'' ಎಂದು ಘೋಷಣೆ ಮಾಡಿದ್ದರು.

ಇದೇ ತರ್ಕವನ್ನು 'ನಿನ್ನ ಪ್ರಸಾದ ನಾನಯ್ಯ' ಎಂಬ ವಚನ ವಿನಯದ ಮಾತಿಗೆ ಅನ್ವಯಿಸಿದರೆ ಆಗುವ ಅನರ್ಥ ಎಂಥದ್ದಿರಬಹುದು?! ಖುದ್ದು ಚೆನ್ನಬಸವಣ್ಣನೇ ನಾನು ನಿಮ್ಮ ಪ್ರಸಾದ ಎಂದು ಬಸವಣ್ಣನ ಕುರಿತು ಈ ವಚನದಲ್ಲಿ ಹೇಳಿದ್ದಾನೆ: 'ಧರೆಯಾಕಾಶವಿಲ್ಲದಂದು, ಅನಲ ಪವನ ಜಲ ಕೂರ್ಮರಿಲ್ಲದಂದು, ಚಂದ್ರಸೂರ್ಯರೆಂಬವರು ಕಳೆದೋರದಂದು, ಆತ್ಮಸ್ಥಲ ಅನುಭಾವಕ್ಕೆ ಬಾರದಂದು, ನಿತ್ಯ ನಿಜಲಿಂಗವ ಬಲ್ಲರಾರಯ್ಯ ನೀವಲ್ಲದೆ? ಮಹಾಘನಕ್ಕೆ ಘನ ವಾಹನವಾಗಿ, ಅಗಮ್ಯಸ್ಥಾನದಲ್ಲಿ ನಿಂದು ಭರಿತರಾಗಿರಬಲ್ಲರಾರಯ್ಯಾ ನೀವಲ್ಲದೆ? ನಿಮ್ಮ ಒಕ್ಕು ಮಿಕ್ಕ ಶೇಷಪ್ರಸಾದದ ಕಾರುಣ್ಯದ ಶಿಶುವಾಗಿ ಒಡಲೊಳಗೆ ಇದ್ದಲ್ಲಿ ವಿಭೂತಿ ಪಟ್ಟವ ಕಟ್ಟಿ, ಹಸ್ತಮಸ್ತಕಸಂಯೋಗವ ಮಾಡಿ ಎನ್ನನುಳುಹಿದರಾರಯ್ಯ ನೀವಲ್ಲದೆ? ಕೂಡಲಚೆನ್ನಸಂಗಮದೇವರ ಸಾಕ್ಷಿಯಾಗಿ ನಾನು ನಿಮ್ಮ ಕರುಣದ ಕಂದನೆಂಬುದ ಮೂರು ಲೋಕ ಬಲ್ಲುದು ಕಾಣಾ ಸಂಗನಬಸವಣ್ಣ'. ಇಲ್ಲಿ ಡಾ. ಎಂ.ಎಂ.ಕಲಬುರ್ಗಿಯವರ ಸಂಶೋಧನಾ 'ಪ್ರಸಾದ'ದ ತರ್ಕವನ್ನು ಅನ್ವಯಿಸಿದರೆ ಆಗುವ ಅಧ್ವಾನ ವನ್ನು ಯೋಚಿಸಿದರೆ... ಓಂ ಶ್ರೀ ಗುರು ಬಸವಲಿಂಗಾಯ ನಮಃ!

ಇನ್ನು 'ವೀರಶೈವ' ಪದವನ್ನು ವಚನಗಳಲ್ಲಿ ತುರುಕಲಾಗಿದೆ ಎನ್ನುವವರು ಪ್ರಮುಖವಾಗಿ ಖ್ಯಾತ ಸಂಶೋಧಕರಾದ ಎಂ.ಎಂ.ಕಲಬುರ್ಗಿಯವರ ಕಡೆ ಬೆರಳು ತೋರುತ್ತಾರೆ. ಅದಕ್ಕೆ ತಕ್ಕಂತೆ ಡಾ.ಕಲಬುರ್ಗಿಯವರು ವೀರಶೈವ ಎಂಬ ಪದಬಳಕೆಯಾಗಿರುವ ಬಸವ, ಅಲ್ಲಮ, ಅಕ್ಕನ ವಚನಗಳನ್ನು ಪ್ರಕ್ಷೇಪ ವಚನಗಳೆಂದು ತಿರಸ್ಕರಿಸುತ್ತಾರೆ (ಅವರ ಪೂರ್ವೋಕ್ತ ಕೃತಿ, ಪುಟ 14). ಆದರೆ ಅವು ಏಕೆ ಪ್ರಕ್ಷೇಪ ಎನ್ನಲು ಸಮರ್ಥ ಕಾರಣಗಳನ್ನು ಕೊಡುವುದಿಲ್ಲ. ಅದಲ್ಲದೆ ಲಿಂಗಾಯತ ಎಂಬ ಪದಬಳಕೆಯ ವಚನಗಳು ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವುದಕ್ಕೆ ಸಹ ಅವರು ಯಾವುದೇ ಸಮಜಾಯಿಷಿ ಕೊಟ್ಟಿಲ್ಲ.

ಹೀಗಿದ್ದೂ, ವೀರಶೈವ ಎಂದಿರುವ ಎಲ್ಲಾ ಪ್ರಕ್ಷಿಪ್ತ ವಚನಗಳನ್ನು ಇವರ ಸಂಪಾದಕತ್ವದಲ್ಲೇ ಅಧಿಕೃತವಾಗಿ ಪ್ರಕಟಿಸಲಾಗಿದೆ... ಓಂ ಶ್ರೀ ಬಸವಲಿಂಗಾಯ ನಮಃ!

ಡಾ. ಕಲಬುರ್ಗಿಯವರ ಕೃತಿ 'ಲಿಂಗಾಯತ ಸ್ವತಂತ್ರ ಧರ್ಮ'ದಲ್ಲಿನ 'ವೀರಶೈವ ಇತಿಹಾಸ ಮತ್ತು ಭೂಗೋಲ' ಎಂಬ ಅಧ್ಯಾಯದಲ್ಲಿ ''ಹದಿಮೂರನೇ ಶತಮಾನದ ಪಾಲ್ಕುರಿಕೆ ಸೋಮನಾಥನ ತೆಲುಗು ಭಾಷೆಯಲ್ಲಿರುವ 'ಬಸವಪುರಾಣಮು'ದಲ್ಲಿ ಲಿಂಗವಂತ, ವೀರಮಾಹೇಶ್ವರ ಪದಗಳಿವೆಯಾದರೂ ವೀರಶೈವ ಪದ ಕಂಡುಬರುವುದಿಲ್ಲ'' ಎನ್ನುತ್ತಾ, ''ಬಸವಪುರಾಣವನ್ನು ಕನ್ನಡಕ್ಕೆ ಅನುವಾದಿಸಿದ ಭೀಮಕವಿಯು (ಕ್ರಿ.ಶ. 1368) ಕೆಲವೊಮ್ಮೆ ಅಲ್ಲಿಯ ವೀರಮಾಹೇಶ್ವರ ಪದಕ್ಕೆ ಬದಲು ಇಲ್ಲಿ ವೀರಶೈವ ಪದವನ್ನು ಬಳಸಿದ್ದಾನೆ. ಕನ್ನಡದಲ್ಲಿ ವೀರಶೈವ ಪದ ಕಂಡುಬರುವುದು ಇದೇ ಮೊದಲು. ಹಾಗಾಗಿ ವೀರಶೈವ ಪದ ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣಮು ಮತ್ತು ಭೀಮಕವಿಯ ಕನ್ನಡ ಬಸವಪುರಾಣದ ಮಧ್ಯದ ಕಾಲಾವಧಿಯಲ್ಲಿ ಹುಟ್ಟಿದೆಯೆಂದು ಸ್ಪಷ್ಟವಾಗಿ ಹೇಳಬಹುದು'' ಎನ್ನುತ್ತಾರೆಯೇ ಹೊರತು, ಇದರಲ್ಲಿ ಲಿಂಗಾಯತ ಪದವೂ ಇಲ್ಲದ್ದನ್ನು ಮಾತ್ರ ಅವರು ಹೇಳುವುದಿಲ್ಲ. ಹಾಗೆಯೇ ಮುಂದುವರಿಯುತ್ತ ಡಾ. ಕಲಬುರ್ಗಿಯವರು, ''ಈ ಸಂದರ್ಭದಲ್ಲಿ 'ಆಂಧ್ರ ಪ್ರದೇಶದ ವೀರಶೈವ' ವಿಷಯವನ್ನು ಕುರಿತ ಪಿಎಚ್‌ಡಿ ಪ್ರಬಂಧದಲ್ಲಿ ಹೇಳಲಾಗಿರುವ 'Palakuriki Somanatha was the earliest to use word Virashaiva in Andhra. In his Chaturveda Saram, Somanatha describes lord Hari as Virashaiva, because the latter performed certain heroic deeds, such as offering his own eyes to Shiva, as a token of deep devotion. In Basava Puranam however, he appears to have given deeper meaning to Virashaiva, though the word was not actually used' (irashaiva in Andhra, K. Lalitamba p 2) ಎಂಬ ಅಭಿಪ್ರಾಯವನ್ನು ಅವಶ್ಯ ಗಮನಿಸಬೇಕು'' ಎನ್ನುತ್ತಾರೆ.

ಆದರೆ ಈ ಮೇಲಿನ ಪಿಎಚ್‌ಡಿ ಉದಾಹರಣೆಯಲ್ಲೇ ''ಪಾಲ್ಕುರಿಕೆ ಸೋಮನಾಥನು ತನ್ನ 'ಚಾತುರ್ವೇದ ಸಾರಂ' ಕೃತಿಯಲ್ಲಿ ವೀರಶೈವ ಪದವನ್ನು ಆಂಧ್ರದಲ್ಲಿ ಪ್ರಪ್ರಥಮವಾಗಿ ಬಳಸಿದ್ದಾನೆ. ಬಸವಪುರಾಣದಲ್ಲಿ ವೀರಶೈವ ಪದವನ್ನು ಬಳಸದಿದ್ದರೂ ಅದನ್ನು ಇನ್ನಷ್ಟು ಗಾಢವಾಗಿಸಿದ್ದಾನೆ'' ಎನ್ನುವ ಲಲಿತಾಂಬ ಅವರ ಇಂಗ್ಲಿಷ್ ಒಕ್ಕಣೆಯನ್ನು ಅರಿಯುವಷ್ಟು ಇಂಗ್ಲಿಷ್ ಪ್ರೌಢಿಮೆ ಡಾ. ಕಲಬುರ್ಗಿಯವರಿಗೆ ಇರಲಿಲ್ಲವೇ?! ಇದ್ದರೆ ಈ ಒಕ್ಕಣೆಯನ್ನು ಬಿಟ್ಟು ಉಳಿದದ್ದನ್ನು ಏಕೆ ಹೆಕ್ಕಿಕೊಂಡರು?... ಓಂ ಶ್ರೀ ಗುರು ಬಸವಲಿಂಗಾಯ ನಮಃ!

ಇಂಥ ಅವಘಡಗಳ ಸಾಲು ಸಾಲು ಸಾಧನೆಗಳು ಕಲಬುರ್ಗಿಯವರ ತೆಕ್ಕೆಯಲ್ಲಿವೆ. ಇಂಥ ಸಂಶೋಧಕರನ್ನೇ ಇಂದಿನ ರಾಜಕಾರಣಪ್ರೀತ ಆಧುನಿಕ ಲಿಂಗಾಯತ ಧರ್ಮದ ಹೋರಾಟಗಾರರು ತಮ್ಮ 'ಸಂಶೋಧನಾ ಲಾಂಛನ'ವಾಗಿರಿಸಿಕೊಂಡು ಅವರ 'ಪ್ರಸಾದ'ದ ಸಿದ್ಧಮಾದರಿ ಸಂಶೋಧನೆಯಲ್ಲಿ ವಚನಗಳನ್ನು ಗೆರೆ ಕೆರೆದರ್ಗಾ ಮುರ್ಗಾ ಚರ್ಗಾ ಜಮಾಖರ್ಚುದಾರರು, ಕಮ್ಯುನಿಸ್ಟರು, ಉದಾರಿಗಳು, ವಾಟಾಪಿವೀರರು ತಮ್ಮ ತಮ್ಮ ಮೂಗಿನ ನೇರಕ್ಕೆ ಸಿದ್ಧಾಂತಕ್ಕೆ ವಚನಗಳನ್ನು ವ್ಯಾಖ್ಯಾನಿಸಿ/ಸಮೀಕರಿಸಿ ಮಾಡಿರುವ ಅಧ್ವಾನಗಳು, ಜಗದಗಲ, ಮುಗಿಲಗಲ... ಓಂ ಶ್ರೀ ಗುರು ಬಸವಲಿಂಗಾಯ ನಮಃ!

ಇನ್ನು, ಅಂದು ಇವರ ಸಂಶೋಧನೆ ನಂಬಿ ಭೀಷಣ-ಭಾಷಣ ಮಾಡಿದ್ದ ವಿರಕ್ತರ ಮುಂತಲೆಗಳು ತಮ್ಮ ಹೆಸರಿನ ಹಿಂದಿರುತ್ತಿದ್ದ ಶ್ರೀ ಮ.ನಿ.ಪ್ರ.ಕ್ಕೆ ತಿಲಾಂಜಲಿಯಿಟ್ಟು ಮಾತೃಹೃದಯಿ, ರೈತ ಋಣಿ, ವಿದ್ಯಾಗಣಿ, ಕಲ್ಯಾಣಕಣ್ಮಣಿ, ರಂಗಜಂಗಮ ಮುಂತಾದ ಚಿಂತಕ ಬೆಡಗಿನ ಬಿರುದುಗಳೊಂದಿಗೆ ಕಲಬುರ್ಗಿ-ಸಂಶೋಧನಾ ಪರಂಪರೆಯ ಕಮ್ಯುನಿಸ್ಟ್ ಪ್ರೊಫೆಸರುಗಳು ಪೊಡಮಟ್ಟ ಗೌರವ ಡಾಕ್ಟರೇಟ್ ಇಟ್ಟುಕೊಂಡು ತಮ್ಮ ಅನುರಕ್ತಿಯನ್ನು ಮೆರೆಯುತ್ತಿರುವುದು... ಓಂ ಶ್ರೀ ಗುರು ಬಸವಲಿಂಗಾಯ ನಮಃ!

ಪ್ರಸ್ತುತ, 'ವಚನ ದರ್ಶನ' ಕೃತಿಯ ಹಿನ್ನೆಲೆಯಲ್ಲಿ ಕೇವಲ ಮುಖಪುಟ ನೋಡಿ ವೀರಾವೇಶ ಮೆರೆಯುತ್ತಿರುವ ಇವರ ನಡೆ ಹಾಸ್ಯಾಸ್ಪದ. ಇವರು, ತಮ್ಮ ವಚನ ವ್ಯಾಖ್ಯಾನ ಮಾತ್ರವೇ ಸರಿ, ಉಳಿದವರದು ತಪ್ಪು ಎಂಬ ಫರ್ಮಾನು ಹೊರಡಿಸಿದ್ದಾರೆ. ಅಷ್ಟರ ಮಟ್ಟಿಗೆ ವಚನ ಸಾಹಿತ್ಯದ ಮೇಲೆ ಕಮ್ಯುನಿಸ್ಟರ ಹಕ್ಕೊತ್ತಾಯವಾಗಿದೆ. ಈ ಹಿನ್ನೆಲೆಯಲ್ಲಿ ಒಬ್ಬ ವಾಟಾಪಿವೀರರು ವಚನ ದರ್ಶನದ ಗೌರವ ಸಂಪಾದಕರಿಗೆ ಕೇಳಿದ ವಚನ ಹೀಗಿತ್ತು: 'ಕಟ್ಟಿದ ಲಿಂಗವ ಕಿರಿದು ಮಾಡಿ, ಬೆಟ್ಟದ ಲಿಂಗವ ಹಿರಿದು ಮಾಡುವ ಪರಿಯ ನೋಡ! ಇಂತಪ್ಪ ಲೊಟ್ಟಿಮೂಳರ ಕಂಡರೆ ಗಟ್ಟಿವುಳ್ಳ ಪಾದರಕ್ಷೆಯ ತೆಗೆದುಕೊಂಡು ಲೊಟಲೊಟನೆ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ'.

ಇಂದು ತಾಯಂದಿರು ಪ್ರಾಥಮಿಕ ಶಾಲೆಯಲ್ಲಿರುವ ತಮ್ಮ ಮಕ್ಕಳಿಗೆ 'ಟಿವಿ ನೋಡಬೇಡ, ಮೊಬೈಲ್ ಮುಟ್ಟಬೇಡ, ಕಂಪ್ಯೂಟರ್ ಗೇಮ್ ಆಡಬೇಡ, ಕೇವಲ ಪುಸ್ತಕಗಳನ್ನು ಓದು, ಹೋಮ್‌ವರ್ಕ್ ಮಾಡು, ಇಲ್ಲದಿದ್ದರೆ ಹೊಡೆಯುತ್ತೇನೆ' ಎನ್ನುವುದರ ಹಿಂದಿನ ಉದ್ದೇಶವೇ ಈ ವಚನದ ಹಿಂದಿನ ಉದ್ದೇಶ ಕೂಡ. ಲಿಂಗವೆಂದು ಕಲ್ಲು ಕಟ್ಟಿಕೊಂಡು ಬಂದವರನ್ನೆಲ್ಲ ಅನುಭವ ಮಂಟಪಕ್ಕೆ ಸೇರಿಸಿಕೊಂಡ ಬಸವಣ್ಣ, ಬೇರೆಲ್ಲ ಬಿಟ್ಟು ಮೊದಲು ಲಿಂಗಪೂಜೆಯಲ್ಲಿ ಸಾಧನೆ ಮಾಡಿ ಎಂಬ ಉದ್ದೇಶವನ್ನು ಅಂಬಿಗರ ಚೌಡಯ್ಯ ಹೀಗೆ ವಾಚ್ಯವಾಗಿ ಹೇಳಿದ್ದಾನೆ. ಇದನ್ನು ಕಮ್ಯುನಿಸ್ಟ್ ಪ್ರಣೀತರು ಮೂರ್ತಿಪೂಜೆ, ದೇವಾಲಯಗಳನ್ನು ಶರಣರು ಬಹಿಷ್ಕರಿಸಿದ್ದರು ಎಂಬ ತಮ್ಮ ಸಿದ್ಧಾಂತದ ಪುರಾವೆಯಾಗಿ ಬಳಸುತ್ತಾರೆ. ಇವರ ವಾದವನ್ನು ಒಪ್ಪುವುದಾದರೆ, ಶ್ರೀಶೈಲ ಬೆಟ್ಟದ ಲಿಂಗವ ಹಿರಿದು ಮಾಡಿದ ಅಕ್ಕಮಹಾದೇವಿ, ನದಿ ಸಂಗಮದ, ಗುಹೆಯಲ್ಲಿನ ಸ್ಥಾವರದ ಲಿಂಗಗಳ ಅಂಕಿತ ಮಾಡಿಕೊಂಡ ಬಸವಣ್ಣ, ಅಲ್ಲಮರ ನಡೆಗೆ ಇದನ್ನು ಅನ್ವಯಿಸಿದರೆ ಆಗುವ ಅಧ್ವಾನ... ಓಂ ಶ್ರೀ ಗುರು ಬಸವಲಿಂಗಾಯ ನಮಃ! 'ಆರುಹ ಪೂಜಿಸಲೆಂದು ಕುರುಹ ಕೊಟ್ಟೆಡೆ, ಅರುಹ ಮರೆತು ಕುರುಹ ಪೂಜಿಸುವ ಹೆಡ್ಡರಾ ನೋಡಾ ಗುಹೇಶ್ವರಾ!!'

ವಿ.ಸೂ: ಡಾ. ಎಂ.ಎಂ.ಕಲಬುರ್ಗಿಯವರ 'ಪ್ರಸಾದ' ಸಂಶೋಧನೆಯ ವಿಚಾರದ ಪುರಾವೆ ಮತ್ತು ಹೆಚ್ಚಿನ ಮಾಹಿತಿಗೆ ಆಸಕ್ತರು ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಜಗದ್ಗುರುಗಳ ರಜತ ಮಹೋತ್ಸವದ ಸ್ಮರಣ ಸಂಚಿಕೆಯಾದ 'ಚಿನ್ಮೂಲಾದ್ರಿ ಚೇತನ'ದಲ್ಲಿನ ಎಲ್. ಬಸವರಾಜು ಅವರ ಲೇಖನವನ್ನು ಪರಾಂಬರಿಸಬಹುದು. ಅಲ್ಲದೇ ಈ ರಜತ ಮಹೋತ್ಸವದ ಸಮಾರಂಭದಲ್ಲಿ ಹಾಜರಿದ್ದ ಡಾ.ಕಲಬುರ್ಗಿಯವರಿಗೆ ಅವರ ಸಂಶೋಧನೆಗಾಗಿ ಭಕ್ತರು 'ತಕ್ಕ' ಉಡುಗೊರೆ ನೀಡಿದ್ದ ಐತಿಹಾಸಿಕ ಸತ್ಯದ ಬಗ್ಗೆ ತಮ್ಮ ಹಿರಿತಲೆಗಳನ್ನು ಪ್ರಶ್ನಿಸಬಹುದು.

(ಲೇಖಕರು ದಾವಣಗೆರೆ ಮೂಲದ ಶಿಕಾಗೊ ವಾಸಿ ಮತ್ತು ಸಾಹಿತಿ)

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜೈಲು ಸ್ವರ್ಗವಾಗದಿರಲಿ

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಚಿತ್ರನಟ ದರ್ಶನ್ ಜೈಲು ಸೇರುವಂತಾಗಿದ್ದಕ್ಕೆ ಸರಕಾರ ಮತ್ತು ಪೊಲೀಸ್ ಇಲಾಖೆಯ ಕಾರ್ಯವೈಖರಿ ಕುರಿತು ಪ್ರಶಂಸೆಗಳು ವ್ಯಕ್ತವಾದವು. ಆದರೆ ಜೈಲು ಎನ್ನುವುದು ಪ್ರಭಾವಿಗಳು, ಹಣವಂತರ ಪಾಲಿಗೆ ಸ್ವರ್ಗವಾಗುತ್ತದೆ ಎಂಬ ಮಾತು ಮತ್ತೊಮ್ಮೆ ನಿಜವಾಯಿತು ಎನ್ನಬಹುದು. ಅಪರಾಧಿಗಳಿಗೆ, ನ್ಯಾಯಾಂಗ ಬಂಧನದಲ್ಲಿರುವ ವಿಚಾರಣಾಧೀನ ಖೈದಿಗಳಿಗೆ, ದರ್ಶನ್‌ಗೆ ನೀಡಿದ ರೀತಿಯಲ್ಲಿ ಕಾರಾಗೃಹದಲ್ಲಿ ರಾಜವೈಭೋಗದ ಸತ್ಕಾರ ನೀಡುವುದಾದರೆ, ಜೈಲಿಗೆ ಹೋಗಲು ಯಾರು ಕೂಡಾ ಹೆದರುವುದಿಲ್ಲ. ಕಾನೂನನ್ನು ಪಾಲಿಸಬೇಕಾದ ಅಧಿಕಾರಿಗಳೇ ತಮ್ಮ ಕರ್ತವ್ಯವನ್ನು ಮರೆತು, ಸರಕಾರ ಮತ್ತು ಕಾನೂನು ವ್ಯವಸ್ಥೆಗೆ ಮಸಿಬಳಿಯುವಂತೆ ನಡೆದುಕೊಂಡಿರುವುದು ಅಕ್ಷಮ್ಯ ಎನ್ನಲಡ್ಡಿಯಿಲ್ಲ. ಇಂಥ ಅಧಿಕಾರಿಗಳಿಂದಾಗಿಯೇ ನಮ್ಮ ಸಮಾಜಕ್ಕೆ ನ್ಯಾಯದಾನ ವ್ಯವಸ್ಥೆ ಮತ್ತು ಪೊಲೀಸ್ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲದಂತಾಗುತ್ತದೆ. ಸರಕಾರ ಮತ್ತು ಸಂಬಂಧಪಟ್ಟ ಇಲಾಖೆ ಈ ವಿಷಯದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿದ್ದರೆ, ಸಮಾಜದಲ್ಲಿ ಅರಾಜಕತೆ ಮತ್ತು ಅಸಮಾಧಾನ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ.

- **ಸುರೇಂದ್ರ ಪೈ**, ಭಟ್ಕಳ

ಜೈಲುಶಿಕ್ಷೆ ಮಕ್ಕಳಾಟವೇ?

ಮನೆಯಲ್ಲಿ ಪುಟ್ಟ ಮಗು ತನ್ನ ಅಣ್ಣನೊಂದಿಗೆ ಕಿತ್ತಾಡಿಕೊಂಡು ಅಳಲು ಶುರುಮಾಡಿದಾಗ ದೊಡ್ಡವರೆನಿಸಿಕೊಂಡ ನಾವು, 'ನಿಲ್ಲು, ಅಣ್ಣನನ್ನು ಹೊಡೆಯುತ್ತೇನೆ' ಎಂದು ಹೊಡೆಯುವ ನಾಟಕ ಮಾಡುತ್ತೇವೆ. ಅದಕ್ಕೆ ತಕ್ಕಂತೆ ಅಣ್ಣನೂ ಅಳುವಂತೆ ನಾಟಕವಾಡಿದಾಗ ಪುಟ್ಟ ಮಗು ಖುಷಿಯಿಂದ ನಗುತ್ತದೆ; ತಪ್ಪು ಮಾಡಿದ ಅಣ್ಣನನ್ನು ಹೊಡೆದಿದ್ದಾರೆ ಎಂದು ಅದು ಭಾವಿಸುತ್ತದೆ. ವಾಸ್ತವವಾಗಿ ಅಲ್ಲಿ ಅಣ್ಣನಿಗೆ ಹೊಡೆದಿರುವುದೇ ಇಲ್ಲ. ಅಪರಾಧವನ್ನು ಎಸಗಿದ ಅಥವಾ ಅಂಥ ಆರೋಪಕ್ಕೆ ತುತ್ತಾಗಿರುವ ವ್ಯಕ್ತಿಯನ್ನು ಜೈಲಿಗೆ ಹಾಕಿದಾಗ, ಚಾಲ್ತಿಯಲ್ಲಿರುವ ನಿಯಮದಂತೆ ಅವನನ್ನು ನಡೆಸಿಕೊಳ್ಳಲಾಗುತ್ತದೆ, ಕಟ್ಟುಪಾಡಿನ ಪ್ರಕಾರವೇ ಊಟ, ನಿದ್ರೆ ಮತ್ತು ವಾಸ್ತವ್ಯಕ್ಕೆ ಅನುವು ಮಾಡಿಕೊಡಲಾಗುತ್ತದೆ ಎಂದು ಜನಸಾಮಾನ್ಯರು ಭಾವಿಸುತ್ತಾರೆ.

ಆದರೆ, ಪ್ರಭಾವಿಗಳಿಗೆ, ಹಣವಿದ್ದವರಿಗೆ ಬೇರೆ ರೀತಿಯ ಉಪಚಾರ ದೊರೆಯುತ್ತದೆ ಎಂದರೆ ಅದು ಜನರಿಗೆ ಆಘಾತ ಉಂಟುಮಾಡುವ ಸಂಗತಿಯೇ ಸರಿ. ದರ್ಶನ್ ಪ್ರಕರಣದಲ್ಲಿ ಅದು ಬಯಲಾಗದೇ ಇದ್ದಿದ್ದರೆ, ಪ್ರಾಯಶಃ ಆ ಪರಿಪಾಠ ಹಾಗೇ ಮುಂದುವರಿಯುತ್ತಿತ್ತೋ ಏನೋ? ಈಗ ಸತ್ಯ ಬಯಲಾಗುತ್ತಿದ್ದಂತೆ, ಮತ್ತೆ ಅದೇ ಮಕ್ಕಳಾಟದಂತೆ ಜೈಲಿನ ಕೆಲ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಇದೊಂದು ಕಣ್ಣೊರೆಸುವ ತಂತ್ರ ವಷ್ಟೇ, ಅಮಾನತಿಗೊಳಗಾದವರು ಹರಕೆಯ ಕುರಿಗಳಷ್ಟೇ. ಅಷ್ಟಕ್ಕೂ ಜೈಲಿನೊಳಗೆ ಸಿಗರೇಟು, ಸ್ಮಾರ್ಟ್‌ಫೋನು, ಇನ್ನಿತರೆ ವಸ್ತುಗಳು ಹೋಗಿದ್ದಾದರೂ ಹೇಗೆ? ಕಾನೂನು-ಕಟ್ಟಳೆ ಎಲ್ಲರಿಗೂ ಒಂದೇ ತೆರನಾಗಿರಬೇಕು; ಬಡವರಿಗೊಂದು ಪ್ರಭಾವಿಗಳಿಗೊಂದು ಎಂದರೆ ಅದೆಂಥಾ ನ್ಯಾಯ?

- **ಎಂ.ಪರಮೇಶ್ವರ**, ಮದ್ದಿಹಳ್ಳಿ

ಚಿತ್ರರಂಗದಲ್ಲಿ ಒಮ್ಮತವಿರಲಿ

'ಕಾಂತಾರ' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಲಭಿಸಿರುವುದು ಭಾರತೀಯ ಚಿತ್ರರಂಗಕ್ಕೇ ಹೆಮ್ಮೆಯ ವಿಷಯ ಎಂದರೆ ಅತಿಶಯೋಕ್ತಿಯಲ್ಲ. ಅದರಲ್ಲೂ ವಿಶೇಷವಾಗಿ ಕನ್ನಡಿಗರು ಮತ್ತಷ್ಟು ಬೀಗುವಂಥ ವಿಷಯವಿದು. ಕಾಂತಾರ ಬಿಡುಗಡೆಯಾದಾಗಿನಿಂದ ಗೆಲುವಿನ ನಾಗಾಲೋಟಕ್ಕೆ ಒಡ್ಡಿಕೊಂಡು ರಾಷ್ಟ್ರಪ್ರಶಸ್ತಿಯವರೆಗೆ ಬಂದು ನಿಂತಿದೆ. ಕನ್ನಡದ ಸಂಸ್ಕೃತಿ, ಆಚಾರ-ವಿಚಾರಗಳನ್ನು ಭಾರತಕ್ಕಷ್ಟೇ ಅಲ್ಲದೆ, ಇಡೀ ವಿಶ್ವಕ್ಕೆ ಪರಿಚಯಿಸಿದ ನಟ-ನಿರ್ದೇಶಕ ರಿಷಭ್ ಶೆಟ್ಟಿಯವರಿಗೆ ಇದರ ಶ್ರೇಯ ಸಲ್ಲಬೇಕು. ಅವರಿಗೆ ಅಭಿಮಾನಪೂರ್ವಕ ನಮನಗಳು. ಈ ಚಿತ್ರ ಬಿಡುಗಡೆಯಾದ ಸಂದರ್ಭದಲ್ಲಿ 2-3 ಸಲ ಮತ್ತು ಮೊನ್ನೆ ರಾಷ್ಟ್ರಪ್ರಶಸ್ತಿಯ ಘೋಷಣೆಯಾದಾಗ ಮತ್ತೆ ಒಟಿಟಿ ಪ್ಲಾಟ್‌ಫಾರ್ಮ್‌ನಲ್ಲಿ ಅದನ್ನು ವೀಕ್ಷಿಸುವಂತೆ ಪ್ರೇರೇಪಿಸಿದ್ದು ಅದರ ಶ್ರೇಷ್ಠ ಅಂಶಗಳೇ ಎನ್ನಬೇಕು.

ಇವೆಲ್ಲವೂ ಕನ್ನಡಿಗರು ಹೆಮ್ಮೆ ಮತ್ತು ಅಭಿಮಾನ ಪಡುವ ಸಂಗತಿಗಳೇ. ಆದರೆ ರಿಷಭ್ ಶೆಟ್ಟಿಯವರು ಈ ಸಂಭ್ರಮದಲ್ಲಿ, 'ಬಾಲಿವುಡ್‌ನವರು ನಮ್ಮ ಸಂಸ್ಕೃತಿಗೆ ವಿರುದ್ಧವಾದ ಚಿತ್ರವನ್ನು ನಿರ್ಮಿಸುತ್ತಾರೆ' ಎಂಬ ವಿವಾದಾತ್ಮಕ ಹೇಳಿಕೆ ನೀಡಿ ಟೀಕೆಗೆ ಗುರಿಯಾಗಿದ್ದಾರೆ. ಅವರ ಈ ಹೇಳಿಕೆ ಸತ್ಯಕ್ಕೆ ದೂರವಾದ ಮಾತೇನಲ್ಲ. ಅದು ನಿಜವಿದ್ದರೂ ಈ ವಿಷಯವನ್ನೆಲ್ಲ ಸಿನಿಪ್ರೇಕ್ಷಕರಿಗೆ ಬಿಟ್ಟುಬಿಡಬೇಕಿತ್ತು. ಈಗಾಗಲೇ ಗೊತ್ತಿರುವಂತೆ, 'ಆದಿಪುರುಷ್', 'ಕಲ್ಕಿ' ಸಿನಿಮಾಗಳು ಮತ್ತು 'ಪಠಾಣ್' ಚಿತ್ರದ 'ಬೇಶರಮ್ ರಂಗ್' ಹಾಡಿನ ಚಿತ್ರೀಕರಣ ಭಾರಿ ಟೀಕೆಗೆ ಗುರಿಯಾದವು. ಪರಿಣಾಮ ಬಾಲಿವುಡ್‌ನ ಸಾಲು ಸಾಲು ಚಿತ್ರಗಳು ಸೋಲು ಕಾಣುವಂತಾಯಿತು. ಒಂದು ಉದಾತ್ತ ಚಿತ್ರವಿರಲಿ, ಒಂದು ಉದಾತ್ತ ಗೀತೆಯನ್ನು ಕಟ್ಟಿಕೊಡುವುದಕ್ಕೂ ಬಾಲಿವುಡ್‌ನವರು ಹರಸಾಹಸ ಪಡುವಂತಾಗಿದೆ. ರಿಷಭ್ ಶೆಟ್ಟಿಯವರು ಹೇಳಿದಂತೆ, ಹಿಂದಿ ಚಿತ್ರರಂಗವು ಭಾರತೀಯ ಸಂಸ್ಕೃತಿ, ಆಚಾರ-ವಿಚಾರಗಳನ್ನು ತೋರಿಸುವಲ್ಲಿ ಈಚೀಚೆಗೆ ವಿಫಲವಾಗುತ್ತಿದ್ದರೂ, ಅಂಥ ಚಿತ್ರಗಳನ್ನು ತಯಾರಿಸಿಯೇ ಇಲ್ಲ ಎಂದು ಹೇಳಲಾಗುವುದಿಲ್ಲ. ಹೀಗಾಗಿ ರಿಷಭ್ ಅವರು 'ಬಾಲಿವುಡ್‌ನ ಕೆಲವರು' ಎಂದು ಹೇಳಿ ವಿವಾದದಿಂದ ತಪ್ಪಿಸಿಕೊಳ್ಳಬಹುದಿತ್ತು. ನಿರ್ದಿಷ್ಟವಾಗಿ ಹೀಗೆ ಹೇಳುತ್ತಿರುವುದಕ್ಕೆ ಕಾರಣವೆಂದರೆ, ಇಂಥ ಹೇಳಿಕೆಗಳಿಂದ ಬಾಲಿವುಡ್, ಸ್ಯಾಂಡಲ್‌ವುಡ್, ಮಾಲಿವುಡ್, ಟಾಲಿವುಡ್‌ಗಳಲ್ಲಿ ಬಿರುಕು ಮೂಡುತ್ತದೆ. ಒಮ್ಮತ-ಒಗ್ಗಟ್ಟು ಮಾಯವಾಗಿ ಪರಸ್ಪರ ದ್ವೇಷ, ವೈಷಮ್ಯಕ್ಕೆ ಅದು ಕಾರಣವಾಗುತ್ತದೆ. ಪ್ರಸ್ತುತ ಭಾರತೀಯ ಚಿತ್ರರಂಗದಲ್ಲಿ ಯಶಸ್ಸು ಎಂಬುದು ಅಪರೂಪವಾಗುತ್ತಿರುವ ಕಾರಣ, ಸಹಭಾಗಿಗಳೆನಿಸಿಕೊಂಡ ಎಲ್ಲರೂ ಒಮ್ಮತದಿಂದ ಇರಬೇಕಾದ ಅಗತ್ಯವಿದೆ. ಏಕಪರದೆ ಚಿತ್ರಮಂದಿರಗಳು ಸಾಲುಸಾಲಾಗಿ ಮುಚ್ಚಿಹೋಗುತ್ತಿವೆ. ಎಲ್ಲ ಚಿತ್ರರಂಗಗಳಲ್ಲಿ ಜನರಿಗೆ ಮನರಂಜನೆ ಎಂಬುದು ಅಪರೂಪವಾಗುತ್ತಿದೆ. ಇಂಥ ಸಮಯದಲ್ಲಿ ನಮ್ಮ ನಮ್ಮವರಲ್ಲೇ ಒಡಕು ಇರಬಾರದು. ಯಶಸ್ಸು ಸಿಕ್ಕಾಗ ಮುಂದಿನ ಸಾಧನೆಯ ಕಡೆಗೆ ಗಮನ ಹರಿಸಬೇಕೇ ಹೊರತು, ಅಕ್ಕಪಕ್ಕದವರನ್ನು ಟೀಕಿಸುತ್ತಾ ಕೂರುವುದರಲ್ಲಿ ಅರ್ಥವಿಲ್ಲ.

ಕಳೆದ ಕೆಲ ತಿಂಗಳಿಂದ ಮನರಂಜನೆಯಿಲ್ಲದೆ, ಕಳೆಗೆಟ್ಟ ಸೂತಕದ ಮನೆಯಂತಿದ್ದ ಸ್ಯಾಂಡಲ್‌ವುಡ್‌ಗೆ ಮತ್ತೆ ಜೀವ ಚೈತನ್ಯವನ್ನು ತುಂಬಲೆಂದು ಹೋಮ-ಹವನ, ಪೂಜೆ-ಪುನಸ್ಕಾರಗಳನ್ನು ಮಾಡಿಸಿದ್ದಾರೆ. ಅಂತೆಯೇ ಸಿನಿ-ಪ್ರೇಕ್ಷಕರು ಹೊಸ ಹೊಸ ಮನರಂಜನಾತ್ಮಕ ಚಿತ್ರಗಳಿಗಾಗಿ ಕಾದು ಕುಳಿತಿದ್ದಾರೆ. ಪುನೀತ್ ರಾಜ್‌ಕುಮಾರ್‌ರನ್ನು ಕಳೆದುಕೊಂಡು ಕನ್ನಡ ಚಿತ್ರರಂಗ ಮತ್ತಷ್ಟು ಬಡವಾಗಿದೆ. ಶಿವರಾಜ್ ಕುಮಾರ್ ಮುಂಚೂಣಿಯಲ್ಲಿ ಇದ್ದಾರಾದರೂ, ಜನರನ್ನು ಹೇಗೆ ಮೆಚ್ಚಿಸುವುದೆಂದು ರವಿಚಂದ್ರನ್‌ರಿಗೆ ತಿಳಿಯುತ್ತಿಲ್ಲ. ಕೊಲೆ ಆಪಾದನೆಯ ಮೇರೆಗೆ ದರ್ಶನ್ ಜೈಲು ಸೇರಿದ್ದಾರೆ.

ಸುದೀಪ್ ಮತ್ತು ಉಪೇಂದ್ರ ಅವರು ವರ್ಷಕ್ಕೆ ಒಂದು ಸಿನಿಮಾ ನೀಡು ವುದನ್ನೂ ಕಷ್ಟವಾಗಿಸಿಕೊಂಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಅನಗತ್ಯ ವಿವಾದಗಳು, ಒಡಕುಗಳು ಬೇಡ. ಜನಮೆಚ್ಚುವ ಚಿತ್ರಗಳನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಚಿತ್ರೋದ್ಯಮಿಗಳು, ಕಲಾವಿದರು ಮತ್ತು ತಾಂತ್ರಿಕ ವರ್ಗದವರು ಕಟಿಬದ್ಧರಾಗಲಿ.

- **ಪಾಂಚಜನ್ಯ ಪ್ರದೀಪ್**, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಎಸ್.ರಮೇಶ್ ಬರ್ಕಲಿ ಕಿರಗಂದೂರು, ಮಂಡ್ಯ**
ಭಟ್ರೇ, ಶಂಭುಲಿಂಗ ಕುಚನೂರು ಮೇಲೆ ನಾನು ಮಲ್ಲಯುದ್ಧ ಮಾಡಿದ್ರೆ ಅಂಪೈರ್ ನೀವಾಗ್ತೀರಾ?
– ನಲ್ಲಯುದ್ಧ ಆದರೆ ಹೇಳು, ಅಂಪೈರ್ ಆಗ್ತೇನೆ!

- **ಹೇಮಂತ ಹೆಗಡೆ, ಬಾಳೇಸರ**
ಭಟ್ರೇ, ದರ್ಶನ್ ಬಳ್ಳಾರಿ ಜೈಲಿಗೆ ಹೋದ್ರೆ ಏನಾಗಬಹುದು?
– ಆತ ಇನ್ನೂ ಆರಾಮಾಗಿ ಇರಬಹುದು!

- **ಮಹಾಂತೇಶ ಬಿ.ಅಂಗಡಿ, ಹಿರಿಯೂರು**
ಭಟ್ರೇ, ಇಲಿ ಬೆನ್ನಟ್ಟಿಸಿಕೊಂಡು ಬಂದ್ರೆ ಏನರ್ಥ?
– ಗಣೇಶ ಚತುರ್ಥಿ ಬರುತ್ತಿದೆ ಎಂದರ್ಥ!

- **ಎಸ್. ನಂಜುಂಡಿ, ಚಿಕ್ಕಲಸಂದ್ರ**
ಭಟ್ರೇ, ನಮ್ಮ ಮನೆಯಲ್ಲಿರುವವರೆಲ್ಲ ಕಿತ್ತಾಡ್ತಾರೆ, ಏನು ಮಾಡಲಿ?
– ನೀನೇಕೆ ಬಿಜೆಪಿ ಅಧ್ಯಕ್ಷ ವಿಜಯೇಂದ್ರರನ್ನು ಭೇಟಿ ಮಾಡಬಾರದು? ಸಮಾನದುಃಖಿಗಳನ್ನು ಭೇಟಿ ಮಾಡಿದ್ರೆ, ಸಮಾಧಾನ ಸಿಗುತ್ತೆ!

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ದರ್ಶನ್ ಅವರ ಹೊಸ ಸಿನಿಮಾ ಟೈಟಲ್ ಏನು?
– ನಾಗ, ಸೀನ, ಭೈರವ!

- **ಮಲ್ಲಿಕಾರ್ಜುನ ಹಂಪಣ್ಣ, ಹಾವೇರಿ**
ಭಟ್ರೇ, ಸುಮ್ ಸುಮ್ನೆ ಬಾಲ ಸಿಕ್ಕಿಸಿಕೊಳ್ಳೋದು ಅಂದ್ರೆ ಏನು?
– ಸಾಣೇಹಳ್ಳಿ ಶ್ರೀಗಳನ್ನು ಕೇಳಿ ಹೇಳಲಾಗುವುದು!

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಬುದ್ಧಿಜೀವಿ ಎನಿಸಿಕೊಳ್ಳುವವರಿಗೆ ಬುದ್ಧಿ ಮೊದಲೇ ಇರುತ್ತಾ, ವಯಸ್ಸು ಆದ ಹಾಗೆ ಬರುತ್ತಾ?
– ಗೊತ್ತಿಲ್ಲ.. ಆದ್ರೆ, ವಯಸ್ಸು ಆದ ಹಾಗೆ ಹೋಗುತ್ತೆ ಅನ್ನೋದನ್ನು ಸಾಣೇಹಳ್ಳಿ ಶ್ರೀಗಳು ಸಾಬೀತು ಮಾಡಿದ್ದಾರೆ!

- **ವಸಂತ ಶೆಟ್ಟಿ, ಹುಬ್ಬಳ್ಳಿ**
ಭಟ್ರೇ, ಕೆಲವರನ್ನು ನೀವು ಬೇಕೆಂದೇ ನಿರ್ಲಕ್ಷಿಸುತ್ತೀರಿ ಎಂದು ಹೇಳ್ತಾರಲ್ಲ?
– ಇದು ನಿಜಗುಣಾನಂದ ಸ್ವಾಮೀಜಿ ಅಭಿಮಾನಿಗಳ ಆರೋಪ!

- **ರಾಜು ಪಾಟೀಲ, ಗದಗ**
ಭಟ್ರೇ, ನಿಮ್ಮ ಸಮಸ್ಯೆಯನ್ನು ನಾನು ಪರಿಹರಿಸುತ್ತೇನೆ ಅಂತ ಹೇಳ್ತಾಳಲ್ಲ ನನ್ನ ಪತ್ನಿ?
– ನೀನೇ ನನ್ನ ಸಮಸ್ಯೆ ಅಂತ ಅಂದುಬಿಟ್ಟೀಯಾ!

- **ರಘು ಹಾಸನ, ಹಾಸನ**
ಭಟ್ರೇ, ಸಿನಿಮಾ ಓಡದಿದ್ದರೂ ಕನ್ನಡ ನಟರಿಗೆ ಕೊಬ್ಬು ಕಮ್ಮಿ ಇಲ್ಲ ಅಲ್ಲವಾ?
– ಅವರೆಲ್ಲ ಕೊಬ್ಬನ್ನೇ ಸಂಭಾವನೆ ಎಂದು ಭಾವಿಸಿದಂತಿದೆ!

ಅಂದು ನಿರ್ಭಯಾ, ಇಂದು ಅಭಯಾ..

ಮಹಿಳಾ ಸುರಕ್ಷತೆಯು ರಾಜಕೀಯ ಪಕ್ಷಗಳ ನಿಲುವುಗಳನ್ವಯ ನಿರ್ಧಾರವಾಗುತ್ತಿದೆ. ಕೋಲ್ಕತ್ತಾ ವೈದ್ಯೆಯ ಅತ್ಯಾಚಾರದ ಪ್ರಕರಣವೂ ಇದಕ್ಕೆ ಹೊರತಲ್ಲ. 'ಇಂಡಿಯ' ಮೈತ್ರಿಕೂಟದ ಸದಸ್ಯ ಪಕ್ಷಗಳು ಮಮತಾರ ಬೆಂಬಲಕ್ಕೆ ನಿಂತಿವೆ. ರಾಹುಲ್ ಗಾಂಧಿ, 'ಅಭಯಾ' ಪ್ರಕರಣದ ನಂತರ ಕೋಲ್ಕತ್ತಾದ ದಾರಿಯನ್ನೇ ಮರೆತಿದ್ದಾರೆ.

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಪಶ್ಚಿಮ ಬಂಗಾಳದ ಸಂದೇಶಖಾಲಿ ಪ್ರದೇಶದ ಕುಖ್ಯಾತ ಅಪರಾಧಿ ಷಹಜಹಾನ್ ಶೇಖ್ ಮತ್ತು ಅವನ ಸಹಚರರು ತೃಣಮೂಲ ಕಾಂಗ್ರೆಸ್ ಕಚೇರಿಗೆ ಮಹಿಳೆಯರನ್ನು ಕರೆಸಿಕೊಂಡು ಲೈಂಗಿಕ ಶೋಷಣೆ ಮಾಡುತ್ತಿದ್ದಾರೆ ಎಂದು ಸಂತ್ರಸ್ತ ಮಹಿಳೆಯರು ಪ್ರತಿಭಟಿಸಿದಾಗ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು 'ಇದು ಪಕ್ಷದ ಹೆಸರಿಗೆ ಮಸಿ ಬಳಿಯುವ ತಂತ್ರ' ಎಂದು ಅವರ ನೋವಿಗೆ ಸ್ಪಂದಿಸಲಿಲ್ಲ. ಇವರ ಈ ಧೋರಣೆಯೇ ಮುಂದೆ ಹಲವಾರು ಅನಾಹುತಗಳಿಗೆ ದಾರಿಯಾಯಿತು.

ಪಶ್ಚಿಮ ಬಂಗಾಳದ 2021ರ ವಿಧಾನಸಭೆ ಚುನಾವಣಾ ಪೂರ್ವದಲ್ಲಿ ವ್ಯಾಪಕ ಹಿಂಸಾಚಾರ ನಡೆಯಿತು. ಸಂತ್ರಸ್ತ ಮಹಿಳೆಯರು ನ್ಯಾಯಾಲಯದ ಬಾಗಿಲುತಟ್ಟಿ, ತಮ್ಮ ಮೇಲೆ ನಡೆದ ಅತ್ಯಾಚಾರವನ್ನು ಕಣ್ಣೀರಿಡುತ್ತಾ ವಿವರಿಸಿದರು. ಸಾಮೂಹಿಕ ಅತ್ಯಾಚಾರದ ವಿರುದ್ಧ ಸ್ವತಂತ್ರ ತನಿಖೆಗಾಗಿ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿದರು. ಪರಿಸ್ಥಿತಿಯ ಭೀಕರತೆ ಹೇಗಿತ್ತೆಂದರೆ, ತಮ್ಮ ಆರು ವರ್ಷದ ಮೊಮ್ಮಗನ ಮುಂದೆ ತಮ್ಮ ಮೇಲೆ ಅತ್ಯಾಚಾರ ನಡೆಸಿದರೆಂದು 60 ವರ್ಷದ ಮಹಿಳೆಯು ತಮ್ಮ ಘೋರ ಅನುಭವವನ್ನು ವಿವರಿಸಿದರು. ಕೋಲ್ಕತ್ತಾ ಹೈಕೋರ್ಟ್ ಆದೇಶದನ್ವಯ 26 ಅತ್ಯಾಚಾರ ಪ್ರಕರಣಗಳ ತನಿಖೆಯನ್ನು ಸಿಬಿಐ ನಡೆಸುತ್ತಿದೆ.

ಪಶ್ಚಿಮ ಬಂಗಾಳದಲ್ಲಿ ನಡೆದ ಹಿಂಸಾಚಾರ ಮತ್ತು ಲೈಂಗಿಕ ಕಿರುಕುಳದ ಬಗ್ಗೆ ಸಿಕ್ಕಿಂ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಾಧೀಶ ಪ್ರಮೋದ್ ಕೊಹ್ಲಿ ಅವರ ನೇತೃತ್ವದಲ್ಲಿ ರಚಿಸಲಾದ ಸತ್ಯ ಪರಿಶೀಲನಾ ಸಮಿತಿಯು ವರದಿ ನೀಡಿದ್ದು, 7,000 ದಷ್ಟು ಸಂಖ್ಯೆಯ ಲೈಂಗಿಕ ಕಿರುಕುಳದ ಘಟನೆಗಳು ನಡೆದಿರುವುದನ್ನು ಅದು ದೃಢಪಡಿಸಿದೆ. ಪಶ್ಚಿಮ ಬಂಗಾಳ ಸರಕಾರವು ನಡೆಸುವ ತನಿಖೆಯಲ್ಲಿ ನಂಬಿಕೆಯಿಲ್ಲದ ಕೋಲ್ಕತ್ತಾ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್, ರಾಜ್ಯದಲ್ಲಿ ನಡೆದಿರುವ ರಾಜಕೀಯ ದುರುದ್ದೇಶದ ಹಲ್ಲೆ, ಹತ್ಯೆ, ಆಸ್ತಿಪಾಸ್ತಿ ನಾಶ ಮತ್ತು ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದಂಥ ಅನೇಕ ಪ್ರಕರಣಗಳನ್ನು ಸಿಬಿಐಗೆ ವಹಿಸಿವೆ. ಹಲವಾರು ಪ್ರಕರಣಗಳ ತನಿಖೆಯು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿಯೂ ನಡೆಯುತ್ತಿದೆ. ಹೀಗೆ ನ್ಯಾಯಾಲಯಗಳು ತಮ್ಮ ಸರಕಾರ ಮತ್ತು ಪೊಲೀಸ್ ವ್ಯವಸ್ಥೆಯ ಮೇಲೆ ವಿಶ್ವಾಸ ಕಳೆದುಕೊಂಡು, ಪ್ರಕರಣಗಳ ತನಿಖೆಯನ್ನು ಕೇಂದ್ರ ತನಿಖಾ ಸಂಸ್ಥೆಗಳಿಗೆ ವಹಿಸುತ್ತಿದ್ದರೂ ಮಮತಾ ಬ್ಯಾನರ್ಜಿ ಮಾತ್ರ ಎಚ್ಚೆತ್ತುಕೊಂಡಿಲ್ಲ ಹಾಗೂ ತಪ್ಪು ತಿದ್ದಿಕೊಳ್ಳುವ ಗೋಜಿಗೆ ಹೋಗಿಲ್ಲ.

ಪಶ್ಚಿಮ ಬಂಗಾಳದಲ್ಲಿರುವ ಶೇ.30ರಷ್ಟು ಪ್ರಮಾಣದ ಅಲ್ಪಸಂಖ್ಯಾತರ ಮತಗಳ ಮೇಲೆಯೇ ಮಮತಾ ಅವರು ಸದಾ ಕಣ್ಣಿಟ್ಟಿರುವುದರಿಂದ, ಅವರ ವಿರೋಧವನ್ನು ಕಟ್ಟಿಕೊಳ್ಳುವ ಸಣ್ಣ ತಪ್ಪನ್ನೂ ಮಾಡುವುದಿಲ್ಲ. ಈ ಕಾರಣಕ್ಕಾಗಿಯೇ ಷಹಜಹಾನ್ ಶೇಖ್ ಮತ್ತು ಅವನ ಸಹಚರರನ್ನು ಸಮರ್ಥಿಸಿಕೊಳ್ಳಲು ಮಮತಾ ಬ್ಯಾನರ್ಜಿ ಹಿಂಜರಿಯಲಿಲ್ಲ. ಮಮತಾ ಅದೆಷ್ಟು ಬದಲಾಗಿದ್ದಾರೆಂದರೆ, 2002ರಲ್ಲಿ ಬಾಂಗ್ಲಾದ ಅಕ್ರಮ ನುಸುಳುಕೋರರ ವಿರುದ್ಧ ಸಂಸತ್ತಿನಲ್ಲಿ ತೀವ್ರವಾಗಿ ಪ್ರತಿಭಟಿಸಿದ್ದ ಅವರು, 2011ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಆ ನುಸುಳುಕೋರರ ಸಂರಕ್ಷಕಿಯಾಗಿ ಬದಲಾಗಿದ್ದಾರೆ. ಬಾಂಗ್ಲಾದಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರದ ವೇಳೆ, 'ಬಾಂಗ್ಲಾದೇಶೀಯರು ಆಶ್ರಯ ಕೋರಿ ಬಂದರೆ ಅವರಿಗೆ ರಕ್ಷಣೆ ನೀಡುತ್ತೇನೆ' ಎಂದು ಘೋಷಿಸಲೂ ಅವರು ಹಿಂದೇಟು ಹಾಕಲಿಲ್ಲ. ತಮ್ಮ ಈ ನಿಲುವಿನಿಂದ ದೇಶದ ಭದ್ರತೆಗೆ ಅಪಾಯವಾಗಬಹುದು ಎಂಬುದರ ಬಗ್ಗೆ ಮಮತಾ ಅವರಿಗೆ ಸಾಸಿವೆ ಕಾಳಿನಷ್ಟೂ ಆತಂಕವಿರಲಿಲ್ಲ. ನೆರೆದೇಶದ ನಿರಾಶ್ರಿತರನ್ನು ರಾಜ್ಯಕ್ಕೆ ಆಹ್ವಾನಿಸುವುದು ತಮ್ಮ ವ್ಯಾಪ್ತಿಗೆ ಮೀರಿದ ಸಂಗತಿ ಎಂಬುದು ಅರಿವಿದ್ದರೂ, ತಮ್ಮ ಮತಬ್ಯಾಂಕ್ ಅನ್ನು ಭದ್ರಪಡಿಸಿಕೊಳ್ಳುವ ಉದ್ದೇಶದಿಂದ ಅವರು ಈ ಹೇಳಿಕೆ ನೀಡಿದರು.

2024ರ ಲೋಕಸಭಾ ಚುನಾವಣಾಪೂರ್ವ ಸಮೀಕ್ಷೆಗಳು ರಾಜ್ಯದಲ್ಲಿ ಬಿಜೆಪಿಗೆ ಹೆಚ್ಚಿನ ಸ್ಥಾನ ಸಿಗಲಿದೆ ಎಂದು ಮುನ್ನುಡಿದಿದ್ದವು; ಆದರೆ ಮಮತಾ ಈ ಸಮೀಕ್ಷೆಗಳನ್ನು ತಲೆಕೆಳಗು ಮಾಡಿ, 2019ರಲ್ಲಿ ಬಿಜೆಪಿಯು ತಾನು ದಕ್ಕಿಸಿಕೊಂಡಿದ್ದಕ್ಕಿಂತ

ಕಡಿಮೆ ಸ್ಥಾನದಲ್ಲಿ ಗೆಲ್ಲುವಂತೆ ಮಾಡಿದರು. ಸತತವಾಗಿ ಚುನಾವಣೆಯಲ್ಲಿ ಜಯಿಸುತ್ತಿರುವ ಅವರು, ನ್ಯಾಯಾಲಯವು ತಮ್ಮ ತನಿಖಾ ಸಂಸ್ಥೆಗಳ ಮೇಲಿನ ನಂಬಿಕೆ ಕಳೆದುಕೊಂಡಿದ್ದರೂ ಸಹಜವಾಗಿಯೇ ತಲೆಕೆಡಿಸಿಕೊಳ್ಳುತ್ತಿಲ್ಲ. ಅಂತಿಮವಾಗಿ, ತಮ್ಮ ಸ್ಥಾನ ಭದ್ರವಾಗಿ ಅಧಿಕಾರ ಮುಂದುವರಿಯುವುದು ರಾಜಕಾರಣಿಗಳಿಗೆ ಮುಖ್ಯವಲ್ಲವಾ!

ಸರಕಾರಿ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಆಗಸ್ಟ್ 9ರಂದು ರಾತ್ರಿ, ಕರ್ತವ್ಯನಿರತ ವೈದ್ಯೆಯ ಮೇಲೆ ಅಮಾನುಷ ಹಲ್ಲೆಯಾಗಿ ಅತ್ಯಾಚಾರ ನಡೆದು ಹತ್ಯೆಯಾಯಿತು. 2012ರ ದೆಹಲಿಯ 'ನಿರ್ಭಯಾ' ಪ್ರಕರಣವನ್ನು ನೆನಪಿಸುವ ಮಾದರಿಯ ಬರ್ಬರ ಕೃತ್ಯ ನಡೆಯಿತು. ಸರಕಾರಿ ಆಸ್ಪತ್ರೆಯ ಆವರಣದಲ್ಲಿ ನಡೆದ ಈ ಭೀಭತ್ಸ ಪ್ರಕರಣವನ್ನು ಸರಕಾರ ಹಗುರವಾಗಿ ತೆಗೆದುಕೊಂಡಿತು; ಕಾಲೇಜಿನ ಆಡಳಿತ ಮಂಡಳಿಯವರು ಮತ್ತು ಕೋಲ್ಕತ್ತಾ ಪೊಲೀಸರು, 'ಈ ವೈದ್ಯೆಯದು ಹತ್ಯೆಯಲ್ಲ, ಆತ್ಮಹತ್ಯೆ' ಎಂದು ಬಿಂಬಿಸುವ ಮೂಲಕ ಘೋರ ಅಪಚಾರವೆಸಗಿದರು. ಮರುದಿನ ಭುಗಿಲೆದ್ದ ವೈದ್ಯರ ಪ್ರತಿಭಟನೆ ಮಮತಾ ಸರಕಾರವನ್ನು ತಲ್ಲಣಗೊಳಿಸಿತು. ವಿದ್ಯಾರ್ಥಿಗಳ ಪ್ರತಿಭಟನೆಯ ಕಾವನ್ನು ತಣಿಸಲು ಕಾಲೇಜಿನ ಪ್ರಿನ್ಸಿಪಾಲ್ ಸಂದೀಪ್ ಘೋಷ್‌ರನ್ನು ಕರ್ತವ್ಯದಿಂದ ಮುಕ್ತಿಗೊಳಿಸಿ, ಮತ್ತೆ 4 ಗಂಟೆಯೊಳಗಾಗಿ ಮತ್ತೊಂದು ಸರಕಾರಿ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲ್ ಆಗಿ ನೇಮಕ ಮಾಡಿ ಬಹುದೊಡ್ಡ ತಪ್ಪೆಸಗಿರು.

ಇದು ಸಾಲದೆಂಬಂತೆ, ಆಗಸ್ಟ್ 14ರ ರಾತ್ರಿ ಸಾವಿರಾರು ಪುಂಡಜನರು ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನ ಆವರಣಕ್ಕೆ ಏಕಾಏಕಿ ನುಗ್ಗಿ, ಮುಷ್ಕರ ನಿರತ ವೈದ್ಯರ ಮೇಲೆ ಹಲ್ಲೆ ನಡೆಸಿ ಆಸ್ಪತ್ರೆಯಲ್ಲಿ ದಾಂಧಲೆ ಎಬ್ಬಿಸಿದರು. ಸ್ಥಳದಲ್ಲಿದ್ದ ಪೊಲೀಸರು ಮೂಕಪ್ರೇಕ್ಷಕರಾಗಿದ್ದರು. ಕರ್ತವ್ಯನಿರತ ವೈದ್ಯೆಯ ಮೇಲೆ ಅತ್ಯಾಚಾರ ನಡೆದು ಹತ್ಯೆಯಾಗಿ, ಪರಿಸ್ಥಿತಿಯು ಸೂಕ್ಷ್ಮವಾಗಿದ್ದ ಸ್ಥಳದಲ್ಲಿಯೇ ಯಾವ ಭಯವಿಲ್ಲದೆ ಗೂಂಡಾಗಿರಿ ನಡೆಯಿತು. ದುರ್ದೈವವೆಂದರೆ, ದೇಶದ ಏಕೈಕ ಮಹಿಳಾ ಮುಖ್ಯಮಂತ್ರಿಯ ರಾಜ್ಯದಲ್ಲಿಯೇ ಮಹಿಳೆಯು ರಕ್ಷಣೆಗಾಗಿ ನ್ಯಾಯಾಲಯದ ಮೊರೆಹೋಗಬೇಕಾಗಿ ಬಂದಿದೆ. ಗಂಭೀರ ಆರೋಪಗಳನ್ನು 'ರಾಜಕೀಯ ಪ್ರೇರಿತ' ಎಂದು ಪದೇಪದೆ ತಳ್ಳಿಹಾಕುವ ಟಿಎಂಸಿಯ ನಿಲುವಿನಿಂದಾಗಿ, ಅತ್ಯಾಚಾರಿಗಳಿಗೆ ಮತ್ತು ಗೂಂಡಾಗಳಿಗೆ ಕಾನೂನಿನ ಭಯವಿಲ್ಲದಾಗಿದೆ.

ಕೋಲ್ಕತ್ತಾ ವೈದ್ಯೆಯ ಹತ್ಯೆಯ ಪ್ರಕರಣದಿಂದ ರೊಚ್ಚಿಗೆದ್ದ ದೇಶಾದ್ಯಂತದ ವೈದ್ಯರು, ತಮಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಆಗ್ರಹಿಸಿ ದೇಶವ್ಯಾಪಿ ಹೋರಾಟಕ್ಕೆ ಮುಂದಾದದರು. ಬೇಜವಾಬ್ದಾರಿಯ ಆಡಳಿತದ ಕಾರಣಕ್ಕೆ ಲಕ್ಷಾಂತರ ರೋಗಿಗಳು ಅಪಾರ ತೊಂದರೆಗೊಳಗಾಗಬೇಕಾಯಿತು. ತಾರಕಕ್ಕೇರಿದ ಪ್ರತಿಭಟನೆಯಿಂದ ವಿಚಲಿತರಾದ ಮಮತಾ, ತಾವೇ ರಾಜ್ಯದ ಗೃಹ ಮತ್ತು ಆರೋಗ್ಯ ಖಾತೆಯ ಸಚಿವರಾಗಿದ್ದರೂ, ತಮ್ಮ ವರ್ಚಸ್ಸಿಗೆ ಆಗಿರುವ ಧಕ್ಕೆಯನ್ನು ಸರಿಪಡಿಸಿಕೊಳ್ಳಲು ಮತ್ತು ತಮ್ಮ ವೈಫಲ್ಯಕ್ಕೆ ತೆರೆ ಎಳೆಯಲು ಆಗಸ್ಟ್ 16ರಂದು ಪ್ರತಿಭಟನಾ ಮೆರವಣಿಗೆಯನ್ನು ಕೈಗೊಂಡಿದ್ದರ ಜತೆಗೆ, 'ಆಸ್ಪತ್ರೆ ಆವರಣದಲ್ಲಿ ನಡೆದ ಗಲಭೆಗೆ ಬಿಜೆಪಿ ಮತ್ತು ಎಡಪಕ್ಷಗಳೇ ಕಾರಣ' ಎಂಬ ಆಧಾರರಹಿತ ಆರೋಪ ಮಾಡಿದರು.

ತದನಂತರ ಮಮತಾ ಬ್ಯಾನರ್ಜಿಯವರು ಪ್ರಧಾನಿಗಳಿಗೆ ಪತ್ರ ಬರೆದು, ದೇಶದಲ್ಲಿ ಎಲ್ಲೇ ಅತ್ಯಾಚಾರ ಪ್ರಕರಣಗಳು ದಾಖಲಾದರೆ ಅದನ್ನು 15 ದಿನದೊಳಗೆ ತನಿಖೆ ಮಾಡಿ ಶಿಕ್ಷಿಸುವ ಕಾನೂನು ತರಲು ಆಗ್ರಹಿಸಿದರು. ಕಾನೂನು ಮತ್ತು ಸುವ್ಯವಸ್ಥೆಯು ರಾಜ್ಯ ಸರಕಾರದ ಜವಾಬ್ದಾರಿ. ಮಮತಾ ಅವರು ಪ್ರಧಾನಿಯವರಿಗೆ ಹೀಗೆ ಸಲಹೆ ನೀಡುವ ಮುನ್ನ ತಮ್ಮ ರಾಜ್ಯದಲ್ಲಿಯೇ ಇದನ್ನು ಜಾರಿಗೆ ತಂದು ಇತರ ರಾಜ್ಯಗಳಿಗೆ ಮೇಲ್ಪಂಕ್ತಿ ಹಾಕಬೇಕಿತ್ತು. ಆದರೆ ಇವರದ್ದು, ವಿಷಯಾಂತರ ಮಾಡಿ ಜನರ ಆಕ್ರೋಶವನ್ನು ಕೇಂದ್ರ ಸರಕಾರದ ಕಡೆಗೆ ತಿರುಗಿಸುವ ದುರುದ್ದೇಶವಷ್ಟೇ. ಇದರ ನಡುವೆ, ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಪ್ರಕರಣದ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಟೀಕಿಸಿದವರ ಮೇಲೆ ಕ್ರಮ ಜರುಗಿಸಲೆಂದು ಕೋಲ್ಕತ್ತಾ ಪೊಲೀಸರು ನೋಟಿಸ್ ಕಳಿಸಲು ಆರಂಭಿಸಿದರು. ತೃಣಮೂಲ ಕಾಂಗ್ರೆಸ್ ವಕ್ತಾರನಿಗೂ ಇದರ ಬಿಸಿ ತಟ್ಟಿತು. ಪೊಲೀಸರ ಸಹಾಯದಿಂದ ವಿರೋಧದ ದನಿಯನ್ನು ಹತ್ತಿಕ್ಕುವ ಪ್ರಯತ್ನವನ್ನು ಮಮತಾ ಬ್ಯಾನರ್ಜಿಯವರು ಇಂದಿಗೂ ಮುಂದುವರಿಸಿದ್ದಾರೆ.

ಪ್ರಕರಣದ ತನಿಖೆಯನ್ನು ಕೋಲ್ಕತ್ತಾ ಹೈಕೋರ್ಟ್ ಸಿಬಿಐಗೆ ವಹಿಸಿದ ತರುವಾಯ ಸರ್ವೋಚ್ಚ ನ್ಯಾಯಾಲಯವು ಮಧ್ಯ ಪ್ರವೇಶಿಸಿ ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನ ಭದ್ರತೆಯನ್ನು 'ಕೇಂದ್ರೀಯ ಔದ್ಯಮಿಕ ಸುರಕ್ಷಾ ಪಡೆ'ಗೆ (ಸಿಐಎಸ್‌ಎಫ್) ವಹಿಸಿದೆ. ಇದಲ್ಲದೆ, ಸಂದೀಪ್ ಘೋಷ್ ಅವರು ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದ ಅವಧಿಯಲ್ಲಿ ನಡೆದಿರುವ ಅವ್ಯವಹಾರದ ತನಿಖೆಯನ್ನು ಸಿಬಿಐಗೆ ವಹಿಸಿದೆ. ಇದರಿಂದ ರಾಜ್ಯ ಸರಕಾರಕ್ಕೆ ಬಹುದೊಡ್ಡ ಮುಖಭಂಗವಾಗಿದೆ.

ದೇಶದಲ್ಲಿ ಮಹಿಳಾ ಸುರಕ್ಷತೆಯ ವಿಷಯ ಕೂಡ ರಾಜಕೀಯ ಪಕ್ಷಗಳ ನಿಲುವುಗಳನ್ವಯ ನಿರ್ಧಾರವಾಗುತ್ತಿದೆ. ಕೋಲ್ಕತ್ತಾ ವೈದ್ಯೆಯ ಅತ್ಯಾಚಾರ ಮತ್ತು ಹತ್ಯೆಯ ಪ್ರಕರಣವೂ ಇದಕ್ಕೆ ಹೊರತಾಗಿಲ್ಲ. 'ಇಂಡಿಯ' ಮೈತ್ರಿಕೂಟದ ಸದಸ್ಯ ಪಕ್ಷಗಳು ಮಮತಾರ ಬೆಂಬಲಕ್ಕೆ ನಿಂತಿವೆ. ಬಿಜೆಪಿ ಆಡಳಿತದಲ್ಲಿ ಅತ್ಯಾಚಾರ ನಡೆದ ಸ್ಥಳಕ್ಕೆ ಮಿಂಚಿನ ವೇಗದಲ್ಲಿ ಧಾವಿಸುವ ರಾಹುಲ್ ಗಾಂಧಿಯವರಿಗೆ, 'ಅಭಯಾ' ಪ್ರಕರಣದ ತರುವಾಯ ಕೋಲ್ಕತ್ತಾದ ದಾರಿಯೇ ಮರೆತುಹೋಗಿದೆ. ಕೋಲ್ಕತ್ತಾ ಪ್ರಕರಣದಲ್ಲಿ ಬಾಯಿಬಿಡದ 'ಇಂಡಿಯ' ಮೈತ್ರಿಕೂಟದ ನಾಯಕರು, ಮಹಾರಾಷ್ಟ್ರದ ಠಾಣಾ ಜಿಲ್ಲೆಯ ಬದ್ಲಾಪುರದಲ್ಲಿ ಶಾಲಾ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಾಗ, ಕೂಡಲೇ ಆಗಸ್ಟ್ 24ರಂದು ರಾಜ್ಯವ್ಯಾಪಿ ಬಂದ್‌ಗೆ ಕರೆನೀಡಿದರು. ಆದರೆ ನ್ಯಾಯಾಲಯದ ಮಧ್ಯಪ್ರವೇಶದಿಂದ ಬಂದ್ ರದ್ದಾಯಿತು. ಮಹಾರಾಷ್ಟ್ರದಲ್ಲಿ ಚುನಾವಣೆಯು ಹತ್ತಿರದಲ್ಲೇ ಇರುವುದರಿಂದ, 'ಮಹಿಳಾ ಸುರಕ್ಷತೆ'ಯ ವಿಷಯವು ರಾಜಕೀಯ ಲಾಭದ ವಸ್ತುವಾಗಿದೆ. ಕೋಲ್ಕತ್ತಾ ಮತ್ತು ಬದ್ಲಾಪುರ ಘಟನೆಗಳ ವಿಷಯದಲ್ಲಿ 'ಇಂಡಿಯ' ಮೈತ್ರಿಕೂಟವು ತಳೆದ ವಿಭಿನ್ನ ನಿಲುವು, ಅದರ ಅನುಕೂಲ ಸಿಂಧು ನೀತಿಗೆ ಸಾಕ್ಷಿಯಾಗಿದೆ.

ಮಹಿಳಾ ಸುರಕ್ಷತೆ ಎಂಬುದು ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ರಾಜಕೀಯ ಮೇಲಾಟದ ವಸ್ತುವಾಗಬಾರದು. ಅತ್ಯಾಚಾರವು ಬದ್ಲಾಪುರದಲ್ಲಿ ನಡೆದರೂ ತಪ್ಪೇ, ಕೋಲ್ಕತ್ತಾದಲ್ಲಿ ನಡೆದರೂ ತಪ್ಪೇ. ಆದ್ದರಿಂದ ಮಹಿಳಾ ಸುರಕ್ಷತೆಯು ರಾಜಕೀಯ ಪಕ್ಷಗಳ ಪಾಲಿಗೆ ಮೊದಲ ಆದ್ಯತೆಯ ವಿಷಯವಾಗಬೇಕಿದೆ.

(ಲೇಖಕರು ಬಿಜೆಪಿ ವಕ್ತಾರರು)

ಅಭಿಮತ

ಆದರ್ಶ್ ಶೆಟ್ಟಿ

ಸಂಕಷ್ಟಗಳಿಗೆ ಕೊನೆಯಿಲ್ಲವೇ?

ಸ್ವಚ್ಛ ಭಾರತದ ಪರಿಕಲ್ಪನೆಯನ್ನು ಜನರ ಮುಂದಿಟ್ಟ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರಕಾರವು 'ದೇಶವು ಬಯಲುಶೌಚ ಮುಕ್ತವಾಗಿದೆ' ಎಂದು ಘೋಷಿಸಿ ಸಾಕಷ್ಟು ವರ್ಷಗಳಾಗಿವೆ. ಆದರೆ ವಸ್ತುಸ್ಥಿತಿಯು ಈ ಘೋಷಣೆಗೆ ಅನುಸಾರವಾಗಿದೆಯೇ? ಏಕೆಂದರೆ, ಬಾಗಲಕೋಟೆ, ವಿಜಯಪುರ, ಕಲಬುರ್ಗಿ, ಕೊಪ್ಪಳ, ರಾಯಚೂರು, ಯಾದಗಿರಿ, ಬಳ್ಳಾರಿಯಂಥ ಜಿಲ್ಲೆಗಳ ಕೆಲ ಭಾಗಗಳಲ್ಲಿ ಶೌಚಕ್ಕೆಂದು ಇಂದಿಗೂ ಬಯಲನ್ನೇ ಅವಲಂಬಿಸಿರುವ ಅದೆಷ್ಟೋ ಕುಟುಂಬಗಳಿರುವುದನ್ನು ಕಾಣಬಹುದು. ಮಹಿಳೆಯರು ಸೀರೆಯನ್ನು ಪರದೆಯಂತೆ ಕಟ್ಟಿಕೊಂಡು ಬಹಿರ್ದೆಸೆಗೆ ತೆರಳಬೇಕಾದ ಪರಿಸ್ಥಿತಿ ಈಗಲೂ ಇದೆ ಎಂದರೆ ನಾವು ನಂಬಲೇಬೇಕು. ಇಂಥ ಗ್ರಾಮಗಳಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳು ಕೂಡ ನಡೆದುಹೋಗಿವೆ.

ಮೋದಿ ಸರಕಾರ ಘೋಷಿಸಿದ 'ಸ್ವಚ್ಛ ಭಾರತ' ಪರಿಕಲ್ಪನೆ ಸಾಕಾರಗೊಳ್ಳಬೇಕೆಂದರೆ, ಅದರಲ್ಲಿ ಪ್ರಜೆಗಳಾದ ನಮ್ಮ ಪಾತ್ರವೂ ದೊಡ್ಡ ಮಟ್ಟದಲ್ಲಿ ಇರುತ್ತದೆ ಎಂಬು ದನ್ನು ಮರೆಯಬಾರದು. ಜತೆಗೆ, ಕೇಂದ್ರದಿಂದ ಮೊದಲ್ಗೊಂಡು ಕೆಳಸ್ತರದವರೆಗಿನ ಆಡಳಿತ ವ್ಯವಸ್ಥೆಗಳ ಎಲ್ಲಾ ಜನಪ್ರತಿನಿಧಿ ಗಳ ಸಹಕಾರ ಇಲ್ಲಿ ಅತ್ಯಗತ್ಯ. ಇಂದಿಗೂ, ಪಾನ್ ಬೀಡಾ ತಿಂದು ಕಂಡಕಂಡಲ್ಲಿ ಉಗುಳುವ, ಮನೆಯ ಕಸ-ಕಡ್ಡಿಗಳನ್ನು ತಂದು ರಸ್ತೆಗಳಿಗೆ, ನದಿಗಳಿಗೆ ಸುರಿಯುವ ಕೆಲಸಗಳು ನಡೆಯುತ್ತಲೇ ಇವೆ. ಮೊಬೈಲ್, ಫೇಸ್‌ಬುಕ್, ವಾಟ್ಸ್ಯಾಪ್, ಎಕ್ಸ್, ಇನ್‌ಸ್ಟಾಗ್ರಾಂ ಯುಗದಲ್ಲಿ ಕಾಲ ಕಳೆಯುತ್ತಿರು ವವರು, ಪ್ರಪಂಚವು ಬಹಳ ಸುಂದರವಾಗಿದೆ ಎಂದೇ ಭಾವಿಸುವು ದುಂಟು. ಆದರೆ ಸಮಾಜ ಮತ್ತು ಜನಜೀವನ ಅಂದುಕೊಂಡಷ್ಟು ಸಲೀಸಾಗಿಲ್ಲ. ಅದೆಷ್ಟೋ ಕಡೆಗಳಲ್ಲಿ ಸರಿಯಾದ ರಸ್ತೆಗಳೇ ಇಲ್ಲದೆ, ರೈತರು ತಾವು ಬೆಳೆದ ಹಣ್ಣು-ತರಕಾರಿ ಮತ್ತಿತರ ಕೃಷಿ ಉತ್ಪನ್ನಗಳನ್ನು ಕಿಲೋಮೀಟರ್‌ಗಟ್ಟಲೆ ತಲೆಯ ಮೇಲೆ ಹೊತ್ತು ಸಾಗಬೇಕಾದ ಅನಿವಾರ್ಯತೆಯಿದೆ. ಅಸಮರ್ಪಕ ರಸ್ತೆಯಿಂದಾಗಿ ಶಾಲಾ ಮಕ್ಕಳು ಜಾರಿ ಬಿದ್ದು ಪೆಟ್ಟು ಮಾಡಿಕೊಂಡು ಇಲ್ಲವೇ ಕೆಸರುರಾಡಿ ಮೆತ್ತಿ ಕೊಂಡು ಕಣ್ಣೀರಿಡುತ್ತಲೇ ಶಾಲೆಗೆ ಹೋಗುವ ದೃಶ್ಯವನ್ನು ಈಗಲೂ ಬಹಳಷ್ಟು ಕಡೆ ಕಾಣಬಹುದು. ಅಷ್ಟೇಕೆ, ದೇಶಕ್ಕೆ ಸ್ವಾತಂತ್ರ್ಯ ದೊರೆತು ದಶಕಗಳೇ ಆಗಿದ್ದರೂ ಸಮರ್ಪಕವಾದ ಸೇತುವೆಗಳಿಲ್ಲದೆ, ಹೊಳೆ ದಾಟಲೆಂದು ಮರದ ಹಲಗೆಯಲ್ಲಿ ರೂಪಿಸಿದ ಕಿರುಗಾತ್ರದ ಸಂಕದ ಮೇಲೆ ಮಕ್ಕಳು-ಮಹಿಳೆಯರು ಜೀವ ಕೈಯಲ್ಲಿ ಹಿಡಿದು ಕೊಂಡು ಸಾಗುವ ನಿದರ್ಶನಗಳು ಸಾಕಷ್ಟಿವೆ. ಶವಗಳನ್ನು ಸ್ಮಶಾನಕ್ಕೆ ಒಯ್ಯಲು ವ್ಯವಸ್ಥೆಯಿಲ್ಲದೆ ಸಾಕಷ್ಟು ದೂರದವರೆಗೆ ಶವವನ್ನು ಹೆಗಲ ಮೇಲೇ ಹೊತ್ತೊಯ್ದವರ ಪಡಿಪಾಟಲನ್ನೂ ನಾವು ಕಂಡಿದ್ದೇವೆ.

'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬ ಮಾತಿನಂತೆ, ಜನರ ದಿನನಿತ್ಯದ ಬದುಕು ಮೇಲ್ನೋಟಕ್ಕೆ ಸರಿಯಿರುವಂತೆ ಕಂಡರೂ, ಬಡತನ, ಅಸಮಾನತೆ ಸೇರಿದಂತೆ ಅನೇಕ ಸಾಮಾಜಿಕ ಅನಿಷ್ಟಗಳು ಇಂದಿಗೂ ಜೀವಂತವಾಗಿವೆ. ನಿರುದ್ಯೋಗ ಸಮಸ್ಯೆ, ಸಾಲಬಾಧೆ, ಅನಾರೋಗ್ಯ ಸೇರಿದಂತೆ ಅನೇಕ ಸಂಕಷ್ಟ-ಸಮಸ್ಯೆಗಳಿಂದ ಸಾಕಷ್ಟು ಕುಟುಂಬಗಳು ಹೈರಾಣಾಗಿವೆ. ಮಕ್ಕಳು ಕುಡಿಯುವ ನೀರಿಗಾಗಿ ಹರಸಾಹಸ ಪಡಬೇಕಾದ ಮತ್ತು ಶೌಚಾಲಯಗಳಿಲ್ಲದೆ ಹಿಂಸೆ ಅನುಭವಿಸಬೇಕಾದ ಸ್ಥಿತಿ ರಾಜ್ಯಾದ್ಯಂತದ ಸಾಕಷ್ಟು ಶಾಲೆಗಳಲ್ಲಿದೆ. ಮಿಕ್ಕಂತೆ, ಸೋರುತ್ತಿರುವ ಶಾಲಾ-ಕಾಲೇಜುಗಳಲ್ಲಿ ಛತ್ರಿ ಹಿಡಿದು ಪಾಠ ಕೇಳುವ ವಿದ್ಯಾರ್ಥಿ ಸಮೂಹ, ಮನೆ ನಿರ್ಮಾಣಕ್ಕಾಗಿ ಸರಕಾರದ ಸಹಾಯಧನವನ್ನು ಬಿಡುಗಡೆ ಮಾಡಲು ಬಡಜನರಿಂದ ಲಂಚಕ್ಕಾಗಿ ಪೀಡಿಸುವ ಅಧಿಕಾರಿಗಳಿಂದಾಗಿ ಗುಡಿಸಲಿನಲ್ಲೇ ವಾಸಿಸುವಂತಾಗಿರುವ ಕುಟುಂಬಗಳು, ಮೀಟರ್ ಬಡ್ಡಿಗೆ ಹಣ ತೆಗೆದುಕೊಂಡವರನ್ನು ಮಾನವೀಯತೆ ಮರೆತು ಪೀಡಿಸುವ ಬಡ್ಡಿ ವ್ಯವಹಾರಸ್ಥರು ಹೀಗೆ ನಾನಾ ಅವ್ಯವಸ್ಥೆಗಳು ಮತ್ತು ದೌರ್ಜನ್ಯಗಳ ಕೂಪವಾಗಿಬಿಟ್ಟಿದೆ ನಮ್ಮ ಸಮಾಜ.

ಇಂಥ ದುಸ್ಥಿತಿಗಳಿಗೆ ಮದ್ದು ಅರೆಯ ಬೇಕಾದವರು ಏನು ಮಾಡುತ್ತಿದ್ದಾರೆ? ಜನರನ್ನು ಮರುಳು ಗೊಳಿ ಸುವ ಮಾತನ್ನಾಡಿ ಚುನಾವಣೆಗಳಲ್ಲಿ ಮತ ಹಾಕಿಸಿಕೊಂಡು ಗೆದ್ದು ವಿಧಾನಸಭೆ ಮತ್ತು ಲೋಕಸಭೆ ಸೇರಿಕೊಂಡವರು ತಮ್ಮ ಹೊಣೆ ಗಾರಿಕೆಗಳು ಮತ್ತು ಉತ್ತರದಾಯಿತ್ವವನ್ನು ಮರೆಯುವುದೇಕೆ? ಎಂಬ ಪ್ರಶ್ನೆಗಳು ಆಗಾಗ ಕಾಡುವುದುಂಟು. ಜನಪ್ರತಿನಿಧಿ ಗಳೆನಿಸಿ ಕೊಂಡವರು ಇನ್ನಾದರೂ ಮೈಕೊಡವಿಕೊಂಡು ಏಳಲಿ.

(ಲೇಖಕರು ಹವ್ಯಾಸಿ ಬರಹಗಾರರು)

ಬ್ಯಾಂಕುಗಳಲ್ಲಿ ಠೇವಣಿ ಕುಸಿತ ಆಗುತ್ತಿರುವುದೇಕೆ?

ವಾಣಿಜ್ಯ ವಿಭಾಗ
ರಮಾನಂದ ಶರ್ಮಾ
vveditoped@gmail.com

ಬ್ಯಾಂಕುಗಳಲ್ಲಿ ಸಾಲದ ಪ್ರಮಾಣ ಏರುತ್ತಿದೆ, ಆದರೆ ಠೇವಣಿ ಸಂಗ್ರಹದಲ್ಲಿ ಏರಿಕೆ ಕಾಣುತ್ತಿಲ್ಲ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದ್ದಾರೆ. ಅಂತೆಯೇ, ಠೇವಣಿ ಸಂಗ್ರಹವನ್ನು ಚುರುಕುಗೊಳಿಸುವಂತೆ ಇತ್ತೀಚೆಗೆ ಬ್ಯಾಂಕ್ ಮುಖ್ಯಸ್ಥರ ಸಭೆಯಲ್ಲಿ ಆದೇಶಿಸಿದ್ದಾರೆ. ಈ ನಿಟ್ಟಿನಲ್ಲಿ ಅವರು ಬ್ಯಾಂಕುಗಳ ಮೇಲೆ ಗಂಭೀರ ಒತ್ತಡ ಹೇರಿದ್ದಾರೆ. 2024ರ ಜೂನ್ ಅಂತ್ಯದ ವೇಳೆಗೆ ಬ್ಯಾಂಕುಗಳಲ್ಲಿ 176.80 ಲಕ್ಷ ಕೋಟಿ ರು. ಸಾಲ ಇದ್ದರೆ, 220.60 ಲಕ್ಷ ಕೋಟಿ ರು. ಠೇವಣಿ ಇದೆ. ಸಾಲದ ಪ್ರಮಾಣದಲ್ಲಿ ಶೇ.19.6ರಷ್ಟು ಏರಿಕೆಯಾಗಿದ್ದರೆ, ಅದೇ ಪ್ರಮಾಣದಲ್ಲಿ ಠೇವಣಿಯಲ್ಲಿ ಏರಿಕೆಯಾಗುತ್ತಿಲ್ಲ ಎನ್ನಲಾಗುತ್ತಿದೆ. ಸಾಲ ಮತ್ತು ಠೇವಣಿ ಮಧ್ಯದ ಅಂತರ ಹೆಚ್ಚುತ್ತಿದೆ ಎನ್ನುವ ಮಾತು ಕೇಳಿಬರುತ್ತಿದೆ.

ಮಾಧ್ಯಮ ವರದಿಯೊಂದರ ಪ್ರಕಾರ, ಸಾಲ ತೆಗೆದುಕೊಳ್ಳಿ ಎಂದು ಗ್ರಾಹಕರಿಗೆ ಮುಗಿಬೀಳುವ ಬ್ಯಾಂಕುಗಳು ಮತ್ತೊಂದೆಡೆ ಹಣವಿಲ್ಲದೆ ಪರದಾಡುತ್ತಿವೆ. ದೇಶದ ವಾಣಿಜ್ಯ ಬ್ಯಾಂಕುಗಳು ವಿವಿಧ ಮೂಲಗಳಿಂದ ಪಡೆದುಕೊಂಡ ಸಾಲದ ಮೊತ್ತವು ಇದೇ ಮೊದಲ ಬಾರಿಗೆ 9 ಲಕ್ಷ ಕೋಟಿ ರು. ದಾಟಿದ್ದು, ಇದು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರಕಾರವನ್ನೇ ಕಂಗಾಲಾಗಿಸಿದೆಯಂತೆ. ಬ್ಯಾಂಕುಗಳಿಂದ ಸಾಲ ಪಡೆಯುವವರ ಸಂಖ್ಯೆ ಏರುತ್ತಿದ್ದು, ಠೇವಣಿ ಇಡುವವರ ಪ್ರಮಾಣ ಕುಗ್ಗುತ್ತಿದೆ. ಹೀಗಾಗಿ ಠೇವಣಿ ಹಣವಿಲ್ಲದೆ ಬ್ಯಾಂಕುಗಳು ಗ್ರಾಹಕರಿಗೆ ಸಾಲ ನೀಡಲು ವಿವಿಧ ಮೂಲಗಳನ್ನು ಆಶ್ರಯಿಸಬೇಕಾಗಿ ಬಂದಿದೆಯಂತೆ. ರಿಸರ್ವ್ ಬ್ಯಾಂಕ್ 15 ದಿನಗಳಿಗೊಮ್ಮೆ ಪ್ರಕಟಿಸುವ ದತ್ತಾಂಶದ ಪ್ರಕಾರ, ಜುಲೈ 26ರ ವೇಳೆಗೆ ಬ್ಯಾಂಕುಗಳು ಪಡೆದುಕೊಂಡಿರುವ ಸಾಲ 9.32 ಲಕ್ಷ ಕೋಟಿ ರು. ತಲುಪಿದೆಯಂತೆ. ಏಪ್ರಿಲ್ 5ರ ವೇಳೆಯ ಮೊತ್ತಕ್ಕೆ ಹೋಲಿಸಿದರೆ ಇದು ಶೇ.20ರಷ್ಟು ಹೆಚ್ಚಿದೆ. ಬ್ಯಾಂಕುಗಳ ನಡುವಿನ ಸಾಲ ಮತ್ತು ಬಾಂಡ್ ಮೊದಲಾದ ಮೂಲ ಗಳಿಂದ ವಾಣಿಜ್ಯ ಬ್ಯಾಂಕುಗಳು ಹಣವನ್ನು ಹೊಂದಿಸಿ ಕೊಳ್ಳುತ್ತವೆ. ಈ ವರ್ಷ ಸರಾಸರಿ ಸಾಲ 7.99 ಲಕ್ಷ ಕೋಟಿ ರು. ಆಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.45ರಷ್ಟು ಹೆಚ್ಚಾಗಿದೆ. ಗ್ರಾಹಕರಿಗೆ ನೀಡುವ ಸಾಲವು ಜುಲೈ 26ರ ವೇಳೆಗೆ ಶೇ.15.10ರಷ್ಟು ಏರಿಕೆ ಕಂಡಿದ್ದರೆ, ಠೇವಣಿ ಪ್ರಮಾಣವು ಶೇ.11ರ ವೇಗದಲ್ಲಿ ಬೆಳವಣಿಗೆ ಕಂಡಿದೆ. 2022ರಿಂದ ಇದೇ ಪರಿಸ್ಥಿತಿಯಿದ್ದು, ಠೇವಣಿ ಹಾಗೂ ಸಾಲದ ನಡುವಿನ ಅಂತರ ಹೆಚ್ಚುತ್ತಲೇ ಇದೆಯಂತೆ. ಇದು ಬ್ಯಾಂಕಿಂಗ್ ಉದ್ಯಮದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆಯಂತೆ.

ಠೇವಣಿ ಕುಸಿತದ ಬಗ್ಗೆ ವಿತ್ತ ಸಚಿವೆ ಆತಂಕ ವ್ಯಕ್ತಪಡಿಸುವಾಗ, ಅದರ ಹಿಂದಿನ ಕಾರಣಗಳನ್ನು ತಿಳಿದುಕೊಳ್ಳುವ ಅಥವಾ ವಿಶ್ಲೇಷಿಸುವ ಪ್ರಯತ್ನ ಮಾಡಲಿಲ್ಲ. ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್‌ರ ಆರ್ಥಿಕ ಸುಧಾರಣೆ, ಜಾಗತೀಕರಣ ಮತ್ತು ಉದಾರೀಕರಣದವರೆಗೆ ಬ್ಯಾಂಕುಗಳಲ್ಲಿ ಠೇವಣಿ ಸಂಗ್ರಹಕ್ಕೆ ಆದ್ಯತೆಯಿತ್ತು. ಹೆಚ್ಚು ಠೇವಣಿ ಸಂಗ್ರಹ ಮಾಡಿದವರನ್ನು 'ಡೈನಮಿಕ್ ಮ್ಯಾನೇಜರ್' ಎನ್ನುತ್ತಿದ್ದರು ಮತ್ತು ಅವರು ಆಡಳಿತವರ್ಗದ ಪ್ರಶಂಸೆಗೆ ಪಾತ್ರರಾಗುತ್ತಿದ್ದರು. ಅಂಥ ಬ್ಯಾಂಕುಗಳನ್ನು ಹೊಗಳಿ ಅಟ್ಟಕ್ಕೇರಿಸಲಾಗುತ್ತಿತ್ತು. ಆರ್ಥಿಕ ಸುಧಾರಣೆಯ ನಂತರದ ದಿನಗಳಲ್ಲಿ ಬ್ಯಾಂಕುಗಳು ತಮ್ಮ ವ್ಯವಹಾರ ಮತ್ತು ಲಾಭವನ್ನು ಹೆಚ್ಚಿಸಿಕೊಳ್ಳಲು ಸಾಲ ನೀಡಿಕೆಯಲ್ಲಿನ ಮಡಿವಂತಿಕೆಗೆ ಗುಡ್‌ಬೈ ಹೇಳಿ, ಮೈಚಳಿ ಬಿಟ್ಟು ಸಾಲ ನೀಡಲು ಆರಂಭಿಸಿದವು. ಇದರಿಂದಾಗಿ ಠೇವಣಿ ಸಂಗ್ರಹ ಸ್ವಲ್ಪ ಹಿನ್ನಡೆ ಅನುಭವಿಸತೊಡಗಿತು. ಹೆಚ್ಚು ಸಾಲ ನೀಡಿದವರು ಮತ್ತು ಸಾಲ ವಸೂಲಿ ಮಾಡಿದ ಮ್ಯಾನೇಜರ್‌ಗಳ ಬಗೆಗೆ ಆಡಳಿತ ವರ್ಗ ಹೆಚ್ಚಿನ ಗಮನ ನೀಡತೊಡಗಿತು.

ಜನರು ಹೂಡಿಕೆ ಮಾಡುವಾಗ ಮತ್ತು ಠೇವಣಿ ಇಡುವಾಗ, ಅವರ ಗಮನವೆಲ್ಲವೂ ಸುರಕ್ಷತೆ, ಗಳಿಕೆ (ರಿಟರ್ನ್) ಮತ್ತು ದ್ರವ್ಯತೆ/ನಗದೀಕರಣ (ಲಿಕ್ವಿಡಿಟಿ) ಇವುಗಳ ಮೇಲಿರುತ್ತದೆ. ಐದು ಲಕ್ಷ ರು.ವರೆಗಿನ ಠೇವಣಿಗೆ ಕೆಲವು ಕಟ್ಟಳೆಯೊಂದಿಗೆ ವಿಮಾ ರಕ್ಷಣೆ ಕೂಡ ಇರುತ್ತದೆ. ಹಿರಿಯ ನಾಗರಿಕರಿಗೆ ಮತ್ತು ಸಣ್ಣ ಠೇವಣಿದಾರರಿಗೆ ಈ ಮಿತಿಯನ್ನು ಹೆಚ್ಚಿಸುವ ಸಾಧ್ಯತೆಯಿದ್ದು, ಇಂಥ ಸುಳಿವು ರಿಸರ್ವ್ ಬ್ಯಾಂಕ್‌ನಿಂದ ಬಂದಿದೆ. ತುರ್ತು ಅಗತ್ಯಕ್ಕೆ ಕೆಲವು ಕಟ್ಟಳೆಯೊಂದಿಗೆ ನಗದೀಕರಣ ಅಥವಾ ದ್ರವ್ಯತೆಯ ಅವಕಾಶವೂ ಇರುತ್ತದೆ. ಆದರೆ ಠೇವಣಿ ಅಥವಾ ಹೂಡಿಕೆಯ ಮೇಲಿನ ರಿಟರ್ನ್ ಅಥವಾ ಗಳಿಕೆಯ ನಿಟ್ಟಿನಲ್ಲಿ ಜನರು ಸಂತುಷ್ಟರಾಗಿಲ್ಲ. 2008ರ ಆರ್ಥಿಕ ಹಿಂಜರಿತದವರೆಗೆ ಬ್ಯಾಂಕ್ ಠೇವಣಿ ಮೇಲೆ ಸಮಾಧಾನಕರ ಬಡ್ಡಿ (ಗಳಿಕೆ) ಬರುತ್ತಿತ್ತು. ಠೇವಣಿ ಮೇಲಿನ ಬಡ್ಡಿದರವು ಶೇ.12ರವರೆಗೂ ತಲುಪಿತ್ತು. ಸುಮಾರು 5-6 ವರ್ಷಗಳಲ್ಲಿ ಠೇವಣಿಯು ಶೇ.11-12ರ ದರದಲ್ಲಿ ದ್ವಿಗುಣವಾಗುತ್ತಿತ್ತು. ಈಗ ಶೇ. 7-8ರ ದರದಲ್ಲಿ 11-12 ವರ್ಷಗಳು ಬೇಕು. ಬ್ಯಾಂಕ್‌ನ ಒಟ್ಟು ಠೇವಣಿಯಲ್ಲಿ ಸುಮಾರು ಶೇ.47ರಷ್ಟು ಪಾಲು ಹೊಂದಿರುವ ಹಿರಿಯ ನಾಗರಿಕರು ತಮ್ಮ ಠೇವಣಿಯ ಸುರಕ್ಷಿತತೆಗೆ ಆದ್ಯತೆ ನೀಡುತ್ತಿದ್ದು, ಅಂತೆಯೇ ಬ್ಯಾಂಕ್‌ನಲ್ಲಿ ಠೇವಣಿ ಇಡುತ್ತಾರೆ. ಆದರೆ ಇಂದಿನ ಯುವಜನಾಂಗ ಮತ್ತು ಹೂಡಿಕೆದಾರರು ತಮ್ಮ ಹೂಡಿಕೆ ಅಥವಾ ಠೇವಣಿಯ ಮೇಲೆ ದೊರಕುವ ಗಳಿಕೆ (ರಿಟರ್ನ್) ಬಗೆಗೆ ಹೆಚ್ಚು ಚಿಂತಿಸುತ್ತಾರೆ. ಬ್ಯಾಂಕುಗಳಲ್ಲಿ ಠೇವಣಿಗಳನ್ನು ಇಡುವಾಗ ನಿಗದಿಪಡಿಸಿದ ಬಡ್ಡಿದರದ ಆಧಾರದ ಮೇಲೆ ಗಳಿಕೆ ದೊರಕುತ್ತಿದ್ದು, ಠೇವಣಿ ಪಕ್ವವಾಗುವವರೆಗೆ ಬಡ್ಡಿದರ ಬದಲಾಗುವುದಿಲ್ಲ. ಬ್ಯಾಂಕುಗಳಲ್ಲಿ ಠೇವಣಿ ಮೇಲಿನ ಬಡ್ಡಿದರ ಏರಿದರೂ ಅದರ ಫಲ ಠೇವಣಿದಾರನಿಗೆ ದೊರಕುವುದಿಲ್ಲ ಮತ್ತು ಅವಧಿಗಿಂತ ಮೊದಲು ಠೇವಣಿಯನ್ನು ಬಂದ್ ಮಾಡಿದರೆ, ನಿಗದಿಪಡಿಸಿದ ಬಡ್ಡಿದರದಲ್ಲೂ ಖೋತಾ ಬೇರೆ.

ಇಂದಿನ ಯುವಜನರಿಗೆ ಠೇವಣಿಗಳು ಪಕ್ವವಾಗುವವರೆಗೆ ಕಾಯುವ ತಾಳ್ಮೆ ಕೂಡ ಇರುವುದಿಲ್ಲ. ಅಂತೆಯೇ ಅವರು ಹೆಚ್ಚು ಗಳಿಕೆ ನೀಡುವ ಕ್ಯಾಪಿಟಲ್ ಮಾರ್ಕೆಟ್ ನತ್ತ ಚಿತ್ತ ಹರಿಸುತ್ತಾರೆ. ಹೂಡಿಕೆಗೆ ದಕ್ಕುವ ಗಳಿಕೆಯ ಪ್ರಮಾಣವು ಕಡಿಮೆಯಾಗುವುದು ಎಂಬ ಸುಳಿವು ಸಿಗುತ್ತಿದ್ದಂತೆ ತಕ್ಷಣ ಅದನ್ನು ಮಾರಿ ಕೈತೊಳೆದುಕೊಳ್ಳುತ್ತಾರೆ ಮತ್ತು ಅದು ಏರುಗತಿಯಲ್ಲಿದೆ ಎಂದರೆ ಇನ್ನೂ ಕೆಲಕಾಲ ಕಾಯ್ದು ಫಲವನ್ನು ಪಡೆಯುತ್ತಾರೆ. ಷೇರು ಮಾರುಕಟ್ಟೆಯು 'ವಂದೇಭಾರತ್ ಎಕ್ಸ್‌ಪ್ರೆಸ್' ವೇಗದಲ್ಲಿ ಮೇಲೇರುತ್ತಿದೆ. ಹೀಗಾಗಿ ಈಗ ಹೂಡಿಕೆದಾರರು ಬ್ಯಾಂಕ್ ಬಿಟ್ಟು ದಲಾಲ್ ಸ್ಟ್ರೀಟ್ ಕಡೆ ನುಗ್ಗುತ್ತಿದ್ದು, ಗರಿಷ್ಠ ಶೇ.9ರಷ್ಟು ಬಡ್ಡಿ ಅಥವಾ ಗಳಿಕೆ

ನೀಡುವ ಬ್ಯಾಂಕುಗಳಿಗೆ ಬೆನ್ನುಹಾಕುತ್ತಿದ್ದಾರೆ. 'ಬರಗಾಲದಲ್ಲಿ ಅಧಿಕಮಾಸ' ಎನ್ನುವಂತೆ ನೀಡುವ ಕಿಸಬಾಕಿ ಬಡ್ಡಿಗೂ ಟಿಡಿಎಸ್ ಕಡಿತ ಬೇರೆ ಎಂದು ಅವರು ಕೊರಗುತ್ತಾರೆ. ಗ್ರಾಹಕರ ಠೇವಣಿ ಎನ್ನುವ ಒಂದೇ ಕಾರಣಕ್ಕೆ ಬ್ಯಾಂಕುಗಳಿಗೆ ಠೇವಣಿ ಹರಿದು ಬರುತ್ತದೆ. ಉಳಿದ ಮಾನದಂಡಗಳನ್ನು ಪರಿಗಣಿಸಿದರೆ ಬ್ಯಾಂಕುಗಳು ಬೋರ್ಡಿಗೆ ಬರುವುದು ತುಸು ಕಷ್ಟ.

ಯಾರೂ ಸಾಲ ಮಾಡಿ ಬ್ಯಾಂಕುಗಳಲ್ಲಿ ಠೇವಣಿ ಇಡುವುದಿಲ್ಲ. ಬ್ಯಾಂಕುಗಳಲ್ಲಿ ಠೇವಣಿ ಇಡಬೇಕಾದರೆ ಗ್ರಾಹಕರ ಬಳಿ ಮಿಗತೆ ಹಣ (ಸರ್‌ಪ್ಲಸ್) ಇರಬೇಕು. ಹಣ ಇದ್ದವರು ಕ್ಯಾಪಿಟಲ್ ಮಾರ್ಕೆಟ್‌ಗೆ ಹೋಗುತ್ತಾರೆ. ಹೆಚ್ಚು ಲಾಭದಾಯಕವಾಗಿರುವ ರಿಯಲ್ ಎಸ್ಟೇಟ್ ಮತ್ತು ಚಿನ್ನ ಖರೀದಿಯತ್ತ ಮುಖ ಮಾಡುತ್ತಾರೆ. ಇದರಲ್ಲಿ ಮೌಲ್ಯದ ಏರಿಕೆಯು ಬ್ಯಾಂಕ್ ಠೇವಣಿ ಮೇಲಿನ ಬಡ್ಡಿ ದರಕ್ಕಿಂತ ಹಲವು ಪಟ್ಟು ಹೆಚ್ಚಿರುತ್ತದೆ. ಬ್ಯಾಂಕುಗಳಲ್ಲಿ ಠೇವಣಿ ಇಡುವ ಬಡ, ಬಡ-ಮಧ್ಯಮ ಮತ್ತು ಮಧ್ಯಮ ವರ್ಗದವರು ತಮ್ಮ ಆದಾಯದ ಸುಮಾರು ಶೇ.40ರಷ್ಟನ್ನು ಸರಕಾರಕ್ಕೆ ತೆರಿಗೆ ರೂಪದಲ್ಲಿ ನೀಡುತ್ತಿದ್ದಾರೆ. ಹೀಗಾಗಿ ಅವರಿಗೆ ತಿಂಗಳ ಕೊನೆ ನೋಡುವುದು ದುಸ್ತರವಾಗಿದ್ದು, ಉಳಿತಾಯ ಮತ್ತು ಬ್ಯಾಂಕ್‌ನಲ್ಲಿ ಠೇವಣಿ ಇರಿಸುವುದು ಮರೀಚಿಕೆಯಾಗಿದೆ. ಹೋಟೆಲ್‌ನಲ್ಲಿ ಕುಳಿತು ಒಂದು ಕಪ್ ಚಹಾ ಕುಡಿದರೆ ನಿಮಗರಿವಿಲ್ಲದಂತೆ ಸುಮಾರು 56 ರೀತಿಯ ತೆರಿಗೆಯನ್ನು ನೀವು ಸರಕಾರಕ್ಕೆ ನೀಡಿರುತ್ತೀರಿ ಎಂದು ಹಿರಿಯ ರಾಜಕಾರಣಿ ರಾಮಕೃಷ್ಣ ಹೆಗಡೆಯವರು ಒಮ್ಮೆ ಹೇಳಿದ್ದರು. 'ಅಳಿಯ ಅಲ್ಲ, ಮಗಳ ಗಂಡ' ಎನ್ನುವಂತೆ ಅದು ಈಗಲೂ ಇದೆ. ತೆರಿಗೆಗಳ ಸಂಖ್ಯೆ ಕಡಿಮೆ, ಆದರೆ ತೆರಿಗೆಯ ಮೊತ್ತ ಅಷ್ಟೇ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಡುತ್ತಾರೆ. ಭಾರತೀಯರು ಪ್ರತಿದಿನ, ನೇರವಾಗಿ ಅಥವಾ ಪರೋಕ್ಷವಾಗಿ ಯಾವುದಾದರೂ ರೂಪದಲ್ಲಿ ನಿರಂತರವಾಗಿ ತೆರಿಗೆ ನೀಡುತ್ತಿದ್ದು, ಬಹುತೇಕರ ಕಿಸೆ ಮತ್ತು ಕೈ ಖಾಲಿಯಾಗಿ, ಉಳಿತಾಯ ಮತ್ತು ಬ್ಯಾಂಕ್ ಠೇವಣಿಯನ್ನು ಮರೆಯಬೇಕಾಗುತ್ತದೆ. ಇದು ಆರೋಗ್ಯ ವಿಮೆಯನ್ನೂ ಬಿಟ್ಟಿಲ್ಲವಂತೆ. ಇತ್ತೀಚೆಗೆ ಕೇಂದ್ರ ಸಾರಿಗೆ ಮಂತ್ರಿ ನಿತಿನ್ ಗಡ್ಕರಿಯವರು ವಿತ್ತ ಮಂತ್ರಿಗಳಿಗೆ ಪತ್ರ ಬರೆದು, 'ಇದು ಬದುಕಿನ ಅನಿಶ್ಚಿತತೆಯ ಮೇಲಿನ ತೆರಿಗೆ' ಎಂದು ಮಾರ್ಮಿಕವಾಗಿ ಹೇಳಿ ಶೇ.18ರಷ್ಟಿರುವ ಜಿಎಸ್‌ಟಿಯನ್ನು ರದ್ದುಪಡಿಸುವಂತೆ ಕೇಳಿದ್ದಾರಂತೆ.

ರಿಟರ್ನ್ ಮತ್ತು ತೆರಿಗೆ ಹೆಸರಿನಲ್ಲಿ ಬ್ಯಾಂಕುಗಳಿಗೆ ಠೇವಣಿ ನೀಡದವರನ್ನು ಸೆಳೆಯಲು, ಬ್ಯಾಂಕುಗಳಲ್ಲಿ ಠೇವಣಿ ಮೇಲೆ ನೀಡುವ ಬಡ್ಡಿದರದ ಮೇಲ್ಮುಖ ಪರಿಷ್ಕರಣೆ ಅನಿವಾರ್ಯವಾಗಿದೆ ಮತ್ತು ಇದು ಸ್ಪರ್ಧಾತ್ಮಕವಾಗಿರುವಂತೆ ಗಮನ ಹರಿಸಬೇಕು. ಹಾಗೆಯೇ, ಬ್ಯಾಂಕ್ ಠೇವಣಿಗಳ ಪಾಲಿಗೆ 'ಸೆರಗಿನ ಕೆಂಡ'ದಂತಿರುವ ಟಿಡಿಎಸ್ ಅನ್ನು ಪುನರ್‌ವಿಮರ್ಶಿಸಬೇಕು. ರೆಪೋ ದರ ಬದಲಾದಾಗ ಸಾಲದ ಮೇಲಿನ ಬಡ್ಡಿದರ ಏರುಪೇರಾಗುತ್ತದೆ. ಆದರೆ ಠೇವಣಿ ಮೇಲಿನ ಬಡ್ಡಿದರವು ಠೇವಣಿ ಪಕ್ವವಾಗುವವರೆಗೆ ಬದಲಾಗುವುದಿಲ್ಲ. ಠೇವಣಿದಾರರಿಗೆ ಅನನುಕೂಲವಾಗಿರುವ ಈ ವ್ಯವಸ್ಥೆಯನ್ನು ಸರಿಪಡಿಸಬೇಕು. ಬ್ಯಾಂಕುಗಳಲ್ಲಿ ಚಾಲ್ತಿ ಖಾತೆಗೆ ಬಡ್ಡಿಯನ್ನು ನೀಡುವುದಿಲ್ಲ ಮತ್ತು ಉಳಿತಾಯ ಖಾತೆಗೆ ಶೇ.3-3.50ರಷ್ಟು ಕಾಟಾಚಾರದ ಬಡ್ಡಿ ಇರುತ್ತದೆ. ಅಂತೆಯೇ ಈ ದಿನಗಳಲ್ಲಿ ಗ್ರಾಹಕರು ತಮ್ಮ ಹಣವನ್ನು ಸ್ಥಿರ ಠೇವಣಿಯಲ್ಲಿ ಇಡುತ್ತಾರೆ. ಇದು ಬ್ಯಾಂಕುಗಳಿಗೆ ದುಬಾರಿಯಾಗುತ್ತಿದ್ದು, ಉಳಿತಾಯ ಖಾತೆಗಳ ಮೇಲೆ ನೀಡುವ ಬಡ್ಡಿದರವನ್ನು ಹೆಚ್ಚಿಸುವುದನ್ನು ಮತ್ತು ಚಾಲ್ತಿ ಖಾತೆಗೂ ಸ್ವಲ್ಪ ಬಡ್ಡಿ ನೀಡುವುದನ್ನು ಬ್ಯಾಂಕುಗಳು ಪರಿಗಣಿಸಬಹುದು.

ಬ್ಯಾಂಕುಗಳು ತಮ್ಮ ಠೇವಣಿಯನ್ನು ಹೆಚ್ಚಿಸಿಕೊಳ್ಳದಿದ್ದರೆ, ತಾವು ವಿವಿಧ ಮೂಲಗಳಿಂದ ಪಡೆದ ಸಾಲವನ್ನು ಗ್ರಾಹಕರಿಗೆ ಸಾಲ ನೀಡಲೆಂದು ಬಳಸಿಕೊಳ್ಳಬೇಕಾಗುತ್ತದೆ. ಇದು ಅಂತಿಮವಾಗಿ ಸ್ಪರ್ಧಾತ್ಮಕವಾಗಿರದೆ ಸಾಲ ನೀಡುವಿಕೆಯಲ್ಲಿನ ತನ್ನ ಮಾರುಕಟ್ಟೆ ಪಾಲನ್ನು ಕಳೆದುಕೊಳ್ಳಬೇಕಾಗುತ್ತದೆ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಇಮಾಮ್ ಸಾಬ್ರಿಗೂ ಗೋಕುಲಾಷ್ಟಮಿಗೂ...

ಕಳೆದ ಲೋಕಸಭಾ ಚುನಾವಣೆಯಲ್ಲಿ, ಬಿಹಾರದ ಪಾಟಲಿಪುತ್ರ ಕ್ಷೇತ್ರದಲ್ಲಿ ತನಗಾದ ಸೋಲನ್ನು ಜೀರ್ಣಿಸಿಕೊಳ್ಳುವುದಕ್ಕೆ ಬಿಜೆಪಿಗೆ ಸಾಧ್ಯವಾಗಿಲ್ಲವಂತೆ. ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ರಾಮ್‌ಕೃಪಾಲ್ ಯಾದವ್ ಸ್ಪರ್ಧಿಸಿದ್ದರೆ, ಅವರಿಗೆದುರಾಗಿ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷದಿಂದ ಸ್ಪರ್ಧಿಸಿದ್ದು ಮಿಸಾ ಭಾರತಿ. ಈಕೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಅವರ ಜ್ಯೇಷ್ಠ ಪುತ್ರಿ. ಹಾಗೆ ನೋಡಿದರೆ, ಈ ಕ್ಷೇತ್ರದಲ್ಲಿ ಮಿಸಾ ಭಾರತಿ ಅವರಿಗೆ ಇದೇ ರಾಮ್‌ಕೃಪಾಲ್ ಯಾದವ್ 2 ಬಾರಿ ಮಣ್ಣು ಮುಕ್ಕಿಸಿದ್ದರು; 2024ರ ಚುನಾವಣೆಯಲ್ಲೂ ಈ ಜೈತ್ರಯಾತ್ರೆ ಮುಂದುವರಿಯಲಿದೆ ಎಂಬುದೇ ಬಹುತೇಕರ ನಿರೀಕ್ಷೆಯಾಗಿತ್ತು. ಮಾತ್ರವಲ್ಲ, 'ವಿನಯಸಂಪನ್ನರೂ, ತಮ್ಮ ಮತಕ್ಷೇತ್ರದ ಕಾರ್ಯಕರ್ತರೊಂದಿಗೆ ಉತ್ತಮ ಸಂಬಂಧ ಹೊಂದಿರುವ ನಾಯಕರೂ ಆಗಿರುವ ರಾಮ್‌ಕೃಪಾಲ್ ಈ ಬಾರಿಯೂ ಗೆದ್ದು ಹ್ಯಾಟ್ರಿಕ್ ಸಾಧಿಸುತ್ತಾರೆ' ಎಂದೇ ಚುನಾವಣಾಪೂರ್ವ ಸಮೀಕ್ಷೆಗಳು 'ಗಿಳಿಶಾಸ್ತ್ರ' ನುಡಿದಿದ್ದವು. ಆದರೆ ಆಗಿದ್ದೇ ಬೇರೆ. ಫಲಿತಾಂಶ ಬಂದಾಗ ಜಯಮಾಲೆ ಬಿದ್ದಿದ್ದು ಮಿಸಾ ಭಾರತಿ ಕೊರಳಿಗೆ! 'ಅರೆ ಇಸ್ಕಿ! ಇದ್ಯಾಕೆ ಹಿಂಗಾಯ್ತಪ್ಪಾ ಶಿವನೇ' ಅಂತ ಶಾನೆ ತಲೆಕೆಡಿಸಿಕೊಂಡ ಬಿಜೆಪಿಯ 'ಚಿಂತನಶೀಲರು', ರಾಮ್‌ಕೃಪಾಲ್ ಸೋಲಿಗೆ ಕಾರಣವಾದ ಅಂಶಗಳನ್ನು ಪತ್ತೆ ಮಾಡಿ ವಿಶ್ಲೇಷಿಸುವ ಕಸರತ್ತಿನಲ್ಲಿ ತೊಡಗಿಸಿಕೊಂಡರಂತೆ. ಆಗ, 'ಬಿಹಾರದಲ್ಲಿ ಕೈಗೊಳ್ಳಲಾಗಿದ್ದ ಭದ್ರತಾ ವ್ಯವಸ್ಥೆಗಳೇ ಈ ಸೋಲಿಗೆ ಒಂದು ಕಾರಣ' ಎಂಬ ಸಂಗತಿ ಅವರಿಗೆ ಗೊತ್ತಾಯಿತಂತೆ. ಅಂದರೆ, ರಾಮ್‌ಕೃಪಾಲ್ ಪರವಾಗಿ ಒಲವು ಹೊಂದಿದ್ದ ಪ್ರದೇಶಗಳಲ್ಲಿ ಕೇಂದ್ರೀಯ ಪಡೆಗಳನ್ನು ನಿಯೋಜಿಸಿದರೆ, ಮತ್ತೊಂದೆಡೆ ಮಿಸಾ ಭಾರತಿಯವರಿಗೆ ಒತ್ತಾಸೆಯಾಗಿ ನಿಂತಿದ್ದ ಪ್ರದೇಶಗಳಲ್ಲಿ ರಾಜ್ಯ ಪೊಲೀಸರು ಮತ್ತು ಹೋಮ್‌ಗಾರ್ಡ್‌ಗಳನ್ನು ಕೆಲಸಕ್ಕೆ ಹಚ್ಚಲಾಗಿತ್ತು. ಹೀಗೆ ಕೇಂದ್ರೀಯ ಪಡೆಗಳ ಉಪಸ್ಥಿತಿ ಇದ್ದುದೇ ರಾಮ್‌ಕೃಪಾಲರ ಹಿನ್ನಡೆಗೆ ಕಾರಣವಾಯಿತು ಎಂಬುದು ಬಿಜೆಪಿಯ 'ಚಿಂತನಶೀಲ'ರು ಕಂಡುಕೊಂಡ 'ಬ್ರಹ್ಮರಹಸ್ಯ'ವಂತೆ! 'ಇಮಾಮ್ ಸಾಬ್ರಿಗೂ, ಗೋಕುಲಾಷ್ಟಮಿಗೂ ಏನ್ ಸಂಬಂಧ?' ಎಂದು ಜನಸಾಮಾನ್ಯರು ಆಗಾಗ ಮಾತಾಡುವುದುಂಟು; ಆದರೆ ರಾಜಕೀಯದ ಅಖಾಡದಲ್ಲಿ, ಸಂಬಂಧವಿಲ್ಲದ ಬಾಬತ್ತುಗಳೇ ಸೋಲು ಅಥವಾ ಗೆಲುವಿಗೆ ಕಾರಣವಾಗಬಲ್ಲವು ಎಂಬುದಕ್ಕೆ ಮೇಲಿನ ನಿದರ್ಶನವೇ ಸಾಕ್ಷಿ. ಒಟ್ನಲ್ಲಿ, ರಾಜಕೀಯ ಅಂದ್ರೆ ತಮಾಷೆ ಅಲ್ಲ ಕಣ್ರೀ!

ಕಾರಾಗೃಹದ ನಿಜ ದರ್ಶನ

'ಈ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು, ಆದರೆ ಕೆಲವರು ಹೆಚ್ಚು ಸಮಾನರು' ಎಂಬುದೊಂದು ಮಾತಿದೆ. ಪ್ರಭಾವಿಗಳಿಗೆ, ಗಣ್ಯರು ಎನಿಸಿಕೊಂಡವರಿಗೆ, ದುಡ್ಡಿರುವ ಕುಳಗಳಿಗೆ, ಅವರು 'ಬ್ಯಾಡ, ಬ್ಯಾಡಾ...' ಅಂದ್ರೂ ವಿಶೇಷ ಸವಲತ್ತು- ಸೌಲಭ್ಯಗಳು ಹುಡುಕಿಕೊಂಡು ಬರ್ತವೆ. ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ಎನಿಸಿಕೊಂಡಿರುವ ಚಿತ್ರನಟ ದರ್ಶನ್‌ಗೆ ಪರಪ್ಪನ ಅಗ್ರಹಾರದ ಕಾರಾಗೃಹದಲ್ಲಿ ರಾಜಾತಿಥ್ಯ ಸಿಗುತ್ತಿರುವ ಚಿತ್ರಗಳನ್ನು ಹಾಗೂ ಸೆರೆವಾಸದಲ್ಲಿದ್ದುಕೊಂಡೇ ದರ್ಶನ್ ವಿಡಿಯೋ ಕರೆಯಲ್ಲಿ ಮಾತಾಡಿದ್ದನ್ನು ನೋಡಿದ ನಂತರ, ಶ್ರೀಸಾಮಾನ್ಯರು ಮೇಲೆ ಉಲ್ಲೇಖಿಸಿರುವ ಮಾತನ್ನು ಮತ್ತೆ ಮತ್ತೆ ಗೊಣಗಿಕೊಳ್ಳುತ್ತಿರುವುದು ಖರೆ. ರಾಜಾತಿಥ್ಯದ 'ಸೈಡ್ ಎಫೆಕ್ಟ್' ಎಂಬಂತೆ ಜೈಲಿನ 9 ಮಂದಿ ಅಧಿಕಾರಿಗಳ ಅಮಾನತು ಆಗಿದೆ. ಇದು, 'ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ' ಎಂಬಂಥ ಕ್ರಮವೇನೂ ಅಲ್ಲ, ಇದು ಯಾವತ್ತೋ ಆಗಬೇಕಿತ್ತು ಎಂಬುದು ಬಲ್ಲವರ ಅಭಿಪ್ರಾಯ.

ನಾರಾಯಣ ನಾರಾಯಣ!

ರಾಜ್ಯದ ಜೈಲುಗಳು ತಮ್ಮ ಸಾಮರ್ಥ್ಯಕ್ಕೂ ಮೀರಿ ಹೆಚ್ಚಿನ ಖೈದಿಗಳಿಂದ ತುಂಬಿ ತುಳುಕುತ್ತಿವೆಯಂತೆ. ಈ ಬೆಳವಣಿಗೆಗೆ ವ್ಯಥೆ ಪಡಬೇಕೋ ಅಥವಾ 'ಕೋಟ್ಯಂತರ ರುಪಾಯಿ ಖರ್ಚುಮಾಡಿ ಜೈಲುಗಳನ್ನು ಕಟ್ಟಿಸಿದ್ದಕ್ಕೂ ಸಾರ್ಥಕವಾಯಿತು' ಎಂದು ಸಂಭ್ರಮಿಸಬೇಕೋ ಎಂಬುದು ಗೊತ್ತಾಗದೆ ತ್ರಿಲೋಕ ಸಂಚಾರಿ ನಾರದರು ಗೊಂದಲದಲ್ಲಿದ್ದಾರೆ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bangalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 247

ಸಮಾಚಾರ ಸಣ್ಣದಲ್ಲ

ಕಾಶ್ಮೀರ; ನಿಷೇಧಿತ ಸಂಘಟನೆ ಮೂವರು ಅಭ್ಯರ್ಥಿ ಸ್ಪರ್ಧೆ!

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿನ ನಿಷೇಧಿತ ಸಂಘಟನೆ 'ಜಮಾತ್-ಎ-ಇಸ್ಲಾಮಿ' ವಿಧಾನಸಭಾ ಚುನಾವಣೆಗೆ 3 ಅಭ್ಯರ್ಥಿಗಳನ್ನು ಪಕ್ಷೇತರವಾಗಿ ಕಣಕ್ಕಿಳಿಸಿದೆ. ಸೆ.18ರಂದು ನಡೆಯುವ ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಮಂಗಳವಾರ ಕೊನೆ ದಿನವಾಗಿದ್ದು, ಜಮಾತೆ ಸಂಘಟನೆಯಿಂದ ಮೂವರು ದಕ್ಷಿಣ ಕಾಶ್ಮೀರದ ವಿವಿಧ ಕ್ಷೇತ್ರಗಳಿಂದ ನಾಮಪತ್ರ ಸಲ್ಲಿಸಿದ್ದಾರೆ. ಜಮಾತೆ ಮೊದಲಿಗೆ 7 ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಯೋಜಿಸಿತ್ತು. ಆದರೆ, ಮೂವರು ಕಡೆಕ್ಷಣ ಹಿಂದೆ ಸರಿದರು. ಮೂವರು ನಾಮಪತ್ರ ಸಲ್ಲಿಸಿದರು. 4ನೆಯವರಾಗಿ ಶೋಪಿಯಾನ್ ಜೈನ್ ಪೋರಾ ಕ್ಷೇತ್ರಕ್ಕೆ ಕಣಕ್ಕಿಳಿಸಲು ಸಂಭಾವ್ಯ ಅಭ್ಯರ್ಥಿ ಜತೆ ಜಮಾತೆ ಮಾತುಕತೆ ನಡೆಸಿದೆ ಎನ್ನಲಾಗಿದೆ.

ಜಾರ್ಖಂಡ್ ಮಾಜಿ ಸಿಎಂ ಚಂಪೈ 30ರಂದು ಬಿಜೆಪಿಗೆ

ದೆಹಲಿ: ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಚಂಪೈ ಸೊರೆನ್ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದೆಹಲಿ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದು, ಆ.30ರಂದು ಬಿಜೆಪಿಗೆ ಸೇರ ಲಿದ್ದಾರೆ. ಚಂಪೈ ಬಿಜೆಪಿ ಸೇರ್ಪಡೆ ಕಾರ್ಯಕ್ರಮ ರಾಂಚಿಯಲ್ಲಿ ನಡೆಯಲಿದೆ ಎಂದು ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ವರ್ಷಾಂತ್ಯ ವೇಳೆ ಜಾರ್ಖಂಡ್ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಬಿಜೆಪಿ ಈಗಿನಿಂದಲೇ ತಯಾರಿ ನಡೆಸಿದೆ. ಮುಖ್ಯಮಂತ್ರಿಯಾಗಿದ್ದ ಹೇಮಂತ್ ಸೊರೆನ್‌ರನ್ನು ಜಾರಿ ನಿರ್ದೇಶನಾಲಯ ಜ.31 ರಂದು ಬಂಧಿಸಿದ ನಂತರ ಚಂಪೈ ಜಾರ್ಖಂಡ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಬಳಿಕ ಹೇಮಂತ್ ಜಾಮೀನು ಪಡೆದು ಹೊರಬಂದ ಬಳಿಕ ಚಂಪೈ ಅಧಿಕಾರ ತೊರೆಯಬೇಕಾಯಿತು. ಅದರಿಂದ ಅವರು ಅಸಮಾಧಾನಗೊಂಡಿದ್ದರು.

ಬೈಡನ್‌ಗೆ ಮೋದಿ ಕರೆ: ಬಾಂಗ್ಲಾ, ಉಕ್ರೇನ್ ಚರ್ಚೆ

ದೆಹಲಿ: ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅವರಿಗೆ ಕರೆ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಉಕ್ರೇನ್, ಬಾಂಗ್ಲಾದೇಶದಲ್ಲಿನ ಸದ್ಯದ ಪರಿಸ್ಥಿತಿಗಳನ್ನು ಚರ್ಚಿಸಿದರು. ಬೈಡೆನ್ ಅವರಿಗೆ ಕರೆ ಮಾಡಿ ಉಕ್ರೇನ್ ಪರಿಸ್ಥಿತಿ ಚರ್ಚಿಸಿದೆ. ಶಾಂತಿ-ಸ್ಥಿರತೆ ಮರುಸ್ಥಾಪನೆಗೆ ಭಾರತ ಪೂರ್ಣ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದೆ ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ಬರೆದಿದ್ದಾರೆ. ಬಾಂಗ್ಲಾದೇಶದ ಪರಿಸ್ಥಿತಿ, ಅಲ್ಲಿನ ಹಿಂದೂಗಳು ಮತ್ತು ಇತರೆ ಅಲ್ಪಸಂಖ್ಯಾತ ಸಮುದಾಯಗಳ ಸುರಕ್ಷತೆ ಮತ್ತು ಭದ್ರತೆ ಬಗೆಗೂ ಇಬ್ಬರೂ ಚರ್ಚಿಸಿದೆವು. ಬಾಂಗ್ಲಾದಲ್ಲಿ ಶೀಘ್ರವಾಗಿ ಶಾಂತಿ-ಸಹಜತೆ ಮರುಸ್ಥಾಪನೆಯ ಅಗತ್ಯವನ್ನು ಒತ್ತಿಹೇಳಿದೆ. ಹಿಂದೂಗಳ ಸುರಕ್ಷತೆ ಮತ್ತು ಭದ್ರತೆಗೆ ಆದ್ಯತೆ ನೀಡಬೇಕಿರುವುದನ್ನು ಚರ್ಚೆ ಮಾಡಿದ್ದಾಗಿ ಮೋದಿ ಹೇಳಿದ್ದಾರೆ.

ಸುಡಾನ್ ಅಣೆಕಟ್ಟೆ ನಾಶ: 60 ಬಲಿ, 200 ಜನ ಕಾಣೆ

ಅರ್ಬತ್: ಆಫ್ರಿಕಾ ಖಂಡದ ಯುದ್ಧ ಪೀಡಿತ ದೇಶ ಸುಡಾನ್‌ನಲ್ಲಿ ಭಾರೀ ಮಳೆಯಿಂದ ಅರ್ಬತ್ ಅಣೆಕಟ್ಟೆ ಜಖಂಗೊಂಡ ನೀರಿನ ರಭಸಕ್ಕೆ ಬಹುತೇಕ ಕೊಚ್ಚಿಹೋಗಿದೆ. ದಿಢೀರ್ ಜಲಪ್ರವಾಹದಲ್ಲಿ 60 ಜನರು ಸಾವನ್ನಪ್ಪಿ, ನೂರಾರು ಮಂದಿ ಕಣ್ಮರೆಯಾಗಿದ್ದಾರೆ. ಕೆಂಪು ಸಮುದ್ರ ಸಮೀಪದಲ್ಲಿದ್ದ 2.50 ಕೋಟಿ ಕ್ಯುಬಿಕ್ ಮೀಟರ್ ಜಲಸಂಗ್ರಹ ಸಾಮರ್ಥ್ಯದ ಅರ್ಬತ್ ಅಣೆಕಟ್ಟೆ ಒಡೆದುಹೋಗಿದ್ದರಿಂದ 20 ಹಳ್ಳಿಗಳಿಗೆ ನೀರು ನುಗ್ಗಿ ಪ್ರವಾಹ ಸೃಷ್ಟಿಯಾಗಿದೆ. ಸಾವಿರಾರು ಮನೆಗಳು ಕೊಚ್ಚಿಹೋಗಿವೆ. ಚಿನ್ನದ ಗಣಿಗೂ ನೀರು ನುಗ್ಗಿದ್ದು, ಗಣಿಯಲ್ಲಿ ಕೆಲಸ ಮಾಡುತ್ತಿದ್ದ 200 ಮಂದಿ ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ.

ಬಿಎಸ್‌ಪಿ ಅಧ್ಯಕ್ಷೆಯಾಗಿ ಮಾಯಾವತಿ ಪುನರಾಯ್ಕೆ

ಲಖನೌ: ಬಹುಜನ ಸಮಾಜ ಪಕ್ಷದ(ಬಿಎಸ್‌ಪಿ) ರಾಷ್ಟ್ರಾಧ್ಯಕ್ಷೆಯಾಗಿ ಮಾಜಿ ಮುಖ್ಯಮಂತ್ರಿ ಮಾಯಾವತಿ ಅವರೇ ಪುನರಾಯ್ಕೆ ಆಗಿದ್ದಾರೆ.

ಉತ್ತರ ಪ್ರದೇಶದ ಲಖನೌನಲ್ಲಿರುವ ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆದ ವಿಶೇಷ ಕಾರ್ಯಕಾರಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ರಾಜಕೀಯ ನಿವೃತ್ತಿ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿರುವ 68 ವರ್ಷದ ಮಾಯಾವತಿ ಅವರು, ದಲಿತರು, ಇತರೆ ಸಮಾಜಗಳಲ್ಲಿನ ದುರ್ಬಲರ ಏಳಿಗೆಗಾಗಿ ನನ್ನ ಹೋರಾಟ ಮುಂದುವರಿಯಲಿದೆ ಎಂದು ಹೇಳಿದ್ದಾರೆ. ಮಾಯಾವತಿ 4 ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು.

{ **ಗೌರವ್ ಭಾಟಿಯ** } ಬಿಜೆಪಿ ರಾಷ್ಟ್ರೀಯ ವಕ್ತಾರ

ಕೋಲ್ಕತ್ತ ಸರಕಾರಿ ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆ ಅತ್ಯಾಚಾರ-ಹತ್ಯೆ ಪ್ರಕರಣದ ಸತ್ಯ ಹೊರಬರಲು ಸಿಎಂ ಮಮತಾ ಬ್ಯಾನರ್ಜಿ, ಕೋಲ್ಕತ್ತ ಪೊಲೀಸ್ ಆಯುಕ್ತ ವಿನೀತ್ ಗೋಯಲ್‌ಗೆ 'ಪಾಲಿಗ್ರಫಿ' ಪರೀಕ್ಷೆ ನಡೆಸಬೇಕು. ಪ್ರಕರಣದ ತನಿಖೆ ನ್ಯಾಯಯುತವಾಗಿ ನಡೆಯಲು ಮೊದಲು ಮಮತಾ ರಾಜೀನಾಮೆ ನೀಡಬೇಕು.

ವಿಧಾನಸೌಧ ಚಲೋ ರ‍್ಯಾಲಿಯಲ್ಲಿ ಪೊಲೀಸ್ ದೌರ್ಜನ್ಯ ಆರೋಪ

ಇಂದು ಪ.ಬಂಗಾಳ ಬಂದ್: ಬಿಜೆಪಿ

ಮಮತಾ ರಾಜೀನಾಮೆಗೆ ಆಗ್ರಹಿಸಿ ಸಚಿವಾಲಯ ಮುತ್ತಿಗೆ ಯತ್ನ

6 ಸಾವಿರ ಪೊಲೀಸರ ಭದ್ರತೆ; ಅಶ್ರುವಾಯು-ಜಲಫಿರಂಗಿ ಬಳಕೆ

ಕೋಲ್ಕತ್ತ: ಆರ್‌ಜಿಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದ ತನಿಖೆಯಲ್ಲಿ ಪೊಲೀಸರ ನಿರ್ಲಕ್ಷ್ಯ ಖಂಡಿಸಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ರಾಜೀನಾಮೆಗೆ ಆಗ್ರಹಿಸಿ ಪಶ್ಚಿಮ ಬಂಗಾಳ ಛಾತ್ರ ಸಮಾಜ ಮತ್ತು ಇತರೆ ಹಲವು ಸಂಘಟನೆಗಳು ಹಾಗೂ ವಿದ್ಯಾರ್ಥಿ ಸಂಘಗಳು ಮಂಗಳವಾರ ಕೋಲ್ಕತ್ತದಲ್ಲಿ ನಡೆಸಿದ 'ನಬಣ್ಣ ಅಭಿಜನ ರ‍್ಯಾಲಿ'ಯ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂದು ಭಾರತೀಯ ಜನತಾ ಪಕ್ಷ (ಬಿಜೆಪಿ) ಕಿಡಿಕಾರಿದೆ.

ಹೌರ ಸೇತುವೆ ಸೇರಿದಂತೆ ಕೋಲ್ಕತ್ತ ನಗರದ ವಿವಿಧೆಡೆ ರ‍್ಯಾಲಿಯಲ್ಲಿ ಸಾಗುತ್ತಿದ್ದವರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ, ಜಲಫಿರಂಗಿ ಬಳಸಿದ್ದಾರೆ, ಅಶ್ರುವಾಯು ಸಿಡಿಸಿ ದೌರ್ಜನ್ಯ ನಡೆಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ಪಶ್ಚಿಮ ಬಂಗಾಳ ಘಟಕ, ಪೊಲೀಸ್ ದೌರ್ಜನ್ಯ ಖಂಡಿಸಿ ಬುಧವಾರ ರಾಜ್ಯ ಬಂದ್‌ಗೆ ಕರೆ ನೀಡಿದೆ. ಬುಧವಾರ ಬೆಳಗ್ಗೆಯಿಂದ ಸಂಜೆವರೆಗೆ 12 ಗಂಟೆಗಳ ಕಾಲ ರಾಜ್ಯದಲ್ಲಿ ಬಂದ್ ನಡೆಯಲಿದೆ ಎಂದು ಹೇಳಿದೆ.

'ನಬಣ್ಣ ಅಭಿಜನ್ ರ‍್ಯಾಲಿ'ಗೆ ಅವಕಾಶ ನೀಡಿರಲಿಲ್ಲ. ಪೊಲೀಸರು ಅನುಮತಿಯನ್ನೂ ನೀಡಿರಲಿಲ್ಲ ಎಂದು ಕೋಲ್ಕತ್ತ ಪೊಲೀಸರು ಹೇಳಿದ್ದಾರೆ. ಈ ರ‍್ಯಾಲಿ ರಾಜಕೀಯ ಪ್ರೇರಿತ. 'ನಬಣ್ಣ ಅಭಿಜನ್ ರ‍್ಯಾಲಿ' ನಿಯಮಬಾಹಿರ. ಅಶಾಂತಿಗೆ ಪ್ರಚೋದಿಸುವ ಯತ್ನವಾಗಿದೆ. ಅನುಮತಿಯೇ ಇಲ್ಲದೇ ರ‍್ಯಾಲಿ ನಡೆಸಲು ಮುಂದಾಗಿದ್ದರಿಂದ ತಡೆಯಲು ಯತ್ನಿಸಲಾಗಿದೆ. ಅನುಮತಿ ಇಲ್ಲದಿದ್ದರೂ ರ‍್ಯಾಲಿ ನಡೆಸಿದ ಬಗ್ಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ಪಶ್ಚಿಮ ಬಂಗಾ ಛಾತ್ರ ಸಮಾಜ, ವಿದ್ಯಾರ್ಥಿ ಸಂಘಟನೆಗಳು ಮತ್ತು ಇತರೆ ಹಲವು ಸಂಘಟನೆಗಳು ರ‍್ಯಾಲಿಗೆ ಜಾಲತಾಣದಲ್ಲಿ ಸೋಮವಾರ ಕರೆ ನೀಡಿದ್ದವು. ದೊಡ್ಡ ಸಂಖ್ಯೆಯಲ್ಲಿ ಜನರು ಭಾಗಿಯಾಗಿದ್ದರು. ಹಾಗಾಗಿ, ರಾಜ್ಯ ಸಚಿವಾಲಯದ 'ನಬಣ್ಣ' ಸಂಕೀರ್ಣದ ಸುತ್ತಲೂ ಕಬ್ಬಿಣದ ತಡೆಗೋಡೆಗಳನ್ನು ನಿರ್ಮಿಸಿ ಪೊಲೀಸರು ಬಿಗಿಭದ್ರತೆ ಕೈಗೊಂಡಿದ್ದರು.

ಇಡೀ ನಗರದಲ್ಲಿ ಭದ್ರತಾ ಕಾರ್ಯಕ್ಕಾಗಿ 6 ಸಾವಿರ ಪೊಲೀಸರನ್ನು ನಿಯೋಜಿಸಲಾಗಿತ್ತು. ನಗರದ ವಿವಿಧೆಡೆಯಿಂದ ನಬಣ್ಣ' ಸಂಕೀರ್ಣದತ್ತ ಹರಿದುಬರುತ್ತಿದ್ದ ರ‍್ಯಾಲಿ ತಡೆಯಲು ಪೊಲೀಸರು ಜಲಫಿರಂಗಿ, ಟಿಯರ್ ಗ್ಯಾಸ್ ಸೆಲ್ ಬಳಸಿದ್ದಾರೆ. ಲಾಠಿ ಪ್ರಹಾರವನ್ನೂ ನಡೆಸಿದ್ದಾರೆ.

ಆರ್‌ಜಿಕರ್ ಆಸ್ಪತ್ರೆ ವಿರುದ್ಧ ಇ.ಡಿ. ಕೇಸ್

ಕೋಲ್ಕತ್ತ: ನಗರದಲ್ಲಿನ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆ ವಿರುದ್ಧ ಜಾರಿ ನಿರ್ದೇಶನಾಲಯ(ಇ.ಡಿ) ಮಂಗಳವಾರ 'ಅಕ್ರಮ ಹಣ ವರ್ಗಾವಣೆ' ಪ್ರಕರಣ ದಾಖಲಿಸಿದೆ.

- **ಪಿಎಂಎಲ್‌ಎ ಕಾಯ್ದೆಯಡಿ ಅಕ್ರಮ ಹಣ ವರ್ಗಾವಣೆ ಪ್ರಕರಣ**
- **ವಿವಾದಿತ ಡಾ.ಘೋಷ್ ಆಡಳಿತದ ಎಲ್ಲ ಅವ್ಯವಹಾರಗಳ ತನಿಖೆ**

ಆರ್‌ಜಿ ಕರ್ ಕಾಲೇಜು-ಆಸ್ಪತ್ರೆಯಲ್ಲಿ ಡಾ. ಸಂದೀಪ್ ಘೋಷ್ ಪ್ರಾಂಶುಪಾಲರಾಗಿದ್ದ ಅಪಾರ ಪ್ರಮಾಣದ ಅವ್ಯವಹಾರ ಮತ್ತು ಭ್ರಷ್ಟಾಚಾರ ನಡೆಸಿದ್ದಾರೆಂಬ ಆರೋಪದ ಮೇರೆಗೆ ಕೇಂದ್ರ ತನಿಖಾ ದಳ(ಸಿಬಿಐ) ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರೆ, ಇನ್ನೊಂದು ಮಗ್ಗುಲಿಂದ 'ಅಕ್ರಮ ಹಣ ವರ್ಗಾವಣೆ' ಪ್ರಕರಣದ ತನಿಖೆಯನ್ನು ಇ.ಡಿ ಆರಂಭಿಸಿದೆ.

ಎಫ್‌ಐಆರ್ ದಾಖಲಿಸಿದ ಬಳಿಕ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ಯಾಂಕಿಂಗ್ ವಹಿವಾಟುಗಳು ಮತ್ತು ವೈದ್ಯಕೀಯ ಉಪಕರಣಗಳ ಖರೀದಿಯ ದಾಖಲೆಗಳನ್ನು ಇ.ಡಿ ಅಧಿಕಾರಿಗಳು ವಿವಿಧ ಮೂಲಗಳಿಂದ ಮಂಗಳವಾರ ಸಂಗ್ರಹಿಸಿದರು. ಇದೆಲ್ಲದರ ಪರಿಣಾಮ ಮಾಜಿ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ವಿರುದ್ಧದ ಕಾನೂನಿನ ಕುಣಿಕೆ ಬಿಗಿಗೊಂಡಿದೆ.

ಸಿಬಿಐ ದಾಖಲಿಸಿಕೊಂಡಿರುವ ಭ್ರಷ್ಟಾಚಾರ ಪ್ರಕರಣದ ಎಫ್‌ಐಆರ್ ಆಧರಿಸಿ ಕೇಂದ್ರ ತನಿಖಾ ಸಂಸ್ಥೆ 'ಇ.ಡಿ' ಮನಿ ಲಾಂಡರಿಂಗ್ ಆಕ್ಟ್‌ನಡಿ (ಪಿಎಂಎಲ್‌ಎ) 'ಎನ್‌ಫೋರ್ಸ್‌ಮೆಂಟ್ ಕೇಸ್ ಇನ್ಫರ್ಮೇಷನ್ ರಿಪೋರ್ಟ್'(ಇಸಿಐಆರ್) ದಾಖಲಿಸಿದೆ. ಇದು ಎಫ್‌ಐಆರ್‌ಗೆ ಸಮನಾಗಿದೆ.

ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಗೆ ಸಂಬಂಧಿಸಿದ ಬ್ಯಾಂಕ್ ವಹಿವಾಟು ಮತ್ತು ವೈದ್ಯಕೀಯ ಸಾಮಗ್ರಿಗಳ ಖರೀದಿ ದಾಖಲೆಗಳನ್ನು ಸಂಗ್ರಹಿಸಲಾಗಿದೆ. ವಿಚಾರಣೆಗಾಗಿ ಆರೋಪಿಗಳಿಗೆ(ಡಾ.ಘೋಷ್ ಮತ್ತು ತರಬೇತಿ ವೈದ್ಯರು ನಾಲ್ವರು ಮತ್ತೊಬ್ಬ ನಾಗರಿಕ ಪೊಲೀಸ್‌ಗೆ) ಸಮನ್ಸ್ ನೀಡಲಾಗುವುದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಕಿರಿಯ ವೈದ್ಯೆ ಹತ್ಯಾಚಾರ ಸಾಕ್ಷ್ಯ ಸಂಪೂರ್ಣ ನಾಶ!

ಆರೋಪ ದೃಢೀಕರಿಸುವ ವಿಡಿಯೊ ವೈರಲ್

ಕೋಲ್ಕತ್ತ: ನಗರದ ಆರ್‌ಜಿಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ಆಡಳಿತ ವ್ಯವಸ್ಥೆಯೇ ಸಾಕ್ಷ್ಯಗಳ ನಾಶಕ್ಕೆ ಯತ್ನಿಸಿದೆ ಎಂಬ ಆರೋಪಕ್ಕೆ ಪುಷ್ಟಿ ನೀಡುವಂತಹ ಒಂದು ವಿಡಿಯೊ ಮಂಗಳವಾರ ವೈರಲ್ ಆಗಿದೆ.



ಅಪರಾಧ ಕೃತ್ಯ ಆ.9ರ ಬೆಳಗ್ಗೆ ಬಯಲಾದ ಬಳಿಕ ಆಸ್ಪತ್ರೆಯ ಸೆಮಿನಾರ್ ಹಾಲ್‌ನಲ್ಲಿ ಪೊಲೀಸರೂ, ಮಹಿಳಾ ಪೊಲೀಸರು, ಆಸ್ಪತ್ರೆಯ ಅಧಿಕಾರಿಗಳೂ, ಹೊರಗಿನವರೂ ಸೇರಿದಂತೆ ಇಡೀ ಸಭಾಂಗಣ 60-70 ಜನರಿಂದ ತುಂಬಿರುವುದು ವಿಡಿಯೊದಿಂದ ದೃಢಪಟ್ಟಿದೆ. ಆ ಮೂಲಕ ಅಪರಾಧ ಕೃತ್ಯದ ಎಲ್ಲಾ ಸಾಕ್ಷ್ಯಗಳೂ ನಾಶವಾಗುವಂತೆ ಮಾಡಲಾಗಿದೆ. ವೈರಲ್ ಆಗಿರುವ ಈ ವಿಡಿಯೋ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಬಿಜೆಪಿ ಐಟಿ ಘಟಕದ ಮುಖ್ಯಸ್ಥ-ಪಕ್ಷದ ಪಶ್ಚಿಮ ಬಂಗಾಳ ಉಸ್ತುವಾರಿ ಅಮಿತ್ ಮಾಳವಿಯ ಈ ವಿಡಿಯೊ ಹಂಚಿಕೊಂಡಿದ್ದು, ಅಪರಾಧ ಸ್ಥಳದಲ್ಲಿ ಜನರು ತುಂಬಿಕೊಳ್ಳಲು ಪೊಲೀಸರು ಅವಕಾಶ ಮಾಡಿಕೊಟ್ಟಿದ್ದೇಕೆ? ಇದೆಲ್ಲಾ ಸಾಕ್ಷ್ಯ ನಾಶದ ಯತ್ನವಲ್ಲವೇ? ಪೊಲೀಸರು ತನಿಖೆ ಮಾಡುವ ವಿದಾನವೇ ಇದು? ಎಂದು ಪ್ರಶ್ನಿಸಿದ್ದಾರೆ. ಘೋರ ಅಪರಾಧ ಮರೆಮಾಚುವ ಉದ್ದೇಶವಿದ್ದಂತೆ ಇದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಹೇಳಿದ್ದನ್ನೂ ಅಮಿತ್ ಮಾಳವೀಯ ಉಲ್ಲೇಖಿಸಿದ್ದಾರೆ.

ಕೃತ್ಯ ನಡೆದ ಬಳಿಕ ಅಪರಾಧ ಸ್ಥಳ ಸೀಲ್ ಮಾಡಲಾಗಿದೆ, ಕೆಲ ಅಧಿಕಾರಿಗಳ ಹೊರತು ಬೇರೆ ಯಾರಿಗೂ ಸ್ಥಳಕ್ಕೆ ಹೋಗಲು ಅವಕಾಶ ಕೊಟ್ಟಿರಲಿಲ್ಲ ಎಂದು ಕೋಲ್ಕತ್ತ ನಗರ ಪೊಲೀಸರು ಹೇಳಿದ್ದರು. ಆದರೆ ಅವರ ಹೇಳಿಕೆ ಸುಳ್ಳು ಎಂಬುದು ವಿಡಿಯೊದಿಂದಲೇ ಖಚಿತವಾಗುತ್ತದೆ.

ಪೊಲೀಸ್ ಅಧಿಕಾರಿ ಬೈಕ್ ಬಳಸುತ್ತಿದ್ದ ಸಂಜಯ್ ರೇ

ಕೋಲ್ಕತ್ತ: ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣದ ಪ್ರಮುಖ ಆರೋಪಿ ಸಂಜಯ್ ರೇ, ಅಪರಾಧ ಕೃತ್ಯ ನಡೆಸಿದ ದಿನ ರೆಡ್ ಲೈಟ್ ಏರಿಯಾಗೆ ಹೋಗಲು ಹಿರಿಯ ಪೊಲೀಸ್ ಅಧಿಕಾರಿಯ ಮೋಟಾರ್ ಬೈಕ್ ಬಳಸಿದ್ದ.

ಮದ್ಯ ಸೇವಿಸಿ 15 ಕಿ.ಮೀ. ಬೈಕ್ ಚಲಾಯಿಸಿದ್ದ ಎಂಬ ಆಘಾತಕಾರಿ ವಿಚಾರವನ್ನು ಆಂಗ್ಲದೈನಿಕ ವರದಿ ಮಾಡಿದೆ. ಹತ್ಯಾಚಾರ ಪ್ರಕರಣದ ತನಿಖೆಯ ಭಾಗವಾಗಿ ಕೋಲ್ಕತ್ತ ಪೊಲೀಸ್ ಎಂದು ಬರೆದಿರುವ ಬೈಕನ್ನು ಸಿಬಿಐ ವಶಪಡಿಸಿಕೊಂಡಿದೆ. ಬೈಕ್ ಜತೆಗಿದ್ದಾಗ ತನ್ನನ್ನು ಪೊಲೀಸ್ ಅಧಿಕಾರಿ ಎಂದು ಹೇಳಿಕೊಂಡೇ ಸಂಜಯ್ ಎಲ್ಲರನ್ನೂ ಬೆದರಿಸುತ್ತಿದ್ದ ಎಂದೂ ಆರೋಪಿಸಲಾಗಿದೆ.

ಕೇಜ್ರಿ ನ್ಯಾ. ಬಂಧನ ಸೆ.3ರವರೆಗೆ ವಿಸ್ತರಣೆ

ದೆಹಲಿ: ಅಬಕಾರಿ ಹಗರಣ ಹೆಸರಲ್ಲಿ ಭ್ರಷ್ಟಾಚಾರ ನಡೆಸಿದ ಆರೋಪದಡಿ ಕೇಂದ್ರ ತನಿಖಾ ದಳ(ಸಿಬಿಐ) ದೆಹಲಿ ಅರವಿಂದ್ ಕೇಜ್ರಿವಾಲ್‌ರನ್ನು ಬಂಧಿಸಿದ್ದು, ಆರೋಪಿಯ ನ್ಯಾಯಾಂಗ ಬಂಧನ ಅವಧಿಯನ್ನು ದೆಹಲಿಯ ರೋಸ್ ಅವೆನ್ಯೂ ಕೋರ್ಟ್ ಸೆ.3ರವರೆಗೆ ವಿಸ್ತರಿಸಿ ಮಂಗಳವಾರ ಆದೇಶಿಸಿದೆ. ಕೇಜ್ರಿವಾಲ್ ನ್ಯಾಯಾಂಗ ಬಂಧನ ಅವಧಿ ಮಂಗಳವಾರ ಕೊನೆಗೊಂಡಿತ್ತು. ಹಾಗಾಗಿ ಆರೋಪಿಯನ್ನು ಪೊಲೀಸರು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಕೇಜ್ರಿವಾಲ್ ನ್ಯಾಯಾಂಗ ಬಂಧನವನ್ನು ಮತ್ತೆ ವಿಸ್ತರಿಸಿದರು.

ಅಬಕಾರಿ ನೀತಿ: ಕವಿತಾಗೆ ಕಡೆಗೂ ಸುಪ್ರೀಂ ಜಾಮೀನು

ದೆಹಲಿ: ದೆಹಲಿ ಅಬಕಾರಿ ನೀತಿ ಪ್ರಕರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.) ದಿಂದ ಮಾ.15ರಂದು ಬಂಧನಕ್ಕೊಳಗಾದ ಭಾರತ್ ರಾಷ್ಟ್ರ

ಸಮಿತಿ (ಬಿಆರ್‌ಎಸ್) ಪಕ್ಷದ ಎಂಎಲ್‌ಸಿ, ತೆಲಂಗಾಣ ಮಾಜಿ ಸಿಎಂ ಕೆ.ಚಂದ್ರಶೇಖರ್ ರಾವ್ ಅವರ ಪುತ್ರಿ ಕೆ.ಕವಿತಾ ಅವರಿಗೆ ಕಡೆಗೂ ಜಾಮೀನು ದೊರೆತಿದೆ. ಸುಪ್ರೀಂಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ಆರೋಪಿ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ಕವಿತಾ ವಿರುದ್ಧದ ತನಿಖೆಯನ್ನು ಎರಡೂ ಸಂಸ್ಥೆಗಳು ಪೂರ್ಣಗೊಳಿಸಿವೆ. ಪ್ರಕರಣದ ಮತ್ತೊಬ್ಬ ಆರೋಪಿ ಎಎಪಿಯ ಮನೀಶ್ ಸಿಸೋಡಿಯಗೆ ಸುಪ್ರೀಂನಿಂದಲೇ ಜಾಮೀನು ದೊರೆತಿದೆ ಎಂಬುದನ್ನು ಉಲ್ಲೇಖಿಸಿದ ಬಳಿಕ ಪೀಠ ಜಾಮೀನು ನೀಡಲು ಸಮ್ಮತಿಸಿತು. ಈ ಹಂತದಲ್ಲಿ ಜಾಮೀನಿಗೆ ವಿರೋಧ ವ್ಯಕ್ತಪಡಿಸಿದ ಪ್ರಾಸಿಕ್ಯೂಷನ್‌ಗೆ, ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಕೆ.ಕವಿತಾ ಭಾಗಿಯಾಗಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಯಾವ ಸಾಕ್ಷ್ಯವಿದೆ ತೋರಿಸಿ ಎಂದು ನ್ಯಾ. ಬಿ.ಆರ್. ಗವಾಯಿ ಮತ್ತು ನ್ಯಾ. ಕೆ.ವಿ. ವಿಶ್ವನಾಥನ್ ಅವರ ಪೀಠ ಪ್ರಶ್ನೆ ಮಾಡಿತು.

ವಯನಾಡು ಪುನರ್ವಸತಿ: ಪ್ರಧಾನಿಗೆ ಸಿಎಂ ಬೇಡಿಕೆ

ದೆಹಲಿ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಂಗಳವಾರ ದೆಹಲಿಗೆ ತೆರಳಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂದಿಸಿ ಪ್ರವಾಹ-ಭೂಕುಸಿತ ನಂತರದ ರಾಜ್ಯದಲ್ಲಿನ ಪರಿಸ್ಥಿತಿ ಹಾಗೂ ಪರಿಹಾರ ಕಾರ್ಯಗಳ ಕುರಿತು ಚರ್ಚಿಸಿದರು.

ವಯನಾಡಿನಲ್ಲಿ ಪೂರ್ಣ ನಾಶವಾದ ಮುಂಡಕ್ಕೈ, ಚೂರನ್‌ಮಲ ಗ್ರಾಮಗಳು ಹಾಗೂ ಭಾಗಶಃ ಹಾನಿಗೀಡಾದ ಮತ್ತೆರಡು ಗ್ರಾಮಗಳ ಜನರಿಗೆ ಶಾಶ್ವತ ಪುನವಸತಿ ನಿರ್ಮಿಸಿಕೊಡುವುದಕ್ಕೆ ಕೇಂದ್ರ ಸರಕಾರ ಹೆಚ್ಚಿನ ನೆರವು ನೀಡಬೇಕು ಎಂದು ಮನವಿ ಮಾಡಿದರು.

ವಯನಾಡು ಭಾಗದಲ್ಲಿ ಭೂಕುಸಿತದಿಂದ ಒಟ್ಟು 778 ಕುಟುಂಬಗಳು ಮನೆ-ಆಸ್ತಿ ಕಳೆದುಕೊಂಡಿವೆ. ಆ ಕುಟುಂಬಗಳಿಗೆ ಸದ್ಯ ತಾತ್ಕಾಲಿಕ ವಸತಿ ನಿರ್ಮಿಸಿಕೊಡುವ ಕಾರ್ಯ ಪೂರ್ಣಗೊಂಡಿದೆ. ಶಾಶ್ವತ ಪುನರ್ವಸತಿ ವಿಚಾರವಾಗಿ ಚರ್ಚಿಸಲು ಗುರುವಾರ ರಾಜ್ಯದ ಸರ್ವಪಕ್ಷಗಳ ಸಭೆ ಕರೆಯಲಾಗಿದೆ ಎಂದು ಕೇರಳ ಸರಕಾರ ಹೇಳಿದೆ.

ಕೇರಳ ಸಿಎಂ ಪಿಣರಾಯಿ ವಿಜಯನ್ ದೆಹಲಿ ಭೇಟಿಯ ವೇಳೆ ಶೇಷಶಯನ ಶ್ರೀಅನಂತಪದ್ಮನಾಭ ಸ್ವಾಮಿಯ ಲೋಹದ ವಿಗ್ರಹವನ್ನು ಪ್ರಧಾನಿ ಮೋದಿ ಅವರಿಗೆ ಉಡುಗೊರೆಯಾಗಿ ಮಂಗಳವಾರ ನೀಡಿದರು.

ಸಂಸದೆ ಕಂಗನಾಗೆ ಜೀವ ಬೆದರಿಕೆ; ದೂರು

'ಎಮರ್ಜೆನ್ಸಿ' ಚಿತ್ರ ಬಿಡುಗಡೆಗೆ ವಿರೋಧ | ಹೆಚ್ಚಿನ ಪೊಲೀಸ್ ಭದ್ರತೆಗೆ ಮನವಿ

ಮುಂಬೈ: ಬಾಲಿವುಡ್ ಅಭಿನೇತ್ರಿ, ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದೆ ಕಂಗನಾ ರಣಾವತ್ ನಟಿಸಿ-ನಿರ್ಮಾಣ ಮಾಡಿರುವ ಬಹು ನಿರೀಕ್ಷಿತ ಸಿನಿಮಾ 'ಎಮರ್ಜೆನ್ಸಿ' ಸೆಪ್ಟೆಂಬರ್ 6ರಂದು ತೆರೆಗೆ ಬರಲಿದೆ. ಸದ್ಯ ಟ್ರೈಲರ್ ಬಿಡುಗಡೆಯಾಗಿದ್ದು, ಪ್ರಚಾರ ಕಾರ್ಯ ನಡೆದಿದೆ. ಈ ಮಧ್ಯೆ, ನಟಿ-ನಿರ್ಮಾಪಕಿ ಕಂಗನಾಗೆ ಮಂಗಳವಾರ ಜೀವ ಬೆದರಿಕೆ ಕರೆಗಳು ಬರಲಾರಂಭಿಸಿವೆ. ಜತೆಗೆ ಜಾಲತಾಣದಲ್ಲಿ ವಿಡಿಯೊ ಬೆದರಿಕೆಗಳೂ ಬಿಡುಗಡೆಯಾಗಿವೆ. ಈ ಬಗ್ಗೆ ನಟಿ ಪೊಲೀಸರಿಗೆ ದೂರು ನೀಡಿದ್ದಾರೆ.

'ಎಮರ್ಜೆನ್ಸಿ' ಸಿನಿಮಾ ಯಾವುದೇ ಕಾರಣಕ್ಕೂ ಬಿಡುಗಡೆಯಾಗಬಾರದು. ಚಿತ್ರ ತೆರೆಗೆ ತರುವ ಪ್ರಯತ್ನ ನಿಲ್ಲಿಸಬೇಕು. ಇಲ್ಲವಾದರೆ ನಿನ್ನ ತಲೆ ಕಡಿಯುತ್ತೇವೆ ಎಂಬ ಬೆದರಿಕೆ ಕರೆ ಬಂದಿದೆ ಎಂದು ನಟಿ-ನಿರ್ಮಾಪಕಿ ಕಂಗನಾ ರಣಾವತ್ ದೂರು ನೀಡಿದ್ದಾರೆ. ಹೆಚ್ಚಿನ ಪೊಲೀಸ್ ಭದ್ರತೆಗೆ ಮನವಿ ಮಾಡಿದ್ದಾರೆ.

'ಈ ಸಿನಿಮಾ ಬಿಡುಗಡೆಯಾದರೆ ಸರ್ದಾರ್‌ಗಳು ನಿನಗೆ ಚಪ್ಪಲಿಯಲ್ಲಿ ಹೊಡೆಯುತ್ತಾರೆ. ನಾನೊಬ್ಬ

ಹೆಮ್ಮೆಯ ಭಾರತೀಯ. ದೇಶದಲ್ಲಿ, ಮಹಾರಾಷ್ಟ್ರದಲ್ಲಿ ಎಲ್ಲೇ ನೀನು ಕಂಡರೂ ನಿನಗೆ ಚಪ್ಪಲಿ ಪ್ರಯೋಗ ಖಂಡಿತ. ಸಿಖ್ಖರಷ್ಟೇ ಅಲ್ಲ, ಮರಾಠಿಗರು, ಎಲ್ಲಾ ಹಿಂದೂ, ಕ್ರೈಸ್ತ, ಮುಸ್ಲಿಂ ಸೋದರರು ನಿನ್ನನ್ನು ಚಪ್ಪಲಿಗಳ ಏಟಿನ ಮೂಲಕವೇ ಸ್ವಾಗತಿಸಲು ಸಜ್ಜಾಗಿದ್ದಾರೆ' ಎಂದು ವಿಡಿಯೊದಲ್ಲಿ ಪುರುಷನೊಬ್ಬ ಬೆದರಿಕೆ ಹಾಕಿದ್ದಾನೆ.

ಬಲೂಚಿ ಉಗ್ರರ ದಾಳಿಗೆ ಪಾಕ್ ತತ್ತರ

ಬಲೂಚಿಸ್ತಾನ: ಪಾಕಿಸ್ತಾನದ ಬಹು ದೊಡ್ಡ ಭೂಭಾಗ ಬಲೂಚಿಸ್ತಾನದಲ್ಲಿ ಪಾಕ್ ಸೇನೆ ವಿರುದ್ಧವೇ ಸರಣಿಯೋಪಾದಿ ಭಯೋತ್ಪಾದನಾ ದಾಳಿಗಳು ನಡೆಯಲಾರಂಭಿಸಿವೆ.

ಬಲೂಚ್ ಲಿಬರೇಶನ್ ಆರ್ಮಿ (ಬಿಎಲ್‌ಎ) 'ಫಿದಾಯಿನ್' (ಆತ್ಮಾಹುತಿ ದಾಳಿ) ಪಾಕ್ ಸೇನಾ ಪಡೆಗಳ ಬೇಲಾ ಶಿಬಿರದ ಮೇಲೆ ಸೋಮವಾರ- ಮಂಗಳವಾರ ದಾಳಿ ಮಾಡಿ ಒಟ್ಟು 102 ಸೈನಿಕರನ್ನು ಕೊಂದಿದೆ. 'ಬಿಎಲ್‌ಎ'ಯ ಮಜೀದ್ ಬ್ರಿಗೇಡ್‌ನ ಫಿದಾಯಿನ್ ಘಟಕ ಈ ದಾಳಿಗಳ ಹೊಣೆ ಹೊತ್ತುಕೊಂಡಿದೆ.



- **102 ಪಾಕ್ ಯೋಧರ ಕೊಂದು ಸೇನಾ ಶಿಬಿರ ವಶ**
- **ಪ್ರಧಾನಿ ಷರೀಫ್ ಕಾರ್ಯಕ್ರಮ ರದ್ದು**

ಸ್ಫೋಟಕಗಳಿಂದ ತುಂಬಲಾಗಿದ್ದ 2 ವಾಹನಗಳನ್ನು ಸೇನಾ ಶಿಬಿರಕ್ಕೆ ನುಗ್ಗಿಸಿದ ಮಜೀದ್ ಬ್ರಿಗೇಡ್ ಸ್ಫೋಟ ನಡೆಸಿದೆ. ಶಿಬಿರದ ಮುಖ್ಯ ಪ್ರವೇಶ ದ್ವಾರ ಮತ್ತು ಹತ್ತಿರದ ಭದ್ರತಾ ಘಟಕಗಳು ಇದರಿಂದ ನಾಶವಾಗಿವೆ. ಆ ಬಳಿಕ ಫಿದಾಯಿನ್ ಘಟಕ ಸೇನಾ ಶಿಬಿರ ಪ್ರವೇಶಿಸಿ 102 ಯೋಧರನ್ನು ಕೊಂದುಹಾಕಿದೆ. ಸೇನಾ ಶಿಬಿರದ ಬಹುದೊಡ್ಡ ಭಾಗವನ್ನು ವಶಪಡಿಸಿಕೊಳ್ಳಲಾಗಿದೆ. ದಾಳಿ ನಡೆಸಿದ ಆರು ಗಂಟೆಗಳಲ್ಲಿ ಒಟ್ಟು 102 ಪಾಕ್ ಸೈನಿಕರನ್ನು ಕೊಲ್ಲಲಾಗಿದೆ ಎಂದು ಬಿಎಲ್‌ಎ ಹೇಳಿಕೊಂಡಿದೆ.

ಅಮ್ಮ ಅಧ್ಯಕ್ಷ ಮೋಹನಲಾಲ್, ಎಲ್ಲಾ 17 ಸದಸ್ಯರೂ ರಾಜೀನಾಮೆ

ಮಲಯಾಳಂ ಚಿತ್ರರಂಗದಲ್ಲಿ ಸ್ತ್ರೀ ಶೋಷಣೆ, ಲೈಂಗಿಕ ದೌರ್ಜನ್ಯ ಆರೋಪ ಹಿನ್ನೆಲೆ | ನ್ಯಾ.ಹೇಮಾ ಸಮಿತಿ 5 ವರ್ಷಗಳ ಹಿಂದೆ ನೀಡಿದ್ದ ತನಿಖಾ ವರದಿ ಬಹಿರಂಗ ಬಳಿಕ ನಿರ್ಧಾರ

ಕೊಚ್ಚಿ: ಶ್ರೇಷ್ಠ ನಟನೆಗಾಗಿ ಹಲವು ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿರುವ ಹಿರಿಯ ನಟ-ನಿರ್ಮಾಪಕ ಮೋಹನ್ ಲಾಲ್, ಮಲಯಾಲಂ ಚಲನಚಿತ್ರ ರಂಗದ ಪ್ರಾತಿನಿಧಿಕ ಸಂಸ್ಥೆ 'ಅಮ್ಮ' (ಅಸೋಸಿಯೇಷನ್ ಆಫ್ ಮಲಯಾಳಂ ಮೂವಿ ಆರ್ಟಿಸ್ಟ್ಸ್ -ಎಎಂಎಂಎ) ಅಧ್ಯಕ್ಷ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ. ಅದರ ಬೆನ್ನಲ್ಲೇ 'ಅಮ್ಮ' ಕಾರ್ಯಕಾರಿ ಸಮಿತಿಯ

ಎಲ್ಲಾ 17 ಸದಸ್ಯರೂ ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಿದ್ದಾರೆ.

ಕೇರಳ ರಾಜ್ಯದ ಮಲಯಾಳಂ ಸಿನಿಮಾ ರಂಗ ನಟಿಯರ ಶೋಷಣೆ, ಲೈಂಗಿಕ ದೌರ್ಜನ್ಯಗಳ ಸರಣಿ ಆರೋಪ- ದೂರುಗಳಿಂದಾಗಿ ಇಡೀ ದೇಶಾದ್ಯಂತ ತೀವ್ರ ಚರ್ಚೆಗೊಳಗಾಗಿದೆ. ಈ ಹಿನ್ನೆಲೆಯಲ್ಲೇ ಮೋಹನ್ ಲಾಲ್ 'ಅಮ್ಮ' ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದು ಹೇಳಲಾಗಿದೆ. ಇದಕ್ಕೂ ಮುನ್ನ, 'ಅಮ್ಮ' ಪ್ರಧಾನ ಕಾರ್ಯದರ್ಶಿ ನಟ ಸಿದ್ದಿಕ್ ವಿರುದ್ಧವೇ ಲೈಂಗಿಕ ದೌರ್ಜನ್ಯ ಆರೋಪ ಕೇಳಿಬಂದಿದ್ದರಿಂದ ಅವರು ಸೋಮವಾರವೇ ರಾಜೀನಾಮೆ ನೀಡಿದ್ದರು.

ಬೆಳ್ಳಿ ತೆರೆಯಲ್ಲಿ ಮಿನುಗಿದವರ ನರಳಾಟ

ರಾಜ್ಯ ಸರಕಾರ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪ್ರೇಮಾ ಅವರ ನೇತೃತ್ವದಲ್ಲಿ ರಚಿಸಿದ ಸಮಿತಿ 5 ವರ್ಷಗಳ ಹಿಂದೆ ನೀಡಿದ್ದ 'ಮಲಯಾಳಂ ಚಿತ್ರರಂಗದಲ್ಲಿ ಸ್ತ್ರೀ ಶೋಷಣೆ' ಕುರಿತ ಸಮಗ್ರ ತನಿಖಾ ವರದಿ ಬೆಳ್ಳಿ ತೆರೆಯ ಮೇಲೆ ಮಿಂಚಿದ ನಾಯಕಿಯರು ಕ್ಯಾಮರಾದ ಹಿಂದೆ ಶೋಷಣೆಗೊಳಗಾದ, ನರಳಿದ, ಕಣ್ಣೀರು ಸುರಿಸಿದ ಕಟುಸತ್ಯವನ್ನು ಹೊರಚೆಲ್ಲಿದೆ. ಪರಿಣಾಮ, ಕಾಲಿವುಡ್ ಥರಗುಟ್ಟುತ್ತಿದೆ. ಹಿರಿಯ-ಕಿರಿಯ ನಟಿಯರು ಒಬ್ಬರಾದ ಮೇಲೊಬ್ಬರಂತೆ ಖ್ಯಾತ ನಟರು, ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಮಾಡುತ್ತಿದ್ದಾರೆ.

17 ಸದಸ್ಯರ ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ

ಜಂಟಿ ರಾಜೀನಾಮೆ ಪತ್ರ ಸಲ್ಲಿಸಿರುವ 17 ಸದಸ್ಯರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಸಿನಿರಂಗದ ಕೆಲವು ನಟಿಯರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆಂದು ಆರೋಪ ಮಾಡಿದವರಲ್ಲಿ ಕೆಲವರು 'ಅಮ್ಮ' ಸಂಘಟನೆಯಲ್ಲಿ ಸದಸ್ಯರಾಗಿದ್ದಾರೆ. ಹಾಗಾಗಿ 'ಅಮ್ಮ' ಸಂಘಟನೆ ನೈತಿಕ ಹೊಣೆ ಹೊತ್ತ ಇಡೀ ಸಮಿತಿಯನ್ನೇ ಬರಕಾಸ್ತುಗೊಳಿಸಲು ನಿರ್ಧರಿಸಿದೆ. ಮುಂದಿನ 2 ತಿಂಗಳಲ್ಲಿ ಸಂಘದ ಮಹಾಸಭೆ ನಡೆಸಲಾಗು ವುದು. ಆಗಲೇ ಚುನಾವಣೆ ನಡೆಸಿ ಹೊಸದಾಗಿ ಸಮಿತಿ ರಚಿಸಲಾಗುವುದು. ಚುನಾವಣೆಯಿಂದ ಸಮರ್ಥರು ಆಯ್ಕೆಯಾಗಿ ಸಂಘವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲಿದ್ದಾರೆ ಎಂಬ ನಿರೀಕ್ಷೆ ಇದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ನಟರು-ನಿರ್ಮಾಪಕ-ನಿರ್ದೇಶಕರ ವಿರುದ್ಧ ಎಫ್‌ಐಆರ್

ತಿರುವನಂತಪುರಂ: ಒಂದು ಕಾಲದಲ್ಲಿ ಅಡೂರ್ ಗೋಪಾಲಕೃಷ್ಣನ್ ಅವರಂತಹ ರಾಷ್ಟ್ರ ಪ್ರಶಸ್ತಿ ವಿಜೇತರಿಂದಲೇ ಹೆಸರಾಗಿದ್ದ, ದೇಶ-ವಿದೇಶದ ಚಿತ್ರರಸಿಕರಿಗೆ ಬಣ್ಣಬಣ್ಣಗಳ ಕನಸುಗಳನ್ನು ಹಂಚುತ್ತಿದ್ದ ಮಲಯಾಳಂ ಚಿತ್ರರಂಗ, ಈಗ 'ಸ್ತ್ರೀ ಶೋಷಣೆ-ಲೈಂಗಿಕ ದೌರ್ಜನ್ಯ' ಕೊಳಚೆಯಲ್ಲಿ ಮುಳುಗೆದ್ದು ಗಬ್ಬು ನಾರುತ್ತಿದೆ. ನ್ಯಾ. ಹೇಮಾ ಸಮಿತಿಯ ತನಿಖಾ ವರದಿ ಬಹಿರಂಗಗೊಂಡ ನಂತರ 'ನೊಂದ ತಾರೆಯರು' ಬೆಳ್ಳಿ ತೆರೆಯ ಹಿಂದಿನ ಕರಾಳ ಲೋಕವನ್ನು ಒಬ್ಬೊಬ್ಬರಾಗಿ ತೆರೆದಿಡುತ್ತಿದ್ದಾರೆ. ಕೆಲದಿನಗಳಿಂದ ಸರಣಿಯೋಪಾದಿಯಲ್ಲಿ ನಟರು, ನಿರ್ದೇಶಕರು, ನಿರ್ಮಾಪಕರ ವಿರುದ್ಧ ಲೈಂಗಿಕ ಕಿರುಕುಳದ ದೂರುಗಳು ದಾಖಲಾಗುತ್ತಿವೆ.

ರಂಜಿತ್

ಮುಕೇಶ್

ಬಾಬುರಾಜ್

ಜಯಸೂರ್ಯ

ಮೊದಲನೆಯದಾಗಿ ಮಲಯಾಳಂ ಚಿತ್ರರಂಗದ ಖ್ಯಾತ ನಿರ್ದೇಶಕ ರಂಜಿತ್ ವಿರುದ್ಧ 'ನಟಿ ಮೇಲೆ ಲೈಂಗಿಕ ದೌರ್ಜನ್ಯ' ನಡೆಸಿದ ಆರೋಪದಡಿ ಎಫ್‌ಐಆರ್ ದಾಖಲಾಗಿದೆ. ಆ ಬಳಿಕ ಹಿರಿಯ ಚಿತ್ರನಟ, ಸಿಪಿಐ-ಎಂ ಪಕ್ಷದ ಶಾಸಕ ಮುಕೇಶ್ ಸೇರಿದಂತೆ ಹಲವು ಮಲಯಾಳಂ ಚಿತ್ರನಟರ ವಿರುದ್ಧ ಇಬ್ಬರು ನಟಿಯರು ಲೈಂಗಿಕ ದೌರ್ಜನ್ಯದ ದೂರು ದಾಖಲಿಸಿದ್ದಾರೆ.

ಎರಡು ಅವಧಿಗೆ ಶಾಸಕರಾಗಿರುವ ಮುಕೇಶ್, 'ಅಮ್ಮ' ಸಂಘಟನೆಯ ಪ್ರಮುಖ ನಾಯಕ ಎಡವೇಲ ಬಾಬು, ಹೆಸರಾಂತ ಮಲಯಾಳಂ ನಟರಾದ ಜಯಸೂರ್ಯ, ಮಣಿಯನ್‌ಪಿಲ್ಲಾ ರಾಜು ವಿರುದ್ಧ ನಟಿಯರು ಮಂಗಳವಾರ ದೂರು ದಾಖಲಿಸಿದ್ದಾರೆ. ಚಿತ್ರೀಕರಣ ಸಂದರ್ಭಗಳಲ್ಲಿ ಆರೋಪಿಗಳಿಂದ ಹಲವು ಬಾರಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾಗಿ ಅಲವತ್ತುಕೊಂಡಿದ್ದಾರೆ.

ಶೋಷಣೆ-ದೌರ್ಜನ್ಯದಿಂದ ಬೇಸರಗೊಂಡ ಚಿತ್ರರಂಗವನ್ನೇ ತೊರೆದಿರುವ ಮತ್ತೊಬ್ಬ ನಟಿ 'ಅಮ್ಮ' ಸಂಘಟನೆಯ ಜಂಟಿ ಪ್ರಧಾನ ಕಾರ್ಯದರ್ಶಿ, ನಟ-ನಿರ್ಮಾಪಕ ಬಾಬುರಾಜ್ ಹಾಗೂ ನಿರ್ದೇಶಕ ಶ್ರೀಕುಮಾರ್ ಮೆನನ್ ವಿರುದ್ಧ ಲೈಂಗಿಕ ದೌರ್ಜನ್ಯದ ದೂರು ದಾಖಲಿಸಿದ್ದಾರೆ.

ನಟಿಯರು ತಮಗೆ ಸಮೀಪದ ವಿವಿಧ ಪೊಲೀಸ್ ಠಾಣೆಗಳಲ್ಲಿಯೇ ದೂರುಗಳನ್ನು ದಾಖಲಿಸಿದ್ದಾರೆ. ಅವೆಲ್ಲಾ ದೂರುಗಳನ್ನು ಕ್ರೋಢೀಕರಿಸಿ ವಿಶೇಷ ಪೊಲೀಸ್ ತಂಡಕ್ಕೆ ಹಸ್ತಾಂತರಿಸಲಾಗುವುದು. ಮಹಿಳಾ ಪೊಲೀಸರ ವಿಶೇಷ ತಂಡವೇ ಈ ದೂರುಗಳ ತನಿಖೆ ಕೈಗೊಳ್ಳಲಿದೆ ಎಂದು ಕೇರಳ ಪೊಲೀಸ್ ಇಲಾಖೆ ತಿಳಿಸಿದೆ.

81ಕ್ಕೂ ಹೆಚ್ಚು ಡ್ರೋನ್‌ಗಳನ್ನು ಬಳಸಿ ದಾಳಿ, ಸಾವು-ನೋವು | ಉಕ್ರೇನ್ ರಕ್ಷಣಾ ಕ್ಷೇತ್ರಕ್ಕೆ ನೆರವು: ಬೈಡನ್

ಉಕ್ರೇನ್ ಮೇಲೆ ನಿಲ್ಲದ ರಷ್ಯಾದ ದಾಳಿ

ಕೀವ್: ರಷ್ಯಾವು ಉಕ್ರೇನ್ ಮೇಲಿನ ಡ್ರೋನ್ ಮತ್ತು ಕ್ಷಿಪಣಿ ದಾಳಿಯನ್ನು ಸೋಮವಾರ ರಾತ್ರಿಯೂ ಮುಂದುವರಿಸಿದ್ದು, ಐವರು ಮೃತಪಟ್ಟಿದ್ದಾರೆ. ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಿಗ್ಗೆವರೆಗೆ ನಿರಂತರ ದಾಳಿ ನಡೆದಿದ್ದು, 16 ಜನ ಗಾಯಗೊಂಡಿದ್ದಾರೆ. ದಾಳಿ ಯಿಂದಾಗಿ ಉಕ್ರೇನ್ ರಾಜಧಾನಿ ಕೀವ್‌ನ ಹೊರವಲಯದಲ್ಲಿ ಬೆಂಕಿ ಹತ್ತಿಕೊಂಡಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಕ್ರೀವಿ ರಿಹದಲ್ಲಿರುವ ವಸತಿ ಕಟ್ಟಡದ ಮೇಲೆ ನಡೆದ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ನಗರ ಸೇನಾಪಡೆಯ ಮುಖ್ಯಸ್ಥ ಅಲೆಕ್ಸಾಂಡರ್ ವಿಲ್ಕುಲ್ ತಿಳಿಸಿದ್ದಾರೆ. ಉಕ್ರೇನ್ ವಾಯುಪಡೆಯು ರಷ್ಯಾದ ಎಲ್ಲ ಡ್ರೋನ್ ಮತ್ತು ಕ್ಷಿಪಣಿಗಳನ್ನು ಹೊಡೆದುರುಳಿಸಿದೆ. ಆದರೆ ಅದರ ಅವಶೇಷಗಳಿಂದಾಗಿ ಅರಣ್ಯದಲ್ಲಿ ಬೆಂಕಿ ಹತ್ತಿಕೊಂಡಿದೆ ಎಂದು ಅಧಿಕಾರಿಗಳು

ತಿಳಿಸಿದ್ದಾರೆ. ನಮ್ಮ ಇಂಧನ ಮೂಲಸೌಕರ್ಯವನ್ನು ರಷ್ಯಾ ಗುರಿಯಾಗಿಸಿಕೊಂಡಿದೆ. ಮಿತ್ರ ರಾಷ್ಟ್ರಗಳು ದೀರ್ಘ ವ್ಯಾಪ್ತಿಯ ಶಸ್ತ್ರಾಸ್ತ್ರಗಳನ್ನು ಒದಗಿಸಬೇಕು ಮತ್ತು ಅದನ್ನು ರಷ್ಯಾದ ವಿರುದ್ಧ ಬಳಸಲು ಅನುಮತಿ ನೀಡಬೇಕು ಎಂದು ಉಕ್ರೇನ್ ಪ್ರಧಾನಿ ಡೆನಿಸ್ ಶ್ಮಿಹಾಲ್ ಸೋಮವಾರ ಒತ್ತಾಯಿಸಿದ್ದಾರೆ.

ಉಕ್ರೇನ್ ನಗರದ ಮೇಲಿನ ಭೀಕರ ದಾಳಿಯನ್ನು ನಿಲ್ಲಿಸಬೇಕಾದರೆ ರಷ್ಯಾದ ಕ್ಷಿಪಣಿ ಉಡಾವಣಾ ಸ್ಥಳಗಳನ್ನು ನಾಶಗೊಳಿಸಬೇಕು. ಮಿತ್ರರಾಷ್ಟ್ರಗಳು ಬೆಂಬಲ ನೀಡಿದರೆ ನಾವು ರಷ್ಯಾಕ್ಕೆ ತಕ್ಕ ಪ್ರತ್ಯುತ್ತರ ನೀಡುತ್ತೇವೆ ಎಂದು ತಿಳಿಸಿದ್ದಾರೆ.

ಬೈಡನ್ ಭರವಸೆ: ಉಕ್ರೇನ್‌ನ ಇಂಧನ ಮೂಲ ಸೌಕರ್ಯದ ಮೇಲಿನ ದಾಳಿಯನ್ನು ಖಂಡಿಸುತ್ತೇವೆ. ರಕ್ಷಣಾ ಉಪಕರಣಗಳ ರಫ್ತು ಹೆಚ್ಚಳಕ್ಕೆ ಆದ್ಯತೆ ನೀಡಲಾಗುವುದು. ಉಕ್ರೇನ್ ಇಂಧನ ಮೂಲಸೌಕರ್ಯಗಳ ದುರಸ್ತಿಗೆ ನೆರವು ನೀಡುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಭರವಸೆ ನೀಡಿದ್ದಾರೆ.

ಉಕ್ರೇನ್‌ನ ರಕ್ಷಣಾ ಕ್ಷೇತ್ರ ಹಾಗೂ ಕೈಗಾರಿಕೆಗಳಿಗೆ ನೆರವಾಗುತ್ತಿರುವ ಇಂಧನ ಮೂಲ ಸೌಕರ್ಯಕ್ಕೆ ಹಾನಿ ಮಾಡಲು ಅತ್ಯಾಧುನಿಕ ಶಸ್ತ್ರಾಸ್ತ್ರ ಮತ್ತು ಡ್ರೋನ್‌ಗಳನ್ನು ಬಳಸಲಾಯಿತು. ದಾಳಿಯು ಯಶಸ್ವಿಯಾಗಿದೆ ಎಂದು ರಷ್ಯಾ ಸೇನಾ ಪಡೆ ತಿಳಿಸಿದೆ. ಕುರ್ಸ್ಕ್ ಪ್ರದೇಶದಲ್ಲಿ ಉಕ್ರೇನ್‌ನ ನಾಲ್ಕು ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತ್ಯುತ್ತರ ನಿಶ್ಚಿತ: ಝೆಲೆನ್ಸ್ಕಿ

81 ಡ್ರೋನ್‌ಗಳು ಸೇರಿದಂತೆ ಹಲವು ಕ್ಷಿಪಣಿಗಳನ್ನು ಬಳಸಿ ಉಕ್ರೇನ್ ಮೇಲೆ ದಾಳಿ ನಡೆಸಲಾಗಿದೆ. ಇದಕ್ಕೆ ನಾವು ಖಂಡಿತವಾಗಿ ಪ್ರತ್ಯುತ್ತರ ನೀಡುತ್ತೇವೆ. ಜನರ ಮೇಲಿನ ದಾಳಿ ಶಿಕ್ಷಾರ್ಹ ಅಪರಾಧ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ.

ಉಕ್ರೇನ್ ಭೇಟಿ ಬಳಿಕ ಮೋದಿ-ಪುಟಿನ್ ಚರ್ಚೆ

ದೆಹಲಿ: ರಷ್ಯಾ-ಉಕ್ರೇನ್ ಯುದ್ಧ ತಡೆಗೆ ಪಶ್ಚಿಮದ ಹಲವು ರಾಷ್ಟ್ರಗಳು ಪ್ರಯತ್ನಪಡುತ್ತಿರುವಾಗ ಪ್ರಧಾನಿ ನರೇಂದ್ರ ಮೋದಿ ಅವರ ಇತ್ತೀಚಿನ ಉಕ್ರೇನ್ ಪ್ರವಾಸ ಜಗತ್ತಿನ ಗಮನ ಸೆಳೆದಿತ್ತು. ಉಕ್ರೇನ್ ಭೇಟಿ ಬಳಿಕ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆ ಮೋದಿ ಮತ್ತೊಂದು ಸುತ್ತು ಚರ್ಚೆ ನಡೆಸಿದ್ದಾರೆ. ರಾಜತಾಂತ್ರಿಕ ಮಾರ್ಗವೇ ಉತ್ತಮ ಆಯ್ಕೆ ಎಂಬ ಸಲಹೆಯನ್ನು ಪ್ರಧಾನಿ ಮೋದಿ ಉಭಯ ದೇಶಗಳಿಗೂ ನೀಡಿದ್ದಾರೆ. ಪುಟಿನ್ ಜತೆಗಿನ ಮಾತುಕತೆ ಬಗ್ಗೆ ಪ್ರಧಾನಿ ಮೋದಿ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. 'ಭಾರತ-ರಷ್ಯಾ ನಡುವಿನ ವಿಶೇಷ ಕಾರ್ಯತಂತ್ರ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ಮಾತುಕತೆ ನಡೆಸಲಾಗಿದೆ.

12ಕ್ಕೂ ಅಧಿಕ ಸಾವು, 6 ಸಾವಿರಕ್ಕೂ ಅಧಿಕ ಜನರ ಸ್ಥಳಾಂತರ

ಗುಜರಾತ್, ರಾಜಸ್ಥಾನದಲ್ಲಿ ವರುಣಾರ್ಭಟ

ದೆಹಲಿ: ಕಳೆದ ಮೂರು ದಿನಗಳಿಂದ ಎಡಬಿಡದೇ ಸುರಿಯುತ್ತಿರುವ ಮಳೆಗೆ ಗುಜರಾತ್, ರಾಜಸ್ಥಾನ ರಾಜ್ಯಗಳಲ್ಲಿ ತತ್ತರಿಸಿವೆ.

ಗುಜರಾತ್‌ನಲ್ಲಿ ಮಳೆ ಸಂಬಂಧಿತ ಅನಾಹುತಕ್ಕೆ 7 ಮಂದಿ ಸಾವನ್ನಪ್ಪಿದ್ದು 6 ಸಾವಿರಕ್ಕೂ ಅಧಿಕ ಜನರನ್ನು ಸ್ಥಳಾಂತರಿಸಲಾಗಿದೆ. ರಾಜಸ್ಥಾನದಲ್ಲಿ ಮಳೆ ಸಂಬಂಧಿತ ಘಟನೆಗಳಿಗೆ ಮಂಗಳವಾರ 5 ಮಂದಿ ಬಲಿಯಾಗಿದ್ದಾರೆ. ರಾಜ್ಯದ ಮರುಭೂಮಿಯಂತಹ ಪ್ರದೇಶಗಳಲ್ಲೂ ಪ್ರವಾಹ ಸ್ಥಿತಿ ನಿರ್ಮಾಣವಾಗಿ ಅಚ್ಚರಿಗೆ ಕಾರಣವಾಗಿದೆ.

ಗುಜರಾತ್‌ನ ಗಾಂಧಿನಗರ, ಖೇಡಾ ಮತ್ತು ವಡೋದ್ರಾ ಜಿಲ್ಲೆಗಳಲ್ಲಿ ಸೋಮವಾರ ಗೋಡೆ ಕುಸಿತದ ಪ್ರತ್ಯೇಕ ಘಟನೆಗಳಲ್ಲಿ ನಾಲ್ವರು ಬಲಿಯಾಗಿದ್ದಾರೆ. ಮರ ಬಿದ್ದು ಒಬ್ಬ ಸಾವನ್ನಪ್ಪಿದರೆ, ಆನಂದ ಜಿಲ್ಲೆಯಲ್ಲಿ ಇಬ್ಬರು ಪ್ರವಾಹದ ನೀರಲ್ಲಿ ಮುಳುಗಿದ್ದಾರೆ. ನದಿ, ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣ ಅಪಾಯಮಟ್ಟ ಮೀರಿದೆ. ಪಂಚಮಹಲ್, ನವಸಾರಿ, ವಡೋದರಾ, ಭರೂಚ್, ಖೇಡಾ, ಗಾಂಧಿನಗರ, ಬೋಟದ್, ಅರಾವಳಿ ಜಿಲ್ಲೆಗಳ ತಗ್ಗು ಪ್ರದೇಶಗಳಲ್ಲಿನ ಸಾವಿರಾರು ಜನರನ್ನು ಸ್ಥಳಾಂತರಿಸಲಾಗಿದೆ. ಪಂಚಮಹಲ್‌ನಲ್ಲಿ 2 ಸಾವಿರ, ವಡೋದರಾದಲ್ಲಿ 1 ಸಾವಿರ , ನವಸಾರಿ 1200, ವಲಸದ್ 800 ಜನರನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸಲಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಮಂಗಳವಾರ ಸಂಜೆಗೂ ಮೊದಲಿನ 24 ಗಂಟೆಗಳಲ್ಲಿ ಮೊರ್ಬಿ ಜಿಲ್ಲೆಯೊಂದರಲ್ಲೇ 347 ಮಿ.ಮೀ. ಮಳೆ ದಾಖಲಾಗಿದೆ. ಗುರುವಾರದವರೆಗೆ ತೀವ್ರ ಪ್ರಮಾಣದ ಮಳೆಯ ಎಚ್ಚರಿಕೆ ನೀಡಲಾಗಿದೆ.

ರಾಜಸ್ಥಾನದ ಕೆಲವೆಡೆ ರಸ್ತೆ ಸಂಪರ್ಕ ಕಡಿತ

ರಾಜಸ್ಥಾನದ ಬಹುತೇಕ ಜಿಲ್ಲೆಗಳಲ್ಲಿ ಭಾರಿ ಮಳೆ ಹಿನ್ನೆಲೆ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ. ಬಾಗಿಡೋರಾ ಪ್ರದೇಶದಲ್ಲಿ 202 ಮಿಮೀ ಅತ್ಯಧಿಕ ಮಳೆ ವರದಿಯಾಗಿದೆ. ಜೈಪುರ, ಉದಯಪುರ, ಬಾಣಸ್ವಾರಾ ಹಾಗೂ ದುಂಗಾರಪುರ ಪ್ರದೇಶದಲ್ಲಿ ಭಾರಿ ಮಳೆಯಾಗಿದೆ. ನಾಣಸ್ವಾರಾ-ಉದಯಪುರ ಅಂತರಜಿಲ್ಲೆ ರಸ್ತೆ ಸಂಪರ್ಕ ಕಡಿತಗೊಂಡಿದೆ. ಬುಧವಾರವರೆಗೂ ಭಾರಿ ಮಳೆಯಾಗಲಿದೆಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ಟ್ರಂಪ್ ಬೆಂಬಲಕ್ಕೆ ನಿಂತ ತುಳಸಿ

ವಾಷಿಂಗ್ಟನ್ : ಮಾಜಿ ಡೆಮೊಕ್ರೆಟಿಕ್ ಪಕ್ಷದ ನಾಯಕಿ ಹಾಗೂ 2020ರ ಅಮೆರಿಕಾ ಅಧ್ಯಕ್ಷೀಯ ಚುನಾವಣೆಯ ನಾಮನಿರ್ದೇಶನಕ್ಕೆ ಸ್ಪರ್ಧಿಸಿದ್ದ ತುಳಸಿ ಗಬ್ಬಾರ್ಡ್ ಅಧಿಕೃತವಾಗಿ ರಿಪಬ್ಲಿಕನ್ ಅಧ್ಯಕ್ಷೀಯ ಅಭ್ಯರ್ಥಿ ಡೋನಾಲ್ಡ್ ಟ್ರಂಪ್‌ಗೆ ಬೆಂಬಲ ಸೂಚಿಸಿದ್ದಾರೆ. ಸೋಮವಾರ ಮಿಶಿಗನ್‌ನಲ್ಲಿ ಟ್ರಂಪ್‌ಜತೆ ವೇದಿಕೆ ಹಂಚಿಕೊಂಡಿದ್ದ ಅವರು ಗೆಲುವಿನ ವಿಸ್ವಾಸ ವ್ಯಕ್ತಪಡಿಸಿದ್ದಾರೆ. ಸೇನೆಯಲ್ಲಿ ಸೇವೆ ಸಲಲಿಸಿರುವ ತುಳಸಿ ಗಬ್ಬಾರ್ಡ್,2013ರಿಂದ 2022ರವರೆಗೆ ಡೆಮೊಕ್ರೆಟಿಕ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ಬಳಿಕ ಪಕ್ಷದಲ್ಲಿನ ಕೆಲ ಅಸಮಾಧಾನಗಳ ಹಿನ್ನೆಲೆ ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದ ತುಳಸಿ ಸರಕಾರದ ನೀತಿ ವಿರುದ್ಧ ಹಲವು ಬಾರಿ ಧ್ವನಿಯೆತ್ತಿದ್ದಾರೆ. 2020ರ ಚುನಾವಣೆಯಲ್ಲಿ ಅಧ್ಯಕ್ಷೀಯ ಅಭ್ಯರ್ಥಿ ಚುನಾವಣೆಯಲ್ಲೂ ಆಕಾಂಕ್ಷಿಯಾಗಿ ಸ್ಪರ್ಧಿಸಿದ್ದರು. ತುಳಸಿ ಗಬ್ಬಾರ್ಡ್ ಬೆಂಬಲವನ್ನು ಟ್ರಂಪ್ ಸ್ವಾಗತಿಸಿದ್ದಾರೆ. ಅಮೆರಿಕಾದ ನೈಜ ದೇಶಭಕ್ತೆ ಎಂದು ಅವರನ್ನು ಕರೆದಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಸ್ಯಾಮ್‌ಸಂಗ್‌ನ ಹೊಸ ಬೆಸ್ಪೋಕ್ ಎಐ ವಾಷಿಂಗ್ ಮೆಷಿನ್ ಉದ್ಘಾಟನಾ ಸಮಾರಂಭದಲ್ಲಿ ಸ್ಯಾಮ್ ಸಂಗ್‌ನ ಡಿಜಿಟಲ್ ಅಪ್ಲೈಯನ್ಸ್‌ನ ಹಿರಿಯ ನಿರ್ದೇಶಕ ಸೌರಬ್ ಬೈಶಾಖಿಯಾ, ಸ್ಯಾಮ್ಸಂಗ್ ಸೌತ್‌ವೆಸ್ಟ್ ಏಷ್ಯಾದ ಸಿಇಒ ಮತ್ತು ಎಂಡಿ ಜೆಬಿ ಪಾರ್ಕ್ ಮತ್ತು ಸೌತ್‌ವೆಸ್ಟ್ ಏಷ್ಯಾದ ಕಾರ್ಪೊರೇಟ್ ಉಪಾಧ್ಯಕ್ಷ ರಿಚರ್ಡ್ ಒಎಚ್ ಇದ್ದರು.

ಕಾಶ್ಮೀರ ಚುನಾವಣೆ: ಬಿಜೆಪಿ 3ನೇ ಪಟ್ಟಿ

ಶ್ರೀನಗರ: ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆ ತಯಾರಿ ಭರದಿಂದ ಸಾಗಿದ್ದು, ಬಿಜೆಪಿ ಮಂಗಳವಾರ ಅಭ್ಯರ್ಥಿಗಳ 3ನೇ ಪಟ್ಟಿ ಬಿಡುಗಡೆ ಮಾಡಿದೆ. ಒಟ್ಟು 29 ಅಭ್ಯರ್ಥಿಗಳನ್ನು ಒಳಗೊಂಡ ಪಟ್ಟಿ ಬಿಡುಗಡೆಯಾಗಿದೆ. 2ನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳ 10 ಅಭ್ಯರ್ಥಿಗಳು ಹಾಗೂ 3ನೇ ಹಂತದ ಮತದಾನ ಕ್ಷೇತ್ರಗಳ 19 ಅಭ್ಯರ್ಥಿಗಳನ್ನು ಪಟ್ಟಿಯಲ್ಲಿ ಹೆಸರಿಸಲಾಗಿದೆ. 3ನೇ ಅಭ್ಯರ್ಥಿ ಪಟ್ಟಿಯಲ್ಲಿ ಬಹಳಷ್ಟು ಹಿರಿಯ ನಾಯಕರ ಹೆಸರು ಕೈಬಿಡಲಾಗಿದೆ. ಮಾಜಿ ಡಿಸಿಎಂ ನಿರ್ಮಲ್ ಸಿಂಗ್, ಮಾಜಿ ಸಚಿವರಾದ ಸತ್‌ಪಾಲ್ ಶರ್ಮಾ, ಪ್ರಿಯಾ ಸೇತಿ ಹಾಗೂ ಶಾಮಲಾಲ್ ಚೌಧರಿ ಅವರನ್ನು ಚುನಾವಣಾ ಕಣದಿಂದ ಹೊರಗಿಡಲಾಗಿದೆ. ಸೋಮವಾರ ಪ್ರಕಟಿಸಿದ ಮೊದಲ ಪಟ್ಟಿಯಲ್ಲಿ 15 ಅಭ್ಯರ್ಥಿಗಳ ಹೆಸರಿತ್ತು. 2ನೇ ಪಟ್ಟಿಯಲ್ಲಿ ಒಬ್ಬ ಅಭ್ಯರ್ಥಿ ಹೆಸರು ಪ್ರಕಟಿಸಲಾಗಿತ್ತು. ಜಮ್ಮು-ಕಾಶ್ಮೀರದ 90 ವಿಧಾನಸಭಾ ಕ್ಷೇತ್ರಗಳಿಗೆ 3 ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಸೆ.18-25, ಅ.1ರಂದು ಮತದಾನ ನಡೆದು ಅ.4ಕ್ಕೆ ಫಲಿತಾಂಶ ಹೊರಬೀಳಲಿದೆ.

ಪಾಕ್: 25 ಉಗ್ರರ ಹತ್ಯೆ

ಪೇಶಾವರ: ಭಯೋತ್ಪಾದಕ ಸಂಘಟನೆ ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಹಾಗೂ ಅದರಡಿ ಕಾರ್ಯ ನಿರ್ವಹಿಸುವ ಎರಡು ಗುಂಪುಗಳ ವಿರುದ್ಧ ಭಾರಿ ಕಾರ್ಯಾಚರಣೆ ಕೈಗೊಂಡಿರುವ ಪಾಕಿಸ್ತಾನ ಭದ್ರತಾ ಪಡೆಗಳು, ಸಂಘಟನೆಯ ಉನ್ನತ ನಾಯಕ ಸೇರಿ 25 ಉಗ್ರರನ್ನು ಹತ್ಯೆ ಮಾಡಿವೆ. ಸಂಘರ್ಷ ಪೀಡಿತ ಹಾಗೂ ಬುಡಕಟ್ಟು ಜನರೇ ಹೆಚ್ಚಾಗಿ ಇರುವ ಖೈಬರ್ ಜಿಲ್ಲೆಯಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ 11 ಉಗ್ರರು ಗಾಯಗೊಂಡಿದ್ದಾರೆ. ಕಾರ್ಯಾಚರಣೆ ವೇಳೆ, ನಾಲ್ವರು ಯೋಧರು ಮೃತಪಟ್ಟಿದ್ದಾರೆ ಎಂದು ಸೇನೆ ಮಂಗಳವಾರ ತಿಳಿಸಿದೆ. ಈ ಭಯೋತ್ಪಾದಕ ಸಂಘಟನೆ ವಿರುದ್ಧದ ಕಾರ್ಯಾಚರಣೆ ಆಗಸ್ಟ್ 20ರಿಂದ ನಡೆಯುತ್ತಿದೆ.

ಒಂದೇ ವಾರದಲ್ಲಿ ಕೆಜಿಗೆ 15-20 ರು. ಏರಿಕೆ. | ಗ್ರಾಹಕರಿಗೆ ಇನ್ನು ಈರುಳ್ಳಿ ಬೆಲೆ ಏರಿಕೆ ಆತಂಕ

ಈರುಳ್ಳಿ ದರ ಕೇಳಿದರೂ ಕಣ್ಣಲ್ಲಿ ನೀರು!

ಹೂವಪ್ಪ ಐ.ಎಚ್. ಬೆಂಗಳೂರು

ಈರುಳ್ಳಿ ಅಡುಗೆ ಮನೆಯ ರಾಜಕುಮಾರ ಇದ್ದಂತೆ. ಬಹುತೇಕರ ಮನೆಯಲ್ಲಿ ಈರುಳ್ಳಿ ಇಲ್ಲದೆ ಅಡುಗೆಯೇ ಇಲ್ಲ. ಹೀಗಾಗಿ ಈರುಳ್ಳಿ ದಿನನಿತ್ಯ ಬಳಸುವ ವಸ್ತುಗಳ ಪೈಕಿ ಒಂದಾಗಿದೆ. ಆದರೆ, ಈರುಳ್ಳಿ ದರ ಹೆಚ್ಚಾದಾಗಲೇ ಅದರ ನಿಜವಾದ ಬೆಲೆ ಏನು ಅಂತ ಗೊತ್ತಾಗೋದು. ಈಗಾಗಲೇ ಬೆಳ್ಳುಳ್ಳಿ ದರ ಗಗನಕ್ಕೇರಿಕೆಯಾಗಿದ್ದು, ಬಳಿಕ ಈರುಳ್ಳಿ ಬೆಲೆ ಗ್ರಾಹಕರಿಗೆ ಬಿಸಿ ತಟ್ಟುತ್ತಿದೆ.

ಮಧ್ಯಮ ವರ್ಗದ ಜನರು ಈರುಳ್ಳಿ ಬಳಸಲು ಹಿಂದೆ-ಮುಂದೆ ನೋಡುವ ಸ್ಥಿತಿ ನಿರ್ಮಾಣ ಆಗಿದೆ. ಜುಲೈ ತಿಂಗಳವರೆಗೂ ಸಾಮಾನ್ಯವಾಗೇ ಇದ್ದ ಈರುಳ್ಳಿ, ಈ ತಿಂಗಳ ಆರಂಭದಿಂದ ಬೆಲೆ ಏರಿಕೆ ನೋಟ ತೋರಿಸುತ್ತಿದೆ. ಆಗಸ್ಟ್ ಮೊದಲ ವಾರದಿಂದಲೇ ಈರುಳ್ಳಿ ಬೆಲೆ ಏರಿಕೆ ಶುರುವಾಗಿತ್ತು.

ಮಹಾರಾಷ್ಟ್ರದಿಂದಲೇ ಹೆಚ್ಚು ಈರುಳ್ಳಿ ಆವಕವಾಗುತ್ತಿದ್ದು, ಕೆಜಿಗೆ 15-20 ಇದ್ದ ಬೆಲೆ 35-40 ರು. ಗೆ ಹೆಚ್ಚಾಳವಾಗಿದೆ ಅಲ್ಲಿಯ ಬೆಲೆ ಏರಿಕೆಯೇ ಈಗ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಜತೆಗೆ ರಾಜ್ಯದ ಚಿತ್ರದುರ್ಗ ಜಿಲ್ಲೆಯಲ್ಲಿ ಈರುಳ್ಳಿ ಹೆಚ್ಚು ಬೆಳೆಯುತ್ತಿದ್ದು, ಈ ವರ್ಷ ಅತಿಯಾದ ಮಳೆಯಿಂದಾಗಿ ಶೇ. 40 ರಷ್ಟು ಬೆಳೆ ನಾಶವಾಗಿದೆ. ಪರಿಣಾಮ ಹೀಗಾಗಿ ಅಲ್ಲಿಂದ ಹೆಚ್ಚು ಈರುಳ್ಳಿ ಬರುತ್ತಿಲ್ಲ ಇದು ಕೂಡಾ ಬೆಲೆ ಏರಿಕೆ ಕಾರಣವಾಗಿದೆ ಎನ್ನುತ್ತಾರೆ ಎಪಿಎಂಸಿ ವ್ಯಾಪಾರಿಗಳು. ಕೇವಲ ಒಂದೇ ವಾರದ ಅಂತರದಲ್ಲಿ ಬರೋಬ್ಬರಿ ಶೇಕಡಾ 20ರಷ್ಟು ಬೆಲೆ ಏರಿಕೆ ಕಂಡಿದೆ.

ಯಶವಂತಪುರ, ಹಾಗೂ ದಾಸಂಪುರ ಎಪಿಎಂಸಿ ಮಾರುಕಟ್ಟೆಗೆ ಕಳೆದ ವಾರದ ಹಿಂದೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಈರುಳ್ಳಿ ದಿನಾಂಪ್ರತಿ 50 ಕೆಜಿಯ 35-40 ಸಾವಿರ ಚೀಲಗಳಷ್ಟು ಸರಬರಾಜಾಗುತ್ತಿದ್ದ ಈರುಳ್ಳಿ ಈಗ 25-30 ಸಾವಿರ ಚೀಲಗಳಿಗೆ ಸೀಮಿತವಾಗಿದೆ. ಒಟ್ಟಿನಲ್ಲಿ 10 ಸಾವಿರ ಚೀಲದಷ್ಟು ಪೂರೈಕೆ ಕೊರತೆಯಾಗಿದೆ.

ಚಿಲ್ಲರೆ ದರ ಉತ್ತಮ ಗುಣಮಟ್ಟ ಹಳೇ ಈರುಳ್ಳಿ 1 ಕೆಜಿ ಗೆ 40-45 ರು. ಗೆ ಇದ್ದ ಬೆಲೆ ಈಗ 50-55 ರು. ಗೆ ಹೆಚ್ಚಾಳವಾಗಿದೆ. ಇತ್ತ ಕೈ ಗಾಡಿಗಳಲ್ಲಿ ಆಟೋಗಳಲ್ಲಿ 100 ರು. 3 ಕೆಜಿ ಮಾರಾಟ ವಾಗುತ್ತಿತ್ತು. ಈಗ ಎರಡು ಕೆಜಿ ಮಾರಾಟವಾಗುತ್ತಿದೆ. ಕೇವಲ ಒಂದೇ ವಾರದಲ್ಲಿ ಕೆಜಿಗೆ ಹೆಚ್ಚು ಕಡಿಮೆ 15-20 ರು. ನಷ್ಟು ಹೆಚ್ಚಳವಾಗಿದೆ. ಈ ವರ್ಷ ಕರ್ನಾಟಕದಲ್ಲಿ ಈರುಳ್ಳಿ ಬಿತ್ತನೆ ಶೇ. 70-80 ಬಿತ್ತನೆಯಾಗಿದೆಯಾದರು ಈ ವರ್ಷ ಬಾರಿ ಮಳೆಯಿಂದಾಗಿ ಶೇ. 40 ರಷ್ಟು ಬೆಳೆ ಹಾಳಾಗಿದೆ ಹೀಗಾಗಿ ಶೇ. 40-50 ರಷ್ಟು ಮಾತ್ರ ಕೈಗೆ ಬಂದಿದೆ ಬೆಂಗಳೂರು ಎಪಿಎಂಸಿ ಮಾರುಕಟ್ಟೆಗೆ ಈರುಳ್ಳಿ ಸೀಜನ್‌ನಲ್ಲಿ ಕನಿಷ್ಠ ಲಕ್ಷ ಮೇಲ್ಪಟ್ಟು ಈರುಳ್ಳಿ ಬರಬೇಕಿತ್ತು ಆದರೆ 25-30 ಸಾವಿರ ಚೀಲ ಮಾತ್ರ ಪೂರೈಕೆಯಾಗಿದೆ.

ಎಪಿಎಂಸಿಯಲ್ಲಿನ ದರ

ಗಾತ್ರ	ಮೊದಲು	ಈಗ
ಮಧ್ಯಮ ಗಾತ್ರ	₹ 2200-2500	₹ 4200-4500
ಉತ್ತಮ ಗಾತ್ರ	₹ 3000-3200	₹ 3900-4000
ಸಣ್ಣ ಗಾತ್ರ	₹ 1400-1500	₹ 2400-2500

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಸಮ್ಮಾನ್ ಕ್ಯಾಪಿಟಲ್ ಲಿ.**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **20.02.2023** ರಂದು ಕರೆದು ಸಾಲಗಾರ **ವಿ ವಿಶ್ವನಾಥನ್ ಅಲಿಯಾಸ್ ವಿಶ್ವನಾಥ್ ವಿ ಮತ್ತು ತಮಿಳು ಸೆಲ್ವಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 12,22,887.24 (ರೂಪಾಯಿ ಹನ್ನೆರಡು ಲಕ್ಷ ಇಪ್ಪತ್ತೆರಡು ಸಾವಿರದ ಎಂಟು ನೂರ ಎಂಬತ್ತೇಳು ಮತ್ತು ಇಪ್ಪತ್ತನಾಲ್ಕು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAG00274171** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **16.02.2023** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ** (ಈಗಿನ ಹೆಸರು: **ಸಮ್ಮಾನ್ ಕ್ಯಾಪಿಟಲ್ ಲಿ.**)ಬಾಕಿ ಇರುವ ಮೊತ್ತ **ರೂ. 12,22,887.24 (ರೂಪಾಯಿ ಹನ್ನೆರಡು ಲಕ್ಷ ಇಪ್ಪತ್ತೆರಡು ಸಾವಿರದ ಎಂಟು ನೂರ ಎಂಬತ್ತೇಳು ಮತ್ತು ಇಪ್ಪತ್ತನಾಲ್ಕು ಪೈಸೆ ಮಾತ್ರ) 16.02.2023** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆ ಎಲ್ಲಾ ತುಂಡು ಮತ್ತು ಆಸ್ತಿ ಹೊಂದಿರುವ ಪಾರ್ಸೆಲ್ ಸೈಟ್ ನಂ.60, ಕಥಾ ನಂ.60, ಪಿಐಡಿ ನಂ. 151900802400920112, **''5 ನೆಸ್ಟ್ ಪೆರಲ್''** ಎಂದು ಕರೆಯಲ್ಪಡುವ ಲೇಔಟ್‌ನಲ್ಲಿ ಕೆತ್ತಿದ ಭೂಮಿಯನ್ನು ಹೊಂದಿರುವ ಪರಿವರ್ತಿತ ಸರ್ವೆ ನಂ. 117/7, ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕೆ ಪರಿವರ್ತಿಸಲಾಗಿದೆ ಅದರ ಪರಿವರ್ತನೆ ಆದೇಶ ಸಂಖ್ಯೆ. ಅಲೆಫ್ ಎಸ್.ಆರ್.33/2014-15, ದಿನಾಂಕ 20.09.2014, ಜಿಲ್ಲಾಧಿಕಾರಿಯಿಂದ ಹೊರಡಿಸಲಾಗಿದೆ, ಕೋಲಾರ ಜಿಲ್ಲೆ, ಕೋಲಾರ, ಯಶವಂತಪುರ ಗ್ರಾಮದಲ್ಲಿದೆ, ಕಸಬಾ ಹೋಬಳಿ, ಮಾಲೂರು ತಾಲೂಕು, ಕೋಲಾರ ಜಿಲ್ಲೆ ಬೆಂಗಳೂರು -560036, ಕರ್ನಾಟಕ, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 40 ಅಡಿ ಅಥವಾ 12.192 ಮೀರ್ಟ. ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ ಅಥವಾ 9.144 ಮೀರ್ಟ., ಎಲ್ಲಾ ಅಳತೆಗಳಲ್ಲಿ 1200 ಚದರ ಅಡಿಗಳು ಅಥವಾ 111.48 ಚದರ ಮೀಟರ್‌ಗಳು, ಅದರ ಪಕ್ಕದಲ್ಲಿಯೇ ಇರುವ ಎಲ್ಲಾ ಉಪಕರಣಗಳು ಮತ್ತು ಇದರ ಮೇಲೆ ಬಂಧಿಸಲಾಗಿದೆ:

ಪೂರ್ವದಲ್ಲಿ ಇದರಿಂದ : ಸೈಟ್ ನಂ. 55 — ಪಶ್ಚಿಮದಲ್ಲಿ ಇದರಿಂದ: 30 ಅಡಿ ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ. 59 — ದಕ್ಷಿಣದಲ್ಲಿ ಇದರಿಂದ: ಸೈಟ್ ನಂ. 61

ಅಧಿಕಾರವಿರುವ ಅಧಿಕಾರಿ
ದಿನಾಂಕ : 22.08.2024 — **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು — **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟರ್ವ, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ, ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿ. (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **17.11.2017** ರಂದು ಕರೆದು ಸಾಲಗಾರ **ಐರಿಸ್ ಸುಜಯ ಚಾರ್ಲ್ಸ್ ಅಲಿಯಾಸ್ ಐರಿಸ್ ಚಾರ್ಲ್ಸ್, ಗೆರ್ಶೋಮ್ ಚಾರ್ಲ್ಸ್ ಪಾರ್ಟ್ನರ್ ಲಿಂಕ್ ಲಾಜಿಸ್ಟಿಕ್ಸ್ ಮತ್ತು ಪಾರ್ಟ್ನರ್ ಮೂಲಕ ಲಿಂಕ್ ಲಾಜಿಸ್ಟಿಕ್ಸ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ.77,75,724 (ರೂಪಾಯಿ ಎಪ್ಪತ್ತೇಳು ಲಕ್ಷ ಎಪ್ಪತ್ತೈದು ಸಾವಿರ ಏಳುನೂರ ಇಪ್ಪತ್ತು ನಾಲ್ಕು ಮಾತ್ರ)** ಲೋನ್ ಅಕೌಂಟ್ ನಂ. **I002OOX** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHLBGM00266298**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **15.11.2017** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ- X, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **30.09.2019** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**-ನ ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, ಇಂಡಿಯಾಬುಲ್ಸ್ ಎಆರ್‌ಸಿ- X, ಟ್ರಸ್ಟ್‌ನ ಟ್ರಸ್ಟಿಯಾಗಿ ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. **ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 26.04.2021 ದಿನಾಂಕ 26.08.2021ರ ತಿದ್ದುಪಡಿ ಒಪ್ಪಂದದೊಂದಿಗೆ ಓದಲಾಗಿದೆ ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ.** ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **I002OOX** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ಬಾಕಿ ಇರುವ ಮೊತ್ತ ರೂ .77,75,724 (ರೂಪಾಯಿ ಎಪ್ಪತ್ತೇಳು ಲಕ್ಷ ಎಪ್ಪತ್ತೈದು ಸಾವಿರ ಏಳುನೂರ ಇಪ್ಪತ್ತು ನಾಲ್ಕು ಮಾತ್ರ) 15.11.2017** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂಖ್ಯೆ. ಎಸ್-301, 1740 ಚದರ ಅಡಿ (ಟೈಪ್-3 BHK) ಪ್ರದೇಶವನ್ನು ನಿರ್ಮಿಸಲಾಗಿದೆ, ''ಮಂತ್ರಿ ವೆಬ್ ಸಿಟಿ'' ನಲ್ಲಿ 3 ನೇ ಮಹಡಿ, ನಗರೇಶ್ವರ ನಾಗೇನಹಳ್ಳಿ ಗ್ರಾಮ, ಕೊಥನೂರ್ ಗ್ರಾಮ, ಕೆಆರ್ ಪುರಂ, ಹೋಬಳಿ, ಬೆಂಗಳೂರು-560077, ಕರ್ನಾಟಕ, ಬೆಂಗಳೂರು, ದಕ್ಷಿಣ ತಾಲೂಕಿನ ಉದ್ದಕ್ಕೂ ಮುಚ್ಚಿದ ಕಾರ್ ಪಾರ್ಕಿಂಗ್.

ಅಧಿಕಾರವಿರುವ ಅಧಿಕಾರಿ
ದಿನಾಂಕ: 22.08.2024 — **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು — (102-ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟರ್ವ, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ, ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **17.11.2021** ರಂದು ಕರೆದು ಸಾಲಗಾರ **ವಿಪುಲ್ ಕುಮಾರ್ ದೇಸಾಯಿ ಮತ್ತು ಮೋಹಿನಿ ದೇಸಾಯಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 8,94,237.43 (ರೂಪಾಯಿ ಎಂಟು ಲಕ್ಷದ ತೊಂಬತ್ತ ನಾಲ್ಕು ಸಾವಿರದ ಇನ್ನೂರ ಮೂವತ್ತ ಏಳು ಮತ್ತು ಪೈಸೆ ನಲ್ವತ್ತ ಮೂರು ಮಾತ್ರ)** ಲೋನ್ ಅಕೌಂಟ್ ನಂ. **V025OXXIII** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHLBAN00341276**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **16.11.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **31.12.2021** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**-ನ ಹೆಸರಿಗೆ ನಿಯುಕ್ತಿಪಡಿಸಿದೆ. **ಅಲ್ಲದೆಯೆ, ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. **ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 29.06.2022 ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ.** ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **V025OXXIII** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.ನ ಬಾಕಿ ಇರುವ ಮೊತ್ತ ರೂ. 8,94,237.43 (ರೂಪಾಯಿ ಎಂಟು ಲಕ್ಷದ ತೊಂಬತ್ತ ನಾಲ್ಕು ಸಾವಿರದ ಇನ್ನೂರ ಮೂವತ್ತ ಏಳು ಮತ್ತು ಪೈಸೆ ನಲ್ವತ್ತ ಮೂರು ಮಾತ್ರ) 16.11.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ.11, ಮೂರನೇ ಮಹಡಿ, ಈಶ್ವರಿ ಎನ್‌ಕ್ಲೇವ್ ಸರ್ವೆ ನಂ.28/4, ಇಲ್ಲಿರುವಂಥಾದ್ದು: ವಿಶ್ವನಾಥ ನಾಗೇನಹಳ್ಳಿ ಗ್ರಾಮ, ಕಸಾಬಾ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು, ಕರ್ನಾಟಕ-560025

ಅಧಿಕಾರವಿರುವ ಅಧಿಕಾರಿ
ದಿನಾಂಕ: 22.08.2024 — **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು — (102-ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟರ್ವ, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ, ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **05.05.2021** ರಂದು ಕರೆದು ಸಾಲಗಾರ **ವಿಪುಲ್ ಕುಮಾರ್ ದೇಸಾಯಿ ಮತ್ತು ಮೋಹಿನಿ ದೇಸಾಯಿ ಎಲಿಯಾಸ್ ಮೋಹಿನಿ ವಿಪುಲ್ ದೇಸಾಯಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ.22,87,861.96 (ಇಪ್ಪತ್ತೆರಡು ಲಕ್ಷ ಎಂಭತ್ತೇಳು ಸಾವಿರದ ಎಂಟು ನೂರಾ ಅರವತ್ತೊಂದು ರೂಪಾಯಿ ಮತ್ತು ತೊಂಭತ್ತಾರು ಪೈಸೆ ಮಾತ್ರ)** ಲೋನ್ ಅಕೌಂಟ್ ನಂ. **V024OXXIII** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHLBAN00332134**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **31.03.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **31.12.2021** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**-ನ ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, **ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. **ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 29.06.2022 ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ.** ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **V024OXXIII** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.ನ ಬಾಕಿ ಇರುವ ಮೊತ್ತ ರೂ. 22,87,861.96 (ಇಪ್ಪತ್ತೆರಡು ಲಕ್ಷ ಎಂಭತ್ತೇಳು ಸಾವಿರದ ಎಂಟು ನೂರಾ ಅರವತ್ತೊಂದು ರೂಪಾಯಿ ಮತ್ತು ತೊಂಭತ್ತಾರು ಪೈಸೆ ಮಾತ್ರ) 31.03.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

3ನೇ ಮಹಡಿಯಲ್ಲಿ ಆಸ್ತಿ ಹೊಂದಿರುವ ಫ್ಲಾಟ್ ನಂ.11, ಪ್ರಸ್ತುತ ಬಿಬಿಎಂಪಿ ನಂ. 45, ಪಿಐಡಿ ನಂ. 96-310-45, ಸೌತ್ ಬ್ಲಾಕ್, ಸುಮಾರು 1349 ಚದರ ಅಡಿ ಅಳತೆ, ಸೂಪರ್ ಬಿಲ್ಟ್-ಅಪ್ ಏರಿಯಾ, ಎರಡು ಬೆಡ್ರೂಮ್ಗಳು, ಹಾಲ್, ಕಿಚನ್, ಬಾತ್ ರೂಮ್ ಟಾಯ್ಲೆಟ್ಗಳು, ಜೊತೆಗೆ ಒಂದು ಮುಚ್ಚಿದ ಕಾರ್ ಪಾರ್ಕಿಂಗ್ ಸ್ಥಳದೊಂದಿಗೆ, ಬೇಸ್ಮೆಂಟ್ ಮಹಡಿಯಲ್ಲಿ, ಎಸ್ ಟಿ ಎಫ್ ನಂ. 11, ಪ್ಯಾಸೇಜ್ಗಳು, ಲಾಬಿಗಳು, ಮೆಟ್ಟಿಲುಗಳು, ಇತ್ಯಾದಿಗಳಂತಹ ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಷೇರು ಸೇರಿದಂತೆ:,''ಈಶ್ವರಿ ಎನ್‌ಕ್ಲೇವ್'' ಎಂದು ಕರೆಯಲ್ಪಡುವ ಬಹುಮಹಡಿ ವಸತಿ ಕಟ್ಟಡದಲ್ಲಿ (290 ಚದರ ಅಡಿ ವಿಭಜಿಸದ ಬಲದೊಂದಿಗೆ, ಸ್ಥಿರ ಆಸ್ತಿಯಲ್ಲಿ ಶೀರ್ಷಿಕೆ ಆಸಕ್ತಿ) ನಿರ್ಮಾಣವಾಗಿದೆ. 45, ಬಿಬಿಎಂಪಿ ಹೊಸ ಸಂಖ್ಯೆ, 45 ಪಿಐಡಿ ಸಂಖ್ಯೆ ಹೊಂದಿದೆ. 96-310-45, ಹಿಂದೆ ಸರ್ವೆ ನಂ.28/4 ರ ಭಾಗವಾಗಿತ್ತು, 8 ನೇ ಎ ಕ್ರಾಸ್ ಇದೆ, ಕನಕ ನಗರ, ವಾರ್ಡ್ ನಂ. 86, ವಿಶ್ವನಾಥ ನಾಗೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲೂಕು), ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಬರುತ್ತದೆ, ವಾರ್ಡ್ ನಂ. 96, ಬೆಂಗಳೂರು - 560025, ಕರ್ನಾಟಕ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 22.08.2024 — **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು — (102-ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

@vishwavaninews
ವಿಶ್ವವಾಣಿ
ಆರಾಮ
ಬೆಂಗಳೂರು
ಬುಧವಾರ
28 | 08 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಯಶಸ್ಸಿಗೆ ಇದು ಬೇಕೇ ಬೇಕು

ಗೆಲುವು ಬೇಕು ಎನ್ನುವ ವ್ಯಕ್ತಿಗೆ ಇರಬೇಕಾದ ಮೊದಲ ಆದ್ಯತೆಯೇ ಶಿಸ್ತು. ಶಿಸ್ತು ಎಂದರೆ ಕಲಿಸುವುದು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ನಿಯಮಗಳನ್ನು ಅಥವಾ ಆದೇಶಗಳನ್ನು ಪಾಲಿಸಬೇಕಾದ ಅಗತ್ಯವಿರುವ ಸ್ವಯಂನಿಯಂತ್ರಣ. ಶಿಸ್ತು ಎನ್ನುವ ಪಾಠಶಾಲೆಯು ಹೇಳಿಕೊಡುವ ಪ್ರಧಾನವಾದ ಅಧ್ಯಾಯವೇ ಸ್ವಯಂನಿಯಂತ್ರಣ. ಇದು ದೀರ್ಘಾವಧಿಯ ಗುರಿಗಳನ್ನು ಸಾಧಿಸಲು ನಮ್ಮನ್ನು ಎತ್ತಿಕಟ್ಟಿ, ನಮ್ಮ ಪರಿಕಲ್ಪನೆ ಹಾಗೂ ವರ್ತನೆಗಳನ್ನು ನಿಯಂತ್ರಿಸುವ ಸಾಮರ್ಥ್ಯ ಹೊಂದಿದೆ. ಜೀವನ ಹಾಗೂ ಶಿಕ್ಷಣದಲ್ಲಿನ ಎಲ್ಲ ರೀತಿಯ ಹೆಚ್ಚಿನ ಧ್ಯೇಯೋದ್ದೇಶಗಳನ್ನು ಸಾಧಿಸಿಕೊಳ್ಳಲು ಶಿಸ್ತು ಎನ್ನುವುದು ಒಂದು ಬಹುಮುಖ್ಯ ಅಂಶವಾಗಿದೆ.

ನಮ್ಮಲ್ಲಿನ ಸೋಮಾರಿತನವನ್ನು ಬಲವಾಗಿ ಒದ್ದು ಹೊಡೆದೋಡಿಸುವ ಅಸ್ತ್ರವೇ ಶಿಸ್ತು. ದಿನನಿತ್ಯದ ದಿನಚರಿಯು ನಗು, ಉಲ್ಲಾಸ, ಉತ್ಸಾಹಗಳಿಂದ ಕೂಡಿರಲು ಪ್ರೇರಣೆಯೇ ಶಿಸ್ತು. ಯಾವುದೇ ಸಮಯದಲ್ಲಿಯೂ ವ್ಯಕ್ತಿತ್ವ ಕುಸಿದು ಕುಗ್ಗಿ, ನರಳದಂತೆ ನೋಡಿಕೊಳ್ಳುವ ಗುರುತರ ಹೊಣೆ ಇದರದ್ದಾಗಿದೆ. ಮನುಷ್ಯನಿಗೆ ಸಕಾರಾತ್ಮಕ ವ್ಯಕ್ತಿತ್ವ ಹಾಗೂ ಧನಾತ್ಮಕ ಚಿಂತನೆಗಳು ಮೈಗೂಡಿಸಿದರೆ ಶಿಸ್ತು ನಮ್ಮಲ್ಲಿ ನಳನಳಿಸುತ್ತದೆ. ಶಿಸ್ತಿನ ವ್ಯಕ್ತಿಯು ತನ್ನ ಸಮರ್ಪಕ ಸ್ವಭಾವ ಹಾಗೂ ಆದರ್ಶಮಯ ನಡವಳಿಕೆಗಳಿಗೆ ಸಮಾಜದಲ್ಲಿನ ಇತರರಿಂದ ಅಪಾರ ಗೌರವ, ಆದರಗಳ ಪಡೆಯುತ್ತಾನೆ.

ಶಿಸ್ತು ಆತ್ಮವಿಶ್ವಾಸದ ಪ್ರತೀಕ. ಶಿಸ್ತು ಇರುವವರಲ್ಲಿ ಧೈರ್ಯ, ಶಕ್ತಿ, ಸಾಮರ್ಥ್ಯ ತನ್ನಿಂದಾನೇ ಬೆಳೆಯುತ್ತದೆ. ಸಂಪೂರ್ಣ, ಪರಿಪೂರ್ಣ, ಅರ್ಥಪೂರ್ಣ ಯಶಸ್ಸಿನೊಂದಿಗೆ ಜೀವನ ನಡೆಸಲು ಶಿಸ್ತು ನಮಗೆ ಅನುಕ್ಷಣವೂ ಸಹಕಾರಿ. ಶಿಸ್ತು ಇದ್ದರೆ ಗೆದ್ದೆ, ಇಲ್ಲದಿದ್ದರೆ ಬಿದ್ದೆ ಎನ್ನುವ ಮಾತು ಜನಜನಿತ. ನಮ್ಮಲ್ಲಿ ಶಿಸ್ತು ಇರದೇ ಹೋದರೆ ಕನಸಿನಲ್ಲೂ ಯಶಸ್ಸು ಕಾಣಲು ಸಾಧ್ಯವಿಲ್ಲ. 'ಶಿಸ್ತು ಇಲ್ಲದ ಜೀವನ ಕಡಿವಾಣವಿಲ್ಲದ ಕುದುರೆಯಂತೆ' ಎನ್ನುವ ಹೇಳಿಕೆಯು ವಿಶೇಷ ಅರ್ಥವುಳ್ಳದ್ದು.

● ರಂಗನಾಥ್ ಗುಡಿಮನಿ

ಶಿಲಾಜಿತ್

ಹಿಮಾಲಯ ಪರ್ವತ ಶ್ರೇಣಿಯಲ್ಲಿ ಸಿಗುವ 'ಶಿಲಾಜಿತ್' ಎಂಬ ವಸ್ತುವಿನ ಹೆಸರನ್ನು ಕೇಳಿದ್ದರೂ, ಅದರ ಉಪಯೋಗದ ಮಾಹಿತಿ ಅರಿತವರು ಕಡಿಮೆ. ಪರ್ವತಗಳ ಪದರುಗಳ ಒತ್ತಡದಿಂದ ಉತ್ಪತ್ತಿಯಾಗುವ ಶಿಲಾಜಿತ್, ಸಸ್ಯ ಮೂಲ ವಸ್ತು. ಶಿಲಾ ಪದರುಗಳ ನಡುವೆ ಸಿಕ್ಕಿಕೊಂಡ ಸಸ್ಯಮೂಲದ ವಸ್ತುಗಳ ಲಕ್ಷಾಂತರ ವರ್ಷಗಳ ನಂತರ, ದಪ್ಪನೆಯ ರಾಳದ ಸ್ವರೂಪ ಪಡೆಯುತ್ತದೆ. ಇದೇ ಶಿಲಾಜಿತ್. ಇದರಲ್ಲಿ ಕ್ಯಾಲ್ಷಿಯಂ, ಕಬ್ಬಿಣ, ಮ್ಯಾಗ್ನೀಶಿಯಂ, ಅಮೈನೋ ಆ್ಯಸಿಡ್ ಮತ್ತು ಇತರ ಇಪ್ಪತ್ತಕ್ಕೂ ಹೆಚ್ಚು ಸತ್ವಗಳೂ ಅಡಗಿದ್ದು, ಇದನ್ನು ಸಾಂಪ್ರಾದಯಿಕ ಮತ್ತು ಜಾನಪದೀಯ ಔಷಧವಾಗಿ ಬಳಸುವುದುಂಟು. ಇದು ಮನುಷ್ಯನಲ್ಲಿ ಪ್ರತಿರೋಧ ಶಕ್ತಿ ಹೆಚ್ಚಿಸಿ, ಪುರುಷತ್ವವನ್ನು ಪೊರೆಯುತ್ತದೆ ಎಂಬ ನಂಬಿಕೆ ಇರುವುದರಿಂದ, ಇದರ ಪುಡಿಯನ್ನು ಕೆಲವು ಸಂಸ್ಥೆಗಳು ಮಾರಾಟಮಾಡುತ್ತಿವೆ.

ಯುವ ಕಾವ್ಯ

ಆಷಾಢ-ಶ್ರಾವಣ

'ಕಡಲಿಗೆ ಬಂತು ಶ್ರಾವಣಾ/
ಕುಣಿದ್ಹಾಂಗ ರಾವಣಾ'
'ಏರ್ಯಾವ ಮುಗಿಲು/ರವಿ ಕಾಣೆ
ಹಾಡೆ ಹಗಲು
ಶ್ರಾವಣಾ ಬಂತು ಹೊಳಿಗಳಿಗೆ
ಅದೇ ಶುಭ ಗಳಿಗೆ'
'ಶ್ರಾವಣಾ ಬಂತು ಊರಿಗೆ/
ಕೇರಿಕೇರಿಗೆ'
'ಶ್ರಾವಣಾ ಬಂತು ಮನಿಮನಿಗೆ'
ಅಂದ್ಯಲ್ಲೋ ಬೇಂದ್ರೆ ಅಜ್ಜಾ,
ಮುಗಿಲ ಮರೆಯಾಗ ರವಿ ಮರೆಯಾಗಿ
ಆಷಾಢದಾಗನಾ ರಾವಣ ಮಳಿ ಬಂದು
ಹೊಳಿ ತುಂಬಿ ಉಕ್ಕಿ ಹರಿದು
ಊರು, ಕೇರಿ, ಮನಿ ಎಲ್ಲಾ
ಮುಳುಗಿದವಲ್ಲೋ!
ಬೆಳಿ ಸೊರಗಿದವಲ್ಲೋ!

ಅಯ್ಯಾ, ವರುಣರಾಯಾ,
ಶ್ರಾವಣದಲ್ಲಾದರೂ
ಹಿತಮಿತವಾಗಿರು ಜೀಯಾ;
ಬೇಂದ್ರೆ ಅಜ್ಜ ಹೇಳಿದ ಶುಭ ಗಳಿಗೆ
ತಾರೋ, ಮಹರಾಯಾ!

● ಎಚ್. ಆನಂದರಾಮ ಶಾಸ್ತ್ರೀ

ಸ್ವಂತಿಕೆಯ ಕಲಾಕೃತಿಗಳು

ಮಹಿಳೆಯ ಸ್ವಂತಿಕೆಯ ಕುರಿತು ಇವರ ಕಲಾಕೃತಿಗಳು ಉತ್ತಮ ಸಂದೇಶವನ್ನು ನೀಡುತ್ತವೆ.

● ಪ್ರೊ. ವಿ. ಎಸ್. ನಾಯಕ, ಬಳಕೂರು

ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಕಲಾ ಗ್ಯಾಲರಿಯಲ್ಲಿ ಆಗಸ್ಟ್ 26ರಿಂದ ಸೆಪ್ಟೆಂಬರ್ 1ರವರೆಗೆ ಕಲಾವಿದೆ ತಿರೂಪವಾಣಿಯವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ನಡೆಯುತ್ತಿದೆ. ಇದೊಂದು ವಿಶಿಷ್ಟ ವಿಭಿನ್ನ ಕಲಾ ಪ್ರದರ್ಶನ. ಇವರ ಕಲಾಕೃತಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀವಾದ, ಮಹಿಳೆಯರ ಸಾಮರ್ಥ್ಯಗಳು, ಅವರ ಸಾಧನೆಯ ಪಯಣ, ಅವರ ವಿಭಿನ್ನ ಅನುಭವಗಳ ಸಮಗ್ರ ಚಿತ್ರಣ ತಮ್ಮದೇ ಆದ ಕಲಾಭಾಷೆಯಲ್ಲಿ ವರ್ಣ ರಂಜಿತವಾಗಿ ಚಿತ್ರಿಸಿದ್ದಾರೆ.



ಕಲಾವಿದೆ ರೂಪವಾಣಿಯವರು ತೆಲಂಗಾಣದ ಹೈದರಾಬಾದ್ ಜೆ.ಎನ್.ಎ.ಎಫ್.ಎ. ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಕಲಾ ಪ್ರದರ್ಶನದಲ್ಲಿ ಸುಮಾರು 60 ವಿನೂತನ ವರ್ಣರಂಜಿತ ಕಲಾಕೃತಿಗಳು ಇವೆ. ಸಮಾಜದಲ್ಲಿ ಮಹಿಳೆಯರು ಅವಕಾಶ ಸಿಕ್ಕಿದರೆ ಅಥವಾ ಅದನ್ನು ಹುಡುಕಿಕೊಂಡು ಯಾವ ರೀತಿಯಾಗಿ ಸಾಧನಾಶೀಲರಾಗಬಲ್ಲರು ಸಾಧನೆಯ ಉತ್ತುಂಗಕ್ಕೆ ಏರಬಲ್ಲರು, ಅಂದುಕೊಂಡ ಕಾರ್ಯವನ್ನು ಹೇಗೆ ಪೂರ್ಣಗೊಳಿಸಬಲ್ಲರು, ಎಲ್ಲರೂ ಒಂದು ಕಾಲ ಅಚ್ಚರಿ ಪಡುವಂತೆ ಇಡೀ ಜಗತ್ತಿಗೆ ಹೇಗೆ ಮಾದರಿಯಾಗಬಲ್ಲರು, ಹೀಗೆ ಹಲವು ವಿಚಾರಗಳ ಕಲಾ ಕೃತಿಗಳ ಸರಣಿ ನಿಜಕ್ಕೂ ಒಂದು ವಿಸ್ಮಯಕಾರಿ ಕಲಾ ಲೋಕಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ.

ಕಲಾವಿದೆ ತನ್ನ ಕಲಾಕೃತಿಗಳಲ್ಲಿ ಅನುಭವಿಸಿ ಕೃತಿ ರಚಿಸಿರುವುದು ವಿಶೇಷ. ಅದರ ಜೊತೆಗೆ ಮಹಿಳೆಯಲ್ಲಿ ಸಾಧಿಸುವ ಛಲವಿದ್ದರೆ ಗೆಲುವು ಕಟ್ಟಿಟ್ಟ ಬುತ್ತಿ ಎಂಬ ಸಂದೇಶ ಕಲಾಕೃತಿಗಳಿಗೆ ಅಡಕವಾಗಿದೆ. ಇವರ ಕರಾಕೃತಿಗಳಲ್ಲಿ ವರ್ಣರಂಜಿತ ಬಣ್ಣಗಳ ಸೊಬಗು, ಚಿತ್ರಗಳಿಗೆ ತಕ್ಕಂತೆ ಬಣ್ಣಗಳಲ್ಲಿ ಲೇಪನ, ಅವಶ್ಯಕತೆಗಳಿಗೆ ತಕ್ಕಂತೆ ಚೌಕಗಳ ರಚನೆ, ಕಪ್ಪು ಮತ್ತು ಇತರ ಬಣ್ಣಗಳ ಬಳಕೆ, ಒಂದೇ ಕ್ಷಣದಲ್ಲಿ ಆಕರ್ಷಿಸುವ ಕಲಾಕೃತಿಗಳ ಮೆರೆಗು, ಒಂದೊಂದು ವಿಷಯಕ್ಕೆ ತಕ್ಕಂತೆ ರೇಖೆಗಳ ವಿನ್ಯಾಸ, ಕಣ್ಣಿಗೆ ಕಟ್ಟುವಂತಹ ಸೊಬಗು, ನೆರಳು ಮತ್ತು ಬೆಳಕಿನ ಪ್ರತಿಫಲನದ ಮೋಡಿ, ಸಂಗತಿಗಳಿಗೆ ತಕ್ಕ ಹಾಗೆ ಗೋಡೆಯ ಒಂದು ತುದಿಯಿಂದ ಇನ್ನೊಂದು ತುದಿಗೆ ತೂಗು ಹಾಕಿದ ಕಲಾಕೃತಿಗಳು ಒಂದು ಅಚ್ಚರಿಯ ಲೋಕಕ್ಕೆ ಕಲಾಭಿಮಾನಿಗಳನ್ನು ಕರೆದೊಯ್ಯುತ್ತವೆ.



ಬಯೋಟಿನ್ ಕೊರತೆಯೇ?

● ವಾಣಿ ಮೈಸೂರು

ಸೌಂದರ್ಯದ ಮೆರುಗಿಗೆ ಸೋಪಾನವೇ ತಲೆಕೂದಲು. ಸುಂದರ ಹೊಳೆಯುವ ನೀಳ, ದಪ್ಪ ಮತ್ತು ಸಮೃದ್ಧ ಕೂದಲು ಎಲ್ಲರಿಗೂ ಇಷ್ಟ. ಆದರೆ ಇಂದಿನ ದಿನಗಳಲ್ಲಿ ಅಧಿಕ ಒತ್ತಡ ಮತ್ತು ಯಾಂತ್ರಿಕತೆಯಿಂದ ಕೂಡಿದ ಜೀವನ ಶೈಲಿ, ದೂಳು, ವಾಯುಮಾಲಿನ್ಯ, ಆಹಾರದಲ್ಲಿ ಪೌಷ್ಟಿಕಾಂಶಗಳ ಕೊರತೆ, ನೀರಿನಲ್ಲಿ ಮಿಶ್ರವಾಗುವ ಕ್ಲೋರಿನ್ ಅಂಶ ಮೊದಲಾದ ಕಾರಣಗಳಿಂದಾಗಿ, ಕೂದಲು ಅತಿಯಾಗಿ ಉದುರುವುದೇ ಕೆಲವರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ.

ಕೂದಲು ಉದುರುವುದೇ ಮಾನಸಿಕ ಹಿಂಸೆಗೆ ಕಾರಣವಾಗುತ್ತಿದೆ. ಸಾಮಾನ್ಯವಾಗಿ ಸ್ತ್ರೀಯರಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವ ಸಮಸ್ಯೆ ಆಗಿದೆ. ಕೂದಲಿನ ತ್ವಚೆಯ ಜತೆಗೆ ಸತ್ವಯುತ ಆಹಾರವು ಕೂದುಲು ಉದುರುವುದನ್ನು ಕಾಪಾಡಿಕೊಳ್ಳಲು ಕಾರಣವಾಗುವ ಮುಖ್ಯ ಅಂಶವಾಗಿದೆ. ಕೂದುಲು ಕೆರಾಟಿನ್ ಎಂಬ ಪ್ರೋಟೀನ್‌ನಿಂದ ರಚಿಸಲ್ಪಡುತ್ತದೆ. ಕೂದಲು ಚೆನ್ನಾಗಿರಲು ಬಯೋಟಿನ್ ಎಂಬ ಪೌಷ್ಟಿಕಾಂಶ ಅಗತ್ಯ. ಬಯೋಟಿನ್ ಕೊರತೆಯಿಂದ ಕೂದಲು ಉದುರುವುದು, ತೀರಾ ತೆಳುವಾಗುವುದು, ಉಗುರು ಮುರಿದು ಹೋಗುವುದು, ಮುಖದಲ್ಲಿ ದದ್ದು ಕಾಣಿಸಿಕೊಳ್ಳುವ ಸಮಸ್ಯೆಗಳು ಸಹ ಕಾಡುತ್ತದೆ. ಬಯೋಟಿನ್ ಆಹಾರಗಳಲ್ಲಿ ಸಿಗುವ ನೈಸರ್ಗಿಕವಾಗಿ ವಿಟಮಿನ್ ಆಗಿದೆ.

- ಹಾಲು, ಮೊಟ್ಟೆ ಬಾಳೆಹಣ್ಣಿನಲ್ಲಿ ಹೆಚ್ಚಾಗಿ ಬಯೋಟಿನ್ ಅಂಶವಿದ್ದು ಕೂದಲ ಸಂರಕ್ಷಿಸುವಲ್ಲಿ ಸಹಕಾರಿ.
- ಬಿ ಜೀವ ಸತ್ವ, ಪ್ರೋಟೀನ್, ರಂಜಕ ಮತ್ತು ಕಬ್ಬಿಣ ಅಂಶಗಳುಳ್ಳ ಆಹಾರ ಪದ್ಧತಿಯ ಸೇವನಾ ಕ್ರಮಗಳು ಬಯೋಟಿನ್ ಕೊರತೆಯನ್ನು ದೂರಮಾಡುತ್ತದೆ.
- ಅವರೆಕಾಳು ಬೀನ್ಸ್ ಮತ್ತು ಬೇಳೆ ಕಾಳುಗಳು, ದ್ವಿದಳ ಧಾನ್ಯಗಳು, ಸೂರ್ಯಕಾಂತಿ ಬೀಜ, ಫೈಬರ್ ಅಂಶವನ್ನು ಒಳಗೊಂಡ ತರಕಾರಿಗಳು, ಹಣ್ಣುಗಳು ಮತ್ತು ಆಹಾರ ಸೇವನೆಯು ಸಹಕಾರಿಯಾಗಿದೆ.

ನಾನು ಮತ್ತು ಕೃಷ್ಣ



● ಬಿ. ಎನ್. ಸೌಮ್ಯ ಕೋಠಿ

ಕೃಷ್ಣ ನನ್ನ ಆರಾಧ್ಯ ದೈವ. ನನ್ನ ಹೃದಯದ ಬಡಿತ, ನನ್ನ ಸರ್ವಸ್ವವೂ ಸಹ ಅವನೇ ಆಗಿದ್ದಾನೆ. ಅವನಿಲ್ಲದೆ ನಾನು ನನ್ನ ಜೀವನವನ್ನು ಊಹಿಸಿಕೊಳ್ಳಲು ಅಸಾಧ್ಯ. ರಾಧೆ ಆತನನ್ನ ಎಷ್ಟು ಪ್ರೀತಿಸುತ್ತಿದ್ದಳು ಗೊತ್ತಿಲ್ಲ. ಆದರೆ ನನ್ನ ಪ್ರೀತಿಯೇ ಬೇರೆ. ಮೀರಾ ಅವನ್ನ ಹೇಗೆ ಆರಾಧನೆ ಮಾಡುತ್ತಿದ್ದಳು ತಿಳಿಯದು. ಆದರೆ ನಾನು ಅವನನ್ನ ಆರಾಧನೆ ಮಾಡುವ ಪರಿಯೇ ಬೇರೆ. ಅಷ್ಟೇ ಅಲ್ಲ ದ್ರೌಪದಿಗೆ ಆತ ಅಣ್ಣನಾಗಿ ಹೇಗಿದ್ದರೂ ತಿಳಿಯದು; ಆದರೆ ಆತ ಎಲ್ಲವನ್ನ ಮೀರಿದ ಸ್ಥಾನ ನನ್ನ ಜೀವನದಲ್ಲಿ ಕೃಷ್ಣನದ್ದು.

ಅವನು ನನ್ನ ಕೃಷ್ಣ. ನನಗೂ ಹಾಗೂ ಕೃಷ್ಣನಿಗೂ ಒಂದು ರೀತಿಯ ಅವಿನಾಭಾವ ಸಂಬಂಧ. ಕೃಷ್ಣನ ಬಗ್ಗೆ ತಿಳಿಯುತ್ತಾ ನನಗೆ ಕೃಷ್ಣ ತುಂಬಾ ಇಷ್ಟ ಆಗಿದ್ದು ಅಣ್ಣನಾಗಿ. ಅವನು ದ್ರೌಪದಿಯ ಮೇಲೆ ಇಟ್ಟಂತಹ ಆ ನಿಷ್ಕಲ್ಮಶ ಪ್ರೀತಿ ನನಗೆ ತುಂಬಾ ಇಷ್ಟ ಆಯ್ತು. ಹಾಗಾಗಿ ಪ್ರತಿ ವರ್ಷ ನಾನು ಸಹ ಅವನಿಗೆ ರಾಖಿಯನ್ನು ಕಟ್ಟುವೆ. ಅವನನ್ನು ಅಣ್ಣನಾಗಿ ಸ್ವೀಕರಿಸಿರುವೆ.

ನನಗೆ ಯಾರು ಇಲ್ಲ ಎಂದು ನನಗೆ ಅನಿಸಿದಾಗ ನಾನು ಈ ಶ್ಲೋಕವನ್ನ ಪದೇ ಪದೇ ಹೇಳಿಕೊಂಡಾಗ ಕೃಷ್ಣ ನನ್ನ ಕೈ ಹಿಡಿದು ಸಲಹುತ್ತಾನೆ ಅನ್ನೋ ಅಚಲವಾದ ನಂಬಿಕೆ ನನ್ನದು. ಆತ ಎಲ್ಲಿದ್ದಾನೆ ಎಂದು ಹುಡುಕುವ ಪ್ರಯತ್ನದಲ್ಲಿ ಇದ್ದಾಗ ನನಗೆ ಸಿಕ್ಕಂತಹ ಉತ್ತರ ಆತ ಪ್ರತಿಯೊಂದು ಜೀವಿಯಲ್ಲಿ ಆತ್ಮಸ್ವರೂಪದಲ್ಲಿ ಇದ್ದಾನೆ ಎಂದು. ಆತ ಎಲ್ಲರ ಶಕ್ತಿ, ಭಕ್ತಿ ಹಾಗೂ ನಮ್ಮ ಆನಂದವಾಗಿ ಇದ್ದಾನೆ.ನಮ್ಮ ಬದುಕಿನ ಬಗ್ಗೆ ಅವನಿಗಿಂತ ಹೆಚ್ಚು ತಿಳಿದವರು ನಿಜಕ್ಕೂ ಯಾರು ಇಲ್ಲ. ಹಾಗಾಗಿ ಅವನ ಬಗ್ಗೆ ನಂಬಿಕೆ ಇಟ್ಟು ನಮ್ಮ ಕರ್ಮವನ್ನ ಅಂದ್ರೆ ನಮ್ಮ ಕೆಲಸವನ್ನು ನಾವು ನಿಸ್ವಾರ್ಥವಾಗಿ ಮಾಡಿದಾಗ ಕೃಷ್ಣ ನಮ್ಮ ಕೈ ಹಿಡಿದು ನಡೆಸುತ್ತಾನೆ. ಆತ ಆತ್ಮೀಯ ಅಣ್ಣ; ಅವನೇ ಎನ್ನ ಕೃಷ್ಣ.

ನೆಲದ ನೆನಪಿನ ವಿನ್ಯಾಸ!

ಮನೆಗಳ ಮೇಲೆ ವಿಶಿಷ್ಟ ವಿನ್ಯಾಸಗಳನ್ನು ನಿರ್ಮಿಸುವುದು ಕೆಲವರಿಗೆ ಹವ್ಯಾಸ. ಅಂತಹ ಹವ್ಯಾಸವು ಹೆಚ್ಚು ಜನಪ್ರಿಯವಾಗಿ ರುವುದು ಪಂಜಾಬಿನಲ್ಲಿ!



● ವಿಶ್ವನಾಥ್ ಬಳುವನೇರಲು

ಕನಸಿನ ಮನೆಯೊಂದನ್ನು ನಿರ್ಮಿಸುವಾಗ ನಮಗೆ ಇಷ್ಟವಾದ ರೂಪಗಳನ್ನು ಅದರೊಳಗೆ ಮಿಳಿತ ವಾಗಿಸಬೇಕೆಂದು ಆಶಿಸುವುದು ಸಹಜ. ಹಲವು ದಶಕಗಳ ಹಿಂದೆ ಬೆಂಗಳೂರಿನ ಕಟ್ಟಡಗಳ ಮೇಲಿನ ನೀರಿನ ಟ್ಯಾಂಕನ್ನು ಸಿಮೆಂಟಿನಿಂದ ಚೌಕಾಕಾರದಲ್ಲಿ ನಿರ್ಮಿಸುವುದನ್ನು ನೋಡಿದ್ದೆ. ಅವರಲ್ಲಿ ಬೆರಳೆಣಿಕೆಯಷ್ಟು ಮಂದಿ ಕಟ್ಟಡದ ಮೇಲೆ ಅವರಿಗೆ ಇಷ್ಟವಾದ ರೂಪವನ್ನು ರಚಿಸುತ್ತಿದ್ದರು. ಕಾರು, ಮೀನು ಮೊದಲಾದ ವಿನ್ಯಾಸದ ನೀರಿನ ಟ್ಯಾಂಕನ್ನು ನಿರ್ಮಿಸುವವರಿದ್ದಾರೆ.

ಆದರೆ ಪಂಜಾಬ್ ರಾಜ್ಯದ ದೋಬಾದ ಗ್ರಾಮೀಣ ಹಳ್ಳಿಗಳಿಗೆ ಭೇಟಿ ನೀಡಿದಾಗ ನೀವು ಮನೆಗಳ ಮೇಲಿರುವ ವಿಮಾನಗಳು, ಟ್ಯಾಂಕ್‌ಗಳು ಮತ್ತು ಸಾಕರ್ ಆಟಗಾರರ ಅಗಾಧ ಶಿಲ್ಪಗಳನ್ನು ನೋಡಬಹುದು. 1970 ರ ದಶಕದಲ್ಲಿ ಪಂಜಾಬಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಪಂಚದ ಇತರ ಭಾಗಗಳಿಗೆ ವಲಸೆ ಹೋದರು. ಅವರು ತಮ್ಮ ಗ್ರಾಮದಲ್ಲಿ ನಿವಾಸಗಳನ್ನು ಇಟ್ಟುಕೊಂಡಿದ್ದರು. ಇವರ ಮನೆಗಳ ಮೇಲೆ ಚಿತ್ರ ವಿಚಿತ್ರ ವಿನ್ಯಾಸದ ನೀರಿನ ಟ್ಯಾಂಕ್ ಅಥವಾ ಇತರ ಕಲಾಕೃತಿಗಳಿವೆ. ಶೋಪೀಸ್ ಎಂದು ಕರೆಯಲ್ಪಡುವ ಮೇಲ್ಛಾವಣಿಯ ಶಿಲ್ಪಗಳು ನೀರಿನ ಟ್ಯಾಂಕ್‌ಗಳಾಗಿ ಕಲೆ ಮತ್ತು ವಾಸ್ತುಶಿಲ್ಪದ ತಮಾಷೆಯ ಮಿಶ್ರಣ ಮತ್ತು ಪ್ರಾಯೋಗಿಕ ಪ್ರದರ್ಶನವಾಗಿದೆ.



ಕಳೆದ ಹಲವಾರು ವರ್ಷಗಳಲ್ಲಿ, ಛಾಯಾಗ್ರಾಹಕ ರಾಜೇಶ್ ವೋರಾ ಇಂತಹ ನೂರಾರು ಕೃತಿಗಳನ್ನು ದಾಖಲಿಸಲು ರಾಜ್ಯದಾದ್ಯಂತ ಸುಮಾರು 6,000 ಕಿಲೋಮೀಟರ್‌ಗಳನ್ನು ಕ್ರಮಿಸಿದ್ದಾರೆ. ಮನೆಯ ಮಾಲೀಕರು ಹೆಚ್ಚಾಗಿ ಬೇರೆಡೆ ಇರುವ ಕಾರಣ, ಅನೇಕ ಮನೆಗಳು ವರ್ಷದ ಬಹುಪಾಲು ಬಳಕೆಯಾಗುವುದಿಲ್ಲ. ವಾಸ್ತುಶಿಲ್ಪದ ಸೇರ್ಪಡೆಗಳು ನಿವಾಸಿಗಳ ಅನನ್ಯ ಇತಿಹಾಸಗಳು ಮತ್ತು ಅವರ ಅನುಪಸ್ಥಿತಿಯಲ್ಲಿ ಪ್ರದೇಶ ದೊಂದಿಗೆ ಸಂಬಂಧಗಳನ್ನು ನೆನಪಿಸುತ್ತದೆ. ನೆಲದೊಂದಿಗಿನ ತಮ್ಮ ಬಾಂಧವ್ಯವನ್ನು, ಮಧುರ ನೆನಪುಗಳನ್ನು ಇಂತಹ ವಿನ್ಯಾಸಗಳ ಮೂಲಕ ಕಾಪಿಡುವ ಕೆಲಸ ಇದಾಗಿದೆ.



ತಾಯಿಯ ಬೆನ್ನ ಮೇಲೆ ಸವಾರಿ!

ನಮ್ಮ ರಾಜ್ಯದಲ್ಲಿ ಸಾಮಾನ್ಯ ಎನಿಸಿರುವ ಈ ಹಕ್ಕಿಯು, ತನ್ನ ಮರಿಗಳನ್ನು ಬೆನ್ನಿನ ಮೇಲೆ ಕೂರಿಸಿಕೊಂಡು ಈಜುತ್ತದೆ!

● ಶಶಿಧರಸ್ವಾಮಿ ಆರ್. ಹಿರೇಮಠ

ನಮ್ಮೂರ ಹೊರ ವಲಯದಲ್ಲಿರುವ ಸಣ್ಣ ಕೆರೆಯ ಹೆಸರು ದೊಡ್ಡ ಕಟ್ಟೆ ಕೆರೆ. ಆ ಕೆರೆಗೆ ನೂರಾರು ಹಕ್ಕಿಗಳು ಆಗಮಿಸುವುದುಂಟು. ಆ ದಿನ ರವಿವಾರ, ರಜೆ ಇದ್ದುದ್ದರಿಂದ, ಮಾರುದ್ದ ಲೆನ್ಸ್ ಹೊಂದಿದ ಕ್ಯಾಮರಾ ಹೊತ್ತು ಪೋಟೊಗ್ರಫಿಗೆಂದು ದೊಡ್ಡ ಕಟ್ಟೆ ಕೆರೆಗೆ ಹೋದೆ. ಅಲ್ಲಿ ಪುಟ್ಟ ಪಕ್ಷಿಗಳು ನೀರಿನಲ್ಲಿ ಈಜುತ್ತಿದ್ದವು.

ನೀರಿನಲ್ಲಿ ಮುಳುಗುವುದು ಮತ್ತೆ ಮೇಲೆಳುವುದು ಅವುಗಳಿಗೆ ಆಟವಿದ್ದಂತೆ! ಅದಕ್ಕೇ ಇವಕ್ಕೆ ಗುಳುಮುಳುಕ ಎಂಬ ಹೆಸರು. ನೀರಿನಿಂದ ಮೇಲೆದ್ದಾಗ ತಮ್ಮ ಬಾಯಿ ಚಪ್ಪರಿಸುವುದನ್ನು ಸೂಕ್ಷ್ಮವಾಗಿ ಗಮನಿಸಿದೆ. ತಾಯಿ ಹಕ್ಕಿ ತನ್ನ ಮರಿಗಳಿಗೆ ಬೇಟೆಯಾಡುವದನ್ನು ಕಲಿಸುತ್ತಾ ಮೀನನ್ನು ಕಬಳಿಸುವುದರಲ್ಲಿ ಮಗ್ನವಾಗಿತ್ತು. ನೋಡುತ್ತಿದ್ದಂತೆ ತಾಯಿ ನೀರಿನಲ್ಲಿ ಮುಳುಗಿತು ಮತ್ತೇ ಮೇಲಕ್ಕೇದ್ದಾಗ ಅದರ ಬಾಯಿಯಲ್ಲಿ ಮೀನು! ಕ್ಲಿಕ್ ಮಾಡಿದೆ. ಲೆನ್ಸ್ ಮೂಖಾಂತರ ನೋಡಿದಾಗ, ಗುಳೂಮುಳಕ ಬಾಯಿಗೆ ಸಿಕ್ಕ ಮೀನು ಇನ್ನೂ ಜೀವಂತವಿದ್ದು ಅದರ ಬಾಯಿನಿಂದ ತಪ್ಪಿಸಿಕೊಂಡು ನೀರಿನಲ್ಲಿ ಜಾರಿದಾಗ ಸಿಕ್ಕ ತುತ್ತನ್ನು ಬಿಡದ ಹಕ್ಕಿ ಪ್ರಯತ್ನ ಪೂರ್ವಕವಾಗಿ ಮತ್ತೇ ಆ ಬೇಟೆಯನ್ನು ಹಿಡಿದು ಎತ್ತರ ದ್ವನಿಯಲ್ಲಿ ಕೂಗಿದಾಗ ಮರಿಯೊಂದು ಅದರತ್ತ ಈಜಿಕೊಂಡು ಬಂತು!

ಅದೊಂದು ಆಪ್ಯಾಯಮಾನ ದೃಶ್ಯ – ತಾಯಿ ಅಕ್ಕರೆಯಿಂದ ಕರೆದಾಗ ಮರಿಯು ಶರವೇಗದಲ್ಲಿ ಈಜುತ್ತಾ ತಾಯಿಯತ್ತ ದಾವಿಸಿ ಬಂದು, ತಾಯಿ ಇತ್ತ ಮೀನಿನ ತುತ್ತನ್ನು ತನ್ನ ಪುಟ್ಟದಾದ ಕೊಕ್ಕಿನಿಂದ ಸ್ವೀಕರಿಸಿ ಒಂದೇ ಗುಕ್ಕಿಗೆ ಗುಳುಂ ಸ್ವಾಹಾ ಮಾಡಿತು.

ಗುಳುಮುಳುಕ ಹಕ್ಕಿ ನಿಜಕ್ಕೂ ಜಲ ಚತುರೆ! ನೀರು ಕೋಗಿಲೆ, ಪ್ಲವ ಎಂತೆಲ್ಲ ನಾನಾ ಹೆಸರುಗಳಿಂದ ಕರೆಯುತ್ತಾರೆ. ಸೋಲಿಗರು ನೀರ್‌ಬಾತ್ ಎಂದು ಕರೆದರೆ, ಬೆಟ್ಟಕುರುಬರು ನೀರ್‌ಬಾತಿ ಎಂದು ಕರೆಯುತ್ತಾರೆ. ಇಂಗ್ಲೀಷಿನಲ್ಲಿ ಲಿಟಲ್ ಗ್ರೀಬ್ ಅಥವಾ ಡಬ್‌ಚಿಕ್ ಎಂಬ ಹೆಸರು.

ನಮ್ಮ ರಾಜ್ಯದ ಬಯಲುಸೀಮೆಯಲ್ಲಿ ಇದರ ನೋಟ ಸಹಜ. ಸಾಮಾನ್ಯವಾಗಿ ರಾಜ್ಯದೆಲ್ಲೆಡೆ ಕಾಣಸಿಗುವ ಈ ಹಕ್ಕಿ ಜಲ ಪಕ್ಷಿಗಳಲ್ಲಿಯೇ ಅತ್ಯಂತ ಪುಟ್ಟ ಹಕ್ಕಿ. ಮೊಂಡು ಬಾಲ, ತಿಳಿ ಕಂದು ಮೈ ಬಣ್ಣ ಹೊಂದಿ ಹೊಟ್ಟೆಯ ಪುಕ್ಕಗಳು ಬಿಳಿ ವರ್ಣದಿಂದ ಕೂಡಿದ್ದು ಮಕಮಲ್ಲ ಬಟ್ಟೆಯಷ್ಟು ನುಣುಪಾಗಿವೆ. ಚೂಪಾದ ಸಣ್ಣ ಕೊಕ್ಕನ್ನು ಹೊಂದಿವೆ. ಈ ಹಕ್ಕಿಯು ಮುಳುಗು ಹಾಗೂ ಈಜುಗಾರ ಹಕ್ಕಿ. ಇವು ಜಲಕೀಟ, ಮೀನು, ಸಣ್ಣಕಪ್ಪೆ, ಏಡಿಗಳನ್ನು ತಿನ್ನುತ್ತವೆ. ತಿಂದ ಮೀನಿನ ಶಲ್ಕ(ಚಿಪ್ಪು-ಸ್ಕೇಲ್), ಮೂಳೆಗಳು ಹೊಟ್ಟೆಯಲ್ಲಿ ತೊಂದರೆ ನೀಡಬಾರದೆಂದು ತಮ್ಮಲ್ಲಿನ ಕೆಲವು ಪುಕ್ಕಗಳನ್ನು ತಿನ್ನುತ್ತವೆ. ಸಂತಾನಾಶ್ರಯ ಸಮಯದಲ್ಲಿ ಕುತ್ತಿಗೆಯಲ್ಲಿ ಕಂದು ಬಣ್ಣದ ಮಚ್ಚೆ ಹಾಗೂ ಕೊಕ್ಕಿನ ಕೆಳ ಭಾಗದಲ್ಲಿ ಮಾಸಲು ಹಳದಿ ವರ್ಣದ ಚುಕ್ಕೆಯನ್ನು ಕಾಣಬಹುದಾಗಿದೆ. ಕಿಚಕಿಚಕಿಚ ಎಂದು ಈಜಾಡುವಾಗ ಕೂಗಿದರೇ, ಹಾರುವಾಗ ತ್ರೀ… ತ್ರೀ… ತ್ರೀ… ಎಂದು ಕೂಗುತ್ತವೆ. ಏಪ್ರಿಲ್‌ನಿಂದ ಅಕ್ಟೋಬರ್ ತಿಂಗಳಲ್ಲಿ ಜಲಸಸ್ಯ, ತೇಲುವ ಕಸಕಡ್ಡಿಗಳು ಹಾಗೂ ಜೊಂಡು ಹುಲ್ಲನ್ನು ಸೇರಿಸಿ ತೇಲುವ ಗೂಡನ್ನು ಕಟ್ಟಿ 3–5 ಬಿಳಿ ಮೊಟ್ಟೆಗಳನ್ನಿಟ್ಟು ಸುಮಾರು 20–21 ದಿನಗಳವರೆಗೆ ಕಾವು ನೀಡಿ ಮರಿಮಾಡಿಸುತ್ತದೆ. ಮರಿಗಳು ಸ್ವಲ್ಪ ದೊಡ್ಡವಾಗುವವರೆಗೂ ತಾಯಿ ಹಕ್ಕಿಯು ಮರಿಗಳನ್ನು ತನ್ನ ಬೆನ್ನು ಮೇಲೆ ಕುಳ್ಳರಿಸಿಕೊಂಡು ನೀರಿನಲ್ಲಿ ಈಜಾಡುತ್ತಿರುತ್ತದೆ. ತಾಯಿಯ ಬೆನ್ನ ಮೇಲೆ ಸವಾರಿ ಮಾಡುವ ಆ ಮರಿಗಳ ಅದೃಷ್ಟ ಹೇಗಿದೆ ನೋಡಿ!

ತಾಯಿ ಹಕ್ಕಿ ತನ್ನ ಮೂರು ಮರಿಗಳಿಗೆ ಅಕ್ಕರೆ ಮೀನಿನೂಟವನ್ನು ನೀಡಿತು. ಈಗ ಹಕ್ಕಿಗಳು ನೀರಿನಲ್ಲೇ ತೇಲುತ್ತಾ ಕಣ್ಣು ತೆರೆದು ಕೊಂಡೇ ವಿಶ್ರಾಂತಿ ಪಡೆಯತೊಡಗಿದವು. ಅವಕ್ಕೆ ಹೊಟ್ಟೆ ತುಂಬಿರಬೇಕು. ನಾನು ಕ್ಯಾಮರಾವನ್ನು ಹೇಗಲಿಗೇರಿಸಿ ಮನೆಯತ್ತ ನಡೆದೆ.

(ಚಿತ್ರಗಳು: ಲೇಖಕರವು)



ಕೊಳಲ ಗಾನ

ದೂರದಿಂದ ತೇಲಿಬಂದ
ಮಧುರ ನಾದ ಸೊಗಸು
ಮನದ ಆಳದಿಂದ ಒಂದು
ನೆನಪು ಮೇಲೆ ಬಂದಿತು
ಕೊಳಲ ಗಾನ ಕೃಷ್ಣನದೇ?
ನೆನಪು ಸವಿಯು ನನ್ನದೇ?
ತೇಲಿಬಂದ ಕೊಳಲ ಗಾನ
ಏಕೆ ತಂತು ಪ್ರೀತಿಯ ನೆನಪು?

-ಸಿಂಚನಾ ಎಸ್.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
28.08.2024 ಬುಧವಾರ
vishwavani.news

ದಿನ ಭವಿಷ್ಯ

ಮೇಷ ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ನೀವು ಇಂದು ಹಣ ಉಳಿಸುವುದು ಕಷ್ಟ.

ವೃಷಭ ಕೆಲಸದ ನಡುವೆ ಸಾಧ್ಯವಾದಷ್ಟೂ ವಿಶ್ರಾಂತಿ ಪಡೆಯಿರಿ. ಇಂದು ಅನಗತ್ಯವಾಗಿ ಹಣ ಖರ್ಚು ಮಾಡುವುದನ್ನು ನಿಲ್ಲಿಸಬೇಕು.

ಮಿಥುನ ಇತರರ ವಿರುದ್ಧ ದ್ವೇಷ ಕಾರುವುದು ಮಾನಸಿಕ ಒತ್ತಡವನ್ನು ನೀಡುತ್ತದೆ. ಇಂತಹ ಆಲೋಚನೆಗಳನ್ನು ತಪ್ಪಿಸಲು ಪ್ರಯತ್ನಿಸಿ.

ಕಟಕ ಕೆಲವು ಅನಿವಾರ್ಯ ಸಂದರ್ಭಗಳು ನಿಮಗೆ ಅಹಿತಕರವೆನಿಸಬಹುದು. ಆದರೆ ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು.

ಸಿಂಹ ಆಸ್ತಿಯಲ್ಲಿ ಹೂಡಿಕೆ ಮಾಡುವುದು ಇಂದು ನಿಮಗೆ ಮಾರಕವಾಗಬಹುದು, ಸಾಧ್ಯವಾದಷ್ಟು ಹೂಡಿಕೆ ಮಾಡುವುದನ್ನು ತಪ್ಪಿಸಿ.

ಕನ್ಯಾ ಅತಿಥಿ ಇಂದು ಮನೆಗೆ ಬರಬಹುದು. ಹಾಗೇ ಇವರ ಅದೃಷ್ಟದ ಕಾರಣದಿಂದ ಇಂದು ನೀವು ಆರ್ಥಿಕ ಲಾಭವನ್ನು ಪಡೆಯಬಹುದು.

ತುಲಾ ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು

ವೃಶ್ಚಿಕ ಸಹಯೋಗದಲ್ಲಿ ಉದ್ಯಮ ಆರಂಭಿಸಲು ಒಳ್ಳೆಯ ದಿನ. ಎಲ್ಲರೂ ಲಾಭ ಪಡೆಯಬಹುದು. ಆದರೆ ಪಾಲುದಾರರ ಜೊತೆ ಕೈಜೋಡಿಸುವ ಮುನ್ನ ಯೋಚಿಸಿ.

ಧನು ನಿಮ್ಮ ದೀರ್ಘಕಾಲೀನ ಅನಾರೋಗ್ಯದ ಜೊತೆ ಹೋರಾಡುವಾಗ ಆತ್ಮ ವಿಶ್ವಾಸ ಶೌರ್ಯದ ಮೂಲವೆಂದು ತಿಳಿದಿರಿ.

ಮಕರ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ಗೆಲ್ಲಬಹುದು.

ಕುಂಭ ಇಂದು ನಿಮ್ಮ ಜೀವನ ಸಂಗಾತಿಯನ್ನು ಆಶ್ಚರ್ಯಗೊಳಿಸಬಹುದು, ಎಲ್ಲ ಕೆಲಸವನ್ನು ಬಿಟ್ಟು ಅವರೊಂದಿಗೆ ಸಮಯ ಕಳೆಯಬಹುದು.

ಮೀನ ಇಂದು ನೀವು ಭೂಮಿ, ವಸತಿ, ಅಥವಾ ಸಾಂಸ್ಕೃತಿಕ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗಮನ ನೀಡಬೇಕು. ಆರೋಗ್ಯ ಚೆನ್ನಾಗಿಲ್ಲದ ಒಬ್ಬ ಸಂಬಂಧಿಯನ್ನು ಭೇಟಿ ಮಾಡಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1600: ಮೊಘಲರು ಅಹಮದನಗರ್‌ವನ್ನು ಜಯಿಸಿದರು.
- 1904: ಕೋಲ್ಕತ್ತಾದಿಂದ ಬಾರಕ್‌ಪೂರ್‌ವರೆಗೆ ಮೊದಲ ಕಾರ್ ರ್‍ಯಾಲಿ ನಡೆಸಲಾಯಿತು.
- 1914: ಮೊದಲನೇ ವಿಶ್ವಯುದ್ಧ ಶುರುವಾಯಿತು.
- 1986: ಭಾರತದ ಚೆಸ್‌ನಲ್ಲಿ ಮೊದಲ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆಗಿ ಭಾಗ್ಯಶ್ರೀ ಸಾಥೆ ಹೊರಹೊಮ್ಮಿದರು.

ಚಿತ್ರಸ್ಫೂರ್ತಿ

ದಿನ ದರ್ಶಿಕೆ

ಶ್ರಾವಣ ಮಾಸ, ಕೃಷ್ಣ ಪಕ್ಷ, ಮೃಗಶಿರ ನಕ್ಷತ್ರ, ವಜ್ರ ಯೋಗ, ವಣಿಜ ಕರಣ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ಜೀರಿಗೆಯನ್ನು ರಾತ್ರಿ ಇಡೀ ನೆನೆಹಾಕಿ ಕುಡಿಯುವ ಅಭ್ಯಾಸ ಮಾಡಿಕೊಂಡರೆ ನಮ್ಮ ದೇಹದ ತೂಕ ನಿಯಂತ್ರಣವಾಗುತ್ತದೆ. ಬೆಳಗಿನ ಸಮಯದಲ್ಲಿ ಖಾಲಿ ಹೊಟ್ಟೆಯಲ್ಲಿ ಜೀರಿಗೆ ನೀರನ್ನು ಕುಡಿಯುವು ದರಿಂದ ನಮ್ಮ ದೇಹಕ್ಕೆ ಆಂಟಿ ಆಕ್ಸಿಡೆಂಟ್ ಮತ್ತು ಆಂಟಿ ಇನ್ಫ್ಲಾಮೇಟರಿ ಲಕ್ಷಣಗಳು ಸಿಗುತ್ತವೆ. ಇದು ನಮ್ಮ ಹೊಟ್ಟೆ ಹಸಿವನ್ನು ನಿಯಂತ್ರಿಸುತ್ತದೆ.

ಸೌಂದರ್ಯ ಸೂತ್ರ

ಒಂದು ಸೌತೆಕಾಯಿ ಮತ್ತು ಒಂದು ಟೊಮೆಟೊ ರಸವನ್ನು ತೆಗೆದುಕೊಂಡು ಅದನ್ನು ನಿಮ್ಮ ಮುಖದ ಮೇಲೆ 15 ರಿಂದ 20 ನಿಮಿಷಗಳ ಕಾಲ ಹಚ್ಚಿರಿ, ನಂತರ ನಿಮ್ಮ ಮುಖವನ್ನು ತಣ್ಣೀರಿನಿಂದ ತೊಳೆಯಿರಿ. ಹೀಗೆ ಮಾಡುವುದರಿಂದ ತ್ವಚೆಯು ತೇವಾಂಶದಿಂದ ಕೂಡಿರುತ್ತದೆ ಮತ್ತು ಟೊಮೇಟೊದಲ್ಲಿರುವ ಲೈಕೋಪೀನ್ ಚರ್ಮದಲ್ಲಿನ ಮೊಡವೆಗಳು, ಕಲೆಗಳು ಮತ್ತು ಸುಕ್ಕುಗಳನ್ನು ಕಡಿಮೆ ಮಾಡುತ್ತದೆ.

ಓ ಓ ಓ ನಯಾಗರಾ!

ಎಲ್ಲೆಡೆಯೂ ಮಳೆಗಾಲ ಹಳ್ಳ, ಕೊಳ್ಳ, ತೊರೆಗಳೆಲ್ಲ ತುಂಬಿದರೆ ಫಾಲ್ಸ್ ಕರ್ನಾಟಕದಲ್ಲಿದ್ದರೇನು, ಅಮೆರಿಕದಲ್ಲಿದ್ದರೇನು? ಎಲ್ಲಿದ್ದರೂ ಚೆಂದ ಅಲ್ಲವೇ? ಇದು ಅಮೆರಿಕದ ನಯಾಗರಾ ಫಾಲ್ಸ್‌ನಲ್ಲಿ ತುಂಬಿಕೊಂಡಿರುವ ಜನ ಚಿತ್ರಕೃಪೆ: ಶರ್ಮಿಳಾ ಮುತ್ತು

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಇತ್ತೀಚೆಗೆ, ಯಾವ ರಾಜ್ಯ ಕ್ಯಾಬಿನೆಟ್, ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ವರದಿಯನ್ನು ಅನುಮೋದಿಸಿದೆ?

ಎ. ಉತ್ತರಾಖಂಡ.
ಬಿ. ಮಣಿಪುರ.
ಸಿ. ರಾಜಸ್ಥಾನ.
ಡಿ. ಪಶ್ಚಿಮ ಬಂಗಾಳ.

ಉತ್ತರ: ಎ. ಉತ್ತರಾಖಂಡ.

ಮಾಹಿತಿ

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ನೇತೃತ್ವದ ಉತ್ತರಾಖಂಡದ ಕ್ಯಾಬಿನೆಟ್ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮಸೂದೆಯನ್ನು ಅನುಮೋದಿಸಿದೆ-ಇದು ಐತಿಹಾಸಿಕ ನಿರ್ಧಾರವೆಂದು ಹೇಳಲಾಗುತ್ತಿದೆ. ಸಮಿತಿಯ ಶಿಫಾರಸುಗಳ ಆಧಾರದ ಮೇಲೆ, ಮಸೂದೆಯು ಧಾರ್ಮಿಕ ಸಂಬಂಧಗಳನ್ನು ಮೀರಿ ನಾಗರಿಕ ಕಾನೂನುಗಳನ್ನು ಪ್ರಮಾಣೀಕರಿಸುವ ಗುರಿಯನ್ನು ಹೊಂದಿದೆ. ಪ್ರಸ್ತಾವಿತ ಕ್ರಮಗಳಲ್ಲಿ ಬಹುಪತ್ನಿತ್ವ ಮತ್ತು ಬಾಲ್ಯವಿವಾಹವನ್ನು ನಿಷೇಧಿಸುವುದು, ಸಾಮಾನ್ಯ ಮದುವೆಯ ವಯಸ್ಸನ್ನು ಸ್ಥಾಪಿಸುವುದು ಮತ್ತು ವಿಚ್ಛೇದನಕ್ಕೆ ಏಕರೂಪದ ಆಧಾರಗಳು ಮತ್ತು ಕಾರ್ಯವಿಧಾನಗಳನ್ನು ಜಾರಿಗೊಳಿಸುವುದು, ಕಾನೂನು ಪ್ರಮಾಣೀಕರಣವನ್ನು ಉತ್ತೇಜಿಸುವುದು ಸೇರಿವೆ.

ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಪಾಂಡವರು ವನವಾಸದಲ್ಲಿದ್ದಾಗ, ಕೃಷ್ಣ ಒಮ್ಮೆ ಅವರಿದ್ದೆಡೆಗೆ ಅವರನ್ನು ವಿಚಾರಿಸಲೆಂದು ಬಂದ. ಎಲ್ಲರಿಗೂ ಅವನನ್ನು ನೋಡಿ ಬಹಳ ಸಂತೋಷವಾಯಿತು. ದ್ರೌಪದಿಯ ಕಣ್ಣಲ್ಲೂ ನೀರು ಹರಿಯಲಾರಂಭಿಸಿತು.

'ಚಿಂತಿಸಬೇಡ ಸಹೋದರಿ, ಶೀಘ್ರದಲ್ಲೇ ಎಲ್ಲವೂ ಸರಿಹೋಗುತ್ತದೆ' ಎಂದು ಹೇಳಿ ಆಕೆಯನ್ನು ಸಮಾಧಾನ ಪಡಿಸಿದ.

'ಇರಲಿ ಬಿಡು ಅಣ್ಣಾ, ಅದು ಬಂದಾಗ ಬರಲಿ, ನೀನು ಬಂದಿದ್ದೇ ನನಗೆ ಬಹಳ ಸಂತೋಷ, ಈಗ ನೀನು ಸ್ನಾನ ಮಾಡಿ ನಿನ್ನ ಆಯಾಸವನ್ನು ಪರಿಹರಿಸಿಕೋ. ನಂತರ ಭೋಜನ ಮಾಡುವೆಯಂತೆ' ಎಂದು ಹೇಳಿ, ದ್ರೌಪದಿ ಕೃಷ್ಣನ ಸ್ನಾನಕ್ಕಾಗಿ ಬಿಸಿ ನೀರನ್ನು ಸಿದ್ಧಪಡಿಸಲು ಹೊರಟಳು.

ಭೀಮ, ಒಣಗಿದ ಸೌದೆಯನ್ನು ದ್ರೌಪದಿಗೆ ತಂದುಕೊಟ್ಟು, ಒಲೆ ಉರಿಸಲು ಸಹಾಯ ಮಾಡಿದ. ದ್ರೌಪದಿ ಕೃಷ್ಣನ ಸ್ನಾನಕ್ಕಾಗಿ ಒಲೆ ಉರಿಸತೊಡಗಿದಳು.

ಆಗ ಎಲ್ಲರೂ ಗುಡಿಸಲ ಹೊರಗೆ ಕುಳಿತು ಮಾತನಾಡುತ್ತಿದ್ದರು. ಆಗ ಕೃಷ್ಣ, ಅರ್ಜುನನನ್ನು ಕುರಿತು, 'ವನವಾಸದ ಜೀವನ ಹೇಗೆನಿಸುತ್ತಿದೆ?' ಎಂದು ಕೇಳಿದ. 'ನೀನು ನಮ್ಮನ್ನೆಲ್ಲಾ ರಕ್ಷಿಸುತ್ತಿರುವಾಗ, ನಮಗೆ ಯಾವುದರ ಚಿಂತೆಯೂ ಇಲ್ಲಾ ಕೃಷ್ಣಾ, ಎಲ್ಲರೂ ಚೆನ್ನಾಗಿಯೇ ಇದ್ದೇವೆ,' ಎಂದ ಅರ್ಜುನ.

'ಯುಧಿಷ್ಟಿರಾ, ಇವನ ಮಾತನ್ನು ಕೇಳಿದೆಯಾ, ನಿನ್ನ ತಮ್ಮನಿಗೆ ಇಲ್ಲೇ ಹೆಚ್ಚು ಸಂತೋಷವಂತೆ!' ಎಂದು ಹೇಳಿದ ಕೃಷ್ಣ.

'ಅವನು ಹೇಳುವುದು ನಿಜ ತಾನೇ? ಪ್ರಕೃತಿಯ ಸೌಂದರ್ಯದ ಜತೆಗಿರುವುದಕ್ಕಿಂತ ಬೇರೆ ಇನ್ನೇನು ಬೇಕು ಕೃಷ್ಣಾ?' ಎಂದ ಯುಧಿಷ್ಠಿರ.

'ನಿನಗೇನಿಸುತ್ತೆ, ತಂಗಿ ದ್ರೌಪದಿ?' ಕೃಷ್ಣ ಕೇಳಿದಾಗ, 'ನನ್ನ ಗಂಡಂದಿರು ಎಲ್ಲಿರುತ್ತಾರೆ ಅಲ್ಲೇ ನನಗೆ ಸಂತೋಷ ಕೃಷ್ಣ, ಅದು ಕಾಡಾದರೇನು? ಅರಮನೆಯಾದರೇನು?' ಎಂದಳು ದ್ರೌಪದಿ.

'ಒಟ್ಟಲ್ಲಿ ನೀವೆಲ್ಲಾ ಸಂತೋಷವಾಗಿರುವುದೇ ನನಗೆ ಮುಖ್ಯ, ನೀರು ಸಿದ್ಧವಾಯಿತೆ? ನಾನು ಸ್ನಾನಕ್ಕೆ ಹೋಗುತ್ತೇನೆ' ಎಂದ ಕೃಷ್ಣ. 'ಇಷ್ಟೊತ್ತಿಗೆ, ಅದು ಕಾದಿರಬೇಕು ನೋಡಿ ಬರುತ್ತೇನೆ' ಎಂದಳು ದ್ರೌಪದಿ.

ಅಲ್ಲಿ ದ್ರೌಪದಿಗೆ ಆಶ್ಚರ್ಯ ಕಾದಿತ್ತು. 'ಒಲೆ ಜೋರಾಗಿ ಉರಿಯುತ್ತಿದೆ, ಆದರೆ ನೀರು ಸ್ವಲ್ಪವೂ ಬೆಚ್ಚಗೆ ಆಗಿಲ್ಲ' ಎಂದಳು ದ್ರೌಪದಿ. ಭೀಮ ಬಂದು ನೋಡಿದ, 'ಅರೆ, ಇದೇನು, ಇಷ್ಟು ಜೋರಾಗಿ ಒಲೆ ಉರಿಯುತ್ತಿದೆ, ಆದರೆ ಸ್ವಲ್ಪ ಬೆಚ್ಚಗೂ ಆಗಿಲ್ಲವಲ್ಲ, ನೀರು ಇದ್ದ ಹಾಗೆ ಇದೆಯಲ್ಲಾ' ಎನ್ನುತ್ತಾ ಕೃಷ್ಣನ ಬಳಿಗೆ ಹೋದ.

'ಯಾಕೆ ಏನಾಯ್ತು?' ಎಂದು ಕೃಷ್ಣನೂ ಒಲೆಯ ಹತ್ತಿರ ಬಂದು, ಹಂಡೆಯೊಳಗೆ ಕೈ ಹಾಕಿ ನೋಡಿ, 'ಹೌದು ನೀರು ತಣ್ಣಗಿದೆಯಲ್ಲಾ, ಆ ನೀರನ್ನು ಪೂರ್ತಿ ಹೊರಗೆ ಸುರಿಯಿರಿ, ಯಾಕೆ ಬಿಸಿಯಾಗುತ್ತಿಲ್ಲ?' ಎಂದು ನೋಡೇ ಬಿಡೋಣ ಎಂದ .

ಭೀಮ ಹಂಡೆಯಲ್ಲಿದ್ದ ನೀರನ್ನೆಲ್ಲಾ ಹೊರಗೆ ಸುರಿದ. ಆಗ ಅದರೊಳಗೆ ಇದ್ದ ಕಪ್ಪೆ ಹಾರಿ ಹೊರಗೆ ಬಂದಿತು. ಇದು ಹೇಗೆ ಅದರೊಳಗೆ ಹೋಯಿತು ಎಂದು, ಎಲ್ಲರೂ ಆಶ್ಚರ್ಯಗೊಂಡರು.

'ಆಶ್ಚರ್ಯ ಪಡುವುದೇನಿಲ್ಲ, ಹಂಡೆಯೊಳಗೆ ಅದು ಹೋಗಿ ಸೇರಿಕೊಂಡಿತ್ತು, ಅಷ್ಟೇ. ನೀವು ಬೆಂಕಿ ಹಚ್ಚಿದಾಗ, ಕಪ್ಪೆ ನನಗೆ ಶರಣಾಯಿತು. ಅದನ್ನು ರಕ್ಷಿಸುವುದು ನನ್ನ ಕರ್ತವ್ಯ, ಆದ್ದರಿಂದ ನೀರು ಬಿಸಿಯಾಗಲೇ ಇಲ್ಲ. ನಾನು ಅದನ್ನು ಕಾಪಾಡಿದೆ' ಎಂದ ಕೃಷ್ಣ.

ಎಲ್ಲರೂ ಭಕ್ತಿಯಿಂದ ಕೃಷ್ಣನಿಗೆ ನಮಸ್ಕರಿಸಿ, 'ನಾವು ಕೂಡ ನಿನಗೆ ಶರಣಾಗಿದ್ದೇವೆ, ನಮ್ಮನ್ನೂ ರಕ್ಷಿಸು ದೇವಾ' ಎಂದು ಬೇಡಿಕೊಂಡರು.

ಕಷ್ಟ ಎಂದು ಬೇಡಿಕೊಂಡಾಗ ಕಪ್ಪೆಯಂತಹ ಒಂದು ಜೀವಿಯನ್ನು ಬಿಡದೆ ರಕ್ಷಿಸುವ ಭಗವಂತ ನಮ್ಮನ್ನು ಕಡೆಗಣಿಸಿಯಾನೆ? ನಂಬಿಕೆ ಒಂದಿದ್ದರೆ ಅಲ್ಲಿ ಭಗವಂತ ಇದ್ದೇ ಇರುತ್ತಾನೆ. ಅದಕ್ಕೆ ದಾಸರು ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೆ? ಕೃಷ್ಣನ ನೆನೆದರೆ ಕಷ್ಟ ಒಂದಿಷ್ಟಿಲ್ಲ ಕೃಷ್ಣ ಎನಬಾರದೆ ಎಂದು ಹಾಡಿ ಸಾರಿರುವುದು.

ಧೈರ್ಯಂ ಸರ್ವತ್ರಂ ಸಾಧನಂ

• ಶಂಕರಾನಂದ ಹೆಬ್ಬಾಳ

ನಮ್ಮ ಮನಸ್ಸು ಚಂಚಲದಿಂದ ಕೂಡಿದೆ. ಇದರಲ್ಲಿ ಧೈರ್ಯಕ್ಕಿಂತ ಹೆಚ್ಚು ಭಯ ಹಾಗೂ ಹಿಂಜರಿಕೆಗಳೆ ತುಂಬಿವೆ. ಹೀಗಾಗಿ ಕೆಲವೊಮ್ಮೆ ಧೈರ್ಯದಿಂದ ಮುಂದಕ್ಕೆ ಅಡಿಯಿಡುವ ಪ್ರಶ್ನೆ ನಮಗೆ ಎದುರಾಗುತ್ತದೆ. ನಮ್ಮೊಳಗಿನ ಚೇತನ ಶಕ್ತಿಗೆ ಪ್ರಬಲಗೊಳಿಸುವುದೆ ಈ ಧೈರ್ಯ. ಈ ಚೇತನ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಿದ್ದು; ಒಬ್ಬರು ಮಾತಿನಲ್ಲಿ ಹೊರಹಾಕಿದರೆ, ಮತ್ತೊಬ್ಬರು ತಮ್ಮ ಕಾರ್ಯದಲ್ಲಿ ಹೊರಹಾಕುತ್ತಾರೆ ಹಾಗಾಗಿ

ನಮಗೆ ಅತ್ಯವಶ್ಯವಾಗಿ ಈ ಶಕ್ತಿ ಬೇಕೆ ಬೇಕು. ನಮ್ಮ ಆಲೋಚನೆಗಳಿಗೆ ಪುಷ್ಠಿಕೊಟ್ಟು ಒದಗಿಬರುವ ಅಡೆತಡೆಗಳನ್ನು ಎದುರಿಸುವ ಒಂದು ಶಕ್ತಿಯನು ಜಾಗೃತಗೊಳಿಸುವ ಕಾರ್ಯ ಮಾಡಿದಾಗ ನಮಗೆ ಗೊತ್ತಾಗುತ್ತದೆ.

ಒಮ್ಮೆ ಶಾನುಭೋಗರೊಬ್ಬರು ಪಕ್ಕದೂರಿನ ಬ್ಯಾಂಕಿಗೆ ಹಣ ಕಟ್ಟಲು ಹೋಗಿದ್ದರು ಬರುವಾಗ ತಮ್ಮ ಸಂಬಂಧಿಕರ ಊಟೋಪಚಾರ ಮುಗಿಸಿ ಬರಲು ಕೊಂಚ ತಡವಾಗಿ ಬರುವಾಗ ಈಗಿನಂತೆ ವಾಹನ ಸೌಕರ್ಯ ಇಲ್ಲದ್ದರಿಂದ ನಡೆದೆ ಬರಬೇಕಾಗಿತ್ತು. ಶಾನುಭೋಗರು ನಡೆದು ಕೊಂಡೆ ಹೊರಟರು ಅದು ದಟ್ಟ ಕಾಡಾಗಿದ್ದರಿಂದ ವನ್ಯಮೃಗಗಳು ಸಹಜವಾಗಿದ್ದು. ಇವರು ಧೈರ್ಯ ಮಾಡಿ ಹೊರಟೆಬಿಟ್ಟರು. ಅರ್ಧದಾರಿ ಕ್ರಮಿಸಿದಾಗ ಇವರ ವಾಸನೆಯನ್ನು ಆಘ್ರಾಣಿಸಿ ಹುಲಿಯೊಂದು ಹತ್ತಿರ ಸುಳಿಯಿತು. ಶಾನುಭೋಗರಿಗೆ ತಮ್ಮ ಆರನೆ ಜ್ಞಾನೇಂದ್ರಿಯದಿಂದ ಇದು ಗೊತ್ತಾಯಿತು. ಹುಲಿಗಳು ಬೆನ್ನಹಿಂದೆ ಹಾರಿ ಕೊಲ್ಲುವುದಿಲ್ಲವೆಂಬುದನ್ನು ಅರಿತಿದ್ದ ಅವರು ಅದಕ್ಕೆ ಬೆನ್ನು ತೋರಿಸಿ ನಡೆದರು ಎಷ್ಟೊಸಲ ಜಿಗಿದರೂ ಹುಲಿಗೆ ಕಂಡದ್ದು ಅವರ ಬೆನ್ನು ಮಾತ್ರ ಕೊನೆಗೆ ಇವರು ತಮ್ಮ ಕರದಲ್ಲಿನ ಪುಸ್ತಕವನ್ನು ಅದಕ್ಕೆಸೆದು ಅಲ್ಲಿಂದ ಮರಹತ್ತಬೇಕು ಎನ್ನುವಷ್ಟರಲ್ಲಿ ಅಲ್ಲಿನ ಕಲ್ಲೆಡವಿ ಮಕಾಡೆ ಬಿದ್ದರು ಹುಲಿ ತಿನ್ನಬೇಕೆಂದರೂ ಈಗ ಕಂಡಿದ್ದು ಬೆನ್ನಷ್ಟೆ ಎರಡು ಸಲ ಘರ್ಜಿಸಿ ಹುಲಿ ಅಲ್ಲಿಂದ ಪಲಾಯನ ಗೈದಿತು. ಈ ನಿದರ್ಶನದಿಂದ ಹುಲಿಯನ್ನು ಕಂಡರೆ ಕಿಲೊಮೀಟರ್ ದೂರ ಓಡುವ ನಮಗೆ ಧೈರ್ಯ ಬರುವ ಪ್ರಶ್ನೆಯೆ ಇಲ್ಲ.

ಒಂದು ವೇಳೆ ಧೈರ್ಯ ಇದ್ದಿದ್ದೆ ನಿಜವಾದರೆ ನಾವು ಹುಲಿ ಕಂಡರೆ ಹೆದರುತ್ತಲೆ ಇರಲಿಲ್ಲ. ಮನುಷ್ಯ ಸಮಯಕ್ಕೆ ತಕ್ಕಂತೆ ಚಾತುರ್ಯತೆ ಬಳಸಿಕೊಳ್ಳಬೇಕು ಜೊತೆಗೆ ಅಲ್ಲಿಂದ ಪಾರಾಗುವ ಬುದ್ದಿಯನ್ನು ಕಲಿಯಬೇಕು. ಮೇಲಿನ ನಿದರ್ಶನದಲ್ಲಿ ಶಾನುಭೋಗನಿಗೆ ಧೈರ್ಯ ಇಲ್ಲದಿದ್ದರೆ ಆತ ಹೆದರಿಕೊಂಡು ಅಲ್ಲೆ ಪ್ರಾಣ ಬಿಡುತಿದ್ದ. ಹನುಮನು ಸಾಗರೊಲ್ಲಂಘನ ಮಾಡಿದ್ದು, ಶ್ರೀರಾಮ ಶಿವಧನಸ್ಸನ್ನು ಮುರಿದಿದ್ದು, ನಚಿಕೇತ ಯಮನನ್ನು ಗೆದ್ದಿದ್ದು ಎಲ್ಲದಕ್ಕೂ ಮೂಲಕಾರಣ ಧೈರ್ಯದ ಹೊರತು ಮತ್ತೇನೂ ಅಲ್ಲ

ಈ ಜಗತ್ತಿನಲ್ಲಿ ಮನಸ್ಸು ಮಾಡಿದರೆ ಏನೆಲ್ಲಾ ಸಾಧಿಸಬಹುದು. ಅದಕ್ಕೆ ಹಿರಿಯರು ಹೇಳಿಲ್ಲವೆ ಧೈರ್ಯಂ ಸರ್ವತ್ರಂ ಸಾಧನಂ ಎಂದು ಎಲ್ಲದಕ್ಕೂ ಧೈರ್ಯವೆ ಮೂಲವೆಂದು. ಇವರಂತೆ ನಾವು ನೀವೆಲ್ಲ ಧೈರ್ಯವಂತರಾಗೋಣ.

ಪದಬಂಧ



ಎಡದಿಂದ ಬಲಕ್ಕೆ:
1. ಆಗ ಮಾಡಿದ ಬಲವಂತ (3)
3. ಕೊನೆ ತನಕ ಇರುವ ಮಗ (3)
6. ಕಾಪಾಡುವವನು (3)
7. ವರಿ ಬೇಡ, ಇದು ಬಳ್ಳಿ ಅಥವಾ ಗೊಂಚಲು (3)
8. ಅಸಲಿಯಲ್ಲದ್ದು, ಆ ಕಡೆಯಿಂದ ತಿರುಗಿ ಬಂದಿದೆ (3)
10. ಜೋಡಿ, ಜೊತೆ (3)
12. ಹಸುವಿನ ಪುಟ್ಟ ಮಗು (2)
13. ಜೀವಿಗಳ ಬೆನ್ನುಮೂಳೆ (3)
14. ಪ್ರಾಣ ತೆಗೆಯಬಲ್ಲ ನಂಜು (2)
15. ಸಮುದ್ರದಲ್ಲಿ ಸಾಗುವ ದೊಡ್ಡ ನಾವೆ (3)
17. ಪತ್ನಿ, ಹೆಂಡತಿ (3)
19. ನಿರೂಪಣೆ ಅಥವಾ ಹೇಳುವಿಕೆ (3)
20. ಕೆಳಕ್ಕೆ ಬೀಳುವಿಕೆ ಅಸ್ತವ್ಯಸ್ತವಾಗಿ ಬಂದಿದೆ (3)
21. ಮತ್ತೊಂದು ಅಳುವಿಕೆ (3)
22. ರಸಭರಿತ ಮಾವಿನ ಹಣ್ಣು (3)

ಮೇಲಿನಿಂದ ಕೆಳಕ್ಕೆ:
1. ಅತಿಥಿಸತ್ಕಾರವನ್ನು ಮಾಡುವವನು (4)
2. ಸಂಪು, ಮುಷ್ಕರ (4)
3. ಇದೊಂದು ನೂಲು ತೆಗೆಯುವ ಉಪಕರಣ (3)
4. ಗ್ರೀಸ್ ದೇಶದವನು (3)
5. ಮಾರ್ಗದರ್ಶನ ಮಾಡು ಎಂದರ್ಥ (4)
9. ಬಾಡು ಅಥವಾ ಕಂದು (3)
11. ಯಮನ ವಾಹನ (3)
12. ಮನೆ ಮುಂತಾದ ಇಮಾರತು (3)
13. ನಮ್ಮ ರಾಜ್ಯದ ಭಾಷೆ (3)
14. ದೇವತೆಗಳ ಶಿಲ್ಪಿ (4)
15. ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಹೋಗುವುದು (4)
16. ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
17. ಲಿಖಿತವಾಗಿ ಸಲ್ಲಿಸಿದ ಬೇಡಿಕೆ (3)
18. ಸೂರ್ಯನ ಮತ್ತೊಂದು ಹೆಸರು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ವಿದ್ವಾಂಸ 2. ಸಲ್ಲಾಪ 6. ತಕರಾರು 8. ವರಮಾನ 10. ತಯಾರಿ 12. ಪ್ರತಾಪ 13. ಉದರ 14. ಮಕರ 16. ಅನನ್ವಯ 17. ದಿನಕರ 19. ತಣ್ಣೀರು 20. ಕಹಳೆ

ಮೇಲಿನಿಂದ ಕೆಳಕ್ಕೆ: 1. ವಿನೀತ 3. ಪಚನ 4. ಮಾರುತ 5. ಕುವರಿ 7. ಕರತಾಡನ 9. ಮಾರ್ಗದರ್ಶಕ 11. ಯಾತ್ರಿಕ 14. ಮಯಣ 15. ರದಿಸು 16. ಅನಂತ 18. ರಗಳೆ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಗಾಂಧಿಗಳ ಬೀಗರು ಬಚ್ಚನ್

ಗಾಂಧಿ ಮನೆತನ ಮತ್ತು ಬಚ್ಚನ್ ಮನೆತನದ ಬಗ್ಗೆ ಭಾರತದಲ್ಲಿ ಯಾರಿಗೆ ಗೊತ್ತಿಲ್ಲ ಹೇಳಿ? ಒದು ಮನೆತನ ಭಾರತವನ್ನು ಆಳಿದ್ದರೆ, ಬಚ್ಚನ್ ಮನೆತನದ ಅಮಿತಾಭ್ ಬಚ್ಚನ್ ಹಿಂದಿ ಸಿನಿಮಾ ರಂಗವನ್ನು ಆಳಿದವರು. ಇಂದು ಗಾಂಧಿ ಮತ್ತು ಬಚ್ಚನ್ ಮನೆತನಕ್ಕೆ ಅಷ್ಟೊಂದು ಬಾಂಧವ್ಯ ಇರದಿದ್ದರೂ, ಸೋನಿಯಾ ಗಾಂಧಿ ಒಂದು ರೀತಿಯಲ್ಲಿ ಬಚ್ಚನ್ ಅವರ ಮನೆಮಗಳು. ಹೇಗೆ ಗೊತ್ತಾ? ಅಮಿತಾಭ್ ಬಚ್ಚನ್ ಮತ್ತು ರಾಜೀವ್ ಗಾಂಧಿ ಅನನ್ಯ ಸ್ನೇಹಿತರು. ರಾಜೀವ್ ಗಾಂಧಿ ಅವರಿಗೆ ಸೋನಿಯಾ ಗಾಂಧಿ ಮೇಲೆ ಪ್ರೀತಿಯಾಗಿ, ಅವರನ್ನು ಇಂಗ್ಲೆಂಡ್‌ನಿಂದ ಭಾರತಕ್ಕೆ ಕರೆದುಕೊಂಡು ಬಂದಮೇಲೆ, ಸೋನಿಯಾ ಜತೆ ರಾಜೀವ್‌ರನ್ನು ವಿವಾಹ ಮಾಡಲು ಇಂದಿರಾ ಗಾಂಧಿ ಒಪ್ಪುತ್ತಾರೆ. ಆಗ, ಸೋನಿಯಾ ಅವರು ಪರ ದೇಶದವರು, ಭಾರತದಲ್ಲಿ ಮನೆಯೇನೂ ಇರಲಿಲ್ಲ. ಆದರೆ, ಹೆಣ್ಣಿನ ಮನೆಯ ಸಂಪ್ರದಾಯಗಳನ್ನು ಮಾಡಲು ಮನೆ ಬೇಕಿತ್ತಲ್ಲ. ಆ ಮನೆಯನ್ನು ಕೊಟ್ಟವರೇ ಬಚ್ಚನ್ ಕುಟುಂಬ, ಸೋನಿಯಾ ಮತ್ತವರ ಸಂಬಂಧಿಕರನ್ನು ಮನೆಯಲ್ಲಿ ಇರಿಸಿಕೊಂಡು, ಮದುವೆಯ ಎಲ್ಲ ವಿಧಿವಿಧಾನಗಳನ್ನು ಮಾಡಿ. ಬಚ್ಚನ್ ಅವರ ಮನೆಯ ಮಗಳೆ ಎನ್ನುವ ರೀತಿಯಲ್ಲಿ ಮದುವೆಗೆ ಮನೆಯನ್ನು ಸಿಂಗರಿಸಿದ್ದರು.

ಪುಸ್ತಕ ಲೋಕ

ಜಗತ್ತಿನ ಭೀಕರ ಯುದ್ಧಗಳು

ಜಗತ್ತಿನ ಭೀಕರ ಯುದ್ಧಗಳು ಕೃತಿಯು ಎಂ. ವೆಂಕಟಸ್ವಾಮಿ ಅವರ ಇತಿಹಾಸ ಗ್ರಂಥವಾಗಿದೆ. ಇಲ್ಲಿ ಬಡವರು ಹಾಗೂ ಕಾರ್ಮಿಕ ಕುರಿತ ಕಥನಗಳಿವೆ. ಜಗತ್ತನ್ನು ಬಡವರು ಮತ್ತು ಕೂಲಿ ಕಾರ್ಮಿಕರು ಹೇಗೆ ಕಟ್ಟಿದರು ಮತ್ತು ಕಟ್ಟುತ್ತಿದ್ದಾರೆ ಎಂಬುವುದನ್ನು ಇಲ್ಲಿ ವಿವರಿಸಲಾಗಿದೆ. ಹೊಟ್ಟೆಗೆ ಅನ್ನ, ಉಡಲು ಬಟ್ಟೆ, ಮಲಗಲು ವಸತಿ ಇಲ್ಲದೆ ದುಡಿದು ಜಗತ್ತನ್ನು ಕಟ್ಟಿದವರು ಬಡವರು ಮತ್ತು ಕಾರ್ಮಿಕರು. ಪಿರಮಿಡ್ ಇಂದ ಹಿಡಿದು ಯಾವುದೇ ನಾಗರಿಕ ತೊಟ್ಟಿಲುಗಳನ್ನು ಕಟ್ಟಿ ಬೆಳೆಸಿದವರು ಬಡವರು, ಕಾರ್ಮಿಕರು, ರೈತರು ಮತ್ತು ಮಹಿಳೆಯರು, ಜೊತೆಗೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಮೂಕಪ್ರಾಣಿಗಳು, ಜಗತ್ತಿನಲ್ಲಿ ಮುಂದೆಯೂ ಈ ತಾರತಮ್ಯ ಹೀಗೆ ಮುಂದುವರಿಯುತ್ತದೆ. ಅಲ್ಲೊಬ್ಬರು ಇಲ್ಲೊಬ್ಬರು ಮಹನೀಯರು ಹುಟ್ಟಿ ಬಂದು ಈ ಅಸಮಾನತೆಯ ಸಮಾಜದ ವಿರುದ್ಧ ಹೋರಾಡಿ ಪ್ರಾಣ ಕಳೆದುಕೊಂಡರೆ ವಿನಹಃ ಈ ಜಗತ್ತು ಮಾತ್ರ ಬದಲಾಗಲೇ ಇಲ್ಲ ಎಂಬುವುದನ್ನು ತಿಳಿಸಿದ್ದಾರೆ.

ಮುಸ್ಸಂಜೆಯಲ್ಲಿ ಕಾಡುವ ನೆನಪುಗಳು

• ವಿದ್ಯಾ ಶಂಕರ ಶರ್ಮ

ದಿನದ ಬೇರೆ ಬೇರೆ ಸಮಯಗಳು ನಮ್ಮ ಮೇಲೆ ಬೇರೆ ಬೇರೆ ರೀತಿಯ ಪರಿಣಾಮ ಬೀರುತ್ತವೆ. ಆದರೆ ಮುಸ್ಸಂಜೆಯ ಸಮಯ ನಮ್ಮನ್ನು ಕಾಡುವಷ್ಟು ದಿನದ ಬೇರೆ ಯಾವ ಸಮಯವೂ ಕಾಡುವುದಿಲ್ಲ. ನೆನಪುಗಳು ಮನದ ಗೂಡನ್ನು ಹೊಕ್ಕಿ ನಮ್ಮನ್ನು ಭಾವನೆಗಳ ತೂಗುಯ್ಯಾಲೆಯಲ್ಲಿ ಆಡಿಸುತ್ತದೆ. ಏಕಾಂತ ಮತ್ತು ಮುಸ್ಸಂಜೆ ಒಂದಕ್ಕೊಂದು ಸಂಗಾತಿಗಳಂತೆ ಭಾಸವಾಗುತ್ತವೆ. ಆದರಿಲ್ಲಿ ಒಂದು ವಿಶೇಷವಿದೆ. ಆ ಸಂಜೆಯ ಸಮಯದಲ್ಲಿ ಸಿಹಿ ನೆನಪುಗಳಿಗಿಂತ ಕಹಿ ನೆನಪುಗಳು ನಮ್ಮನ್ನು ಗಾಢವಾಗಿ ಕಾಡುತ್ತವೆ. ಹಿಂದೆ ನೆಡೆದ ಯಾವುದೋ ಅಹಿತಕರ ಘಟನೆ, ದುಃಖಮಯ ಸನ್ನಿವೇಶ ಹೀಗೆ ಒಂದು ವಿಷಣ್ಣ ಅನುಭವಕ್ಕೆ ನಮ್ಮನ್ನು ನೂಕುತ್ತದೆ. ಹಗಲು ಮುಗಿದು ರಾತ್ರಿಯ ಆರಂಭದ ಈ ಮೂಹೂರ್ತ ಹೃದಯವನ್ನು ಕಲಕುತ್ತ ಕಾಲದ ಗಡಿಯಾರವನ್ನು ಹಿಂದೆ ತಿರುಗಿಸಿಬಿಡುವ ಕೀಲಿ ಕೈ. ಹಾಗೆ ಸುಮ್ಮನೆ ಕುಳಿತು ಎದೆ ಭಾರ ಇಳಿಯುವಂತೆ, ಕಣ್ಣ ನೀರು ಕರಗುವಂತೆ ನಮ್ಮನ್ನು ತೆರೆದುಕೊಳ್ಳುವ ಮನಸ್ಸಾಗುತ್ತದೆ. ಮೌನದಲ್ಲಿ ಮನವ ಕಾಯಿಸಿ ಭಟ್ಟಿ ಇಳಿಸುವ ಹುನ್ನಾರವೂ ಇದೆ. ಅವಕಾಶ ಸಿಕ್ಕಿದರೆ ಸಮಯವನ್ನು ಹಿಂದೆ ತಳ್ಳಿ ಆಗಿರುವ ತಪ್ಪುಗಳನ್ನು ತಿದ್ದುವ ಹುಚ್ಚು ಭ್ರಾಂತಿಯೂ ಸಂಜೆಯ ಮುಸುಕಿನಲ್ಲಿ ನಮ್ಮನ್ನು ಆವರಿಸಿಕೊಳ್ಳುತ್ತದೆ. ಬಾಲ್ಯದ ಮುಸ್ಸಂಜೆ ದಿನಗಳಲ್ಲಿ ದೇವರ ಪೀಠದ ಎದುರು ಕುಳಿತು ಅಜ್ಜ ಹೇಳಿಕೊಟ್ಟ ಬಾಯಿಪಾಠ (ದೇವರ ಸ್ತೋತ್ರ ಪಠನ) ದ ಸವಿನೆನಪು ಕೂಡ ಮುಸ್ಸಂಜೆಯಲ್ಲಿಯೇ ಕಾಡುವುದು.

ಪ್ರಕೃತಿಯ ಎಲ್ಲ ಬದಲಾವಣೆಗಳೂ ನಮ್ಮನ್ನು ಒಂದಲ್ಲ ಒಂದು ವಿಧದಲ್ಲಿ ತಟ್ಟುತ್ತವೆ. ಸ್ವಚ್ಛ ಬಿಸಿಲು ಇಣುಕಿದ ದಿನ ನಾವು ಸಹಜವಾಗಿ ಉಲ್ಲಾಸಗೊಂಡಿರುತ್ತೇವೆ. ಅದೇ ಮೋಡವು ಆವರಿಸಿದ ದಿನ ನಮಗೆ ಗೊತ್ತಿಲ್ಲದ ಹಾಗೆ ಒಂದು ವಿಷಾದದ ಛಾಯೆಯೊಳಗೆ ಹೊಕ್ಕಿಬಿಡುತ್ತೇವೆ. ಸೋನೆ ಮಳೆ ಮನಕ್ಕೆ ಮುದ ನೀಡುವ ಅನುಭವ ಹಿತಕರ. ಆದರೆ ಇವೆಲ್ಲವನ್ನೂ ಮೀರಿದ ವಿಲಕ್ಷಣ ಅನುಭೂತಿ ನೀಡುವುದು ಮುಸ್ಸಂಜೆ ಮಾತ್ರವೇ. ನಮ್ಮ ಇಡೀ ಬದುಕಿನಲ್ಲಿ ಈ ವರೆಗೆ ಸಾಗಿ ಬಂದ ದಾರಿಯ ಒಂದು ಸಂಪೂರ್ಣ ಸಿಂಹಾವಲೋಕವನ್ನೇ ಒಂದು ಸಂಜೆಯ ಸಮಯದಲ್ಲಿ ಮಾಡಿಬಿಡುತ್ತೇವೆ. ಹೃದಯಕ್ಕೆ ಹತ್ತಿರವಾದವರ, ನಮ್ಮನ್ನು ನೆನಪಿಗೆ ಆಪ್ತವಾಗಿರುವವರ ಬಗೆಗೆ ಯೋಚಿಸುತ್ತ ಕಳೆಯುವ ಲೆಕ್ಕವಿಲ್ಲದಷ್ಟು ಸಂಜೆಗಳು ಈ ಬದುಕೆಂಬ ಯಂತ್ರವನ್ನು ಸಹನೀಯವಾ ಗಿಸುತ್ತವೆ. ಭಾವುಕರಾಗುವುದು ಮನುಷ್ಯನ ದೌರ್ಬಲ್ಯ ಎಂಬುದು ತತ್ವಜ್ಞಾನದ ಮಾತಾದರೂ, ಈ ಸೃಷ್ಟಿಯ ಮಾಯೆಯ ನಾಟಕದ ಪಾತ್ರಧಾರಿಗಳಾಗಿ ನಾವು ನಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕಲ್ಲವೇ?

ಮೆಲುಕು

• ಚೇತನ ಭಾರ್ಗವ

ಗತಿಸಿದ ಘಟನೆಯ ನೆನಪಿನ ಮೆಲುಕು
ಮನವನು ಮಾಡುವುದು ಚುರುಕು।
ವರ್ತಮಾನವ ಅರಿತು ಹೆಜ್ಜೆ ಹಾಕು
ನಂಬಿಕೆಯ ಮೇಲೆ ನಿಂತಿರುವುದು ಬದುಕು ॥

ಎಡವಿಬಿದ್ದಾಗ ಅಪಹಾಸ್ಯ ಮಾಡಿದವರು
ಕಷ್ಟದ ಸಮಯದಿ ಕೈ ಹಿಡಿದವರು ।
ಸಾಧನೆಗೈಯಲು ಹುರಿದುಂಬಿಸಿದವರು
ಪ್ರೀತಿ ಅಕ್ಕರೆ ಕಾಳಜಿ ತೋರಿದವರು ॥

ಮೆಲುಕು ಹಾಕಿದಾಗ ನೆನಪಾಗುವರು
ಮಹಾನುಭಾವರು
ನೋವು ನಲಿವಿಗೆ ಕಾರಣರು ಹಲವರು ।
ಹಚ್ಚ ಹಸಿರು ಬಾಲ್ಯದ ಸವಿ ನೆನಪು
ಆಟ ಪಾಠ ತುಂಟಾಟಗಳ ಹೊಳಪು ॥

ಅಮ್ಮನ ಸೆರಗಿನ ಹಿಂದೆ ಸುತ್ತುತ್ತಿದ್ದ ಪರಿ
ಅಪ್ಪ ಗದರಿದೊಡನೆ ಹುಡುಕುತ್ತಿದ್ದ ದಾರಿ।
ಸಹೋದರ ಸಹೋದರಿಯರ ಜೊತೆಗಿನ ಕಾದಾಟ
ಗೆಳೆಯ ಗೆಳತಿಯರೊಂದಿಗಿನ ನಲ್ಮೆಯ ಒಡನಾಟ ॥

ಹರೆಯದ ದಿನಗಳಲ್ಲಿ ಮೂಡುತ್ತಿದ್ದ ಭಾವನೆ
ಕಂಗಳಲ್ಲಿ ಕಾಣುತ್ತಿದ್ದ ಸುಂದರ ಕಲ್ಪನೆ ।
ಹೇಳಲಾಗದೆ ಉಳಿದ ಅದೆಷ್ಟೋ ವೇದನೆ
ನೆನಪುಗಳೇ ಇಲ್ಲದ ಬದುಕೇಕೆ ಸುಮ್ಮನೆ ॥

ಹುಡುಗಾಟದಲ್ಲೇ ಮುಗಿಸಿದ ವಿದ್ಯಾಭ್ಯಾಸವು
ಉದ್ಯೋಗಕ್ಕಾಗಿ ಶುರುವಾದ ಅಲೆದಾಟವು ।
ಯವ್ವನದ ಕಾಲದಲಿ ಮದುವೆಯು
ನಂತರ ಮಕ್ಕಳ ಲಾಲನೆ ಪಾಲನೆಯು ॥

ಹೀಗೆ ಹಲವು ಜೀವನದ ಮೆಲಕು
ನೆನಪುಗಳೇ ಕಾರಣವೂ ಎಲ್ಲದಕ್ಕೂ ।
ಜೀವನದ ಕಹಿ ನೆನಪುಗಳ ಕೆದಕದಿರಿ
ಆಪತ್ಬಾಂಧವರನ್ನು ಎಂದೂ ಮರೆಯದಿರಿ॥

ಸಮಾಚಾರ ಸಣ್ಣದಲ್ಲ

ಕ್ರಿಸ್ಟಿಯನ್, ಲೊಮ್ನಾ ಸ್ನೂಕರ್ ಫೈನಲ್‌ಗೆ

ಬೆಂಗಳೂರು: ಜರ್ಮನಿಯ ಕ್ರಿಸ್ಟಿಯನ್ ರಿಕ್ಟರ್ ಮತ್ತು ಥಾಯ್ಲೆಂಡ್‌ನ ಲೊಮ್ನಾ ಇಸ್ಸಾರಂಗ್ಕುನ್ ಅವರು ಸೋಮವಾರ ತಮ್ಮ ಎದುರಾಳಿಗಳ ವಿರುದ್ಧ ಸುಲಭ ಗೆಲುವಿನೊಡನೆ ಐಬಿಎಸ್‌ಎಫ್ ವಿಶ್ವ 17 ವರ್ಷದೊಳಗಿನವರ ಸ್ನೂಕರ್ ಚಾಂಪಿಯನ್‌ಷಿಪ್‌ನ ಫೈನಲ್ ತಲುಪಿದರು. ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ನಡೆಯುತ್ತಿರುವ ಈ ಚಾಂಪಿಯನ್ ಷಿಪ್‌ನ ಸೆಮಿಫೈನಲ್‌ನಲ್ಲಿ ರಿಕ್ಟರ್ 4-2 ರಿಂದ (66 (60)-11, 4-101 (101), 80 (46)-21, 31-72, 75-40, 68-55) ವೇಲ್ಸ್‌ನ ರೀಲಿ ಪಾವೆಲ್ ಅವರನ್ನು ಸೋಲಿಸಿದರು. ಇನ್ನೊಂದು ಸೆಮಿಫೈನಲ್ ನಲ್ಲಿ ಲೊಮ್ನಾ ಕೂಡ 4-2 ಅಂತರದಿಂದ (58-27, 30-67, 102 (87)-16, 86 (57)-32, 34-68, 54-34) ಪೋಲೆಂಡ್ನ ಮಿಚಲ್ ಝುಬರ್ಝಿಕ್ ಅವರನ್ನು ಪರಾಭವಗೊಳಿಸಿದರು. ರಿಕ್ಟರ್ ಆಟದಲ್ಲಿ ಕಡಿಮೆ ತಪ್ಪುಗಳಿದ್ದವು. ದೊಡ್ಡ ಬ್ರೇಕ್‌ಗಳೊಂದಿಗೆ ಅವರು ಉತ್ತಮ ಲಯದಲ್ಲೂ ಇದ್ದರು. ಟೇಬಲ್‌ನಲ್ಲಿ ಅವರ ಆ್ಯಂಗಲ್‌ಗಳೂ ಆಸಕ್ತಿದಾಯಕವಾಗಿದ್ದವು. ಕ್ವಾರ್ಟರ್‌ಫೈನಲ್ಸ್ ಫಲಿತಾಂಶ: ಜರ್ಮನಿಯ ರಿಕ್ಟರ್‌ಗೆ 3-0 ಯಿಂದ ಭಾರತದ ಜಬೇಝ್ ನವೀನ್ ಕುಮಾರ್ ವಿರುದ್ಧ ಜಯ, ಪಾವೆಲ್‌ಗೆ 3-1 ರಿಂದ ಹಾಂಗ್ಕಾಂಗ್‌ನ ಸ್ಕಿ ಚಾನ್ ವಿರುದ್ಧ ಗೆಲುವು, ಝುಬರ್ಝಿಕ್ ಅವರಿಗೆ 3-1 ರಿಂದ ಝಿಯಾದ್ ಅಲ್ಲಾಬ್ಬಾನಿ (ಸೌದಿ ಅರೇಬಿಯಾ) ವಿರುದ್ಧ ಜಯ, ಇಸ್ಸಾರಂಗ್ಕುನ್ ಅವರಿಗೆ 3-1 ರಿಂದ ಫರ್ಹಾಮ್ ಕಝೆಮಿಮೊಗದ್ದಾಮ್ (ಇರಾನ್) ವಿರುದ್ಧ ಗೆಲುವು. ಮಹಿಳೆಯರ 21 ವರ್ಷದೊಳಗಿನವರ ವಿಭಾಗದ ಪಂದ್ಯಗಳಲ್ಲಿ ಭಾರತದ ಆರ್.ಟಿ.ಮೋಹಿತಾ 2-1 ರಿಂದ ಜಿಯಾ ಸೆಹಗಲ್ ವಿರುದ್ಧ, ನತಾಶಾ ಚೇತನ್ 2-0 ಯಿಂದ ಸೌದಿ ಅರೇಬಿಯಾದ ನೂತ್ ಅಲ್ಲಾಲವಿ ವಿರುದ್ಧ, ಇರಾನ್‌ನ ಸೆತಾಯೇಶ್ ಅಮಿರ್ಝಿಮಿ 2-1 ರಿಂದ ಭಾರತದ ಸಮೀಕ್ಷಾ ದೇವನ್ ವಿರುದ್ಧ ಜಯಗಳಿಸಿದರು.

ಪಾಕ್: ದೇಶಿ ಟೂರ್ನಿಗೆ ಮೆಂಟರ್ ಪ್ರಕಟ

ಲಾಹೋರ್: ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ) ಚಾಂಪಿಯನ್ಸ್ ಕಪ್ ದೇಶಿ ಟೂರ್ನಿಯಲ್ಲಿ ಆಡಲಿರುವ ಐದು ತಂಡಗಳಿಗೆ ಮಾಜಿ ಘಟಾನುಘಟಿ ಆಟಗಾರರನ್ನು ಮೆಂಟರ್‌ಗಳಾಗಿ ಹೆಸರಿಸಿದೆ. ಅದರಲ್ಲಿ ಮಿಸ್ಬಾ-ಉಲ್-ಹಕ್, ಸಕ್ಲೇನ್ ಮುಷ್ತಾಕ್, ಸರ್ಫರಾಜ್ ಅಹ್ಮದ್, ಶೋಯೆಬ್ ಮಲಿಕ್ ಮತ್ತು ವಕಾರ್ ಯೂನಿಸ್ ಅವರನ್ನು ಆಯ್ಕೆ ಮಾಡಿದೆ. ಪಾರದರ್ಶನ ಮತ್ತು ವ್ಯವಸ್ಥಿತ ನೇಮಕಾತಿ ಪ್ರಕ್ರಿಯೆ ಮೂಲಕ ಅವರನ್ನು ನೇಮಕ ಮಾಡಲಾಗಿದ್ದು, ಮೂರು ವರ್ಷಗಳ ಒಪ್ಪಂದ ಮಾಡಲಾಗಿದೆ ಎಂದು ಪಿಸಿಬಿ ಹೇಳಿಕೆ ತಿಳಿಸಿದೆ. ವಕಾರ್ ಇತ್ತೀಚೆಗಷ್ಟೇ ಪಿಸಿಬಿಗೆ ಕ್ರಿಕೆಟ್ ವ್ಯವಹಾರಗಳ ಸಲಹೆಗಾರರಾಗಿ ಕೆಲಸ ಮಾಡಿದ್ದರು.

25 ನೇ ಗ್ರ್ಯಾನ್‌ಸ್ಲ್ಯಾಮ್‌ನತ್ತ ನೋಟ | 78 ನೇ ಜಯ ಕಂಡ ನೊವಾಕ್

ಅಮೆರಿಕ ಓಪನ್ಸ್ ಟೆನ್ನಿಸ್: ಜೊಕೊವಿಚ್ ಶುಭಾರಂಭ

ನ್ಯೂಯಾರ್ಕ್: ಅಮೆರಿಕ ಓಪನ್ ಗ್ರ್ಯಾನ್‌ಸ್ಲ್ಯಾಮ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಹಾಲಿ ಚಾಂಪಿಯನ್, ಸರ್ಬಿಯಾದ ನೊವಾಕ್ ಜೊಕೊವಿಚ್, ಗೆಲುವಿನೊಂದಿಗೆ ಶುಭಾರಂಭ ಮಾಡಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ 25ನೇ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿ ಎದುರು ನೋಡುತ್ತಿರುವ ಎರಡನೇ ಶ್ರೇಯಾಂಕಿತರಾಗಿರುವ ಜೊಕೊವಿಚ್, ಮೊದಲ ಸುತ್ತಿನಲ್ಲಿ ಮಾಲ್ಡೋವಾದ ರಾಡು ಅಲ್ಬೋಟ್ ವಿರುದ್ಧ 6-2, 6-2, 6-4ರ ಅಂತರದಲ್ಲಿ ಸುಲಭ ಗೆಲುವು ದಾಖಲಿಸಿದರು. ಆ ಮೂಲಕ ಅರ್ಥರ್ ಆ್ಯಷ್ ಸ್ಟೇಡಿಯಂನಲ್ಲಿ ದಿಗ್ಗಜ ರೋಜರ್ ಫೆಡರರ್ ದಾಖಲೆ ಮುರಿದಿರುವ ಜೊಕೊವಿಚ್, ದಾಖಲೆಯ 78ನೇ ಜಯ ಗಳಿಸಿದರು. ಮೊದಲ ದಿನ 74,641ಕ್ಕೂ ಅಧಿಕ ಅಭಿಮಾನಿಗಳು ಪಂದ್ಯ ವೀಕ್ಷಿಸಿದ್ದಾರೆ ಎಂದು ಅಮೆರಿಕ ಟೆನಿಸ್ ಸಂಸ್ಥೆ ತಿಳಿಸಿದೆ. ಆಕ್ರಮಣಕಾರಿ ಆಟವಾಡಿದ ಜೊಕೊವಿಚ್, 'ಇಲ್ಲಿ ರಾತ್ರಿ ಆಡುವುದೇ ವಿಶ್ವದಲ್ಲೇ ಅತ್ಯುತ್ತಮ' ಎಂದು ಬಣ್ಣಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿ ಬರ ಎದುರಿಸುತ್ತಿರುವ ಜೊಕೊವಿಚ್, ಮೊದಲ ಕಿರೀಟ ಎದುರು ನೋಡುತ್ತಿದ್ದಾರೆ. ಅಲ್ಲದೆ ಐದು ಬಾರಿ ಅಮೆರಿಕ ಓಪನ್ ಗೆದ್ದಿರುವ ಫೆಡರರ್ ದಾಖಲೆ ಸರಿಗಟ್ಟುವ ಇರಾದೆಯಲ್ಲಿದ್ದಾರೆ. ಇತ್ತೀಚೆಗಷ್ಟೇ ಪ್ಯಾರಿಸ್ ಒಲಿಂಪಿಕ್ಸ್ ಟೆನಿಸ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸ್ಪೇನ್‌ನ ಪ್ರತಿಭಾನ್ವಿತ ಕಾರ್ಲೋಸ್ ಅಲ್ಕರಾಜ್ ಅವರನ್ನು ಮಣಿಸಿದ್ದ ಜೊಕೊವಿಚ್, ಚಿನ್ನದ ಪದಕ ಜಯಿಸಿದ್ದರು. ಆ ಮೂಲಕ ವೃತ್ತಿ ಜೀವನದಲ್ಲಿ ಗೋಲ್ಡನ್ ಸ್ಲಾಮ್ ಸಾಧನೆ ಮಾಡಿದ್ದರು.

ಝೆಂಗ್ ಎರಡನೇ ಸುತ್ತಿಗೆ

ನ್ಯೂಯಾರ್ಕ್: ಹಿನ್ನಡೆಯಿಂದ ಚೇತರಿಸಿದ ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್ ಝೆಂಗ್ ಕಿನ್ವೆನ್ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು.ಸೋಮವಾರ ನಡೆದ ಪಂದ್ಯದಲ್ಲಿ ಚೀನಾದ ಆಟಗಾರ್ತಿ ಝೆಂಗ್ 4-6, 6-4, 6-2ರಿಂದ ಅಮೆರಿಕದ ಅಮಂಡಾ ಅನಿಸಿಮೊವಾ ಅವರನ್ನು ಸೋಲಿಸಿದರು. ಏಳನೇ ಶ್ರೇಯಾಂಕದ ಝೆಂಗ್, ಎರಡನೇ ಸುತ್ತಿನಲ್ಲಿ ರಷ್ಯಾದ ಎರಿಕಾ ಆಂಡ್ರೀವಾ ಅವರನ್ನು ಎದುರಿಸಲಿದ್ದಾರೆ. ಆಂಡ್ರೀವಾ ಇನ್ನೊಂದು ಪಂದ್ಯದಲ್ಲಿ 6-3, 7-6 (9-7) ರಿಂದ ಚೀನಾದ ಯುವಾನ್ ಯೂ ಅವರನ್ನು ಹಿಮ್ಮೆಟ್ಟಿಸಿದರು. ಚೀನಾದ ವಾಂಗ್ ಯಫಾನ್ ಮೊದಲ ಸೆಟ್‌ಅನ್ನು 6-2 ರಿಂದ ಗೆದ್ದ ಮೇಲೆ ಅವರ ಎದುರಾಳಿ, ಒಂಬತ್ತನೇ ಶ್ರೇಯಾಂಕದ ಮರಿಯಾ ಸಕ್ಕರಿ (ಗ್ರೀಸ್) ಪಂದ್ಯದಿಂದ ನಿವೃತ್ತರಾದರು.

ಭಾರತದ ನಗಾಲ್ ಹೊರಕ್ಕೆ

ನ್ಯೂಯಾರ್ಕ್: ಅಮೆರಿಕ ಓಪನ್ ಗ್ರ್ಯಾನ್‌ಸ್ಲ್ಯಾಮ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೋಲು ಕಂಡಿರುವ ಭಾರತದ ಸುಮಿತ್ ನಗಾಲ್ ನಿರ್ಗಮಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ನಗಾಲ್ ಅವರು ನೆದರ್ಲೆಂಡ್ಸ್‌ನ ಟ್ಯಾಲನ್ ಗ್ರೀಕ್ಸ್‌ಪೂರ್ ವಿರುದ್ಧ 1-6 3-6 6-7(8)ರ ಅಂತರದಲ್ಲಿ ಸೋಲು ಕಂಡರು. ಎರಡು ತಾಸು 20 ನಿಮಿಷಗಳವರೆಗೆ ಸಾಗಿದ ಹೋರಾಟದ ಅಂತಿಮದಲ್ಲಿ ಡಚ್ ಆಟಗಾರ ಮೇಲುಗೈ ಸಾಧಿಸಿದರು. ವರ್ಷದ ಕೊನೆಯ ಗ್ರ್ಯಾನ್‌ಸ್ಲ್ಯಾಮ್ ಟೂರ್ನಿಯಾದ ಅಮೆರಿಕ ಓಪನ್ ಪುರುಷ ಡಬಲ್ಸ್ ವಿಭಾಗದಲ್ಲೂ ನಗಾಲ್ ಸ್ಪರ್ಧಿಸುತ್ತಿದ್ದಾರೆ. ಆಸ್ಟ್ರೇಲಿಯನ್ ಓಪನ್‌ನಲ್ಲಿ ಪ್ರಧಾನ ಸುತ್ತಿಗೆ ಪ್ರವೇಶಿಸಿದ್ದ ನಗಾಲ್, ಈ ವರ್ಷ ಎಲ್ಲ ನಾಲ್ಕು ಗ್ರ್ಯಾನ್‌ಸ್ಲ್ಯಾಮ್‌ಗಳಲ್ಲಿ ಸ್ಪರ್ಧಿಸುವ ಮೂಲಕ 73ನೇ ರ್‍ಯಾಂಕ್ ಗಳಿಸಿದ್ದಾರೆ. ಅಮೆರಿಕ ಓಪನ್ ಪುರುಷರ ಡಬಲ್ಸ್ ವಿಭಾಗದಲ್ಲಿ ರೋಹನ್ ಬೋಪಣ್ಣ, ಯೂಕಿ ಭಾಂಬ್ರಿ, ಎನ್. ಶ್ರೀರಾಮ್ ಬಾಲಾಜಿ ಸಹ ತಮ್ಮ ತಮ್ಮ ಜೊತೆಗಾರರೊಂದಿಗೆ ಕಣಕ್ಕಿಳಿಯಲಿದ್ದಾರೆ.

ಬಿಸಿಸಿಐ ಕಾರ್ಯದರ್ಶಿ ಸ್ಥಾನಕ್ಕೆ ರೋಹನ್ ಜೇಟ್ಲಿ?

ದೆಹಲಿ: ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಮುಂದಿನ ಅಧ್ಯಕ್ಷರಾಗಿ ಜಯ್ ಶಾ ಅವರು ನೇಮಕವಾಗುವುದು ಬಹುತೇಕ ಖಚಿತವಾಗಿದೆ. ಇದರ ಬೆನ್ನಲ್ಲೇ ಬಿಸಿಸಿಐಯ ಮುಂದಿನ ಕಾರ್ಯದರ್ಶಿ ಯಾರಾಗಲಿದ್ದಾರೆ ಎಂಬ ಚರ್ಚೆ ಆರಂಭವಾಗಿದೆ. ಕೆಲ ದಿನಗಳ ಹಿಂದೆ ಹಾಲಿ ಉಪಾಧ್ಯಕ್ಷ ರಾಜೀವ್ ಶುಕ್ಲಾ, ಮಹಾರಾಷ್ಟ್ರ ಬಿಜೆಪಿ ಹೆವಿವೇಟ್ ಆಶಿಶ್ ಶೇಲಾರ್, ಐಪಿಎಲ್ ಅಧ್ಯಕ್ಷರಾಗಿರುವ ಅರುಣ್ ಧುಮಾಲ್ ಹೆಸರು ಕೇಳಿ ಬಂದಿತ್ತು. ಇದೀಗ ಮತ್ತೊಂದು ಹೆಸರು ಕೇಳಿ ಬಂದಿದೆ. ಅವರೆಂದರೆ ಮಾಜಿ ಕೇಂದ್ರ ಸಚಿವ ಅರುಣ್ ಜೇಟ್ಲಿ ಪುತ್ರ ರೋಹನ್ ಜೇಟ್ಲಿ.

ವರದಿಗಳ ಪ್ರಕಾರ ರೋಹನ್ ಜೇಟ್ಲಿ ಬಿಸಿಸಿಐ ಕಾರ್ಯದರ್ಶಿ ಸ್ಥಾನಕ್ಕೇರುವ ಸಾಧ್ಯತೆಯಿದೆ ಎನ್ನಲಾಗಿದೆ. ಸದ್ಯ ರೋಹನ್ ದಿಲ್ಲಿ ಡಿಸ್ಟ್ರಿಕ್ಟ್ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಹೊಸ ಐಸಿಸಿ ಅಧ್ಯಕ್ಷರು ಡಿಸೆಂಬರ್ 1 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅಧ್ಯಕ್ಷ ಹುದ್ದೆಗೆ ನಾಮನಿರ್ದೇಶನವನ್ನು ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ 27 ಆಗಿದೆ. ಜಯ್ ಶಾ ಸದ್ಯಕ್ಕೆ ನಾಮಪತ್ರ ಸಲ್ಲಿಸಿಲ್ಲ.

ಐಸಿಸಿ ಹಾಲಿ ಅಧ್ಯಕ್ಷರಾಗಿರುವ ಗ್ರೆಗ್ ಬಾರ್ಕ್ಲೇ ಮೂರನೇ ಅವಧಿಗೆ ಮುಂದುವರಿಯುವುದಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಹೀಗಾಗಿ ಜಯ್ ಶಾ ಈ ಸ್ಥಾನಕ್ಕೆ ಸ್ಪರ್ಧೆ ಮಾಡಲಿದ್ದಾರೆ ಎನ್ನಲಾಗಿದೆ. ಅಧಿಕೃತ ಮಾಹಿತಿ ಇನ್ನಷ್ಟೇ ಬರಬೇಕಿದೆ. ಐಸಿಸಿ ಬೋರ್ಡ್‌ನಲ್ಲಿರುವ 16 ಸದಸ್ಯರಲ್ಲಿ 15 ಸದಸ್ಯರ ಬೆಂಬಲವನ್ನು ಶಾ ಹೊಂದಿರಬೇಕು. ಈ ಹಿಂದೆಯೂ ಹಲವು ಬಾರಿ ಜಯ್ ಶಾ ಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿದ್ದಾರೆ ಎಂದು ಹೇಳಲಾಗಿತ್ತು.

ಸಿರಾಜ್, ಜಡೇಜಾ ಹೊರಗೆ | ಗಿಲ್, ಅಯ್ಯರ್, ಈಶ್ವರನ್, ಗಾಯಕ್ವಾಡ್ ನಾಯಕರು

ದುಲೀಪ್ ಟ್ರೋಫಿಗೆ ತಂಡ ಬಿಡುಗಡೆ

ಮುಂಬಯಿ: ದುಲೀಪ್ ಟ್ರೋಫಿ ಆರಂಭಕ್ಕೂ ಮುನ್ನವೇ ಟೀಮ್ ಇಂಡಿಯಾದ ವೇಗಿ ಮೊಹಮ್ಮದ್ ಸಿರಾಜ್ ಅನಾರೋಗ್ಯದ ಕಾರಣ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಅವರ ಬದಲಿಗೆ ನವದೀಪ್ ಸೈನಿ ಸ್ಥಾನ ಪಡೆದಿದ್ದಾರೆ. ಇದೇ ವೇಳೆ ಹಿರಿಯ ಆಟಗಾರ ರವೀಂದ್ರ ಜಡೇಜಾ ಅವರನ್ನು ಭಾರತ ಬಿ ತಂಡದಿಂದ ಬಿಡುಗಡೆ ಮಾಡಲಾಗಿದೆ.

ವೃತ್ತಿಪರ ಕ್ರಿಕೆಟ್‌ಗೆ ಮರಳುವ ನಿರೀಕ್ಷೆಯಲ್ಲಿ ಜಮ್ಮು ಕಾಶ್ಮೀರದ ವೇಗಿ ಉಮ್ರಾನ್ ಮಲಿಕ್ ಕೂಡ ಅನಾರೋಗ್ಯದ ಕಾರಣ ಪಂದ್ಯಾವಳಿಯಿಂದ ಹೊರಗುಳಿದಿದ್ದಾರೆ. ಉಮ್ರಾನ್ ಬದಲಿಗೆ ಮಧ್ಯಪ್ರದೇಶದ ಮಧ್ಯಮ ವೇಗಿ ಗೌರವ್ ಯಾದವ್ ಭಾರತ ಸಿ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಜಡೇಜಾ ಸ್ಥಾನಕ್ಕೆ ಬದಲಿ ಆಟಗಾರನನ್ನ ಹೆಸರಿಸಲಾಗಿಲ್ಲ. ಜಡೇಜಾ ದುಲೀಪ್ ಟ್ರೋಫಿಯಲ್ಲಿ ಕೇವಲ ಒಂದು ಪಂದ್ಯವನ್ನು ಆಡಿ ಬಳಿಕ ಬಾಂಗ್ಲಾದೇಶ ಟೆಸ್ಟ್ ಸರಣಿಗೆ ಮುಂಚಿತವಾಗಿ ಭಾರತ ಶಿಬಿರಕ್ಕೆ ತೆರಳಬೇಕಿತ್ತು. ಆದರೆ ಬಿಸಿಸಿಐ ಅವರಿಗೆ ಕೊನೆಯ ಕ್ಷಣದಲ್ಲಿ ವಿಶ್ರಾಂತಿ ನೀಡಿದೆ. ಭಾರತ ಎ ತಂಡವನ್ನು ಶುಭಮನ್ ಗಿಲ್ ಮುನ್ನಡೆಸಿದರೆ, ಡಿ ತಂಡವನ್ನು ಶ್ರೇಯಸ್ ಅಯ್ಯರ್ ಮುನ್ನಡೆಸಲಿದ್ದಾರೆ.

ಭಾರತ ಸಿ ತಂಡ: ಋತುರಾಜ್ ಗಾಯಕ್ವಾಡ್ (ನಾಯಕ), ಸಾಯಿ ಸುದರ್ಶನ್, ರಜತ್ ಪಾಟಿದಾರ್, ಅಭಿಷೇಕ್ ಪೊರೆಲ್ (ವಿ.ಕೀ), ಸೂರ್ಯಕುಮಾರ್ ಯಾದವ್, ಬಿ ಇಂದ್ರಜಿತ್, ಹೃತಿಕ್ ಶೋಕೀನ್, ಮಾನವ್ ಸುತಾರ್, ಗೌರವ್ ಯಾದವ್, ವೈಶಾಕ್ ವಿಜಯ್‌ಕುಮಾರ್, ಅನ್ಶುಲ್ ಖಂಬೋಜ್, ಹಿಮಾಂಶು ಚೌಹಾಣ್, ಮಯಾಂಕ್ ಮಾರ್ಕಂಡೆ, ಆರ್ಯನ್ ಜುಯೆಲ್ (ವಿ.ಕೀ), ಸಂದೀಪ್ ವಾರಿಯರ್.

ಭಾರತ ಡಿ ತಂಡ: ಶ್ರೇಯಸ್ ಅಯ್ಯರ್ (ನಾಯಕ), ಅಥರ್ವ ಟೈಡೆ, ಯಶ್ ದುಬೆ, ದೇವದತ್ ಪಡಿಕ್ಕಲ್, ಇಶಾನ್ ಕಿಶನ್ (ವಿಕೆಟ್ ಕೀಪರ್), ರಿಕಿ ಭುಯಿ, ಸರನ್ಶ್ ಜೈನ್, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಆದಿತ್ಯ ಠಾಕರೆ, ಹರ್ಷಿತ್ ರಾಣಾ, ತುಷಾರ್ ದೇಶಪಾಂಡೆ, ಆಕಾಶ್ ಸೇನ್‌ಗುಪ್ತ, ಕೆಎಸ್ (ವಿಕೆಟ್ ಕೀಪರ್), ಸೌರಭ್ ಕುಮಾರ್.

ಭಾರತ ಎ ತಂಡ

ಶುಭಮನ್ ಗಿಲ್ (ನಾಯಕ), ಮಯಾಂಕ್ ಅಗರ್ವಾಲ್, ರಿಯಾನ್ ಪರಾಗ್, ಧ್ರುವ ಜುರೆಲ್ (ವಿಕೆಟ್ ಕೀಪರ್), ಕೆಎಲ್ ರಾಹುಲ್, ತಿಲಕ್ ವರ್ಮಾ, ಶಿವಂ ದುಬೆ, ತನುಷ್ ಕೋಟ್ಯಾನ್, ಕುಲದೀಪ್ ಯಾದವ್, ಆಕಾಶ್ ದೀಪ್, ಪ್ರಸಿದ್ಧ್ ಕೃಷ್ಣ, ಖಲೀಲ್ ಅಹ್ಮದ್, ಅವೇಶ್ ಖಾನ್, ವಿದ್ವತ್ ಕಾವೇರಪ್ಪ, ಕುಮಾರ್ ಕುಶಾಗ್ರ , ಶಾಶ್ವತ್ ರಾವತ್.

ಭಾರತ ಬಿ ತಂಡ

ಅಭಿಮನ್ಯು ಈಶ್ವರನ್ (ನಾಯಕ), ಯಶಸ್ವಿ ಜೈಸ್ವಾಲ್, ಸರ್ಫರಾಜ್ ಖಾನ್, ರಿಷಭ್ ಪಂತ್ (ವಿ.ಕೀ), ಮುಷೀರ್ ಖಾನ್, ನಿತೀಶ್ ಕುಮಾರ್ ರೆಡ್ಡಿ (ಫಿಟ್ನೆಸ್ ಟೆಸ್ಟ್ ಅವಲಂಬನೆ), ವಾಷಿಂಗ್ಟನ್ ಸುಂದರ್, ನವದೀಪ್ ಸೈನಿ, ಯಶ್ ದಯಾಳ್, ಮುಖೇಶ್ ಕುಮಾರ್, ರಾಹುಲ್ ಚಹರ್, ಆರ್ ಸಾಯಿ ಕಿಶೋರ್, ಮೋಹಿತ್ ಆವಸ್ತಿ, ಎನ್ ಜಗದೀಸನ್ (ವಿ.ಕೀ)

ಮಹಿಳೆಯರ ತಂಡಕ್ಕೆ ಹರ್ಮನ್‌ಪ್ರೀತ್ ನಾಯಕಿ | ಸ್ಮೃತಿ ಮಂದಾನ ಉಪನಾಯಕಿ

ವಿಶ್ವಕಪ್ ಟೂರ್ನಿಗೆ ಭಾರತ ತಂಡ ಪ್ರಕಟ

ದುಬೈ: ಮುಂಬರುವ ಮಹಿಳೆಯರ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದೆ. 15 ಸದಸ್ಯ ಬಲದ ಭಾರತ ತಂಡವನ್ನು ಹರ್ಮನ್‌ಪ್ರೀತ್ ಕೌರ್ ಮುನ್ನಡೆಸಲಿದ್ದು, ಸ್ಮೃತಿ ಮಂದಾನ ಉಪನಾಯಕಿ ಆಗಿದ್ದಾರೆ.

ಹಾಗೇ, ಭಾರತ ತಂಡದಲ್ಲಿ ಕನ್ನಡತಿ ಶ್ರೇಯಾಂಕ ಪಾಟೀಲಗೆ ಸ್ಥಾನ ದೊರಕಿದೆ. ಇದು ಕರ್ನಾಟಕದ ಅಭಿಮಾನಿಗಳಲ್ಲಿ ಸಂತಸಕ್ಕೆ ಕಾರಣವಾಗಿದೆ.

ಭಾರತದ ವೇಳಾಪಟ್ಟಿ...

ಮಹಿಳೆಯರ ಟ್ವೆಂಟಿ-20 ವಿಶ್ವಕಪ್ ಟೂರ್ನಿ ಅಕ್ಟೋಬರ್ 3ರಿಂದ 20ರವರೆಗೆ ನಡೆಯಲಿದೆ. ಭಾರತ ತಂಡ ಎ ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಇದೇ ಗುಂಪಿನಲ್ಲಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಪಾಕಿಸ್ತಾನ ಮತ್ತು ಶ್ರೀಲಂಕಾ ತಂಡಗಳಿವೆ. ಅಲ್ಲದೆ ಭಾರತ ತಂಡವು ಚೊಚ್ಚಲ ಟಿ20 ವಿಶ್ವಕಪ್ ಕಿರೀಟದ ಹುಡುಕಾಟದಲ್ಲಿದೆ.

ದುಬೈಯಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಭಾರತ ತಂಡವು ನ್ಯೂಜಿಲೆಂಡ್ ಸವಾಲನ್ನು ಎದುರಿಸಲಿದೆ. ಅಕ್ಟೋಬರ್ 6ರಂದು ದುಬೈಯಲ್ಲೇ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಹೈವೋಲ್ಟೇಜ್ ಪಂದ್ಯ ನಡೆಯಲಿದೆ. ಬಳಿಕ ಅಕ್ಟೋಬರ್ 9ರಂದು ದುಬೈಯಲ್ಲಿ ಶ್ರೀಲಂಕಾ ಮತ್ತು ಅಕ್ಟೋಬರ್ 13ರಂದು ಶಾರ್ಜಾದಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೆಣಸಲಿದೆ.

ಅಕ್ಟೋಬರ್ 17ರಂದು ಶಾರ್ಜಾದಲ್ಲಿ ಮೊದಲ ಸೆಮಿಫೈನಲ್ ಮತ್ತು ಅಕ್ಟೋಬರ್ 18ರಂದು ದುಬೈಯಲ್ಲಿ ಎರಡನೇ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಅಕ್ಟೋಬರ್ 20ರಂದು ದುಬೈಯಲ್ಲಿ ಫೈನಲ್ ಪಂದ್ಯ ನಿಗದಿಯಾಗಿದೆ.

ಭಾರತ ತಂಡ ಇಂತಿದೆ

ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶೆಫಾಲಿ ವರ್ಮಾ, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಯಸ್ತಿಕಾ ಭಾಟಿಯಾ, ಪೂಜಾ ವಸ್ತ್ರಾಕರ್, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್, ದಯಾಲನ್ ಹೇಮಲತಾ, ಆಶಾ ಶೋಭನಾ, ರಾಧಾ ಯಾದವ್, ಶ್ರೇಯಾಂಕ ಪಾಟೀಲ ಮತ್ತು ಸಂಜನಾ ಸಜೀವನ್.

ನವೆಂಬರ್‌ನಲ್ಲಿ ಭೈರತಿ ಆಗಮನ

ಮಫ್ತಿ ಸಿನಿಮಾ ನೋಡಿದ ಎಲ್ಲರಿಗೂ ಭೈರತಿ ರಣಗಲ್ ಪಾತ್ರ ಬಲು ಮೆಚ್ಚುಗೆಯಾಯಿತು. ಶಿವಣ್ಣ, ಸಿಂಪಲ್ ಲುಕ್‌ನಲ್ಲಿ ಭೈರತಿ ರಣಗಲ್ ಆಗಿ ಮಿಂಚಿ ಮನಸೂರೆಗೊಂಡರು. ಈಗ ಮಫ್ತಿ ಪ್ರೀಕ್ವೆಲ್ ಆಧರಿಸಿ ಭೈರತಿ ರಣಗಲ್ ಚಿತ್ರ ತೆರೆಗೆ ಬರುತ್ತಿದೆ. ಮಫ್ತಿ ನಿರ್ದೇಶಕ ನರ್ತನ್ ಈ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಸೆಟ್ಟೇರಿದಾಗಿನಿಂದಲೂ ಸಾಕಷ್ಟು ಕುತೂಹಲ ಮೂಡಿಸಿರುವ ಭೈರತಿ ರಣಗಲ್ ನವೆಂಬರ್ 15 ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಭೈರತಿ ರಣಗಲ್ ಚಿತ್ರವನ್ನು ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜಕುಮಾರ್ ನಿರ್ಮಿಸಿದ್ದು, ಶಿವಣ್ಣ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ರುಕ್ಮಿಣಿ ವಸಂತ್ ನಾಯಕಿಯಾಗಿ ಅಭಿನಯಿಸಿದ್ದು, ಉಳಿದಂತೆ ರಾಹುಲ್ ಬೋಸ್, ಅವಿನಾಶ್, ದೇವರಾಜ್, ಮಧು ಗುರುಸ್ವಾಮಿ, ಛಾಯಾ ಸಿಂಗ್, ಬಾಬು ಹಿರಣ್ಣಯ್ಯ ಮುಂತಾದವರು ತಾರಾಗಣದಲ್ಲಿದ್ದಾರೆ. ನವೀನ್ ಕುಮಾರ್ ಛಾಯಾಗ್ರಹಣ ಮತ್ತು ರವಿ ಬಸ್ರೂರು ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಭೈರತಿ ರಣಗಲ್ ನಮ್ಮ ಸಂಸ್ಥೆಯಿಂದ ನಿರ್ಮಾಣವಾಗಿರುವ ಎರಡನೇ ಚಿತ್ರ. ನಿಮ್ಮೆಲ್ಲರ ಸಮ್ಮುಖದಲ್ಲಿ ವಿನೂತನ ರೀತಿಯಲ್ಲಿ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಮುಂದೆ ಬೆಳಗಾವಿಯಲ್ಲೂ ಈ ಚಿತ್ರದ ಕುರಿತಾದ ಕಾರ್ಯಕ್ರಮ ನಡೆಯಲಿದೆ ಎಂದು ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ತಿಳಿದರು.

ಚಿತ್ರದ ಬಿಡುಗಡೆ ದಿನಾಂಕವನ್ನು ವಿಭಿನ್ನವಾಗಿ ಅನೌನ್ಸ್ ಮಾಡಲು ನಿರ್ಧರಿಸಲಾಗಿತ್ತು. ಇದೇ ಮೊದಲ ಬಾರಿಗೆ ನಾಲ್ಕು ಸಾವಿರ ವಿಸ್ತೀರ್ಣದ ಗ್ರಾಫಿಟಿ ಆರ್ಟ್ ಅನಾವರಣ ಮಾಡುವ ಮೂಲಕ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ನವೆಂಬರ್ 15 ರಂದು ಚಿತ್ರ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ನರ್ತನ್ ಹೇಳಿದರು.

ದಮನಿತರ ದನಿಯಾದ ದ ರೂಲರ್ಸ್



ಶತಮಾನಗಳಿಂದಲೂ ದಮನಿರತನ್ನು ಶೋಷಣೆ ಮಾಡಲಾಗುತ್ತಿದೆ. ಅದು ಇಂದಿಗೂ ನಿಂತಿಲ್ಲ. ದಮನಿತರು ಬಡವರು ನೋವಿನಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ಇದೇ ವಿಚಾರವನ್ನು ದಿ ರೂಲರ್ಸ್ ಮೂಲಕ ಹೇಳಲಾಗಿದೆ. ನಮ್ಮ ರಾಜ್ಯದಲ್ಲಿಯೇ ನಡೆದ ನೈಜ ಘಟನೆಯನ್ನು ಆಧರಿಸಿ ಚಿತ್ರ ಸಿದ್ಧವಾಗಿದ್ದು, ಉದಯ್ ಭಾಸ್ಕರ್ ನಿರ್ದೇಶನ ಮಾಡಿ ತೆರೆಗೆ ತರುತ್ತಿದ್ದಾರೆ. ಉದಯ್ ತಮ್ಮ ಸಿನಿಮಾದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ : ಏನಿದು ದ ರೋಲರ್ಸ್ ?

ಉದಯ್ ಭಾಸ್ಕರ್ : ಇಂದಿಗೂ ನಮ್ಮ ಸಮಾಜದಲ್ಲಿ ಬೇರೂರಿರುವ ಜಾತಿ ವ್ಯವಸ್ಥೆ, ತಾರತಮ್ಯದ ಕುರಿತಂತೆ ಚಿತ್ರದಲ್ಲಿ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ. ಅದರಲ್ಲಿಯೂ ವಿಶೇಷವಾಗಿ ಮಹಿಳೆಯರು ಎದುರಿಸುತ್ತಿರುವ ದೌರ್ಜನ್ಯದ ಬಗ್ಗೆ ಇಲ್ಲಿ ಹೇಳಲಾಗಿದೆ. ನಮ್ಮ ಸಂವಿಧಾನದ ಆಶಯಗಳು, ಸಂವಿಧಾನದ ಶಕ್ತಿಯಿಂದ ಮಹಿಳೆಯರು ಹೇಗೆ ಬಂದ ಸವಾಲುಗಳನ್ನು ಎದುರಿಸಿ ಉತ್ತಮ ಬದುಕು ಕಟ್ಟಿಕೊಳ್ಳುತ್ತಿದ್ದಾರೆ ಎಂಬುದನ್ನು ಚಿತ್ರದಲ್ಲಿ ಮನಮುಟ್ಟುವಂತೆ ಕಟ್ಟಿಕೊಡಲಾಗಿದೆ.

ವಿ.ಸಿ: ಇದು ನೈಜ ಘಟನೆ ಯಾಧಾರಿತ ಚಿತ್ರವೆ ?

ಉದಯ್ : ಹೌದು, ಇಲ್ಲಿಯೇ ನಮ್ಮ ರಾಜ್ಯದಲ್ಲಿಯೇ ನಡೆದ ಘಟನೆಯನ್ನು ಆಧರಿಸಿ, ಕಥೆ ಬರೆದು ತೆರೆಗೆ ತರಲಾಗುತ್ತಿದೆ. ಹಾಗಂತ ಇದು ಯಾವ ಸಮುದಾಯಕ್ಕೂ ಸಂಬಂಧಿಸಿದ ಕಥೆಯಲ್ಲ, ಸಂವಿಧಾನದ ಪವರ್ ಎಂತಹದ್ದು, ದಮನಿತರಿಗೆ ಸಂವಿಧಾನ ಹೇಗೆ ಶಕ್ತಿ ತುಂಬಿದೆ ಎಂಬುದನ್ನು ಎಲ್ಲರಿಗೂ ಹಿಡಿಸುವಂತೆ ಹೇಳಲಾಗಿದೆ. ಕೋಲಾರ ಭಾಗದ ಭಾಷೆಯಲ್ಲಿ ಸಂಭಾಷಣೆ ಇರುವುದು ವಿಶೇಷ.

ವಿ.ಸಿ : ಕಮರ್ಷಿಯಲ್ ಸಿನಿಮಾಗಳ ಅಬ್ಬರದ ನಡುವೆ ಸಾಮಾಜಿಕ ಸಂದೇಶದ ಕಥೆ ಆಯ್ದುಕೊಳ್ಳಲು ಕಾರಣ ?

ಉದಯ್ : ಸಮಾಜಕ್ಕೆ ನೈಜತೆಯನ್ನು ತಿಳಿಸಬೇಕು ಎಂಬ ನಿಟ್ಟಿನಲ್ಲಿ ಇಂತಹ ಕಥೆಯನ್ನು ಆಯ್ದುಕೊಂಡೆ. ಯಾವುದೇ ವಿಚಾರವನ್ನು ಹೇಳಲು ಸಿನಿಮಾ ಮಾಧ್ಯಮ ಬಲು ಪರಿಣಾಮಕಾರಿಯಾಗಿದೆ, ಹಾಗಾಗಿ ಮನರಂಜನೆಯ ಮೂಲಕ ಸಂದೇಶ ಸಾರಲಾಗಿದೆ.

ವಿ.ಸಿ : ತಾರಾಗಣದ ಬಗ್ಗೆ ಹೇಳುವುದಾದರೆ?

ಉದಯ್ : ಚಿತ್ರದ ಕಥೆಗೆ ತಕ್ಕಂತೆ ಕೋಲಾರ ಭಾಗದ ರಂಗಭೂಮಿ ಕಲಾವಿದರೇ ಹೆಚ್ಚಾಗಿ ಚಿತ್ರದಲ್ಲಿ ನಟಿಸಿದ್ದಾರೆ. ಹಿರಿಯ ನಟ ಚರಣ್ ರಾಜ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದೇ ವಾರ ನಮ್ಮ ಚಿತ್ರ ತೆರೆಗೆ ಬರುತ್ತಿದ್ದು, ಪ್ರೇಕ್ಷಕರು ಖಂಡಿತಾ ದ ರೋಲರಸ್ ಸಿನಿಮಾ ಮೆಚ್ಚುತ್ತಾರೆ ಎಂಬ ನಂಬಿಕೆ ನನಗಿದೆ.

ಮುದ್ದು ಕೃಷ್ಣರ ಸಂಭ್ರಮ

ಕೃಷ್ಣಾಷ್ಟಮಿ ದಿನದಂದು ಮಕ್ಕಳಿಗೆ ಕೃಷ್ಣನ ವೇಷ ತೊಡಿಸಿ ವಾಟ್ಸ್ ಆ್ಯಪ್ ಮಾಡಿ ಎಂಬ ವಿಶ್ವವಾಣಿ ಕರೆಗೆ ಸ್ಪಂದಿಸಿ ಓದುಗರು ಕೃಷ್ಣವೇಷಧಾರಿ ಮಕ್ಕಳ ಫೋಟೋ ಕಳುಹಿಸುತ್ತಲೇ ಇದ್ದಾರೆ. ಹೊರದೇಶಗಳಲ್ಲಿರುವ ಪೋಷಕರೂ ನಮ್ಮ ಮಕ್ಕಳ ಫೋಟೊ ಪ್ರಕಟಿಸಿ ಎಂದು ವಿನಂತಿಸಿಕೊಳ್ಳುತ್ತಿದ್ದಾರೆ. ಓದುಗರ ಒತ್ತಾಯದ ಮೇರೆಗೆ ವಿಶ್ವವಾಣಿ ಇ-ಪೇಪರ್‌ನಲ್ಲಿ (https://epaper.vishwavani.news) ಇನ್ನೂ ಒಂದಷ್ಟು ಫೋಟೋಗಳನ್ನು ಪ್ರಕಟಿಸಲಾಗಿದೆ. ನಿಮ್ಮ ಉತ್ಸಾಹಕ್ಕೆ ವಂದನೆಗಳು.


ಐಶಾನಿ
ತಂದೆ : ಉಮೇಶ್ , ಉಡುಪಿ

ಆಯುಷಿ ಹೆಗಡೆ
ತಂದೆ : ಪ್ರದೀಪ್ ಹೆಗಡೆ, ಬೆಂಗಳೂರು

ಐರಾ ಯಂಕಪ್ಪ ಮಮದಾಪುರ್
ಬಾಗಲಕೋಟೆ

ಅನಿರುದ್ಧ ಶ್ರೀರಾಮ್
ತಂದೆ : ಜಯಸಿಂಹ ಜೋಶಿ, ಬಳ್ಳಾರಿ

ರೇಣುಕಾ ಅರಬಳ್ಳಿ
ತಂದೆ : ಸಂತೋಷ್

ಮೌಲ್ಯಾ ಎನ್
ತಾಯಿ : ಸುಜಾತಾ ಪ್ರಸಾದ್, ಮೈಸೂರು

ವಿಹಾಸ್ ಎಮ್ ಕೋರಿ
ತಂದೆ : ಮಂಜುನಾಥ್ , ಗದಗ

ಜಶ್ವಿನ್ ಗೌಡ
ತಂದೆ : ಜೋಗಿ ಗೌಡ, ಮಂಡ್ಯ

ಆದರ್ಶ ಚೇತನ ಗಾಣಿಗೇರ್
ಜಮಖಂಡಿ, ಬಾಗಲಕೋಟೆ

ದಿಶಾ ಡಿ ಬಿ
ತಂದೆ : ದೊಡ್ಡಬಸವರಾಜ, ದಾವಣಗೆರೆ

ವೇದಾವತಿ
ತಂದೆ : ಪ್ರಕಾಶ , ಹಾವೇರಿ

ಅವ್ಯಕ್ತ ಕೆ
ತಂದೆ : ವಿವೇಕ ಎಸ್

ಆರಾಧ್ಯ ಮ ಹೂಗಾರ್
ತಂದೆ: ಮಂಜುನಾಥ್, ಬೆಂಗಳೂರು

ಶ್ರೀನಿವಾಸ್ ಹಡಪದ
ತಂದೆ : ಚಂದ್ರಶೇಖರ್ , ಹಾವೇರಿ

ಸವ್ಯನ್
ತಂದೆ : ಉಮೇಶ್ ಟಿ ವಿ, ಬೆಂಗಳೂರು

ಮಿನುಗು ಹೆಚ್ ಎಮ್
ತಾಯಿ : ರೂಪಾ ಮಂಜುನಾಥ್, ಚಿಕ್ಕಮಗಳೂರು


ಸೂರ್ಯ
ತಂದೆ : ರಾಜು, ಬೆಂಗಳೂರು

ಸನ್ಮಿತ್ ಯರಗುಪ್ಪಿ
ತಂದೆ: ಬಸವರಾಜ , ಗದಗ

ಶ್ರೀಹಿತಾ ಎಮ್
ತಂದೆ : ಮಯೂರ್ ತೀರ್ಥ , ಬೆಳಗಾವಿ


ಪೂರ್ವಿ ಎ
ತಂದೆ : ಅಕ್ಷಯ್ , ಬಂಟ್ವಾಳ


ಅನ್ವಿತ್ ಚೇತನ್ ಗಾಣಿಗೇರ್
ಜಮಖಂಡಿ, ಬಾಗಲಕೋಟ

ಅನ್ವಿತಾ ಎಸ್
ತಂದೆ : ಶಿವಪ್ರಸಾದ್, ದೇವಲಾಪುರ ಮೈಸೂರು

ಸಾನ್ವಿ ಎನ್ ನಾಯ್ಕ
ತಂದೆ : ನಿಂಗಪ್ಪ, ಸಾಗರ

ನಿಸ್ವಾರ್ಥ ಟಿ ಆರ್
ತಂದೆ : ಟಿ ಕೆ ರಾಘು, ತಿಪಟೂರು

ಶಾರ್ವಿ ನಾಯಕ್
ತಂದೆ : ಮಹೇಶ್ ನಾಯಕ್, ಬೆಂಗಳೂರು

ಭಕ್ತಿ ಸಿದ್ಧಲಿಂಗ ಸತ್ತಿ
ತಂದೆ : ಸಿದ್ಧಲಿಂಗ ಸತ್ತಿ, ಬೆಳಗಾವಿ

ಅಚ್ಯುತ್ ಎಮ್ ಎನ್
ತಂದೆ : ನಂದಾ ಎಮ್ ಸಿ , ದಕ್ಷಿಣ ಕನ್ನಡ

ವಚನಾ ಸಿ
ವಿಜಯಪುರ

ರೇವಂಶ ಗೌಡ
ತಂದೆ : ಮುರುಳಿಕೃಷ್ಣ ತುಮಕೂರು

ಶ್ರೀಶಾ ಗಾಂವಕರ್
ತಂದೆ : ನಾಗೇಂದ್ರ ಗಾಂವ್ಕರ್, ಅಂಕೋಲಾ

ಸರ್ವೇಶ್ ತೋಟಗಂಟಿ
ತಂದೆ : ಸಂಗಮೇಶ್ ತೋಟಗಂಟಿ, ಧಾರವಾಡ

ಕೃತಿ .ಡಿ ಎಂ
ಪೋಷಕರು : ಪಲ್ಲವಿ ಮಂಜೇಶ್ , ಮೈಸೂರು

ಶ್ರೇಯಸ್ ಎಮ್ ಪಾಟೀಲ್
ತಂದೆ : ಮಲ್ಲು ಪಾಟೀಲ್, ಶಹಾಪೂರ

ಹೃದಂಶ ದೆಸುಲ್
ತಂದೆ : ಗಣೇಶ್ ಎಲ್, ಅಲೆವೂರು

ಶ್ರೇಯಸ್
ತಂದೆ : ರೇವಣ ಸಿದ್ಧೇಶ್ವರ ಅಂಗಡಿ ಸಾಹುಕಾರ, ಯಾದಗಿರಿ

ದೀಕ್ಷಿತ್
ತಂದೆ : ಮಾಲತೇಶ್ , ಬೆಂಗಳೂರು

ವಿಶ್ವವಾಣಿ
ವಿಶ್ವಾಸವೇ ವಿಶ್ವ
@vishwavaninews
ಬುಧವಾರ, 28.08.2024

ಮುದ್ದು ಕೃಷ್ಣರ ಸಂಭ್ರಮ

ಕೃಷ್ಣಾಷ್ಟಮಿ ದಿನದಂದು ಮಕ್ಕಳಿಗೆ ಕೃಷ್ಣನ ವೇಷ ತೊಡಿಸಿ ವಾಟ್ಸ್ ಆ್ಯಪ್ ಮಾಡಿ ಎಂಬ ವಿಶ್ವವಾಣಿ ಕರೆಗೆ ಸ್ಪಂದಿಸಿ ಓದುಗರು ಕೃಷ್ಣವೇಷಧಾರಿ ಮಕ್ಕಳ ಫೋಟೋ ಕಳುಹಿಸುತ್ತಲೇ ಇದ್ದಾರೆ. ಹೊರದೇಶಗಳಲ್ಲಿರುವ ಪೋಷಕರೂ ನಮ್ಮ ಮಕ್ಕಳ ಫೋಟೊ ಪ್ರಕಟಿಸಿ ಎಂದು ವಿನಂತಿಸಿಕೊಳ್ಳುತ್ತಿದ್ದಾರೆ. ಓದುಗರ ಒತ್ತಾಯದ ಮೇರೆಗೆ ವಿಶ್ವವಾಣಿ ಇ-ಪೇಪರ್‌ನಲ್ಲಿ (https://epaper.vishwavani.news) ಇನ್ನೂ ಒಂದಷ್ಟು ಫೋಟೋಗಳನ್ನು ಪ್ರಕಟಿಸಲಾಗಿದೆ. ನಿಮ್ಮ ಉತ್ಸಾಹಕ್ಕೆ ವಂದನೆಗಳು.


ಕಾರ್ತಿಕ್ ಬಾನಂಡ
ತಂದೆ: ರಕ್ಷಿತ್ , ಮಾಯಮುಡಿ

ಬಸವಕಿರಣ್ ಹಿರೇಮಠ
ತಂದೆ: ಗುರುಬಸಯ್ಯ , ಕಲಬುರ್ಗಿ


ಋತ್ವಿಕ್ ವಿ
ತಂದೆ: ವಿಜಯಕುಮಾರ್, ಬೆಂಗಳೂರು


ಧಾತ್ರಿ ಜೋಷಿ
ತಾಯಿ: ನೇತ್ರಾ ವಿನಾಯಕ, ಬೆಂಗಳೂರು

ನೇಹಾ
ತಂದೆ : ಮಹಮ್ಮದ್ ಹುಸೇನ್, ಚಿಕ್ಕನಾಯಕನಹಳ್ಳಿ

ಸಿರಿ
ತಾಯಿ: ಅರುಣಾದೇವಿ, ಬೆಂಗಳೂರು

ಸಿರಿ
ತಂದೆ: ಸಂಜಯ್ , ಲಂಡನ್ ಯುಕೆ


ಶ್ರೀಲಕ್ಷ್ಮೀ
ತಂದೆ: ಶ್ರೀ ಹರ್ಷ , ಮೈಸೂರು

ಸುರ್ವಿ ಅಡಿಗ
ತಂದೆ: ಶ್ರೀನಿಧಿ ಅಡಿಗ, ನಾಗರಭಾವಿ ಬೆಂಗಳೂರು

ಆಕರ್ಷ್ ಆರ್.
ತಂದೆ: ರೂಪೇಶ್, ಯೆಯ್ಯಾಡಿ ಮಂಗಳೂರು

ಶ್ಲೋಕ ಸಂಬಾಳಹಿರೇಮಠ
ತಂದೆ : ಡಾ. ಚಂದ್ರಶೇಖರ್, ಜಮಖಂಡಿ

ಧ್ರುವನ್
ತಂದೆ: ಪವನ್, ಮೈಸೂರು

ಶ್ರೇಯಾ ಎಸ್ ಅನ್ನಾವಟಿ
ತಂದೆ: ಶ್ರೀನಿವಾಸ, ಶಿವಮೊಗ್ಗ


ಅವನಿ ಹೆಬ್ಬಾರ್
ತಂದೆ : ಆದಿತ್ಯ ಹೆಬ್ಬಾರ್, ಹರಪನಹಳ್ಳಿ

ಹೇಮಂತ
ತಂದೆ: ಯೋಗೇಶ್ ಎನ್ , ಕಮಲಾನಗರ ಬೆಂಗಳೂರು

ಲೋಹಜಿತ್ ಹೆಚ್
ತಂದೆ: ನಾಗಭೂಷಣಯ್ಯ ಎಸ್, ಅರಕೆರೆ ತುಮಕೂರು

ಜಶನ್ ಬೊಮ್ಮೈಯ್ಯಾ
ತಂದೆ: ಶರಣು ಪಿಸಿ , ಪೊನ್ನಂಪೇಟೆ

ಮಾನ್ವಿತ್ ಹೆಚ್ ಎಸ್
ತಂದೆ : ಸಂಜಯ್ , ತಿಪಟೂರು, ತುಮಕೂರು

ಶಿವನ್ಯ ಮೊಗಟಾ
ತಂದೆ: ಶಿವದೇವ ಮೊಗಟಾ, ಯಲ್ಲಾಪುರ

ಅಥರ್ವ ಹೆಗಡೆ
ತಂದೆ : ಪ್ರಸನ್ನ ಹೆಗಡೆ , ಕೆಂಪಾಪುರ ಬೆಂಗಳೂರು


ಚರಿತ್ ಡಿ
ತಂದೆ: ಧರಮ್‌ರಾಜ್, ಬೆಂಗಳೂರು

ಐರಾ ಕಾಮತ್
ತಂದೆ : ಸತೀಶ್ ಕಾಮತ್, ಕುಂಜಿಬೆಟ್ಟು ಉಡುಪಿ

ರಿಯಾನ್ಶ್ ಹೆಚ್ ಆರ್
ತಂದೆ: ರವಿಚಂದ್ರ ಹೆಚ್‌ಪಿ , ಹೊಸನಗರ

ರೋಹಿತ್
ತಂದೆ: ನಂದೀಶ್, ಮೈಸೂರು

ತೋರಾನ್ಶ್ ಆರ್ಯಾ
ತಂದೆ: ಭರತ್, ಬೆಂಗಳೂರು

ಹರ್ಷಾ , ಹರ್ಷಿಣಿ
ತಾಯಿ: ನೇತ್ರಾವತಿ, ಮೈಸೂರು

ದಕ್ಷ ವಿ ಪಿ
ತಂದೆ: ಪ್ರಮೋದ್ ಕೃಷ್ಣ ಮೈಸೂರು

ಮೇಘನ್ಶ್ ನಟರಾಜ್
ತಂದೆ: ನಟರಾಜ್ ಬೆಳವಾಡಿ, ಮೈಸೂರು

ಸಮನ್ವಿ ಶಿವಾನಂದ
ಕಾಳಿಕಾನಗರ , ವಿಜಯಪುರ

ಪೂರ್ವಿಕ್ ಆರ್
ಮೈಸೂರು

ಕೀರ್ತನಾ
ತಂದೆ: ಮಂಜುನಾಥ, ಬೆಂಗಳೂರು

ಜಾನ್ವಿತ್ ಎಲ್ ರೈ
ತಂದೆ: ಲೋಕೇಶ್ ರೈ, ಮಂಗಳೂರು

ತನ್ಮಯಿಶ್ರೀ ಬಡಿಗೇರ
ತಂದೆ: ಸತೀಶ್ , ಬೆಳಗಾವಿ

ಅಕ್ಷರ ಎಸ್
ತಂದೆ: ಶಾಂತಕುಮಾರ್ ಬಿರಾದರ್ , ಕಲಬುರ್ಗಿ

ಶ್ರೇಯಾನ್ ಕಿಣಿ
ತಂದೆ : ಚೇತನ ಕಿಣಿ , ಉದ್ಯಾವರ ಉಡುಪಿ